ಸಾಹಿತಿ ಮಾಹಿತಿ ಕೋಶ

ಬಿ.ಜಿ. ಸತ್ಯಮೂರ್ತಿ

ರಾಮಕೃಷ್ಣಭಟ್ಟ ಕೂಟೇಲು
03/03/2012

ಸಾಹಿತಿ ಮಾಹಿತಿ ಕೋಶ-೭

ಸಮಕಾಲೀನ

ಲೇಖಕ, ಲೇಖಕಿಯರ ಪರಿಚಯ ಗ್ರಂಥ

ಲೇಖಕ-ಸಂಪಾದಕ

ಬಿ.ಜಿ.ಸತ್ಯಮೂರ್ತಿ

ಸಹಾಯಕ ಸಂಪಾದಕರು

ಎನ್.ನಾರಾಯಣ ಬಲ್ಲಾಳ್

ನಾರಾಯಣ ಶಾನಭಾಗ

ಲೇಖಕರೇ ಪ್ರಕಾಶಕರು

ನಂ. ೫೩/೪, ಡಬ್ಲ್ಯು, ೨೩ನೇ ಅಡ್ಡರಸ್ತೆ,
ಸೋಮೇಶ್ವರ ಬಡಾವಣೆ
(ಕೆಂಪಮ್ಮ ದೇವಸ್ಥಾನದ ಹಿಂದೆ), ಹುಳಿಮಾವು,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-೫೬೦೦೭೬

SAHITI MAHITI KOSHA 7- An Encyclopedia of contemparary kannada writers vol. - 7, wrttien, edited and published by B G. Sathy Murthy, M.A., No. 53/4, W, 23rd Cross, Someshwara Extension, behind Kempamma Temple, Hulimavu, Bannerghatta Road, Bangalore-5060756

First Edition: 2010 P.P.: xx+280=300 Price: 230/-

© : ಕಾದಿರಿಸಿದೆ

ಪ್ರಥಮ ಮುದ್ರಣ: ೨೦೧೦

ಉಪಯೋಗಿಸಿದ ಕಾಗದ: ೭೦ ಜಿ ಎಸ್ ಎಮ್ ಮ್ಯಾಪಲಿಥೊ, ಬಾಕ್ಸ್ ಬೈಂಡಿಂಗ್

ಪುಟಗಳು: ೨೦+೨೮೦ =೩೦೦

ಬೆಲೆ: ೨೩೦/-

ಮುಖಪುಟ ವಿನ್ಯಾಸ: ವಿ. ರಾಜ್

ಡಿ.ಟ್.ಪಿ: ಎಕ್ಸ್‌ಪ್ರೆಸ್ ಪೇಜಿನೇಷನ್, ಚಂಡೀಗಢ.

ಮುದ್ರಕರು:

ಮುದ್ರಣ :

ವಿಶ್ವಾಸ್ ಪ್ರಿಂಟ್ಸ್

VISHWAS PRINTS

29/1, 3ನೇ ಅಡ್ಡರಸ್ತೆ, ಸಂಜಾಂಬ ಅಗ್ರಹಾರ

ಚಾಮರಾಜಪೇಟೆ, ಬೆಂಗಳೂರು - 18

ದೂರವಾಣಿ : 26604835

ವಿ.ಸೂ: ಈ ಕೋಶದ ಯಾವುದೇ ಮಾಹಿತಿಯನ್ನು ಪೂರ್ಣವಾಗಿಯಾಗಲೀ, ಭಾಗಶಃವಾಗಲೀ ಕದ್ದರೆ ಅದು ಕನ್ನಡ ಭುವನೇಶ್ವರಿಗೆ ಎಸಗಿದ ದ್ರೋಹ. ಅಂತಹವರ ಮೇಲೆ ಕಾಪಿರೈಟ್ ಆಕ್ಟ್ ಪ್ರಕಾರ ಕ್ರಮ ಜರುಗಿಸಲಾಗುವುದು.

ವಿದ್ವಾಂಸರುಗಳ
ಸಹೃದಯಿಗಳ ಅಭಿಪ್ರಾಯ

ನಾಡೋಜ ಡಾ॥ ಚನ್ನವೀರ ಕಣವಿ ☎:೨೨೨೭೨೭೭
ಚೆಂಬೆಳಕು, ೯ನೆಯ ಅಡ್ಡರಸ್ತೆ ೨೫-೫-೨೦೧೦
ಕಲ್ಯಾಣನಗರ
ಧಾರವಾಡ

ಪ್ರಿಯ ಶ್ರೀ ಬಿ.ಜಿ.ಸತ್ಯಮೂರ್ತಿಯವರಿಗೆ,
ವಂದನೆಗಳು,

ಸಾಹಿತಿ ಮಾಹಿತಿ ಕೋಶದ ಆರು ಸಂಪುಟಗಳನ್ನು ಬಿಟ್ಟೂ ಬಿಡದೆ ಪ್ರಕಟಿಸಿದ ನಿಮ್ಮ ಸಾಹಸ ಅಪೂರ್ವವಾದದ್ದು. ಕನ್ನಡ ಲೇಖಕರ ಬಗ್ಗೆ ಇಷ್ಟೊಂದು ವ್ಯಾಪಕವಾದ ಉಪಯುಕ್ತ ಮಾಹಿತಿಯನ್ನು ಅಂದವಾದ ಮುದ್ರಣದಲ್ಲಿ ಬಂಧುರವಾಗಿ ಕೊಟ್ಟ ನಿಮ್ಮ ಪರಿಶ್ರಮ ನಿಜಕ್ಕೂ ಸಾರ್ಥಕ. ಸ್ವತಃ ಉತ್ತಮ ಕಥೆಗಾರರೂ ಲೇಖಕರೂ ಆಗಿರುವ ನಿಮ್ಮ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾಳಜಿ ಇಲ್ಲಿ ಎದ್ದು ಕಾಣುತ್ತಿದೆ.

ಗ್ರಂಥಗಳ ಗ್ರಂಥ ಖರೀದಿಗೆ ಸಂಬಂಧ ಪಟ್ಟಂತೆ **ಇಂಥ ಅಪರೂಪದ ಕೋಶ ಇದುವರೆಗೂ ನಮ್ಮ ಶಿಕ್ಷಣ ಇಲಾಖೆಯ ಕಣ್ಣಿಗೆ ಬೀಳದಿರುವುದು ಪರಮಾಶ್ಚರ್ಯ. ಸರಕಾರದ ಸಂಬಂಧ ಪಟ್ಟ ಅಧಿಕಾರಿಗಳು ಇನ್ನಾದರೂ ತಮ್ಮ ಕರ್ತವ್ಯ ಪಾಲಿಸುತ್ತಾರೆಂದು ಆಶಿಸುತ್ತೇನೆ.**

ವಿಶ್ವಾಸ ಪೂರ್ವಕ
ಚನ್ನವೀರ ಕಣವಿ

ಜಿ. ಎಸ್. ಆಮೂರ
ಜಾನಕಿ, ನವೋದಯ ನಗರ,
೪/ಎ ಅಡ್ಡರಸ್ತೆ, ಧಾರವಾಡ-೦೩
☎: ೦೮೩೬-೨೭೪೪೮೫೩

ಪ್ರಿಯ ಬಿ.ಜಿ.ಸತ್ಯಮೂರ್ತಿ ಅವರಿಗೆ,
ವಂದನೆಗಳು,

ಶ್ರೀ ಬಿ.ಜಿ.ಸತ್ಯಮೂರ್ತಿಯವರು ಪ್ರಕಟಿಸುತ್ತಿರುವ ಸಾಹಿತಿ ಮಾಹಿತಿ ಕೋಶ ಅತ್ಯಂತ ಉಪಯುಕ್ತವಾದ ಆಕರ ಗ್ರಂಥ. ಈ ಕೋಶದ ಆರು ಸಂಪುಟಗಳು ಈಗಾಗಲೇ ಪ್ರಕಟಿಸಿದ್ದು ಏಳನೆಯದು ಸಿದ್ಧಗೊಳ್ಳುತ್ತಿದೆ. ಒಂದು ಸಂಸ್ಥೆ ಮಾಡಬೇಕಾದ ಕೆಲಸವನ್ನು ಸತ್ಯಮೂರ್ತಿಯವರು ಏಕಹಸ್ತರಾಗಿ ಮಾಡಿದ್ದಾರೆ. ಕನ್ನಡಿಗರು ಅವರ ಈ ಸ್ತುತ್ಯ ಸಾಹಿತ್ಯವನ್ನು ಮೆಚ್ಚಿ ಕೊಂಡಿದ್ದಾರೆ. ಅವರ ಪ್ರಯತ್ನ ಹೀಗೇಯೇ ಮುಂದುವರೆಯಲಿ ಎಂದು ಆಶಿಸುತ್ತೇನೆ .

ವಿಸ್ವಾಸದಿಂದ,
ಜಿ. ಎಸ್. ಆಮೂರ

ಪ್ರೊ. ಡಿ.ಕೆ. ರಾಜೇಂದ್ರ ದಿನಾಂಕ: ೨೮-೦೯-೨೦೧೦
ಗೌರವ ನಿರ್ದೇಶಕರು

ಶ್ರೀ ಬಿ.ಜಿ.ಸತ್ಯಮೂರ್ತಿ ಅವರಿಗೆ,
ವಂದನೆಗಳು,

ಸಾಹಿತಿ ಮಾಹಿತಿ ಕೋಶ –೬

ನಿಜಕ್ಕೂ ಶ್ಲಾಘನೀಯವಾದ ಉಪಯುಕ್ತ ಕಾರ್ಯ, ಮುಂದೆ ಸಾಹಿತ್ಯ ಚರಿತ್ರೆ ಬರೆಯುವವರ ದೃಷ್ಟಿಯಿಂದ, ಈಗ ಸಂಶೋಧನೆ ನಡೆಸುವವರ ದೃಷ್ಟಿಯಿಂದ ಗಮನಿಸಿದಾಗ ಇದರ ಮಹತ್ವ ಅರಿವಾಗುತ್ತದೆ. ಇಂದು ಈ ದಾಖಾಲಾತಿ ಕಾರ್ಯ ನಡೆಯದೇ ಹೋದರೆ ಎಷ್ಟೋ ವಿಷಯಗಳು ಕಣ್ಮರೆಯಾಗಿ ಹೋಗುತ್ತವೆ. ಮುಂದೆಂದೂ ಅವು ಲಭ್ಯವಾಗದೆ ಹೋಗಬಹುದು. ಲಭ್ಯವಾದರೂ ಖಚಿತ ಮಾಹಿತಿ ಸಿಗದೆ ಹೋಗಬಹುದು. ಆದರೆ, ನೀವು ವ್ಯವಸ್ಥಿತವಾಗಿ ಕೈಗೊಂಡಿರುವ ಈ ಕಾರ್ಯ ನಿಮ್ಮ ಹೆಸರನ್ನು ಶಾಶ್ವತಗೊಳಿಸುತ್ತದೆ. ನಿಮ್ಮ ಈ ಉತ್ತಮ ಕಾರ್ಯಕ್ಕೆ ಹಾರ್ದಿಕ ಅಭಿನಂದನೆಗಳು.

ಪ್ರೊ. ಡಿ.ಕೆ. ರಾಜೇಂದ್ರ
ಗೌರವ ನಿರ್ದೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಪ್ರಸರಾಂಗ

ಜಿ.ಎಸ್. ಭಟ್ಟ ತಾ:೨೪-೮-೨೦೧೦

೨೪, ಕುಮಾರ ಕೃಪಾ, ಕಾಮಾಕ್ಷಿ ಆಸ್ಪತ್ರೆ ಹಿಂಬದಿ,
ಸರಸ್ವತಿ ಪುರಂ, ಮೈಸೂರು-೫೭೦೦೦೯.

ಮಾನ್ಯ ಶ್ರೀ ಬಿ.ಜಿ.ಸತ್ಯಮೂರ್ತಿ ಅವರಿಗೆ,

ವಂದನೆಗಳು,

ತಾವು ವಿಶ್ವಾಸವಿಟ್ಟು ಕಳುಹಿಸಿದ ಸಾಹಿತಿ ಮಾಹಿತಿ ಕೋಶ ಕೈ ಸೇರಿದೆ. **ಒಂದು ವಿಶ್ವವಿದ್ಯಾನಿಲಯ ಇಲ್ಲವೆ ಸರ್ಕಾರದ ಕನ್ನಡ ಸಂಸ್ಕೃತಿ ಇಲಾಖೆ ಮಾಡಬೇಕಾದ ಕಾರ್ಯ ಮಾಡುತ್ತಿದ್ದೀರಿ.** ನಿಮಗೆ ಅಭಿನಂದನೆ. ಕನ್ನಡ ಸಾಹಿತ್ಯ ಲೋಕಕ್ಕೆ ಇದೊಂದು ಅಪೂರ್ವ ಕೊಡುಗೆ. ಸಾಹಿತ್ಯ ಸಂಶೋಧಕರಿಗೂ ಇದೊಂದು ನಿಧಿ ಆಗಬಲ್ಲದು. ತಮ್ಮ ಯೋಜನೆ ಸಂಪೂರ್ಣವಾದಲ್ಲಿ ಅದು ಕನ್ನಡ ಸಾಹಿತ್ಯಕ್ಕೆ ಮಹತ್ತರ ಕೊಡುಗೆಯಾಗಬಲ್ಲದು. ಹಾಗೆಯೇ ಇದೊಂದು ಆಕರ ಗ್ರಂಥವೂ ಆಗಬಹುದು. ತಮಗೆ ಮುಂಬರುವ ದಿನಗಳಲ್ಲಿ ಎಲ್ಲ ಶುಭ ಕೋರುತ್ತೇನೆ.

ಜಿ.ಎಸ್. ಭಟ್ಟ

"**ಸಾಹಿತಿ ಮಾಹಿತಿ ಕೋಶ**"ದ ಬಗ್ಗೆ ನನ್ನ ಅಭಿಪ್ರಾಯ

ಸಾಹಿತಿ ಮಾಹಿತಿ ಕೋಶ ಕನ್ನಡ ನಾಡಿನ ಜನರಿಗೆ ಅತ್ಯಂತ ಉಪಯುಕ್ತ-ವಾದುದು. ಎಷ್ಟೋ ಜನ ನಾಡಿನ ಪ್ರಸಿದ್ಧ ಸಾಹಿತಿಗಳು ಬೇರೆ ಕಡೆ ನಗರಗಳಲ್ಲಿ ನೆಲಸಿ ಹುಟ್ಟಿದ ತಾಲೂಕಿಗೆ ಅಪರಚಿತರಾಗಿದ್ದ ಶ್ರೀ ಟಿ.ಆರ್. ಅನಂತರಾಮು, ಡಾ॥ ದಾಸಪ್ಪ ಇಂತಹ ಖ್ಯಾತ ಸಾಹಿತಿಗಳನ್ನು ಸಿರಾ ತಾಲೂಕು ದರ್ಶನ ಕೃತಿ ರಚಿಸಲು ಪರಿಚಯಿಸಿದ್ದು '**ಸಾಹಿತಿ ಮಾಹಿತಿ ಕೋಶ**'. ಕನ್ನಡ ಸಂಸ್ಕೃತಿ ಇಲಾಖೆ ಮಾಡುವಂತಹ ಕೆಲಸವನ್ನು ಈ ಇಳಿ ವಯಸ್ಸಿನಲ್ಲಿ ಶ್ರೀ ಸತ್ಯಮೂರ್ತಿಯವರಾದ ತಾವುಗಳು ಮಾಡುತ್ತಿರುವುದು ನಿಜಕ್ಕೂ ಪ್ರಶಂಸನೀಯವಾದುದುಇಂತಹ ಮಹತ್ಕಾರ್ಯ ಮಾಡುತ್ತಿರುವ ತಮಗೆ ಮುಂದಿನ ಸಂಪುಟಗಳನ್ನು ಪ್ರಕಟಿಸಲು **ಕನ್ನಡ ಸಂಸ್ಕೃತಿ ಇಲಾಖೆ ಅನುದಾನವನ್ನು ನೀಡಬೇಕೆಂದು** ಸಮಸ್ತ ಕನ್ನಡಿಗರ ಪರವಾಗಿ ಕೇಳಿಕೊಳ್ಳುತ್ತೇನೆ.

ತಮಗೆ ನಾಡಿನ ಕನ್ನಡ ಜನತೆಯ ಪರವಾಗಿ ಹೃದಯಪೂರ್ವಕವಾಗಿ ಅಭಿನಂದಿಸುತ್ತಾ ಈ ಮಹತ್ ಕಾರ್ಯ ಮಾಡುವ ತಮ್ಮನ್ನು ದೇವರು ಆರೋಗ್ಯ ಐಶ್ವರ್ಯ ನೀಡಿ ಚಿರಕಾಲ ಬಾಳಲೆಂದು ಹಾರೈಸುತ್ತೇನೆ.

ಸಿರಾ
ದಿ.೨೪-೯-೨೦೧೦

ಡಾ ಎನ್. ನಂದೀಶ್ವರ
ಸ್ವಾತಿ ನಿಲಯ
ಬಾಲಾಜಿ ನಗರ. ಜಾಜಿ ಕಟ್ಟೆ ಹತ್ತಿರ
ಸಿರಾ ಗೇಟ್, ಸಿರಾ - ೫೭೨೧೩೭

ಮೋಹನ ವೆರ್ಣೇಕರ್
ಲೇಖಕ/ಚುಕ್ಕಿಚಿತ್ರ ಕಲಾವಿದ.

ತಾ:೨೧-೧೦-೨೦೧೦
೧೧೩೮, ೯ನೇ ಅಡ್ಡರಸ್ತೆ,
ಅಶೋಕನಗರ, ಬನಶಂಕರಿ ೧ನೇ ಹಂತ,
ಬೆಂಗಳೂರು-೫೬೦೦೫೦

ಆತ್ಮೀಯರಾದ ಶ್ರೀ ಬಿ.ಜಿ.ಸತ್ಯಮೂರ್ತಿ ಅವರಿಗೆ,
ಶುಭ ಹಾರೈಕೆಗಳು.

ಕನ್ನಡ ಸಾಹಿತಿಗಳ ಮಾಹಿತಿ ಕೋಶಗಳನ್ನು ಇದುವರಗೆ ಆರು ಸಂಪುಟಗಳಲ್ಲಿ ಹೊರ ತಂದಿರುವ ತಮ್ಮ ಸಾಹಸವನ್ನು ಎಷ್ಟು ಕೊಂಡಾಡಿದರು ಸಾಲದು. ನಿಜಕ್ಕೂ ಇದೊಂದು ಶ್ರಮಭರಿತ ಅದ್ಭುತ ಸಾಧನೆ. ತಮಗೆ ನನ್ನ ಹಾರ್ದಿಕ ಅಭಿನಂದನೆಗಳು. ಇದೀಗ ೭ನೇ ಭಾಗ ಸಿದ್ಧವಾಗುತ್ತಿರುವ ಸಂದರ್ಭದಲ್ಲಿ ನನ್ನ ಸಾಹಿತ್ಯಕ ಸಾಧನೆಯ ವಿವರಗಳನ್ನು ಕೇಳಿ ತಾವು ಪತ್ರಬರೆದಿರುವುದಕ್ಕೆ ನಾನು ಕೃತಜ್ಞನಾಗಿದ್ದೇನೆ.

ತಮ್ಮ ವಿಶ್ವಾಸಿ
ಮೋಹನ ವೆರ್ಣೇಕರ್

ಎಚ್.ಜಿ ಸೋಮಶೇ- ರರಾವ್
ನಿವೃತ್ತ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಮತ್ತು
ಪ್ರಾಂಶುಪಾಲರು ಸ್ಟಾಫ್ ಟ್ರೈನಿಂಗ್ ಕಾಲೇಜು, ಕೆನರ ಬ್ಯಾಂಕ್)
ನಟ, ನಿರ್ದೇಶಕ: ರಂಗಭೂಮಿ/ಚಲನಚಿತ್ರ/ಕಿರುತೆರೆ

ನಂ. ೮೦, ಶ್ರೀನಿವಾಸ,
೧೧ನೇ ಮುಖ್ಯರಸ್ತೆ, ಶ್ರೀನಗರ,
ಬೆಂಗಳೂರು – ೫೬೦೦೫೦
☎: ೨೬೬೦೪೨೨೭, ೨೬೬೨೪೪೨೫.
✆: ೯೯೭೨೫೭೯೫೪೦

ಶ್ರೀ ಬಿ.ಜಿ.ಸತ್ಯಮೂರ್ತಿ ಅವರಿಗೆ ಶುಭ ಶಯಗಳು.

ತಮ್ಮ ಮತ್ತು ನಾರಯಣ ಬಲ್ಲಾಳ್ ಅವರ ನೇತೃತ್ವದಲ್ಲಿ ಪ್ರಕಟವಾಗಿರುವ ಸಾಹಿತಿ ಮಾಹಿತಿ ಕೋಶ – ೬' ಗ್ರಂಥ ಶ್ರೀ ಬಲ್ಲಾಳರ ಮೂಲಕ ತಲುಪಿದೆ. ಎಂಥ ಸೊಗಸಾದ ಗ್ರಂಥ ತಂದಿದ್ದೀರಿ! ಗ್ರಂಥದ ಹೊರಕವಚ, ಉಪಯೋಗಿಸಿರುವ ಉತ್ತಮ ಗುಣಮಟ್ಟದ ಕಾಗದ, ತಪ್ಪಿಲ್ಲದ ಮುದ್ರಣ – ಇವೆಲ್ಲ ಒಂದು ಕಡೆಗಾದರೆ ತುಂಬ ಉಪಯುಕ್ತವಾದ ಮಾಹಿತಿ ಪೂರ್ಣ (ಸಾಹಿತಿಗಳ) ವಿಷಯಗಳನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ ಅವರ ಭೂವಚಿತ್ರದ ಜೊತೆಗೆ ಅವರ ಸಾಧನೆಯ ಸೂಕ್ಷ್ಮ ಪರಿಚಯವನ್ನೂ ಮಾಡಿಸಿದ್ದೀರಿ. ಇದು ಸುಲಭದ ಕೆಲಸವಲ್ಲ. ವಿಶ್ವವಿದ್ಯಾಲಯ, ಸಾಹಿತ್ಯ ಅಕಾಡೆಮಿ-ಗಳಂಥ ಸಂಸ್ಥೆಗಳು ಮಾಡ ಬೇಕಾದ ಕೆಲಸವನ್ನು ನೀವು ಮಾಡಿದ್ದೀರಿ. ಇದು ನಿಜಕ್ಕೂ ಪ್ರಶಂಸನೀಯವಾದ ಸಾರಸ್ವತ ಸೇವೆ – ಪರಿಚಾರಿಕೆ. ಇದಕ್ಕೆ ತಾಳ್ಮೆ, ಶ್ರದ್ಧೆ, ಅಪಾರ; ಅಂತಹ ಕೆಲಸವನ್ನು ನೀವು ಮಾಡಿದ್ದು ಒಂದು ದಾಖಲೆಯೇ ಸರಿ.

ಪುಸ್ತಕ ಪ್ರಕಟಣೆಯು ಕಷ್ಟವಾದ ಕೆಲಸ: ಹಾಗಿದ್ದೂ ಸೊಗಸಾದ ಗ್ರಂಥವನ್ನು ತಂದಿದ್ದೀರಿ.

ನಿಮಗೆ ಧನ್ಯವಾದಗಳು– ಅಭಿನಂದನೆಗಳು. ಶ್ರೀ ನಾರಯಣ ಬಲ್ಲಳ್ ಅವರಿಗೆ ನನ್ನ ಶುಭ ಹಾರೈಕೆಗಳು ತಿಳಿಸಿ.

ಇತಿ,
ನಿಮ್ಮ
ಎಚ್.ಜಿ ಸೋಮಶೇಖರರಾವ್

ಡಾ, ಜಿ.ಕೆ. ಹಿರೇಮಠ, ಬಿ.ಇಡಿ., ಎಂ.ಎ., ಪಿಹೆಚ್.ಡಿ.
ಕನ್ನಡ ಅಧ್ಯಾಪಕರು,
ಶ್ರೀ ಜಗದ್ಗುರು ದುರದುಂಡೀಶ್ವರ ಪ್ರೌಢ ಶಾಲೆ,
ನಿಡಸೋಸಿ – ೫೯೧೨೩೬

ಲಿಂಗ ಮಹಾಮನೆ
ಶ್ರೀನಿಜಲಿಂಗೇಶ್ವರ ನಗರ,
ನಿಡಸೋಸಿ – ೫೯೧೨೩೬
ತಾ. ಹುಕ್ಕೇರಿ. ಜಿ. ಬೆಳಗಾವಿ
✆: ೯೪೮೧೧೦೮೩೦೨

ಅನನ್ಯ ಕೋಶದ ಅನರ್ಘ್ಯ ಸಾಹಿತಿಗಳಾದ,
ಶ್ರೀ ಬಿ.ಜಿ.ಸತ್ಯಮೂರ್ತಿ ಅವರಿಗೆ ಅನಂತ ವಂದನೆಗಳು,

'ಸಾಹಿತಿ ಮಾಹಿತಿ ಕೋಶ'ದ ನಿಮ್ಮ ಕಾರ್ಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಟ್ಟಿಗೆರೆಯಾದುದು. ಸಮಕಾಲೀನ ಸಾಹಿತಿಗಳನ್ನು ಗುರುತಿಸಿ ಪರಿಚಯಿಸುವ ಈ ಬಗೆಯ ಕಾರ್ಯವು ಮುಂದೆ ಮತ್ಯಾರಿಗೆ ಸಾಧ್ಯವಾಗಬಹುದು! ಸಾಧ್ಯವಾದರೂ ಅವರಿಗದು

ಸಮುದ್ರದಲ್ಲಿ ಬಂದು ಬೆರಳನ್ನು ಮಾತ್ರ ಅದ್ದಿದಂತೆ. ತಾವು ಮಾತ್ರ ಪರಿಚಯದ ವರ್ಷಾಧಾರೆ ಗೈದಿದ್ದೀರಿ ಎಂದರೆ ಏನೋ ಹೇಳಿದಂತಲ್ಲ! ಇಪ್ಪತ್ತೊಂದನೇ ಶತಮಾನದ ಮೊದಲ ದಶಕದ ಯುಗ ಸಾಹಿತ್ಯದ ಅಗ್ರಗಣ್ಯ ಸಾಹಿತಿ. ಸಾಹಿತಿಗಳಲ್ಲಿಯೇ ಒಬ್ಬ-ರೆನಿಸುವ ತಾವು ಏಳೆಂಟು ಸಂಪುಟಗಳ 'ಏಕವ್ಯಕ್ತಿ ಕೋಶಶೂರ' ಎಂಬುದು ತಮ್ಮ ಘನತೆಗೆ ಸಾಕ್ಷಿಯೆನ್ನಬಹುದು.

'ಸಾಹಿತಿ ಮಾಹಿತಿ ಕೋಶ' ತಮ್ಮ ದೃಷ್ಟಿಧೋರಣೆಯಾದ ಕಾರಣ ಈ ಬಗೆಯ ಹೊಸ ಚಿಗುರನ್ನು ಹಳೆ ಬೇರಿನೊಂದಿಗೆ ಬೆರಸಿ ಕೋಶದ ಮಾಲೆಯನ್ನು ಹಣೆಯುವ ಅಮೋಘ ಕಾರ್ಯಕ್ಕೆ ನಿಮಗೆ ನೀವೇ ಸಾಟಿ! ಇದು ನಿಮ್ಮ ಸಾಹಿತ್ಯ ಪ್ರಿಯತೆ ಮತ್ತು ಸಾಹಿತಿಗಳ ಪ್ರಿಯತೆಗೆ ನಿದರ್ಶನ. ನಾಡಿನ ಸಾಹಿತಿಗಳ ಬಗೆಗಿನ ಕಾಳಜಿಯೂ ಆಗಿದೆ.

ಸಾರಸ್ವತ ಲೋಕವನ್ನು ಒಂದೇ ತೆಕ್ಕೆಗೆ ತಂದು ಪರಿಚಯಿಸುವ ಈ ಬಗೆಯ ಸಾಹಸವು ವಿಶ್ವವಿದ್ಯಾಲಯಗಳಿಗೆ ಪ್ರಕಾಶನ ಸಂಸ್ಥೆಗಳಿಗೆ ಕೈ ದೋರಿಕೆಯೇ ಸರಿ. ಮಾಹಿತಿ ಕಲೆಹಾಕಿ ಕಡಿಮೆ ಅವಧಿಯಲ್ಲಿ ಕೃತಿ ಪ್ರಕಟಸಿ ಕನ್ನಡಿಗರ ಕೈಗಿತ್ತು ಕುಣಿಯುವ ನಿಮ್ಮ ಮನೋ ಧರ್ಕಕ್ಕೆ ನೂರು ನೂರು ನಮನಗಳು.

ತಮ್ಮವ

ಡಾ, ಜಿ.ಕೆ. ಹಿರೇಮಠ

ಎಂ. ಕೇಶವರಾವ್, ಎಂ.ಎ., ಬಿ.ಎಸ್ಸಿ., ಡಿ.ಇಡಿ.

ಶ್ರೀನಿವಾಸ. ೫೨೧,
೧೧ನೇ ಕ್ರಾಸ್, ೮ನೇ ಮುಖ್ಯ,
ಚಂದ್ರ ಲೇ ಔಟ್ ೧ನೇ ಘಟ್ಟ, ೧ನೇ ಮುಖ,
ಬೆಂಗಳೂರು-೫೬೦೦೭೨.
ದೂರವಾಣಿ: ೨೩೪೮೧೬೦

ಮಾನ್ಯರೇ,

ಇತ್ತೀಚಿನ ಗ್ರಂಥ ಬಂಢಾರ ಸಪ್ತಹಾದಲ್ಲಿ **'ಸಾಹಿತಿ ಮಾಹಿತಿ ಕೋಶ'** ತಮ್ಮ ಪ್ರಕಟಣೆಯನ್ನು ನೋಡಿ ಬಹಳ ಸಂತೋಷವಾಯಿತು. ವಿವಿಧ ಸಾಹಿತಿಗಳ ಮಾಹಿತಿಯನ್ನು ಕೋಶದಲ್ಲಿ ಅಳವಡಿಸಿ ಅನೇಕ ಸಾಹಿತಿಗಳ ಹೆಸರು ವಿವರಗಳನ್ನು ಬೆಳಕಿಗೆ ತಂದಿರುತ್ತೀರಿ. ತಮ್ಮ ಪ್ರಾಮಾಣಿಕ ಪ್ರಯತ್ನಕ್ಕೆ ನನ್ನ ಶುಭಾಶಯಗಳು ಹಾಗೂ ಮೆಚ್ಚುಗೆಗಳು.

ಈ ಶ್ರೇಣಿಯಲ್ಲಿ ತಮ್ಮಿಂದ ಪ್ರಕಟವಾಗುವ ಸಾಹಿತಿ ಮಾಹಿತಿ ಕೋಶದಲ್ಲಿ ನನ್ನ ಬಗ್ಗೆ 'ಸಾಹಿತಿ ಮಾಹಿತಿ ಕೋಶ' ಮಾಹಿತಿಯನ್ನು ಈ ಪತ್ರದ ಜೊತೆಗೆ ನಿಮ್ಮ ಚೌಕಟ್ಟಿನಲ್ಲಿ ಕಳುಹಿಸಿರುತ್ತೇನೆ.

ತಾವು ಈ ಮಾಹಿತಿ ಕೋಶದಲ್ಲಿ ಪ್ರಕಟಿಸಲು ಕೋರುತ್ತೇನೆ.

ಆತ್ಮೀಯ ವಂದನೆಗಳೊಡನೆ,

ತಮ್ಮ ನಂಬುಗೆಯ,
ಎಂ. ಕೇಶವರಾವ್,
ನಿವೃತ್ತ ಪ್ರಿನ್ಸಿಪಾಲರು.

ನಾಗರಿಕ –ಹೊನ್ನವರ

ಅದ್ವಿತೀಯ **'ಸಾಹಿತಿ ಮಾಹಿತಿ ಕೋಶ'**

ಬೆಂಗಳೂರಿನ, ನಿವೃತ್ತ ಕೃಷಿ ಅಧಿಕಾರಿ ಬಿ.ಜಿ. ಸತ್ಯಮೂರ್ತಿ ಎಂಬ ಸಾಹಿತ್ಯ ಪ್ರೇಮಿಗಳು ಸುವರ್ಣ ಕರ್ನಾಟಕ ಮಹೋತ್ಸವದ ಆಚರಣೆಯ ಅಂಗವಾಗಿ; ೨೦೦೫ ರಲ್ಲಿ ಕನ್ನಡನಾಡಿನ ಎಲ್ಲ ಸಾಹಿತಿಗಳ ಸಂಕ್ಷಿಪ್ತ ಪರಿಚಯಾತ್ಮಕ ವಿವರಗಳನ್ನು ಸಂಗ್ರಹಿಸಿ **'ಸಾಹಿತಿ ಮಾಹಿತಿ – ಕೋಶ'** ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈಗಾಗಲೇ ಇದರ ಸುಮಾರು ೪೦೦ ಪುಟಗಳ ೬ ಸಂಪುಟ ಪ್ರಕಟವಾಗಿದ್ದು; ಪ್ರತಿ ಸಂಪುಟದಲ್ಲಿ ಅಂದಾಜು ೨೦೦ ಲೇಖಕ–ಲೇಖಕಿಯರ ಪರಿಚಯವಿದ್ದು ಸುಮಾರು ೧೨೦೦ ಜನ ಕನ್ನಡ ನಾಡಿನ ಹಿರಿ–ಕಿರಿಯ ಲೇಖಕರ ಹೆಸರು, ಕಾವ್ಯನಾಮ ಅವರು ಹುಟ್ಟಿದ ಸ್ಥಳ ದಿನಾಂಕ, ಜಿಲ್ಲೆ, ರಾಜ್ಯ, ವಿದ್ಯಾಭ್ಯಾಸ, ವೃತ್ತಿ, ಕೌಟುಂಬಿಕ ವಿವರ, ಪ್ರಕಟಿತ ಗ್ರಂಥಗಳು, ಲಭಿಸಿರುವ ಪ್ರಶಸ್ತಿಗಳು, ಸದ್ಯದ ಪೂರ್ಣ ವಿಳಾಸ, ಖಾಯಂ ವಿಳಾಸ, ದೂರವಾಣಿ ಸಂಖ್ಯೆ, ಭಾವಚಿತ್ರ ಇವೆಲ್ಲವನ್ನೂ **'ಸಾಹಿತಿ ಮಾಹಿತಿ ಕೋಶ'**ದಲ್ಲಿ ಕೇವಲ ೨ ಪುಟದ ಮಿತಿಯಲ್ಲಿ; ಒಳಗೊಂಡಿರುವುದು ಕನ್ನಡ ನಾಡಿನ ಲೇಖಕರ ಪರಿಚಯ ಪ್ರಕಟಣೆ ಇತಿಹಾಸದಲ್ಲಿ ಅದ್ವಿತೀಯ ಮೈಲುಗಲ್ಲಾಗಿದೆ. ಈ ಕೋಶದ ಸಂಪಾದಕರಾದ ಲೇಖ–ಕರೂ ಆದ, ಬಿ.ಜಿ. ಸತ್ಯಮೂರ್ತಿಯವರು ಹಾಗೂ ಸಹಾಯಕ ಎಂ. ನಾರಾಯಣ ಬಲ್ಲಾಳರೊಡಗೂಡಿ ನಾಡಿನ ಲೇಖಕರ ವಿಳಾಸವನ್ನು ಹಲವರ ಸಹಕಾರದಿಂದ ಪಡೆದು; ಸಂಪರ್ಕಿಸಿ, ಬಹು ಅಚ್ಚುಕಟ್ಟಾಗಿ ಸಾಹಿತಿಗಳು ನೀಡಿದ ಮಾಹಿತಿಗಳನ್ನು ಸಂಪಾದಿಸಿ, ಪರೀಕ್ಷಿಸಿ ಲೇಖಕರ ಹೆಸರು, ಪರಿಚಯಗಳನ್ನು ಅಕಾರಾದಿಯಾಗಿ ಸಂಪಾದಿಸಿ ಕೊಟ್ಟಿರುವುದು ಈ ಪುಸ್ತಕದ ಹಿರಿಮೆಯಾಗಿದೆ. ಈ ಕುರಿತು ಕನ್ನಡನಾಡಿನ ಸಾಹಿತ್ಯಾಸಕ್ತರು ಸಾಹಿತಿಗಳ ವ್ಯಕ್ತಿ ವಿವರಗಳನ್ನು ತಿಳಿದುಕೊಳ್ಳುವ ಹಂಬಲವುಳ್ಳ ಎಲ್ಲರಿಗೆ ಭರಪೂರವಾದಂತಹ ಮಾಹಿತಿ ಈ ಕೋಶದಲ್ಲಿ ಇದೆ. ಈ ಕೆಲಸಕ್ಕೆ ಕನ್ನಡ ನಾಡಿನ ಪ್ರತಿ ವ್ಯಕ್ತಿ ತಮಗೆ ಗೊತ್ತಿರುವ ಲೇಖಕರ ಹೆಸರು, ವಿಳಾಸಗಳನ್ನು ಸಂಪಾದಕ ಶ್ರೀ ಬಿ. ಜಿ. ಸತ್ಯ ಮೂರ್ತಿಯವರಿಗೆ ತಿಳಿಸಿ ಅವರು ಇನ್ನೂ ಹೆಚ್ಚು ನಾಡಿನ ಮೂಲ ಮೂಲೆಯ ಲೇಖಕರ ಪರಿಚಯವನ್ನು ಈ ದಾಖಲೆ ಪುಸ್ತಕದಲ್ಲಿ ಸೇರ್ಪಡಿಸಲು ಅವರಿಗೆ ನೆರವಾಗಬೇಕಾದ ಅಗತ್ಯವಿದೆ. ಮತ್ತು 'ಸಾಹಿತಿ–ಮಾಹಿತಿ ಕೋಶ'ವನ್ನು ಆದರದಿಂದ ಕೊಂಡು ಓದಿ ಸಂಪಾದಕರನ್ನು ನಾವೆಲ್ಲರೂ ಅಭಿನಂದಿಸಬೇಕಾಗಿದೆ.

–ಸಂಪಾದಕರು.

ಜಿ ಶೇಷಗಿರಿರಾವ್, ಬಿ.ಎಸ್ಸಿ. ಕೃಷಿ, ಎಂ.ಎ. ಬೆಂಗಳೂರು–೫೬೦೦೫೦
ನಂ. ೭೬, ೨ಎ ಕ್ರಾಸ್, ೩ನೇ ಮುಖ್ಯರಸ್ತೆ, ೧೧–೧೧–೨೦೧೦
ನಾಗೇಂದ್ರ ಬ್ಲಾಕ್, ಬೆಂಗಳೂರು – ೫೦ ದೂ: ೨೬೭೨೯೮೨೭

ಮಾನ್ಯರೇ:

ತಾವು ಅಭಿಮಾನ ಪೂರ್ವಕವಾಗಿ ಕಳಿಸಿದ "ಸಾಹಿತಿ–ಮಾಹಿತಿ ಕೋಶ–೬" ತಲುಪಿತು. ತುಂಬಾ ಧನ್ಯವಾದಗಳು. ತಮ್ಮ ಸಾಹಸದ ಬಗ್ಗೆ ಅನೇಕರ ಅಭಿಪ್ರಯಗಳನ್ನು ಓದಿದೆ. **ಆ ಬಗ್ಗೆ ನನ್ನ ಪೂರ್ಣ ಸಹಮತಿ ಇದೆ.** ತಮ್ಮ ಎರಡು ಮಾತುಗಳನ್ನು ಓದಿದೆ. ಲೇಖಕ–ಪ್ರಕಾಶಕನಾದ ನನ್ನ ಅನುಭವವೂ ಅದೇ ಆಗಿದೆ. ಆದರೆ ಸಮಾಜ–ಸರಕಾರ ಎರಡನ್ನೂ ನಿಭಾಯಿಸುವ ಮಾನಸಿಕ–ಆರ್ಥಿಕ ಸಿದ್ಧತೆಗಳಿಲ್ಲದ ನಾನು ಪ್ರಕಾಶನದ ಗೋಜಿಗೆ ಹೋಗಬಾರದೆಂದು ಆ ಕಾಯಕದಿಂದ ನಿವೃತ್ತನಾಗಿದ್ದೇನೆ.

ಯಾವ ಪುರುಷಾರ್ಥಕ್ಕಾಗಿ ನಿಮ್ಮನ್ನು ನೀವೇ ಸವೆಸುತ್ತಿರುವಿರೋ ಗೊತ್ತಿಲ್ಲ. ಉಪಕೃತ ಸಮಾಜ, ಅಧಿಕೃತ ಸಂಸ್ಥೆಗಳು–ಸರಕಾರ ಯಾವ್ಯಾವೂ ನಿಮ್ಮೊಟ್ಟಿಗೆ ಎಷ್ಟು **ಸಹಕರಿಸಿವಿಯೋ ಗೊತ್ತಿಲ್ಲ.** ಕನಿಷ್ಠ ಬೆಳಕಿಗೆ ಬಂದ ನವ ಲೇಕಕರು–ಕವಿಗಳು ಕೃತಜ್ಞತೆಯಿಂದ ಕನಿಷ್ಠ ಸಹಾಯುವನ್ನು – ಸೇವಾರೂಪದಲ್ಲಿ ದೇಣಿಗೆಗಳನ್ನು ನೀಡಿದರೆ ನಿಮ್ಮ ಪ್ರಯತ್ನಕ್ಕೆ ಪ್ರೋತ್ಸಾಹ ದೊರಕೀತು.

ಇಷ್ಟರಲ್ಲಿ ನಾನಂತೂ ಭಾವಸಾತ್ಮಕವಾಗಿ **ನಿಮ್ಮೊಟ್ಟಿಗಿದ್ದೇನೆ.** ನನ್ನ ಕೈಲಾದಷ್ಟು ದೇಣಿಗೆ ಕಳುಹಿಸುತ್ತೇನೆ. ನಾನು ನಿವೃತ್ತಿ ವೇತನದಲ್ಲಿರುವವನು. ಅನೇಕ ಧಾರ್ಮಿಕ ಸಂಸ್ಥೆಗಳಿಗೆ ನನ್ನ ಕೈಲಾದ ಸೇವೆ ಸಲ್ಲಿಸಿದಂತೆ ಈ ಕೋಶಕ್ಕೂ ಕಿರುಗಾಣಿಕೆ ಕಳಿಸುತ್ತೇನೆ, **ದೊಡ್ಡ ಮೊತ್ತವಲ್ಲ.** ಅದೊಂದು **'ಹನಿಮಾತ್ರ'.** ಹನಿ ಹನಿ ಸೇರಿದರೆ ಹಳ್ಳವಾಗುತ್ತದೆ. ಹನಿಹನಿಗಳ ಸಂಗ್ರಹ ಹೇಗೋ ಆ ದೇವರೇ ಎಲ್ಲರಿಗೂ ಬುದ್ಧಿ ಕೊಡಬೇಕು. ಸಮಾಜ, ಕನ್ನಡ ಸಾಹಿತ್ಯ ಪರಿಷುತ್ತು, ಸರಕಾರವೇ ಮೊದಲಾದ ವ್ಯವಸ್ಥೆಗಳೊಡನೆ ತಲೆ ಜಜ್ಜಿ ಕೊಳ್ಳುವುದಕ್ಕಿಂತ ಈ ಕೋಶದಲ್ಲಿ ನಮೂದಿತ ವ್ಯಕ್ತಿಗಳೆಲ್ಲ ಹನಿಹನಿ ಕಾಣಿಕೆ ಕೊಟ್ಟರೆ ಸಾಕೇ ಸಾಕು. ಆದರೆ ಕನಿಷ್ಠ ಧನ್ಯವಾದಗಳನ್ನಾದರೂ ಹೇಳುತ್ತಾರೋ ಇಲ್ಲವೋ–ಅವರು–ತಿಳಿಯದು.

ತಮ್ಮ ವಿಶ್ವಾಸಿ

ವೇದಗರ್ಭ ಜಿ ಶೇಷಗಿರಿರಾವ್.

ಅಭಿಪ್ರಾಯ, **"ಸಾಹಿತಿ ಮಾಹಿತಿ ಕೋಶ"**

"ಸಾಹಿತಿ ಮಾಹಿತಿ ಕೋಶ" ಒಂದು ನವೀನ ಪ್ರಯತ್ನ. ಮಾನ್ಯ ಶ್ರೀ ಬಿ.ಜಿ. ಸತ್ಯಮೂರ್ತಿಯವರ ಸತತ ನಿಸ್ವಾರ್ಥ ಪ್ರಯತ್ನದ ಫಲ. ಕನ್ನಡ ಸಾರಸ್ವತ ಸೇವೆ ಗೈಯುತ್ತಿರುವ, ಸಮಾಜಕ್ಕೆ ಪರಿಚಿತ ಹಾಗೂ ಅಪರಿಚಿತರನ್ನು ವ್ಯವಸ್ಥಿತವಾಗಿ ಪರಿಚಯಿಸುತ್ತಿರುವ ಕನ್ನಡ ಸೇವಕರ ಅಮೂಲ್ಯ ಸಂಗ್ರಹ. ಇದರಲ್ಲಿ ಅವರಿಗೆ ವಯಕ್ತಿಕ ಲಾಭವೇನೂ ಇಲ್ಲ. ಇದರ ಬದಲಾಗಿ ಅವರು (ಕನ್ನಡ) ಕಥೆ, ಕಾದಂಬರಿ, ಕವನಗಳನ್ನು ಬರೆದಿದ್ದರೆ ಇನ್ನೂ ಪ್ರಸಿದ್ಧರಾಗುತ್ತಿದ್ದರೇನೋ! ಆದರೆ ತಮ್ಮ ಖ್ಯಾತಿ–ಕೀರ್ತಿಗಳನ್ನು ಬದಿಗಿರಿಸಿ ಕರ್ಪೂರದಂತೆ ತಾನೂ ಸುಟ್ಟರೂ ಸುತ್ತಲೂ ಬೆಳಕನ್ನು ಚೆಲ್ಲುವ ಅವರ ಚಾರಿತ್ರ್ಯ ನಿಜಕ್ಕೂ ಅಪೂರ್ವ.

ಅವರ ಸಂಪಾದಕೀಯ ನೋಡಿದಾಗ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತು–ಸರಕಾರ–ನಮ್ಮದೇ ಸಂಸ್ಥೆಗಳು ನಿರೀಕ್ಷಿತ ಸಹಕಾರ ನೀಡುತ್ತಿಲ್ಲವೆಂದು ತಿಳಿದು ಮನಸ್ಸಿಗೆ ನೋವಾಯಿತು. ಇದಕ್ಕೆ ಒಂದೇ ಉಪಾಯ. ಕೋಶಗಳಲ್ಲಿ ಬೆಳಕನ್ನು ಕಂಡವರು ತಾವು ಹಾಗೂ ತಮ್ಮ ಮಿತ್ರರೊಡನೆ ಸೇರಿ ಸ್ವಲ್ಪ ಆರ್ಥಿಕ ನೆರವನ್ನು ನೀಡಿದರೆ ಶ್ರೀ ಬಿ.ಜಿ. ಸತ್ಯಮೂರ್ತಿಯವರಿಗೆ ಸ್ವಲ್ಪವಾದರೂ ಕೃತಜ್ಞತೆ ಸಲ್ಲಿಸದಂತಾಗುತ್ತದೆ.

ವೇದಗರ್ಭ ಜಿ ಶೇಷಗಿರಿರಾವ್.

ಸ್ನೇಹ ಸ್ಮಾರಕ:

ಎಂ. ವ್ಯಾಸರ ಕಡೇ ಪತ್ರ

ಆತ್ಮೀಯರಿಗೆ ವಂದನೆಗಳು. ನಿಮ್ಮನ್ನು ಮರೆಯೋದುಂಟೇ? ನನ್ನ ಕನಸಿನ **ಅಜಂತ**ದ ಬರಹ-ಗಾರರಾಗಿದಿದ್ದೀರಿ. ನನ್ನ ನೆನಸಿಕೊಂಡಿದ್ದಕ್ಕೆ ಕೃತಜ್ಞತೆಗಳು. ಲೇಖಕರ ಪರಿಚಯದ ಪುಸ್ತಕ ತರುವ ಕುರಿತಾಗಿ ಬರೆದಿದ್ದೀರಿ. ನನಗೆ ಫಾರಂ ಫಿಲಪ್ ಮಾಡುವ, ಫೋಟೋ ತೆಗೆಸಿ ಅಂಟಿಸುವ ನನ್ನ ಕುರಿತು ನಾನೇ ಬರೆಯುವ ನನ್ನ ಬಗೆಗೇ ಮಾಹಿತಿ ನೀಡುವ ಇತ್ಯಾದಿ ಕರಕರೆ ಅನ್ನಿಸೋ ಕೆಲಸ. ದಯವಿಟ್ಟು ನನ್ನ ಮಾಹಿತಿ ಯಾರಿಗೂ ಸಿಗೋದು ಬೇಡ. ಹೇಗೋ ಬದುಕಿದ್ದೇನೆ. ಹೇಗೋ ಬರೆದಿದ್ದೇನೆ. ಎಲ್ಲಿಯೂ ದಾಖಾಲಾತಿ ಇಲ್ಲದೆ ಒಂದು ಕಾಡುಹಕ್ಕಿ ಹಾಡಿ ಎದ್ದು ಹೋದ ಹಾಗೆ. ಎಲ್ಲೋ ಕಾಡುಕುದುರೆ ಕೆನೆದು ಓಡಿಹೋದ ಹಾಗೆ, ಎಲ್ಲೋ ಮಿಡಿತೆಯೊಂದು ತೀವ್ರ ಅಸಹನೆಯಿಂದ ಶಬ್ದಿಸಿ ಹೋದ ಹಾಗೆ - ಮೌನ ನನ್ನ ಆವರಿಸಿಕೊಳ್ಳ ಬೇಕು. ಈ ಮನಸನ್ನು ಮೌನವಾಗಿಸುವ ಧ್ಯಾನದಲ್ಲಿದ್ದೇನೆ. ಹೇಗೋ **ಮುಗಿಯುತ್ತಿದ್ದೇನೆ**. ಅಥವಾ **ಮುಗಿಸುತ್ತಿದ್ದೇನೆ**. ಕತೆ, ಕವನಗಳನ್ನು ನಿರಂತರ ಬರೆಯುತ್ತಿದ್ದೇನೆ. ಇದೇ ನನ್ನ ಅಸ್ತಿತ್ವ. ಮಂಗಳೂರು ಯುನಿವರ್ಸಿಟಿ ಕಣ್ಣೂರು ಯುನಿವರ್ಸಿಟಿಗಳ ಪದವಿ ತರಗತಿಗಳಿಗೆ ನನ್ನ 'ಕೃತಿ' ಸಂಕಲನ ಪಠ್ಯವಾಗಿದೆ. ನನ್ನ ಪ್ರಯತ್ನವಿಲ್ಲದೆ. ಪ್ರಯತ್ನವಿಲ್ಲದೆ ಬರೆಯಬೇಕು. ಬದುಕಬೇಕು. ಯಾಕೋ ಗೊತ್ತಿಲ್ಲ. ಚೆನ್ನಾಗಿದ್ದೀರಾ ನೀವು? ಆ ಕಾಲದ ನೆನಪಿನ ತುಣುಕೊಂದನ್ನು ತಟ್ಟನೆ ಎಸೆದು ಗಲಿಬಿಲಿಯಾಗಿದೆ. ಬರೆಯುತ್ತೀರಿ. ಪ್ರೀತಿಗಾಗಿ ಕೃತಜ್ಞ.

ವ್ಯಾಸ. ಎಂ.

ಸಂಪಾದಕ-ಲೇಖಕರ ಮಾತು»

ಯಥಾ ಪ್ರಕಾರ ಸಮಸ್ಯೆಗಳ ಮಧ್ಯದಿಂದ ನುಣುಚಿಕೊಂಡು ಹೇಗೋ ಪಾರಾಗಿ ಕೋಶದ ೭ನೇ ಭಾಗವನ್ನು ಹೊರ ತಂದಿದೆ.

ಬಹುಶಃ ಶ್ರೀ ನಾರಯಣ ಶಾನಭಾಗರ ನೆರವಿಲ್ಲದಿದ್ದರೆ ಕೋಶ ಇಷ್ಟು ಬೇಗ ಹೊರ ಬರುತ್ತಿತ್ತೋ ಇಲ್ಲವೋ? ನಾರಾಯಣ ಶಾನಭಾಗರು ತಮ್ಮ ಹವ್ಯಕ ಸಂಸ್ಥೆಯಷ್ಟೇ ಆಸ್ಥೆಯಿಂದ 'ಸಾಹಿತಿ ಮಾಹಿತಿ ಕೋಶ-೭'ಕ್ಕೆ ಮಾಹಿತಿ ಸಂಗ್ರಹಿಸಲು ಶ್ರಮ ಪಟ್ಟಿದ್ದಾರೆ. ನನ್ನ ಕೆಲಸವನ್ನಷ್ಟು ಅವರೂ ಮಾಡಿದ್ದಾರೆ. ಪರಿಚಿತ ಲೇಖಕರಿಗೆಲ್ಲ ತಾವೇ ನಮೂನೆ ಕಳುಹಿಸಿ ದೂರವಾಣಿ ಮಾಡಿ ಮಾಹಿತಿ ತರಿಸಿದ್ದಾರೆ.

ಈ ಮಾಹಿತಿ ಕಳುಹಿಸುವ ಬಗ್ಗೆ ಎಷ್ಟೇ ತಲೆ ಚೆಚ್ಚಿ ಕೊಂಡರೂ ಪ್ರಯೋಜನವಾಗುತ್ತಿಲ್ಲ. 'ಪರಿಚಯ ಮಾಹಿತಿ' ಅಂದರೆ ಏನು? ಅಂತ ಕೇಳುತ್ತಾರೆ. ಪ್ರತಿಯೊಬ್ಬರಿಗೂ ಬರೆದಿದ್ದನ್ನೇ ಬರೆಯ ಬೇಕು. ಈ ಕಷ್ಟದಿಂದ ಪಾರಾಗಲು ನಮೂನೆ ಮುಖ ಪತ್ರದ ಹಿಂಬದಿ 'ಪರಿಚಯ ಮಾಹಿತಿ' ಯಾವ, ಯಾವ ಅಂಶಗಳನ್ನೊಳಗೊಂಡಿರ ಬೇಕೆಂದು ಮುದ್ರಿಸಿದ್ದನ್ನು ಕಳುಹಿಸಿದರೂ ಪ್ರಯೋಜನವಾಗುತ್ತಿಲ್ಲ. ೨ ಪುಟ ಪರಿಚಯ ಕಳುಹಿಸಿ ಎಂದರೆ ಒಂದು ಪುಟ ಪ್ರಕಟಿತ ಕೃತಿಗಳು ಮತ್ತೊಂದು ಪುಟ ಪ್ರಶಸ್ತಿಗಳ ಮಾಹಿತಿ ತುಂಬಿ ಕಳುಹಿಸುತ್ತಾರೆ. ಇಂತಹವರ ಅಪೂರ್ಣ ಮಾಹಿತಿಯೇ ೫೦-೬೦ ಉಳಿದಿವೆ. ಇವರಿಗೆ ಪರಿಚಯ ಮಾಹಿತಿಗಾಗಿ ಎಷ್ಟು ಸಲ ಪತ್ರ ಬರೆದರೂ ನಿಷ್ಪ್ರಯೋಜನ, ಈ ಬಾರಿಯ ಪೂರ್ಣ ಮಾಹಿತಿ ಕೊಟ್ಟವರು ಯಾರು, ಬೇಕಾಬಿಟ್ಟಿ ಕೊಟ್ಟಿರುವವರು ಯಾರೆಂದು ಕೋಶದ ಪುಟಗಳನ್ನು ತಿರುವಿಹಾಕಿದರೆ ನಿಮಗೇ ತಿಳಿಯುತ್ತದೆ.

ಪ್ರತಿ ಬಾರಿ ಕೋಶ ಹೊರತಂದಾಗಲೂ ಈ ಕೆಲಸ ಇಷ್ಟಕ್ಕೆ ಸಾಕು ಅಂತ ಅಂದು ಕೊಳ್ಳುವುದು, ಆದರೆ ಹಿರಿಯ ಸಾಹಿತಿಗಳ ಸಹೃದಯಿಗಳ ಅಭಿಪ್ರಾಯ ನೋಡಿದಾಗ ಮತ್ತೊಂದು ಭಾಗ ತಂದು ಕೈ ಬಿಡೋಣವೆಂದು ಹುರುಪುಗೊಳ್ಳುವುದು ನಡದೇ ಇದೆ. ಇಂತಹ ಮಹನೀಯರಿಗೆ ನನ್ನ ಅನಂತಾನಂತ ಕೃತಜ್ಞತೆಗಳು.

ವೇದಗರ್ಭ ಜಿ. ಶೇಷಗಿರಿರಾಯರ ಪತ್ರವನ್ನಿಲ್ಲಿ ಪ್ರಸ್ತಾಪಿಸಲೇಬೇಕು. 'ಯಾವ ಪುರುಷಾರ್ಥಕಾಗಿ ನಿಮ್ಮನ್ನು ನೇವೇ ಸವೆಸುತ್ತಿರುವಿರೋ' ಎಂದು ಕೇಳಿರುವ ಮಾತನ್ನು ಈಗಾಗಲೇ ನನ್ನ ನೂರಾರು ಮಂದಿ ಸಾಹಿತಿ ಮಿತ್ರರೂ ಕೇಳಿದ್ದಾರೆ. ಒಂದು ಕೋಶದ ಬಿಡುಗಡೆ ಸಮಾರಂಭದಲ್ಲಿ ವೇದಿಕೆಯ ಮೇಲೆಯೇ ಸಭಾ ಸದರೆದುರು ಡಾ|| ಸುಮತೀಂದ್ರ ನಾಡಿಗ ಅವರು 'ನೀನು ಹುಚ್ಚ ಅದೀಯಾ' ಎಂದು ಹುಸಿ ಮುನಿಸು ತೋರಿಸಿದರು. ನಿಜ ಹೇಳಬೇಕೆಂದರೆ ೨೦೦೪ ರಿಂದ ನನ್ನ ಸಾಹಿತ್ಯ ರಚನೆಗೆ ಪೂರ್ಣ ವಿರಾಮವನ್ನೇ ಕೊಡುವಂತಾಗಿದೆ. ದಿನ ಬೆಳಗಾದರೆ ಈ ಕೋಶದ ಪ್ರಕಟಣೆ-ಮಾರಟ-ಹಣ ಹೋದಿಸುವ ಕೈಂಕರ್ಯದ ಮಧ್ಯೆ ಬೇರೆ ಜಗತ್ತೇ ಇಲ್ಲವಾಗಿದೆ.

ಗ್ರಂಥಾಲಯ ಇಲಾಖೆ, ಶಿಕ್ಷಣ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಸ್ಕೃತಿ ಇಲಾಖೆ, ಪುಸ್ತಕ ಪ್ರಾಧಿಕಾರ, ವಿಶ್ವವಿದ್ಯಾಲಯಗಳು ಹಾಗೂ ಸರ್ಕಾರ ಮಾಡ

ಬೇಕಾದ ಕೆಲಸವನ್ನು ನಾನೊಬ್ಬನೇ ವೈಯಕ್ತಿಕವಾಗಿ ಮಾಡುತ್ತಿರುವ ಕೆಲಸದ ಬಗ್ಗೆ ಸಾಹಿತಿಗಳು ಸಹೃದಯಿಗಳು ತೋರಿಸುತ್ತಿರುವ ಕಳಕಳಿಯನ್ನು ಈ ಯಾವ ಸಂಸ್ಥೆಗಳು ತೋರಿಸದಿರುವುದು ಈ ನಾಡಿನ ದೌರ್ಭಾಗ್ಯ- ಇದಕ್ಕೆ ಕಾರಣ ಹೆಚ್ಚಿನ ಈ ಸಂಸ್ಥೆಗಳಲ್ಲಿ ಸಾಹಿತ್ಯದ ಗಂಧವಿಲ್ಲದ ನಾಡು-ನುಡಿಯ ಬಗ್ಗೆ ಅಭಿಮಾನ ಶೂನ್ಯರಾದ ಕೇವಲ ಸಂಬಳ - ಭ್ರಷ್ಟಾಚಾರಕ್ಕಾಗಿ ತುಂಬಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳೇ ಕಾರಣ.

ಡಾ|| ಸುಮತೀಂದ್ರ ನಾಡಿಗರು ಇಂತಹ ಕೆಲಸ ಮಾಡುತ್ತಿರುವವರಿಗೆ ಅಕಾಡೆಮಿಯೋ, ಸಾಹಿತ್ಯ ಪರಿಷತ್ತೋ ಫೆಲೋಷಿಪ್ ಕೊಡಬೇಕೆಂದರು. ಮೈಸೂರಿನ ಬಾ.ವೆ. ಶ್ರೀಧರ್ ಈ ಕೋಶ 'ವೆಬ್‌ಸ್ಟರ್ ಬೈಯೋಗ್ರಾಫಿಕಲ್ ಡಿಕ್ಷನರಿ'ಗಿಂತ ಉತ್ತಮವಾಗಿದೆ ಎಂದರು. ಇನ್ನು ಕೆಲವು ಆತ್ಮೀಯರು ಇದು ಭಾರತೀಯ ಭಾಷೆಗಳಲ್ಲಿಯೇ ಪ್ರಥಮ ಎಂದಿದ್ದಾರೆ. ಇದು ಯಾರಿಗೆ ಹೋಗಬೇಕೋ ಅವರಿಗೆ ತಲುಪಿಲ್ಲ. ಹೋದರೂ ಆ ಜೇಡಿಮಣ್ಣು ತುಂಬಿದ ತಲೆಗಳಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಜಾತೀಯತೆ-ಗುಂಪುಗಾರಿಕೆ ವಿಜೃಂಭಿಸುತ್ತಿದೆ.

ಆದರೆ ವೈಯಕ್ತಿಕವಾಗಿ, ಪ್ರಾಮಣಿಕವಾಗಿ ಹೇಳುವುದಾದರೆ ನನಗೆ ಇದಕ್ಕಿಂತ ಅವರ ಮೆಚ್ಚುಗೆಯ ನುಡಿ ಪ್ರೋತ್ಸಾಹಗಳಿಗಿಂತ ಯಾವ ನೆರವು ಬೇಕಾಗಿಯೂ ಇಲ್ಲ. ಹತ್ತು ಭಾಗ ಮಾಡಬೇಕಂದು ಕೊಂಡಿದ್ದೇನೆ. ಆದಷ್ಟು ಪ್ರಯತ್ನ ಪಡುವುದು. ಇದರ ಮೇಲೆ ದೈವೇಚ್ಛೆ.

ವೇದಗರ್ಭ ಜಿ. ಶೇಷಗಿರಿರಾಯರ ಮತ್ತೊಂದು ಸಲಹೆ ವಿಚಾರರ್ಹ. 'ಕನಿಷ್ಠ ಬೆಳಕಿಗೆ ಬಂದ ನವ ಲೇಖಕರು-ಕವಿಗಳು ಕೃತಜ್ಞತೆಯಿಂದ ಕನಿಷ್ಠ ಸಹಾಯವನ್ನು - ಸೇವಾ ರೂಪದಲ್ಲಿ ದೇಣಿಗೆಗಳನ್ನು ನೀಡಿದರೂ ನಿಮ್ಮ ಪ್ರಯತ್ನಕ್ಕೆ ಪ್ರೋತ್ಸಾಹ ದೊರಕೀತು ಎಂದಿದ್ದಾರೆ. ಅಂತಹ ಉದಾರಿಗಳು ಇರುವರೆಂದು ಊಹಿಸಿವುದೂ ಕಷ್ಟವಾಗಿರುವ ಈ ಕಾಲದಲ್ಲಿ ಪರಿಚಯ ಪ್ರಕಟವಾದ ಲೇಖಕರಿಗೆ ಪತ್ರ ಬರೆದು **ಗ್ರಂಥದ ಒಂದು ಪ್ರತಿ - ರೀದಿಸಲು ಅರ್ಧ ಹಣ** ಕಳುಹಿಸಲು ವಿನಂತಿಸಿದರೂ ಅದಷ್ಟಕ್ಕೇ ಹಿಂದು-ಮುಂದು ನೋಡುವ ಕಾಂಪ್ಲಿಮೆಂಟರಿ ಕೇಳುವವರೇ ಇರುವಾಗ ಇನ್ನು ಸಹಾಯ, ದಾನ-ದೇಣಿಗೆಗಳೆಲ್ಲ ಎಲ್ಲಿಂದ ಬರುತ್ತೆ ಸ್ವಾಮೀ! ಅಂತಹವರೂ ಇದ್ದಾರೆಯೇ!

ಈ ಬಾರಿ ಕೋಶ-೭ನ್ನು ಚಂದೀಗಢದಲ್ಲಿರುವ ನನ್ನ ಮಗ ಚಿ. ಹರಿಪ್ರಸಾದ್ ತುಂಬ ಶ್ರಮವಹಿಸಿ ಡಿ.ಟಿ.ಪಿ. ಮಾಡಿರುತ್ತಾನೆ. ಆತನಿಗೆ ಹೊಯ್‌ಕಯಾಗಿ ಅವನ ಪತ್ನಿ ಶ್ರೀಮತಿ ಸುಧಾ ನೆರವಾಗಿದ್ದಾಳೆ. ಇಲ್ಲಿ ನನ್ನ ಶ್ರೀಮತಿ ಮತ್ತು ನನ್ನ ಮಗಳು ವಾಣಿಅನಿಲ್ ಕರಡು ತಿದ್ದಲು ನೆರವಾಗಿದ್ದಾರೆ. ಈ ಭಾಗದ ಮಾಹಿತಿ ತರಿಸಲು ಡಾ. ಎನ್. ನಂದೀಶ್ವರ್, ವೇದಗರ್ಭ ಶೇಷಗಿರಿರಾಯರು, ಮೂರ್ತಿದೇರಾಜೆ ಇತ್ಯಾದಿ ಇನ್ನೂ ಹಲವಾರು ಹಿತೈಷಿಗಳು ವಿಳಾಸಗಳನ್ನಿತ್ತು ಸಹಕರಿಸಿದ್ದಾರೆ. ಪೂರ್ಣಿಮಾ, ಸಂತೋಷ್, ನಾರಯಣ ಬಲ್ಲಾಳರು ಶ್ರೀ ಹೊ.ರಾ. ಸತ್ಯನಾರಯಣರಾಯರು ಇವರೆಲ್ಲ ನೆರವಾಗಿದ್ದಾರೆ. ವಿಶ್ವಾಸ್ ಪ್ರಿಂಟ್ಸ್ ಮುದ್ರಣ ಮಾಡಿದೆ. ನನ್ನ ಶ್ರೀಮತಿ ಅಂಚೆ ಕಚೇರಿಯ ಕೆಲಸ ನಿರ್ವಹಿಸಿದ್ದಾಳೆ. ಇವರೆಲ್ಲರಿಗೂ ನನ್ನ ನೆನಕೆಗಳು.

ಹುಳಿಮಾವು -ಬಿ.ಜಿ. ಸತ್ಯಮೂರ್ತಿ.

ತಾ. ೨೭-೧೨-೨೦೧೦

ಲೇಖಕರ ಅಕಾರಾದಿ ಸೂಚಿ

ಕ್ರ.ಸಂ.	ಹೆಸರು	ಪು.ಸಂ
	ಅ	
೧.	ಅಣ್ಣಪ್ಪ. ಯು.ಕೆ	೨
೨.	ಅಂಬುಜಾ. ಟಿ.ಎಸ್.	೪
೩.	ಅನಂತ ಶರ್ಮಾ ಭುವನಗಿರಿ	೬
೪.	ಅನುರಾಧಾ ಕೆ.ವಿ.	೮
೫.	ಅವನೀಂದ್ರನಾಥ್ ರಾವ್. ವೈ.	೧೦
	ಆ	
೬.	ಡಾ|| ಆಮೂರ. ಜಿ.ಎಸ್.	೧೨
	ಉ	
೭.	ಡಾ|| ಉಡುಪ. ಕೆ.ಎಸ್.ಎನ್.	೧೪
೮.	ಉಮಾ ಎಮ್. ಅಂಗಡಿ	೧೬
೯.	ಡಾ|| ಉಮಾಶಂಕರ್ ಕೆ.ಎಸ್.	೧೮
	ಕ	
೧೦.	ಕಮಲಾ ಜಿ. ಹೆಗಡೆ.	೨೦
೧೧.	ಕರಿಸ್ವಾಮಿ.ಕೆ.	೨೨
೧೨.	ಕರಿಸಿದ್ದಪ್ಪ. ಎಸ್.	೨೪
೧೩.	ಕಲ್ಪನಾ ಅರುಣ	೨೬
೧೪.	ಕವಿತಾ ಎಸ್ ಕುಲಕರ್ಣಿ	೨೮
೧೫.	ಕಾಂತೇಶಾಚಾರ್ಯ ಕದರಮಂಡಲಗಿ	೩೦
೧೬.	ಕಾತ್ಯಾಯಿನಿ ಕುಂಜಿಬೆಟ್ಟು	೩೨
೧೭.	ಕಾವ್ಯಶ್ರೀ ಕುಳಮರ್ವ	೩೪
೧೮.	ಕಾವೇರಮ್ಮ ಬಿ.ಆರ್.	೩೬
೧೯.	ಕಾಶೀನಾಥ ರೆಡ್ಡಿ. ಎಚ್.	೩೮
೨೦.	ಕುತ್ಯಾಳ ನಾಗಪ್ಪ ಗೌಡ	೪೦
೨೧.	ಕುಲಕರ್ಣಿ. ಎಚ್.ಎಸ್.	೪೨
೨೨.	ಕುಳಮರ್ವ. ವಿ.ಬಿ.	೪೪
೨೩.	ಕೇಶವಮೂರ್ತಿ. ರಾವ್. ಎನ್.	೪೬
೨೪.	ಕೃಷ್ಣ ಶರ್ಮ. ಯ.	೪೮
೨೫.	ಕೃಷ್ಣಶರ್ಮ ಕಾಶ್ಯಪ. ಜಿ.	೫೦
	ಗ	
೨೬.	ಗಂಗಾಧರ ಶಾಸ್ತ್ರಿ ನಾಜಗಾರು.	೫೨
೨೭.	ಗಜಾನನ ಮಂಜುನಾಥ ಭಟ್ಟ ಕೆ.ವಿ.	೫೪
೨೮.	ಡಾ|| ಗಣಪತಿ ಭಟ್	೫೬
೨೯.	ಗಣಪತಿ ಮಹಾಬಲೇಶ್ವರ ಚಿತ್ರಿಗೆಮಠ	೫೮
೩೦.	ಗಣೇಶ ತಿ. ಮಾಗೋಡು	೬೦
೩೧.	ಗಣೇಶ. ವಿ.	೬೨
೩೨.	ಗಾಯತ್ರೀ ಎಸ್.ಉಡುಪ	೬೪
೩೩.	ಗಿರಿಮನೆ ಶ್ಯಾಮರಾವ್	೬೬
೩೪.	ಗೀತಾ ಕೋಗಲೂರು	೬೮
೩೫.	ಡಾ|| ಗೀತಾ ಸೀತಾರಾಮ್	೭೦
೩೬.	ಗೀತಾ ಹರಿಹರ	೭೨
೩೭.	ಪ್ರೊ. ಗುರುಪಾದ ಕೆ. ಹೆಗಡೆ	೭೪
೩೮.	ಗುರುರಾಜಾಚಾರ್. ಟಿ.	೭೬
೩೯.	ಗೋಕುಲನಾಥ. ಕೆ.	೭೮
೪೦.	ಗೋವಿಂದಯ್ಯ. ಟಿ.	೮೦
	ಚ	
೪೧.	ಡಾ|| ಚಂದ್ರಮತಿ. ಕೆ.ಎಸ್.	೮೨
೪೨.	ಚಂದ್ರಶೇಕರಯ್ಯ. ಬಿ.ಎಂ.	೮೪
೪೩.	ಡಾ|| ಚೈತ್ರಾ. ಕೆ.ಎಸ್.	೮೬
	ಜ	
೪೪.	ಜಗದೀಶ. ಟಿ.ಎಂ.	೮೮
೪೫.	ಜಗನ್ನಾಥ ಹೇಮಾದ್ರಿ	೯೦
೪೬.	ಡಾ|| ಜಯಂತಿ ಮನೋಹರ್	೯೨
೪೭.	ಜಯವಂತ ಕಾಡದೇವರ	೯೪
೪೮.	ಡಾ|| ಜೈರಾಮ್. ಎಂ. ಭಟ್ಟ	೯೬

ಕ್ರ.ಸಂ.	ಹೆಸರು	ಪು.ಸಂ
೪೯.	ಡಾ|| ಜೋಡಟ್ಟಿ. ಟಿ.ಆರ್.	೯೮
	ತ	
೫೦.	ತಲವಾರ. ಅ.ಸಾ.	೧೦೦
೫೧.	ಪ್ರೊ. ತಿಮ್ಮಣ್ಣ ಮಾಧವ ಪಂಡಿತ	೧೦೨
೫೨.	ತಿಮ್ಮಪ್ಪ ಹೆಚ್.ಎಮ್.	೧೦೪
೫೩.	ತಿಮ್ಮಯ್ಯ ಹೆಚ್.	೧೦೬
೫೪.	ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟ	೧೦೮
	ದ	
೫೫.	ದರ್ಭೆ ಶಂಕರ ಭಟ್ಟ	೧೧೦
೫೬.	ದುಂಡ್ಯಪ್ಪ. ಹಿ.ಗೂ.	೧೧೨
೫೭.	ದೊರೆಸ್ವಾಮಿ. ಎಚ್.ಆರ್.	೧೧೪
	ನ	
೫೮.	ಡಾ|| ನಂದೀಶ್ವರ. ಎಸ್.	೧೧೬
೫೯.	ನಯನಾ ಹೆಗಡೆ ಬನಗೆರೆ	೧೧೮
೬೦.	ನರಸಪ್ಪ. ಕೆ.	೧೨೦
೬೧.	ನವೀನ ಭಟ್ಟ	೧೨೨
೬೨.	ನಾಗಭೂಷಣ್. ನಂ.	೧೨೪
೬೩.	ನಾಗರಾಜ ಬಣಕಾರ	೧೨೬
೬೪.	ನಾರಾಯಣ. ಪಿ.ಎಸ್.	೧೨೮
೬೫.	ನಾರಾಯಣ ಪರಮೇಶ್ವರ ಭಟ್ಟ	೧೩೦
೬೬.	ನಿರ್ಮಾಲಾ ವಿ. ಭಟ್.	೧೩೨
	ಪ	
೬೭.	ಪದ್ಮಾ ಗುರುರಾಜ್	೧೩೪
೬೮.	ಡಾ|| ಪವಿತ್ರ. ಕೆ.ಎಸ್.	೧೩೬
೬೯.	ಡಾ|| ಪ್ರಕಾಶ್ ಹೆಚ್.ಎಸ್.ಎಂ.	೧೩೮
೭೦.	ಪ್ರಭಾಕರ ರಾವ್ ಹೆಚ್.ಎ.	೧೪೦
೭೧.	ಡಾ|| ಪ್ರಹ್ಲಾದ ಅಗಸನಕಟ್ಟೆ	೧೪೨
೭೨.	ಪ್ರೊ. ಪಾಟೀಲ ಎಲ್.ವ್ಹಿ.	೧೪೪
೭೩.	ಡಾ|| ಪಾಟೀಲ .ಶಿ.ಬಾ.	೧೪೬
೭೪.	ಪ್ರಿಯದರ್ಶಿನಿ ಎಂ. ಭಟ್ಟ	೧೪೮
೭೫.	ಪುಟ್ಟಲಕ್ಷ್ಮೀ	೧೫೦
	ಬ	
೭೬.	ಬನವಾಸಿ ರಾಮ	೧೫೨
೭೭.	ಬಸವಂತಪ್ಪ ಬಾಳಪ್ಪ ಬಡಿಗೇರ	೧೫೪
೭೮.	ಬಸವರಾಜ್ ಕಾಕನೂರು. ಜಿ.ಬಿ.	೧೫೬
೭೯.	ಬಾಯರಿ. ಕೆ.ಎಸ್.	೧೫೮
೮೦.	ಬಾಲಸುಬ್ರಹ್ಮಣ್ಯ ಕೆ.ಯಂ.	೧೬೦
	ಭ	
೮೧.	ಭಟ್ಟ ಜಿ.ಎಸ್.	೧೬೨
೮೨.	ಡಾ|| ಭಟ್ಟನಡಗೋಡು.ಜಿ.ಎನ್.	೧೬೪
೮೩.	ಭಾಗ್ವತ್. ಆರ್.ವಿ.	೧೬೬
	ಮ	
೮೪.	ಮಹಬಲೇಶ್ವರ ಹಗಡೆ	೧೬೮
೮೫.	ಡಾ|| ಮಾಳಿ ವಿ.ಎಸ್.	೧೭೦
೮೬.	ಮೋಹನ ವೆರ್ಣೇಕರ್	೧೭೨
೮೭.	ಮೋಹನ ಗ. ಹೆಗಡೆ	೧೭೪
	ಯ	
೮೮.	ಯತಿರಾಜ್ ವೀರಾಂಬುಧಿ	೧೭೬
೮೯.	ಡಾ|| ಯಶೋದಾ ಭಟ್ಟ	೧೭೮
	ರ	
೯೦.	ರಕ್ಷಣಾ. ಎಂ.ಎನ್.	೧೮೦
೯೧.	ರಂಗನಾಥ ಶರ್ಮಾ. ಎನ್.	೧೮೨
೯೨.	ರಂಗಾಚಾರ್ಯ ಗುತ್ತಲ	೧೮೪

ಕ್ರ.ಸಂ.	ಹೆಸರು	ಪು.ಸಂ
೯೩.	ರಾಜ್ಯಶ್ರೀ ಕುಳಮರ್ವ	೧೮೬
೯೪.	ಡಾ|| ರಾಜೇಂದ್ರ. ಡಿ.ಕೆ.	೧೮೮
೯೫.	ಡಾ || ರಾಮಕೃಷ್ಣ ಜೋಶಿ	೧೯೦
೯೬.	ಡಾ|| ರಾಮಶೇಷನ್. ಎನ್.ಕೆ.	೧೯೨
	ಲ	
೯೭.	ಲಲಿತ. ಎಸ್.ಜಿ.	೧೯೪
೯೮.	ಲಲಿತಾ ರೈ	೧೯೬
೯೯.	ಲಕ್ಷ್ಮಯ್ಯ	೧೯೮
೧೦೦.	ಲಕ್ಷ್ಮೀಕಾಂತ ಹೆಗಡೆ	೨೦೦
	ವ	
೧೦೧.	ವಾದಿರಾಜಾಚಾರ್ಯ ಕರಣಮ್	೨೦೨
೧೦೨.	ಪ್ರೊ. ವಿಜಯಕುಮಾರ ಗಿಡ್ನವರ.	೨೦೪
೧೦೩.	ವಿಜಯಾ ಸುಬ್ರಹ್ಮಣ್ಯ	೨೦೬
೧೦೪.	ವಿಶ್ವೇಶ್ವರ	೨೦೮
೧೦೫.	ಪ್ರೊ. ವಿಷ್ಣು ರಾಮಕೃಷ್ಣ ಜೋಷಿ	೨೧೦
೧೦೬.	ಡಾ|| ವಿದ್ವಾನ್. ವಿ.ಎನ್. ಭಟ್ಟ	೨೧೨
೧೦೭.	ವೀರಭದ್ರಪ್ಪ. ಎಚ್.	೨೧೪
೧೦೮.	ವೆಂಕಟಗಿರಿ ಕಡೇಕಾರ್	೨೧೬
೧೦೯.	ವೆಂಕಟ್ರಮಣ ಭಟ್. ಎ.	೨೧೮
೧೧೦.	ವೇದಗರ್ಭ ಶೇಷಗಿರಿರಾವ್. ಜಿ.	೨೨೦
	ಶ	
೧೧೧.	ಪ್ರೊ. ಶಕುಂತಲ ಚೆನ್ನಪ್ಪ ಸಿಂಧೂರ	೨೨೨
೧೧೨.	ಶರೀಫಾಬಿ	೨೨೪
೧೧೩.	ಡಾ|| ಶಶಿಕಲಾ ಪಿ ಕೃಷ್ಣಮೂರ್ತಿ	೨೨೬
೧೧೪.	ಶಾಮಸುಂದರ. ಬಿ.	೨೨೮
೧೧೫.	ಶಿವಾನಂದ ಕಳವೆ	೨೩೦

ಕ್ರ.ಸಂ.	ಹೆಸರು	ಪು.ಸಂ
೧೧೬.	ಶ್ರೀ ಶಿವಾನಂದ ಹಣಮಂತಪ್ಪಾ ವಾಸನ	೨೩೨
೧೧೭.	ಶ್ರೀಧರ ಹಂದೆ. ಹೆಚ್.	೨೩೪
೧೧೮.	ಶ್ರೀಪಾದ ವಿ. ಹೆಗಡೆ	೨೩೬
೧೧೯.	ಶ್ರೀ ಶೈಲ ಗುರುಸಿದ್ಧಯ್ಯಾ ಮಠಪತಿ	೨೩೮
೧೨೦.	ಶೈಲಾಕುಮಾರಿ ಕೆ.	೨೪೦
೧೨೧.	ಶ್ವೇತಾ ನರಗುಂದ	೨೪೨
	ಸ	
೧೨೨.	ಸಂಗಪ್ಪ ಮಲ್ಲಪ್ಪ ಬಾಗಲಕೋಟ	೨೪೪
೧೨೩.	ಡಾ|| ಸತೀಶಕುಮಾರ. ಶಿ. ಗವತಿ	೨೪೬
೧೨೪.	ಡಾ|| ಸದಾನಂದ ಆರ್. ಶೆಟ್ಟಿ	೨೪೮
೧೨೫.	ಸಂಧ್ಯಾ .ಸಿ.ಆರ್.	೨೫೦
೧೨೬.	ಸಂತೇಬೆನ್ನೂರು ಸುಮತೀಂದ್ರ ನಾಡಿಗ್	೨೫೨
೧೨೭.	ಸರದೇಶಪಾಂಡೆ. ಬಿ.	೨೫೪
೧೨೮.	ಡಾ|| ಸರಸ್ವತಿ ಟಿ.ಎಂ.	೨೫೬
೧೨೯.	ಡಾ|| ಸರಸ್ವತಿ ವಿಜಯಕುಮಾರ್	೨೫೮
೧೩೦.	ಸರಸ್ವತಿ	೨೬೦
೧೩೧.	ಸ್ವಾಮಿ. ಸಿ.ಸಿ.	೨೬೨
೧೩೨.	ಸೀತಾರಾಮ. ಹೆಚ್.ಜಿ.	೨೬೪
೧೩೩.	ಸುದರ್ಶನ ರಾಜ. ಎಂ.	೨೬೬
೧೩೪.	ಸುಬ್ಬಯ್ಯ	೨೬೮
೧೩೫.	ಸುಮತಿ ಯಾದಪ್ಪನವರ	೨೭೦
೧೩೬.	ಸುರೇಶ್. ಹೆಚ್.ಎಸ್.	೨೭೨
	ಹ	
೧೩೭.	ಡಾ|| ಹಂದೂರ. ಬಾ. ರಾ.	೨೭೪
೧೩೮.	ಹರತಿ ಜಿ. ಪ್ರಹ್ಲಾದ	೨೭೬
೧೩೯.	ಹೆಗಡೆ ಕಡೇಕೋಡಿ. ಜಿ.ಜಿ.	೨೭೮
೧೪೦.	ಹೆಗಡೆ. ಡಿ.ವಿ.	೨೮೦

ಸಾಹಿತಿ ಮಾಹಿತಿ ಕೋಶ

೭

ವ್ಯಕ್ತಿ ಪರಿಚಯ

ಅಣ್ಣಪ್ಪ. ಯು.ಕೆ

೧.	ಹೆಸರು	:	ಯು.ಕೆ ಅಣ್ಣಪ್ಪ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಭಾನುವಳ್ಳಿ. ೧೮–೦೭–೧೯೭೮
೪.	ಜಿಲ್ಲೆ – ರಾಜ್ಯ	:	ದಾವಣಗೆರೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ, ಬಿ.ಎಡ್.
೬.	ವೃತ್ತಿ	:	ನಿಕಟ ಮುಖ್ಯ ಶಿಕ್ಷಕರು
೭.	ಕೌಟುಂಬಿಕ	:	ತಿಳಿಸಿಲ್ಲ
೮.	ಸದ್ಯದ ವಿಳಾಸ	:	ಯು.ಕೆ ಅಣ್ಣಪ್ಪ, ಭಾನುವಳ್ಳಿ (ಪೊ), ಹರಿಹರ (ತಾ), ದಾವಣಗೆರೆ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೧೯೨–೨೦೦೦೨೧. ೯೮೮೬೫೨೪೮೩೭.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ದಾವಣಗೆರೆ ಜಿಲ್ಲೆ ಹರಿಹರ ತಾಲೂಕು ಭಾನುವಳ್ಳಿಯಲ್ಲಿ ಜನಿಸಿದರು. ಬಿ.ಎ. ಪದವೀಧರರು. ಬಿ.ಎಡ್. ಮಾಡಿ ಹರಿಹರದ ಶ್ರೀ ಕಾಳಿದಾಸ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೨೦೦೪-೦೫ನೇ ಸಾಲಿನಲ್ಲಿ ಇವರು ಶಾಲಾ ಆವರಣದಲ್ಲಿ ನಡೆಯುವ ಮಾಸಿಕ ಕವಿಗೋಷ್ಠಿಯನ್ನು ಏರ್ಪಡಿಸುವುದರ ಮೂಲಕ ಇವರು ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟರು. ನಂತರ ಈ ಮಾಸಿಕ ಗೋಷ್ಠಿಗಳನ್ನು ನಡೆಸುತ್ತಿದ್ದಂತೆ ಇವರಲ್ಲಿಯ ಸಾಹಿತ್ಯದಲ್ಲಿ ಆಸಕ್ತಿ ಹೆಚ್ಚಿತು. ಮುಂದೆ ತಾವಾಗಿಯೇ ಹಲವಾರು ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗಿಯಾಗ ತೊಡಗಿದರು. ೨೦೦೬ರಲ್ಲಿ ಭಾನುವಳ್ಳಿಯಲ್ಲಿ ಶ್ರೀ ಕನಕ ಗೆಳೆಯರ ಬಳಗ ಹಾಗೂ ಶ್ರೀ ವಿಷ್ಣು ಸೇನಾ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಕವಿಗೋಷ್ಠಿಯನ್ನೂ ನಡೆಸಿದರು. ಸುವರ್ಣ ಕರ್ನಾಟಕದ ಅಂಗವಾಗಿ ತಾಲೂಕು ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶ್ರೀ ಕಾಳಿದಾಸ ಪ್ರೌಢಶಾಲಾ ಆವರಣದಲ್ಲಿ ಮಕ್ಕಳಲ್ಲಿ ಸಾಹಿತ್ಯಾಭಿರುಚಿಯನ್ನುಂಟು ಮಾಡುವ ಹಲವಾರು ಕಾರ್ಯಕ್ರಮಗಳನ್ನು ಮಾಡತೊಡಗಿದರು. ಇಲ್ಲಿ ಇವರದೊಂದು ಕೃತಿ ಬಿಡುಗಡೆಯಾಯಿತು. ಭಾರತೀಯ ಜ್ಞಾನ ವಿಜ್ಞಾನ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಹರಿಹರ ತಾಲೂಕು ಪ್ರಗತಿ ಪರ ವೇದಿಕೆಯ ಉಪಾಧ್ಯಕ್ಷರಾಗಿ, ಹರಿಹರ ತಾಲೂಕು ಚುಟುಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಇನ್ನೂ ಹಲವಾರು ಸಂಘ ಸಂಸ್ಥೆಗಳ ಸಹಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು:
ಮಕ್ಕಳ ನಾಟಕ - ವಸುಂಧರ ಮುನಿ.

ಲಭಿಸಿರುವ ಪ್ರಶಸ್ತಿಗಳು:
೧. ೨೦೦೨ - ಬಿ.ಎಡ್.ನಲ್ಲಿ ಅತಿ ಹೆಚ್ಚು ಅಂಕ ಪಡೆದಿದ್ದಾಕ್ಕಾಗಿ ಪ್ರಶಸ್ತಿ.
೨. ೨೦೦೫ - ಶ್ರೀ ಕನಕ ಗೆಳೆಯರ ಬಳಗದಿಂದ ಸನ್ಮಾನ.
೩. ೨೦೦೬ - ಶ್ರೀ ಕಾಳಿದಾಸ ವಿದ್ಯಾಸಂಸ್ಥೆಯ ರಾಜ್ಯೋತ್ಸವ ಸಂದರ್ಭದಲ್ಲಿ 'ಬೆಳ್ಳಿ ಚುಕ್ಕೆ'ಬಿರುದು ಸನ್ಮಾನ.
೪. ೨೦೦೭ - ಹರಿಹರ ತಾ. ಸುವರ್ಣ ಕರ್ನಾಟಕ ಕಾರ್ಯಕ್ರಮದಲ್ಲಿ 'ಶ್ರೇಷ್ಠ ಕವಿ' ಪ್ರಶಸ್ತಿ.
೫ - ೨೦೦೮ - ರೋಟರಿ ಕ್ಲಬ್ ಹಾಗೂ ಸಂಜೀವಿನಿ ಸಮಾಜ ಮಿತ್ರ ಮಂಡಲಿ ದಾವಣಗೆರೆಯಿಂದ ಸನ್ಮಾನ.

ವ್ಯಕ್ತಿ ಪರಿಚಯ

ಅಂಬುಜಾ. ಟಿ.ಎಸ್.

೧. ಹೆಸರು : ಟಿ.ಎಸ್. ಅಂಬುಜಾ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಉಡುಪಿಯ ಮೂಡುಬೆಟ್ಟು, ೨೭-೨-೧೯೫೫.

೪. ಜಿಲ್ಲೆ - ರಾಜ್ಯ : ಉಡುಪಿ ಜಿಲ್ಲೆ, ಕರ್ನಾಟಕ.

೫. ವಿದ್ಯಾಭ್ಯಾಸ : ಪಿ.ಯು.ಸಿ.

೬. ವೃತ್ತಿ : ಗೃಹಿಣಿ

೭. ಕೌಟುಂಬಿಕ : ಪತಿ; ಟಿ ಶಂಕರ ನಾರಾಯಣ.
ಪುತ್ರ; ಟಿ ನಾಗೇಂದ್ರ. ಪುತ್ರಿ; ಟಿ. ನಮಿತಾ

೮. ಸದ್ಯದ ವಿಳಾಸ : 'ಈಶವಾಸ', ೪ನೇ ಕ್ರಾಸ್, ಲಕ್ಷ್ಮೀಂದ್ರ ನಗರ,
ಉಡುಪಿ - ೫೭೬೧೦೨

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೨೦-೨೫೭೩೪೮೨, ೯೯೪೫೦೩೫೮೩೧

೧೧. ಹಸ್ತಾಕ್ಷರ (ಸಹಿ) : ಟಿ.ಎಸ್. ಅಂಬುಜಾ.

ಸಾಹಿತ್ಯ ಪರಿಚಯ

ಇವರು ಉಡುಪಿ ಜಿಲ್ಲೆ ಮೂಡುಬೆಟ್ಟು ಗ್ರಾಮದಲ್ಲಿ ಜನಿಸಿದರು. ಇವರು ಶ್ರೀ ಮಟ್ಟಿ ರಾಮದಾಸ ಸಾಮಗರು ಮತ್ತು ಶ್ರೀಮತಿ ನಾಗರತ್ನಮ್ಮ ದಂಪತಿಗಳ ಪುತ್ರಿ. ತಂದೆ ಹರಿ ಕೀರ್ತನೆಗಾರರು, ಯಕ್ಷಗಾನ ಕಲಾವಿದರು, ವಾಗ್ಮಿ ಸಾಹಿತಿ. ತಾಯಿ ಕಲಾಭಿಮಾನಿ. ಸುಸಂಸ್ಕೃತ ಕುಟುಂಬ. ಈಕೆಗೆ ಬಾಲ್ಯದಿಂದಲೇ ಸಂಗೀತ, ಸಾಹಿತ್ಯಗಳಲ್ಲಿ ಆಸಕ್ತಿ. ಶಾಲಾ ದಿನಗಳಲ್ಲಿಯೇ ಇವರಿಗೆ ಬರೆಯುವ ಚಟ. ಹಾಸ್ಯ ಸಾಹಿತ್ಯದ ಬಗ್ಗೆ ಒಲವು. ಹಾಸ್ಯ ಲೇಖನಗಳನ್ನು ಬರೆಯತೊಡಗಿದರು. ಅವು ಉದಯವಾಣಿ, ತರಂಗ, ತುಷಾರ ಪತ್ರಿಕೆಗಳಲ್ಲಿ ಪ್ರಕಟವಾದವು. ಪತಿ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ. ಅವರೊಂದಿಗೆ ದೆಹಲಿ ವಾಸ. ಅಲ್ಲಿಯೂ ಬರವಣಿಗೆ ಮುಂದುವರೆಯಿತು. ತುಷಾರ ಸಂಪಾದಕ ಈಶ್ವರಯ್ಯ ಪ್ರೋತ್ಸಾಹಿಸಿದರು. ಪತಿಗೆ ವರ್ಗಾವಣೆಯಾಗುತ್ತಿದ್ದು ಆಗಾಗ ಊರಿಂದೂರಿಗೆ ಹೋಗ ಬೇಕಾಗುತ್ತಿತ್ತು. ಹೋದ ಕಡೆಗಳಲ್ಲಿಯೇ ನೆರೆಕೆರೆಯವರ ಸಂಪರ್ಕ, ಸನ್ನಿವೇಶ ಪ್ರಯಾಣದ ಅನುಭವಗಳೇ ಸಾಹಿತ್ಯ ರಚನೆಗೆ ಪ್ರೇರಣೆ ನೀಡುತ್ತಿತ್ತು. ಹೊಸ ಹೊಸ ಭಾಷೆ ಸಂಸ್ಕೃತಿಗಳ ಪರಿಚಯವಾಗುತ್ತಿತ್ತು. ಲೇಖನ ಪ್ರಕ್ರಿಯೆ ನಿರಂತರವಾಗಿ ನಡದೇ ಇತ್ತು. ಮೊದಲ ಸಂಕಲನ ಪ್ರಕಟಿಸಿದರು. ಎರಡನೇ ಸಂಕಲನ ಪ್ರಕಟವಾಯಿತು. ಈ ಮಧ್ಯೆ ಹಿಂದಿ ಸಾಹಿತ್ಯವನ್ನು ಓದುವಾಗ ಅದನ್ಯಾಕೆ ಅನುವಾದ ಮಾಡಬಾರದೆನಿಸಿತು. ಅನುವಾದ ಮಾಡಿದರು. ಪತ್ರಿಕೆಗಳಲ್ಲಿ ಪ್ರಕಟವಾಯಿತು. ನಂತರ ಗಂಭೀರ ವಿಷಯಗಳ ಬಗ್ಗೆಯೂ ಬರೆಯುವ ಯೋಚನೆ ಬಂತು. ದೊಡ್ಡಪ್ಪ ಯಕ್ಷಗಾನ ದಿಗ್ಗಜರು, ಸ್ವಾತಂತ್ರ್ಯ ಹೋರಾಟಗಾರರು, ಹರಿದಾಸರು, ತಾಳ ಮದ್ದಳೆ ಅರ್ಥಧಾರಿಗಳು ಆಗಿದ್ದ ಅವರ ಜೀವನದ ಘಟನೆಗಳನ್ನು ಆಧರಿಸಿ ರಚಿಸಿದ 'ರಂಗದ ರಂಗೋಲಿ'ಕೃತಿ ಜನ ಮನ್ನಣೆ ಗಳಿಸಿತು. ಸಂಸ್ಕೃತ ವಿದ್ವಾಂಸರಿಂದ ಸಂಗ್ರಹಿಸಿ ರಚಿಸಿದ 'ಮರೆತ ಮಾಣಿಕ್ಯಗಳು' ವಿಜಯ ಕರ್ನಾಟಕದಲ್ಲಿ ಧಾರವಾಹಿಯಾಗಿ ಪ್ರಕಟವಾಯಿತು. 'ಈಶವಾಸ' ಸ್ವಂತ ಪ್ರಕಾಶನ ಪ್ರಾರಂಭಿಸಿದರು. ಇವರ ಹಲವಾರು ಲಘು ಧಾಟಿಯ ಭಾಷಣಗಳು ಮಂಗಳೂರು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ. ಹಲವಾರು ವೇದಿಕೆಗಳಲ್ಲಿ ಹಾಸ್ಯ ಭಾಷಣ ಮಾಡುತ್ತಾರೆ. ಬೆಂಗಳೂರು, ಕಾಸರಗೋಡು, ಶೃಂಗೇರಿ ಇತ್ಯಾದಿ ಊರುಗಳಲ್ಲಿ ನಡೆಯುವ ಹಾಸ್ಯ ಗೋಷ್ಠಿಗಳಲ್ಲಿ, ಸಾಹಿತ್ಯ ಸಮ್ಮೇಳನಗಳಲ್ಲಿ ಇವರು ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇವರ ಬರೆಹಗಳು ವಿಶೇಷಾಂಕಗಳಲ್ಲಿಯೂ ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು:

ಹಾಸ್ಯ. ಸಂ. – ಹೊಯ್ ಮತ್ತೇನು ವಿಶೇಷ?, ನಗು ಮೊಗದ ಸಿರಿ, ಜೀವನ ಚರಿತ್ರೆ.

ವ್ಯಾಖ್ಯಾನ – ಸಾಮಗಾಯಣ, ರಂಗದ ರಂಗೋಲಿ, ಮರೆತ ಮಾಣಿಕ್ಯಗಳು.

ಲಭಿಸಿರುವ ಪ್ರಶಸ್ತಿಗಳು:

೧. ಬೆಂಗಳೂರು ಅತ್ತಿಮಬ್ಬೆ ಪ್ರತಿಷ್ಠಾನ – ಪ್ರಸಸ್ತಿ.

೨. ಜೇಸೀ ಸ್ಪರ್ಧೆಯಲ್ಲಿ ಪ್ರಶಸ್ತಿ.

೩. ಉಡುಪಿಯ ಪಲಿಮಾರು ಮಠ 'ಸಾಹಿತ್ಯ ಪ್ರಿಯ'– ಪ್ರಶಸ್ತಿ

೪. ರೋಟರಿ, ಲಯನ್ಸ್ ಇತ್ಯಾದಿಗಳಿಂದ ಪ್ರಶಸ್ತಿ.

ವ್ಯಕ್ತಿ ಪರಿಚಯ

ಅನಂತ ಶರ್ಮಾ ಭುವನಗಿರಿ

೧.	ಹೆಸರು	: ಅನಂತ ಶರ್ಮಾ ಭುವನಗಿರಿ
೨.	ಕಾವ್ಯನಾಮ	: ಅಪೂರ್ವ
೩.	ಹುಟ್ಟಿದ ಸ್ಥಳ ದಿನಾಂಕ	: ಮುತ್ತಿಗೆ (ಭುವನಗಿರಿ) ೨೭-೯-೧೯೩೯
೪.	ಜಿಲ್ಲೆ - ರಾಜ್ಯ	: ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	: ಬಿ.ಎ., ವೇದಾಂತ ವಿದ್ವಾನ್. ಹಿಂದಿ ರತ್ನ.
೬.	ವೃತ್ತಿ	: ಪ್ರೌಢಶಾಲ-ಅಧ್ಯಾಪಕ
೭.	ಕೌಟುಂಬಿಕ	: ಪತ್ನಿ; ಸರೋಜ ಶರ್ಮಾ, ಪುತ್ರ; ಗಿರೀಶಶರ್ಮಾ, ಪುತ್ರಿ; ವಾಣಿಶ್ರೀ
೮.	ಸದ್ಯದ ವಿಳಾಸ	: ನಂ. ೪೩, ಗಿರಿಶ್ರೀ, ೩ನೇ ಬಿ ಮುಖ್ಯರಸ್ತೆ, ಗಿರಿನಗರ ಬೆಂಗಳೂರು-೫೬೦೦೮೫.
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೦೮೦-೨೬೭೨ ೧೩೪೬
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ಉ.ಕ. ಜಿಲ್ಲೆಯ ಮುತ್ತಿಗೇ (ಭುವನಗಿರಿ)ಯಲ್ಲಿ ಜನಿಸಿದರು. ಇವರು ಪರಮೇಶ್ವರಭಟ್ಟ ಹಾಗೂ ಶ್ರೀಮತಿ ಭುವನೇಶ್ವರಿ ದಂಪತಿಗಳ ಪುತ್ರ. ಗುಂಜಗೋಡುವಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ಉಪನಯನಾ ನಂತರ ವೇದಭ್ಯಾಸಕ್ಕಾಗಿ ಕೆಳದಿ, ಬಂಜಗಾರು, ಕೇಡಲಸರ, ನೆಲಮಾವು ಮುಂತಾದ ಮಠಗಳಲ್ಲಿಯ ನಾನಾ ಪಾಠಶಾಲೆಗಳಲ್ಲಿ ಮಾಡಿದರು. ಶ್ರೀರಾಮಚಂದ್ರ ಶಾಸ್ತ್ರಿಸೂರಿಯವರಿಂದ ವಿದ್ಯಾಭ್ಯಾಸ ಮಾಡಿದರು. ಕಾಲೋಚಿತ ಮಂತ್ರ ಭಾಗಗಳು, ಸಂಸ್ಕಾರ ಕಾಂಡಗಳ ಅಧ್ಯಯನ, ವೇದಾಂತ ಗೀತಾಭ್ಯಾಸ ಮಾಡಿದ್ದಾರೆ. ೧೯೫೬ ರಿಂದ ೧೯೫೯ರಲ್ಲಿ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಪ್ರೌಢ ವಿಧ್ಯಾಭ್ಯಾಸ. ೧೯೬೩ರಲ್ಲಿ ವೇದಾಂತ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದಿರುತ್ತಾರೆ. ಮದ್ರಾಸ್ ವಿಶ್ವವಿದ್ಯಾಲಯಯ ಮೆಟ್ರಿಕ್ಯುಲೇಶನ್ ಮಾಡಿದ್ದಾರೆ. ಪುಣೆಯ 'ಕಾವ್ಯ ಕೋವಿದ'ಉತ್ತೀರ್ಣರಾಗಿದ್ದಾರೆ ೧೯೭೦ರಲ್ಲಿ ಖಾಸಗಿಯಾಗಿ ಬೆಂಗಳೂರು ವಿಶ್ವವಿದ್ಯಾಲಯ ಬಿ.ಎ. ಪದವೀಧರರಾದರು. ೧೯೬೩ ರಲ್ಲಿ ಬೆಂಗಳೂರಿನ ಸೇಂಟ್ ಜೋಸೆಫ್ ಪ್ರೌಢಶಾಲೆಯಲ್ಲಿ ಹಿಂದಿ ಅಧ್ಯಾಪಕ ವೃತ್ತಿ ಆರಂಭ. ೧೯೬೪-೧೯೯೭ ರವರಗೆ ಗಾಂಧೀನಗರ ಪ್ರೌಢಶಾಲೆಯಲ್ಲಿ ಹಿಂದಿ - ಕನ್ನಡ - ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ. ಪ್ರವೃತ್ತಿಯಿಂದ ಸಾಹಿತ್ಯಾಸಕ್ತರಾದ ಇವರು ಲೇಖನಗಳನ್ನು ಬರೆದಿದ್ದಾರೆ. ಉಪನ್ಯಾಸಗಳನ್ನು ಮಾಡಿದ್ದಾರೆ. ಗಮಕ ವ್ಯಾಖ್ಯಾನ, ಯಕ್ಷಗಾನ ಅರ್ಥಗಾರಿಕೆ ಹವ್ಯಾಸ ಪ್ರಿಯ. ಓದುವ ದಿನಗಳಲ್ಲಿಯೇ ಕನ್ನಡ ಹಾಗೂ ಸಂಕೃತ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದರು. ಇವರು ಬರೆದ ಕಥೆ, ಕವನ ಹರಟೆಗಳು ಪ್ರಸಿದ್ಧ ಪತ್ರಿಕೆಗಳಾದ ಸುಧಾ, ಕೈಲಾಸ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಸಂಸ್ಕೃತ ಸಂಭಾಷಣ'ಮಾಸಿಕದಲ್ಲಿ 'ಪಾಥೇಯ' ಎಂಬ ಸ್ತಂಭ ಲೇಖನ ಮೂರುವರ್ಷಗಳು ಪ್ರಕಟವಾಗಿದೆ. ೧೯೭೦ರಿಂದ ಸುಮಾರು ೧೫ ವರ್ಷಗಳು ಇವರು ರಾಜಾಜಿನಗರದ ಕುಮಾರವ್ಯಾಸ ಮಂಟಪದಲ್ಲಿ ಕು.ವ್ಯಾ.ಭಾರತ ಗಮಕ ವ್ಯಾಖ್ಯಾನ ಮಾಡಿದ್ದಾರೆ. ಅನೇಕ ಕಡೆ ವೇದಾಂತೋಪನ್ಯಾಸಗಳನ್ನು ಮಾಡಿದ್ದಾರೆ. ೨೦೦೪ರಲ್ಲಿ ಕ್ಯಾಲಿಫೋರ್ನಿಯ ಸನ್ನಿವೇಲ್ ಹಿಂದೂ ಟೆಂಪಲ್‌ನಲ್ಲಿ ಒಂದು ವಾರ ಭಾಗವತ ಉಪನ್ಯಾಸ ಮಾಡಿದ್ದಾರೆ. ದೂರದರ್ಶನ ಚಂದನ, ಈ ಟಿವಿ ಹಾಗೂ ಶಂಕರ ಚಾನೆಲ್‌ಗಳಲ್ಲಿ ಶಂಕರಾಚಾರ್ಯರ ಕೃತಿಗಳ ಕುರಿತು ಉಪನ್ಯಾಸ ಮಾಡಿದ್ದಾರೆ.

ಪ್ರಕಟಿತ ಕೃತಿಗಳು:
ಆಧ್ಯಾತ್ಮಿಕ - ಗೀತೆಯ ಬೆಳಕು, ಧರ್ಮಾನ್ವೇಷಣ, ವಾಲ್ಮೀಕಿಯ ಸೂಕ್ತಿ ರತ್ನಗಳು

ಲಭಿಸಿದ ಪ್ರಶಸ್ತಿಗಳು:
೧. ೧೯೬೩- ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ - ಸರ್ವ ಪ್ರಾವೀಣ್ಯ.
೨. ೧೯೬೩ - ಉಜ್ಜಯನಿಯಲ್ಲಿ ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ೨ ಚಿನ್ನ, ೩ ರಜತ ಪದಕಗಳು.
೩. ೨೦೦೦ - ದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದಿಂದ ವಿದ್ವತ್ ಸಂಮಾನ.
೪. ೨೦೦೨ - ಕೆ.ಆರ್. ನಗರ ಯೋಗಾನಂದೇಶ್ವರ ಮಠದಲ್ಲಿ ಸಂಮಾನ.
೫. ೨೦೦೮ - ಸ್ವರ್ಣವಲ್ಲಿ ಸಂಸ್ಥಾನದಿಂದ ವಿದ್ವತ್ ವಿಚಕ್ಷಣ ಪ್ರಶಸ್ತಿ.
೬ ೨೦೧೦ - ಬೆಂಗಳೂರಿನಲ್ಲಿ ಎಂ.ಪಿ.ಎಲ್. ಶಾಸ್ತ್ರಿ ಪ್ರತಿಷ್ಠಾನದಿಂದ ಸಂಮಾನ.

ವ್ಯಕ್ತಿ ಪರಿಚಯ

ಅನುರಾಧಾ ಕೆ.ವಿ.

೧.	ಹೆಸರು	:	ರಾಧ ವೆಂಕಟ್ರಮಣ ಭಟ್ಟ
೨.	ಕಾವ್ಯನಾಮ	:	'ಅನು'
೩.	ಹುಟ್ಟಿದ ಸ್ಥಳ ದಿನಾಂಕ	:	ತೋಟದ ಕಲ್ಲಳ್ಳಿ, ೧೯-೯-೧೯೬೯
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಸ್.ಎಸ್.ಎಲ್.ಸಿ.
೬.	ವೃತ್ತಿ	:	ಕೃಷಿ
೭.	ಕೌಟುಂಬಿಕ	:	-
೮.	ಸದ್ಯದ ವಿಳಾಸ	:	ಕೆ.ವಿ. ಅನುರಾಧಾ, ನಂ.-೬೨, ಶ್ರೀಕಾಶಿ, ತೋಟದ ಕಲ್ಲಳ್ಳಿ, ಕುಂದರ್ಗಿ ಅಂಚೆ, ಯಲ್ಲಾಪುರ ತಾ. ಉ.ಕ.-೫೮೧೪೦೨
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೪೧೯-೨೫೫೮೨೬
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲೂಕು ತೋಟದ ಕಲ್ಲಳ್ಳಿ ಎಂಬ ಕುಗ್ರಾಮದಲ್ಲಿ ಜನಿಸಿದರು. ಇದು ಗುಡ್ಡಗಾಡು ಪ್ರದೇಶ. ನಿಸರ್ಗದ ಸೆರಗಲ್ಲಿ ಅವಿತು ಕುಳಿತಿದೆ. ಇವರು ಮೂರು ಜನ ಸಹೋದರರು, ಮೂರು ಜನ ಸಹೋದರಿಯರ ನಡುವಿನವರು. ಆರ್ಥಿಕ ಸ್ಥಿತಿ ಸರಿಯಿಲ್ಲದ ಬಡ ಕುಟುಂಬದಿಂದ ಬಂದವರು. ಹುಟ್ಟೂರಿನಲ್ಲಿ ಶಾಲೆಯಿಲ್ಲ. ಭರತನ ಹಳ್ಳಿಯ ಶಾಲೆಯಲ್ಲಿ ಅಕ್ಷರಾಭ್ಯಾಸ ಆರಂಭ. ಮೂರನೆಯ ತರಗತಿಯಲ್ಲಿ ಓದುತ್ತಿರುವಾಗಲೇ ಕಾಲಿಗೆ ಗೆಜ್ಜೆ ಕಟ್ಟಿ ಯಕ್ಷಗಾನ ರಂಗ ಪ್ರವೇಶಿಸಿದರು. ಸಾಹಿತ್ಯ ಗಂಧವಿಲ್ಲದ ಕುಟುಂಬದಲ್ಲಿ ಹುಟ್ಟಿದರೂ ಇವರಿಗೆ ಬಾಲ್ಯದಿಂದಲೇ ಸಾಹಿತ್ಯಾಸಕ್ತಿವುಂಟಾಯಿತು. ಯಕ್ಷಗಾನದ ಹವ್ಯಾಸ. ಅನೇಕ ಪ್ರಸಂಗಗಳಲ್ಲಿ ಪ್ರಮುಖ ಪಾತ್ರವಹಿಸಿದರು. ಹೆಚ್ಚಾಗಿ ಶ್ರೀರಾಮನ ಪಾತ್ರ. ಇವರು ನಿರ್ವಹಿಸಿದ ಶ್ರೀರಾಮನ ಪಾತ್ರವನ್ನು ಜನರು ಇಂದೀಗೂ ಮರೆತಿಲ್ಲ. ಇವರ ಓದು ಎಸ್.ಎಸ್.ಎಲ್.ಸಿ. ವರೆಗೂ ಬಂದು ನಿಂತು ಹೋಯಿತು. ನಂತರ ರಂಗಭೂಮಿಯ ಪ್ರವೇಶ. ಅಲ್ಲಿಯೂ ಇವರಿಗೆ ಗಂಡು ಪಾತ್ರಗಳ ಬಗ್ಗೆಯೇ ಒಲವು. ಹಲವಾರು ನಾಟಕಗಳಲ್ಲಿ ಪುರುಷ ಪಾತ್ರ ನಿರ್ವಹಿಸಿ ಖ್ಯಾತರಾದರು. ನಾಟಕ ನಿರ್ದೇಶಕಿಯಾಗಿ ಅದರಲ್ಲಿಯೂ ಹೆಸರುಗಳಿಸಿದರು. ಇವರು ಸಾಹಿತ್ಯವನ್ನು ಮರೆತಿರಲಿಲ್ಲ. ಚಿಕ್ಕವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ತಾಯಿಯ ಆಸರೆಯಲ್ಲಿಯೇ ಬೆಳೆದರು. ಬೆಂಗಳೂರಿಗೆ ಬಂದರು ಇವರು ಕಥೆ, ಲೇಖನ, ಹನಿಗವನಗಳು ಆಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಕಾದಂಬರಿಗಳನ್ನೂ ಬರೆದಿದ್ದಾರೆ. ವಾರ ಪತ್ರಿಕೆಯೊಂದರಲ್ಲಿ ಸಂಪಾದಕೀಯ ವಿಭಾಗದಲ್ಲಿ ಏಳು ವರ್ಷಗಳು ಕಾರ್ಯ ನಿರ್ವಹಿಸಿದರು. ನಂತರ ಹಳ್ಳಿಗೆ ಮರಳಿ ಕೃಷಿಯನ್ನು ವೃತ್ತಿಯಾಗಿ ಮಾಡಿಕೊಂಡರು. ಬಿಡುವು ದೊರೆತಾಗಲೆಲ್ಲ ಹೃದಯ ಸಂದೇಶದ ರಂಗವಲ್ಲಿ ಬಿಳಿಹಾಳೆಯ ಮೇಲೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅಭಿವ್ಯಕ್ತಿಗೊಳ್ಳ ತೊಡಗಿತು. ಬದುಕಿನ ಹೋರಾಟದ ಕಥೆ ಮುಂದುವರೆದಿದೆ. ರಾಜಕೀಯ ರಂಗದ ಸ್ಥಾನಮಾನ ಹುಡುಕಿಕೊಂಡು ಬಂದರೂ ಇವರು ಅದರಿಂದ ದೂರವಾಗಿಯೇ ಉಳಿದಿದ್ದಾರೆ. ಇವರ ಬದುಕೇ ಒಂದು ಸಾಹಸದ ಸರಮಾಲೆ. ತಾಯಿಯೊಂದಿಗೆ ಜೀವನ ನಡೆಸಿದ್ದಾರೆ.

ಪ್ರಕಟಿತ ಕೃತಿಗಳು:

ಕಾದಂಬರಿ – ರುದ್ರವೀಣೆ, ಹೃದಯ ಸಂದೇಶ, ಪರಿವರ್ತನೆ, ನೀ ನಡೆವ ಹಾದಿಯಲ್ಲಿ.

ವ್ಯಕ್ತಿ ಪರಿಚಯ

ಅವನೀಂದ್ರನಾಥ್ ರಾವ್. ವೈ.

೧.	ಹೆಸರು	:	ವೈ ಅವನೀಂದ್ರನಾಥ್ ರಾವ್
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಎಲ್ಲೂರು, ೧೨-೧೦-೧೯೭೧.
೪.	ಜಿಲ್ಲೆ - ರಾಜ್ಯ	:	ಉಡುಪಿ ಜಿಲ್ಲೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಎಂ.ಎಲ್.ಐ.ಎಸ್ಸಿ.
೬.	ವೃತ್ತಿ	:	ಸರಕಾರಿ ಅಧಿಕಾರಿ
೭.	ಕೌಟುಂಬಿಕ	:	ಪತ್ನಿ; ಅರ್ಚನಾ ರಾವ್. ಪುತ್ರಿ; ಅನುಷಾ ರಾವ್.
೮.	ಸದ್ಯದ ವಿಳಾಸ	:	Central Secretariate Library, Tulasi Sadan, Bahawalpur house, Bhagwandas Road, New Delhi - 110001
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೮೬೮೧೨೩೩೮೨
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉಡುಪಿ ಜಿಲ್ಲೆ ಎಲ್ಲೂರಿನಲ್ಲಿ ಜನಿಸಿದರು. ಕಾಲೇಜು ದಿನಗಳಲ್ಲಿಯೇ ಇವರಿಗೆ ಸಾಹಿತ್ಯದ ಬಗ್ಗೆ ಆಸಕ್ತಿವುಂಟಾಯಿತು. ವಿದ್ಯಾರ್ಥಿ ಸಂಪಾದಕನಾಗಿ ನಾಟಾಕ ಕಲಾವಿದನಾಗಿ, ಕ್ರಿಕೆಟ್ ಆಟಗಾರರಾಗಿ ಬಹುಮುಖ ಆಸಕ್ತಿ ಹೊಂದಿದವರಾಗಿದ್ದರು. ಮುಂದೆ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರರಾದರು. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿಯೂ ಸ್ನಾತಕೋತ್ತರ ಪದವೀಧರರು. ಮೂಡಬಿದ್ರೆಯ ಎಸ್.ಎನ್.ಎಮ್. ವಿದ್ಯಾಸಂಸ್ಥೆ, ಮಂಗಳೂರಿನ ಬದ್ರಿಯಾ ಕಾಲೇಜು ಹಾಗೂ ಮುಲ್ಕಿಯ ವಿಜಯ ಕಾಲೇಜುಗಳಲ್ಲಿ ಮುಖ್ಯ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿದರು. ಕೆಲ ಕಾಲ ಕನ್ನಡ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಆ ದಿನಗಳಲ್ಲಿ ಇವರು ರಾಜ್ಯ ಮಟ್ಟದ 'ಮಕ್ಕಳ ಸಾಹಿತ್ಯ ಶತಮಾನ'ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಕಾವ್ಯ ಸಮ್ಮೇಳನ ಸಂಯೋಜಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಮಂಗಳೂರು ಆಕಾಶವಾಣಿ ನಿಲಯದಲ್ಲಿ ಇವರು 'ಲೋಕ ಈ ವಾರ' ಮತ್ತು 'ಯುವ ಸ್ಪಂದನೆ' ಸರಣಿ ಕಾರ್ಯಕ್ರಮಗಳ ತಾತ್ಕಾಲಿಕ ನಿಲಯ ನಿರೂಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಇದು ಜನಪ್ರಿಯ ಕಾರ್ಯಕ್ರಮವಾಗಿತ್ತು. ೨೦೦೨ರಲ್ಲಿ ದೆಹಲಿಗೆ ಹೋದ ಇವರು ಪ್ರಸ್ತುತ ನವದೆಹಲಿ ಕೇಂದ್ರ ಸಚಿವಾಲಯದ ಗ್ರಂಥಾಲಯದ ಹಿಂದಿ ಮತ್ತು ಪ್ರಾದೇಶಿಕ ಭಾಷಾ ವಿಭಾಗದಲ್ಲಿ ಅಧಿಕಾರಿಯಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದ 'ಅಭಿಮತ' ಪತ್ರಿಕೆ, ಸಾಹಿತ್ಯಕ ಉಪ ಸಮಿತಿ ಹಾಗೂ ಸಾಂಸ್ಕೃತಿಕ ಸಮಿತಿಯ ಸದಸ್ಯರಾಗಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ರಾಜಧಾನಿಯ ದ.ಕ. ಕ್ಲಬ್‌ನ ಕಾರ್ಯಕ್ರಮ ಕಾರ್ಯದರ್ಶಿಯಾಗಿ ತುಳುನಾಡು ಅಭಿವೃದ್ಧಿ ವೇದಿಕೆಯ ಜಂಟಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡದ ಪ್ರಮುಖ ಪತ್ರಿಕೆಗಳಲ್ಲೆಲ್ಲ ಇವರ ಲೇಖನಗಳು ಪ್ರಕಟವಾಗುತ್ತಿವೆ. ಇತ್ತೀಚೆಗೆ ಇವರು ಬಿ. ರಾಮಮೋಹನ ರಾವ್ ಅವರ ಲೇಖನಗಳನ್ನು ಸಂಪಾದಿಸಿ ಪ್ರಕಟಿಸಿದ 'ನಾನು ಕಂಡ ನನ್ನ ದೇಶ'ಗ್ರಂಥವನ್ನು ಶ್ರೀ ಎಮ್. ರಾಮಾ ಜೋಯಿಸಾ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದ್ದಾರೆ. ಇವರು ಸಾಹಿತಿ ಡಾ|| ಪುರುಷೋತ್ತಮ ಬಿಳಿಮಲೆಯೊಂದಿಗೆ ಸೇರಿ ದೆಹಲಿಯಲ್ಲಿ ನಡೆದ ಕೆಲವು ವಿಚಾರ ಸಂಕೀರ್ಣಗಳ ಚಿಂತನೆಗಳನ್ನು ಕೃತಿ ರೂಪದಲ್ಲಿ ತಂದಿರುವುದು ಗಮನಾರ್ಹ.

ಪ್ರಕಟಿತ ಕೃತಿಗಳು:

ಲೇ. ನ ಸಂ. – ಸಮಯ ಸಂದರ್ಭ.

ಸಂಪಾದಿತ – ರಾಜಧಾನಿಯಲ್ಲಿ ಕರ್ನಾಟಕ, ನಾ ಕಂಡ ನನ್ನ ದೇಶ.

ಲಭಿಸಿರುವ ಪ್ರಶಸ್ತಿಗಳು:

೧. ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ – ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ॥ ಆಮೂರ. ಜಿ.ಎಸ್.

೧. ಹೆಸರು : ಗುರುರಾಜ ಶ್ಯಾಮಾಚಾರ್ಯ ಆಮೂರ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಬೊಮ್ಮನಹಳ್ಳಿ, ೮-೫-೧೯೨೫

೪. ಜಿಲ್ಲೆ - ರಾಜ್ಯ : ಹಾವೇರಿ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಪಿಹೆಚ್.ಡಿ.

೬. ವೃತ್ತಿ : ಶಿಕ್ಷಕ

೭. ಕೌಟುಂಬಿಕ : ಪತ್ನಿ; ಶಾಂತ. ಪುತ್ರರು; ರವಿ, ಕರಿಶ್ಯಾಮ, ಜಯಂತ

೮. ಸದ್ಯದ ವಿಳಾಸ : ಜಾನಕಿ, ನವೋದಯ ನಗರ,
ಧಾರವಾಡ-೫೮೦೦೦೩

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೬-೨೭೪೪೮೫, ೯೯೦೧೧೩೩೩೨೩.

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಹಾವೇರಿ ಜಿಲ್ಲೆ ಬೊಮ್ಮನಹಳ್ಳಿಯಲ್ಲಿ ಜನಿಸಿದರು. ಹಾವೇರಿ ಧಾರಾವಾಡಗಳಲ್ಲಿ ವಿದ್ಯಾಭ್ಯಾಸ. ೧೯೪೭ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಬಿ.ಎ. ಆನರ್ಸ್ ಮಾಡಿದರು. ೧೯೪೯ರಲ್ಲಿ ಇಂಗ್ಲೀಷ್ ಸ್ನಾತಕೋತ್ತರ ಪದವಿಯನ್ನು ಪ್ರಥಮ ಸ್ಥಾನದಲ್ಲಿ ಗಳಿಸಿದರು. ೧೯೬೧ರಲ್ಲಿ ಇಂಗ್ಲೀಷಿನಲ್ಲೇ ರಚಿಸಿದ ದ ಕನ್ಸೆಪ್ಟ್ ಆಫ್ ಕಾಮಿಡಿ ಸಂಶೋಧನಾತ್ಮಕ ಮಹಾಪ್ರಬಂಧಕ್ಕೆ ಪಿಹೆಚ್.ಡಿ. ಪದವಿಗಳಿಸಿದರು. ೧೯೪೯ ರಿಂದ ೧೯೮೫ರವರಗೆ ಇಂಗ್ಲೀಷ್ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಮರಾಠವಾಡ ವಿಶ್ವವಿದ್ಯಾಲಯ, ಔರಂಗಾಬಾದಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಹಾಗೂ ಮುಖ್ಯಸ್ಥರಾಗಿ ಸೇವೆಸಲ್ಲಿಸಿ ೧೯೮೫ರಲ್ಲಿ ನಿವೃತ್ತರಾದರು. ೧೯೭೨-೭೩ರಲ್ಲಿ ಸೀನಿಯರ್ ಫುಲ್ ಬ್ರೈಟ್ ಫೆಲೋಶಿಪ್ ಪಡೆದು ಅಮೆರಿಕೆಯ ಕ್ಯಾಲಿಫೋರ್ನಿಯಾ (ಸಾಂಟಾ ಬಾರ್ಬರಾ) ಹಾಗೂ ಯೇಲ್ ವಿಶ್ವವಿದ್ಯಾಲಯಗಳಲ್ಲಿ ಸಂಶೋಧಕರಾಗಿ ಸೇವೆ ಸಲ್ಲಿಸಿದರು. ೧೯೭೩ರಲ್ಲಿ ಬ್ರಿಟಿಷ್ ಕೌನ್ಸಿಲ್ ಸಹಾಯದಿಂದ ಇಂಗ್ಲೆಂಡಿನಲ್ಲಿ ಸಂಶೋಧನೆ ನಡೆಸಿದರು. ಪ್ರವೃತ್ತಿಯಿಂದ ಸಾಹಿತಿಗಳು. ಹೆಚ್ಚಾಗಿ ಸೃಜನೇತರ ಗ್ರಂಥ ಕರ್ತೃ. ಪ್ರಸಿದ್ಧ ವಿಮರ್ಶಕರು. ಸಾಹಿತ್ಯದ ವಿವಿಧ ಪ್ರಕಾರಕ್ಕೆ ಸಂಬಂಧಿಸಿದಂತೆ ೩೦ಕ್ಕೂ ಹೆಚ್ಚು ಮೌಲಿಕ ಗ್ರಂಥಗಳು ಕನ್ನಡದಲ್ಲೂ ೨೩-೨೪ ಗ್ರಂಥಗಳು ಇಂಗ್ಲೀಷಿನಲ್ಲೂ ಪ್ರಕಟವಾಗಿವೆ. ಈ ಗ್ರಂಥಗಳನ್ನು ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಕರ್ನಾಟಕ ಹಾಗೂ ದೆಹಲಿ, ಧಾರವಾಡ, ಬೆಂಗಳೂರಿನ ಪ್ರಸಿದ್ಧ ಪ್ರಕಾಶಕರು ಹೊರ ರಾಜ್ಯಗಳಾದ ಔರಂಗಾಬಾದ್, ಜೈಪುರ, ಮುಂಬಯಿ, ಕಲ್ಕತ್ತಾಗಳ ಪ್ರಸಿದ್ಧ ಪ್ರಕಾಶಕರು ಪ್ರಕಟಿಸಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯ ತ.ಸು. ಶಾಮರಾಯರ ದತ್ತಿ ಉಪನ್ಯಾಸ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ ಕವಿ ಭಾಷಣ ಹಾಗೂ ಹಾಸನ, ಹುಬ್ಬಳ್ಳಿ, ಶಿವಮೊಗ್ಗಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ ವಿಶೇಷ ಉಪನ್ಯಾಸ ಮಾಡಿದ್ದಾರೆ. ರಾಷ್ಟ್ರೀಯ, ಅಂತರ ರಾಷ್ಟ್ರೀಯ ವಿಚಾರ ಸಂಕೀರಣಗಳಲ್ಲಿ ಭಾಗವಹಿಸಿದ್ದಾರೆ. ಅಧ್ಯಕ್ಷರಾಗಿದ್ದಾರೆ. ಗೋಷ್ಠಿಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಶಾಂತಿನಿಕೇತನದ ವಿಶ್ವಭಾರತಿಯ ಕಾರ್ಯಕಾರಿಣಿ ಸಭೆಗೆ ರಾಷ್ಟ್ರಪತಿಗಳಿಂದ ಮೂರು ಅವಧಿಗೆ ನೇಮಕಗೊಂಡಿದ್ದಾರೆ. ಇವರನ್ನು ಹತ್ತಾರು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ.

ಪ್ರಕಟಿತ ಕೃತಿಗಳು:

ವಿಮರ್ಶೆ – ಕೃತಿ ಪರೀಕ್ಷೆ. ನಿಮಿತ್ತ, ಅನಿಮಿತ್ತ, ನಿರಂತರ., ಸಮಕಾಲೀನ ಕಥೆ ಕಾದಂಬರಿ. ಕ. ಕಾದಂಬರಿ ಬೆಳವಣಿಗೆ. ಕಾಮಿಡಿ, ಕಾದಂಬರಿ ಸ್ವರೂಪ. ಕಥನ ಶಾಸ್ತ್ರ. ಕನ್ನಡ ಕಥನ ಸಾಹಿತ್ಯ. ಸಮರಾಧನ ನಿಂದ ಹೆಜ್ಜೆ. **ಜೀವನ ಚರಿತ್ರೆ** – ಮಹಾಕವಿ ಮಿಲ್ಟನ್, ಅ.ನ.ಕೃ. ವಿರಾಟ ಪುರುಷ, ದ.ರಾ ಬೇಂದ್ರೆ, ಶಾಂತಿನಾಥ ದೇಸಾಯಿ. ಗಿರೀಶ ಕಾರ್ನಾಡ ಹಾಗೂ ಭಾರತೀಯ ರಂಗಭೂಮಿ, ವಿ.ಕೃ. ಗೋಕಾಕ್. **ಸಂಪಾದನೆ** – ಅವಳ ಕತೆಗಳು, ಬೇಂದ್ರೆ ಕಾವ್ಯ, ಕನ್ನಡ ಕಥಾ ಲೋಕ. **ಇಂಗ್ಲೀಷ್** – ದಿ ಕಾನ್ಸೆಪ್ಟ್ ಆಫ್ ಕಾಮಿಡಿ, ಮನೋಹರ ಮಳಗಾವಕರ್ ಇತ್ಯಾದಿ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೬ – ಅಮೆರಿಕೆಯ ಪ್ರಿನ್ಸ್ ಜಾರ್ಜ್ ಹಾಗೂ ಆನ್ ಆರುಂಡೇಲ್ ಕೌಂಟಿಯ ಪ್ರಶಸ್ತಿ. ೨. ೨೦೦೦ – ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ. ೩. ೨೦೦೪ – ಅಖಿಲ ಭಾರತ ಮಾಧ್ವ ಮಹಾಮಂಡಲ ಕನ್ನಡ ಭಾಷಾ ಭೂಷಣ ಪ್ರಶಸ್ತಿ. ೪. ೨೦೦೫ – ದ.ರಾ. ಬೇಂದ್ರೆ ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ|| ಉಡುಪ. ಕೆ.ಎಸ್.ಎನ್.

೧. ಹೆಸರು	:	ಡಾ|| ಶಂಕರನಾರಾಯಣ ಉಡುಪ.
೨. ಕಾವ್ಯನಾಮ	:	ಇರುವುದಿಲ್ಲ
೩. ಹುಟ್ಟಿದ ಸ್ಥಳ ದಿನಾಂಕ	:	ಕೋಟೇಶ್ವರ ೧೮-೦೧-೧೯೫೨
೪. ಜಿಲ್ಲೆ - ರಾಜ್ಯ	:	ಅವಿಭಜಿತ ದಕ್ಷಿಣಕನ್ನಡ. ಈಗಿನ ಉಡುಪಿ ಜಿಲ್ಲೆ, ಕರ್ನಾಟಕ
೫. ವಿದ್ಯಾಭ್ಯಾಸ	:	ಎಂ.ಎ (ಹಿಂದಿ), ಎಂ.ಎ., ಎಮ್.ಫಿಲ್. ಪಿಹೆಚ್.ಡಿ. (ಕನ್ನಡ).
೬. ವೃತ್ತಿ	:	ಹಿಂದಿ ಉಪನ್ಯಾಸಕ.
೭. ಕೌಟುಂಬಿಕ	:	ಪತ್ನಿ; ವಿಶಾಲ ಎಸ್. ಉಡುಪ. ಪುತ್ರಿ; ವೀಣಾ, ಪುತ್ರ; ಪ್ರವೀಣಕುಮಾರ್
೮. ಸದ್ಯದ ವಿಳಾಸ	:	'ಸುದರ್ಶನ', ಸದಾನಂದ ಆಸ್ಪತ್ರೆ ರಸ್ತೆ, ಅಂಚೆ ಸುಬ್ರಹ್ಮಣ್ಯ, ಸುಳ್ಯ ತಾಲೂಕು. ದ.ಕ. ೫೭೪೨೩೮
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೮೨೫೭-೨೮೧೨೦೧, ೯೯೪೫೩೩೨೪೩೫
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಕೋಟೇಶ್ವರದಲ್ಲಿ ಜನಿಸಿದರು. ಇದು ಪುರಾಣ ಪ್ರಸಿದ್ಧ ಕ್ಷೇತ್ರ. ಇವರು ಶ್ರೀ ರಾಮಕೃಷ್ಣ ಉಡುಪ ಮತ್ತು ಶ್ರೀಮತಿ ಜಯಲಕ್ಷಮ್ಮ ದಂಪತಿಗಳ ಪುತ್ರ. ತಂದೆ ಋಗ್ವೇದ, ಸಂಸ್ಕೃತ, ಸಾಹಿತ್ಯ, ಜ್ಯೋತಿಷ ಶಾಸ್ತ್ರ ಪಂಡಿತರು. ಸಾಂಪ್ರದಾಯಿಕ ಹಾಡುಗಳನ್ನು ಹೇಳುವ ತಾಯಿ ಹಳ್ಳಿ ಮದ್ದುಗಳನ್ನೂ ಕೊಡುತ್ತಿದ್ದರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಇವರು ಕೋಟೇಶ್ವರದಲ್ಲಿ ಮಾಡಿದರು. ಉಡುಪಿಯಲ್ಲಿ ಪಿ.ಯು.ಸಿ. ದಕ್ಷಿಣ ಭಾರತ ಹಿಂದೀ ಸಭಾ ಮದರಾಸ್‌ನಿಂದ ರಾಷ್ಟ್ರ ಭಾಷಾ ವಿಶಾರದ ಹಾಗೂ ರಾಷ್ಟ್ರ ಭಾಷಾ ಪ್ರವೀಣ ಮಾಡಿದರು. ಹಿಂದಿ ಶಿಕ್ಷಕ ತರಬೇತಿ ಪಡೆದರು. ಖಾಸಗಿಯಾಗಿ ಬಿ.ಎ. ಕನ್ನಡ ಹಾಗೂ ಹಿಂದಿ ಎಂ.ಎ.ಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಕೊಲ್ಹಾಪುರ ಶಿವಾಜಿ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಮಾಡಿ ಮುಂಬಯಿಯಿಂದ ಎಂ.ಫಿಲ್. ಹಾಗೂ ೧೯೯೫ರಲ್ಲಿ ಮುದ್ರಾಮಂಜೂಷ– ಒಂದು ಸಮಗ್ರ ಅಧ್ಯಯನ ಕುರಿತಾದ ಸಂಶೋಧನ ಮಹಾ ಪ್ರಬಂಧಕ್ಕೆ ಪಿಹೆಚ್.ಡಿ. ಪದವಿಗಳಿಸಿದ್ದಾರೆ. ೧೯೭೮ರಿಂದಲೇ ಇವರು ಪದವಿಪೂರ್ವ ಕಾಲೇಜ್ ಸುಬ್ರಹ್ಮಣ್ಯದಲ್ಲಿ ಹಿಂದಿ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಹಿಂದಿಯಿಂದ ಕಥೆ, ಕವನ, ಲೇಖನಗಳನ್ನು ಅನುವಾದಿಸುತ್ತಾರೆ. ವಿವಿಧ ಪತ್ರಿಕೆಗಳಲ್ಲಿ ಇವರ ೧೫೦ಕ್ಕೂ ಹೆಚ್ಚು ಬರೆಹಗಳು ಪ್ರಟಕವಾಗಿವೆ. ಕನ್ನಡ ಸಾಹಿತ್ಯ ಪರಿಷತ್ ಹಾಗೂ ಪುಸ್ತಕ ಪ್ರಾಧಿಕಾರ ಧಾರವಾಡದಲ್ಲಿ ಪ್ರಾಯೋಜಿಸಿದ್ದ ಸಂಶೋಧನ ಕಮ್ಮಟಗಳಲ್ಲಿ ಭಾಗವಹಿಸಿದ್ದಾರೆ. ದಾವಣಗೆರೆ ಮಂಗಳೂರುಗಳಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಾಹಿತ್ಯ ಗೋಷ್ಠಿಯಲ್ಲಿ ಪ್ರಬಂಧ ಮಂಡಿಸಿದ್ದಾರೆ. ಇವರ ಹೆಸರು ದೆಹಲಿಯ ಎನ್.ಬಿ.ಟಿ. ಅನುವಾದ ಪಟ್ಟಿಯಲ್ಲಿ ಸೇರಿದೆ. ೧೯೯೬ರಲ್ಲಿ ಇವರು ಸುಬ್ರಹ್ಮಣ್ಯದಲ್ಲಿ 'ಕನ್ನಡ ಪ್ರಕಾಶನ' ಕಮ್ಮಟದ ಸಂಘಟಕರು. 'ಕುಮಾರ ಸಂದೇಶ' ತ್ರೈಮಾಸಿಕದ ಪ್ರಧಾನ ಉಪಸಂಪಾದಕರು. ಜನವಾಹಿನಿ ಹಾಗೂ ಇತರ ಪತ್ರಿಕೆಗಳಿಗೆ ಇವರು ಸ್ಥಳೀಯ ವರದಿಗಾರರು. ೨೦೦೧ರಲ್ಲಿ 'ಸುದರ್ಶನ ಪ್ರಕಾಶನ' ಸಂಸ್ಥೆ ಆರಂಭಿಸಿದ್ದಾರೆ. ೨೦೦೫ರಲ್ಲಿ ನವದೆಹಲಿಯ ರಾಷ್ಟ್ರೀಯ ಹಸ್ತಪ್ರತಿ ದಕ್ಷಿಣಾ ಅಭಿಯಾನದಲ್ಲಿ ಕಾರ್ಯ ನಿರ್ವ–ಹಿಸಿದ್ದಾರೆ. ಹಂಪಿ ವಿಶ್ವವಿದ್ಯಾಲಯ ನಡೆಸಿದ ಶಾಸನ ಶಾಸ್ತ್ರ ತರಬೇತಿ ಕಮ್ಮಟದಲ್ಲಿ ಭಾಗವಸಿದ್ದರು. ೨೦೦೮ರಲ್ಲಿ ತುಳು ಸಾಹಿತ್ಯ ಅಕಾಡೆಮಿ ನಡೆಸಿದ ತುಳು ಲಿಪಿ ಕಾರ್ಯಾ–ಗಾರದಲ್ಲಿ ಭಾಗವಸಿದ್ದಾರೆ. ಇವರ ಪ್ರತಿಭೆಯನ್ನು ಗುರುತಿಸಿದ ಹತ್ತಾರು ಸಂಸ್ಥೆಗಳು ಗೌರವಿಸಿದೆ.

ಪ್ರಕಟಿತ ಕೃತಿಗಳು:

ಧಾರ್ಮಿಕ – ಶ್ರೀ ಕ್ಷೇತ್ರ ಕೋಟೇಶ್ವರ.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೬ –ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನದಲ್ಲಿ ಸನ್ಮಾನ.

೨. ೨೦೦೨ – ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅನಂತ ರಂಗ ಸಾಹಿತ್ಯ ಸಂಶೋಧನ ಪ್ರಶಸ್ತಿ.

೩. ೧೯೯೪ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣನಿಧಿ ಅತ್ಯುತ್ತಮ ಉಪನ್ಯಾಸ ಪ್ರಶಸ್ತಿ.

೪. ೧೯೯೪ – ದ.ಕ. ಜಿಲ್ಲಾ ೭ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿಭಾ ಪುರಸ್ಕಾರ.

೫. ೨೦೧೦ – ಸೂಳ್ಯ ತಾ. ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದರು.

ವ್ಯಕ್ತಿ ಪರಿಚಯ

ಉಮಾ ಎಮ್. ಅಂಗಡಿ

೧.	ಹೆಸರು	:	ಶ್ರೀಮತಿ ಉಮಾ ಎಮ್. ಅಂಗಡಿ
೨.	ಕಾವ್ಯನಾಮ	:	ಇರುವುದಿಲ್ಲ.
೩.	ಹುಟ್ಟಿದ ಸ್ಥಳ ದಿನಾಂಕ	:	ಹುಣಸೀಕಟ್ಟೆ, ತಾ, ಬೈಲಹೊಂಗಲ, ೧೦-೧೨-೧೯೫೬.
೪.	ಜಿಲ್ಲೆ - ರಾಜ್ಯ	:	ಬೆಳಗಾಂವ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಟಿ.ಸಿ.ಹೆಚ್.
೬.	ವೃತ್ತಿ	:	ಶಿಕ್ಷಕಿ
೭.	ಕೌಟುಂಬಿಕ	:	ಪತಿ; ಮಹಾಂತೇಶ. ಪುತ್ರ; ವಿರೂಪಾಕ್ಷ. ಪುತ್ರಿ; ವಾಣಿ.
೮.	ಸದ್ಯದ ವಿಳಾಸ	:	ನಂ. ೧೧೮೮, ಕಡೋಲ್ಕರ ಗಲ್ಲಿ, ಖಾನಾಪುರ, ಬೆಳಗಾಂವ-೫೯೧೩೦೨
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೩೬-೨೨೨೭೮೫, ೯೯೦೦೬೮೪೨೨೪
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕು ಹುಣಸೀಕಟ್ಟೆಯಲ್ಲಿ ಜನಿಸಿದರು. ಟಿ.ಸಿ.ಹೆಚ್. ತರಬೇತಿ ಪಡೆದರು. ವೃತ್ತಿಯಿಂದ ಶಿಕ್ಷಕರಾದರೂ ಪ್ರವೃತ್ತಿಯಿಂದ ಸಾಹಿತಿಗಳಾಗಿದ್ದಾರೆ. ಹವ್ಯಾಸೀ ಕಲಾವಿದೆ. ಇವರು ಮೂರು-ನಾಲ್ಕು ವರ್ಷದವ-ರಾಗಿರುವಾಗಲೇ ವೇದಿಕೆಯ ಮೇಲೆ ಹಾಡು-ನೃತ್ಯಗಳಲ್ಲಿ ಭಾಗವಹಿ-ಸುತ್ತಿದ್ದರು. ಕಲೆ ಇವರಿಗೆ ಅನುವಂಶಿಕವಾಗಿ ಬಂದಿದೆ. ಪ್ರಾಥಮಿಕ ಶಾಲೆಯಲ್ಲಿ ಪಠ್ಯದ ಗೀತೆಗಳನ್ನೇ ಹಾಡಿನ ರೂಪದಲ್ಲಿ ಹೇಳುತ್ತಿದ್ದರು. ಆಗಿನಿಂದಲೇ ಇವರು ಕವನ ರಚನೆಗೂ ತೊಡಗಿದರು. ಇವರ ಜೀವನದಲ್ಲಿ ಆದ ಆಘಾತ, ನೋವು,-ನಲಿವು, ಸುಖ-ದುಃಖಗಳೇ ಇವರ ಸಾಹಿತ್ಯಾಭಿವ್ಯಕ್ತಿಗೆ ಮೂಲದ್ರವ್ಯವಾಗಿದೆ. ಅದೇ ಕಥೆ, ಕವನಗಳಾಗಿ ಹರಿದಿವೆ. ಇವರ ಬರೆಹಗಳು ಪತ್ರಿಕೆಯಲ್ಲೂ ಪ್ರಕಟವಾಗಿವೆ. ಇವರು ಮಹಿಳೆಯ ಆರೋಗ್ಯ, ಸಹಜ ಸೌಂದರ್ಯ ಹಾಗೂ ಜನಸಂಖ್ಯೆ ಹೆಚ್ಚಳಗಳ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಜನಪದ ಸೊಗಡಿನ ಕವನಗಳೇ ಹೆಚ್ಚು. ಇವರ ಪ್ರಥಮ ಕವನ ಸಂಕಲನ (ಮಲೆನಾಡ ಮಲ್ಲಿಗೆ). ಬೆಳಗಾವಿಯ ಹಲವಾರು ಸಾಹಿತಿಗಳು ಇವರನ್ನು ಪ್ರೋತ್ಸಾಹಿಸಿದ್ದಾರೆ. ಹಲವಾರು ಕಾರ್ಯಕ್ರಮಗಳಲ್ಲಿ ಕವಯತ್ರಿಯಾಗಿ ಭಾಗವಹಿಸಿದ್ದಾರೆ. ೧೯೯೯ರಲ್ಲಿ ಮೈಸೂರಿನಲ್ಲಿ ನಡೆದ ಚುಟುಕ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇಲ್ಲಿ 'ಕೆಂಡ ಸಂಪಿಗೆ' ಕೃತಿ ಬಿಡುಗಡೆಯಾಯಿತು. ಇದಕ್ಕೆ ಪ್ರೊ. ಹೆಚ್.ಎಸ್ಕೆ. ಮುನ್ನುಡಿ ಬರೆದಿದ್ದಾರೆ. ಪ್ರಥಮ ಸಂಕಲನಕ್ಕೆ ಎಂ.ಎ. ಸನದಿಯವರ ಮುನ್ನುಡಿಯಿದೆ. ಡಾ|| ಎಂ. ಅಕ್ಬರ್ ಆಲಿ, ಚಂದ್ರಕಾಂತ ಕುಸನೂರ, ಮನು ಬಳಿಗಾರ ಮುಂತಾದವರನ್ನು ಇವರು ಸ್ಮರಿಸುತ್ತಿರುತ್ತಾರೆ. ಇವರಿಗೆ ದೊಡ್ಡ ಅಭಿಮಾನಿ ಬಳಗವೇ ಇದೆ. ಇವರ ಕವನಗಳಿಗೆ ವಿರೂಪಾಕ್ಷ ಕಲಬಾರರು ಸ್ವರಹಾಕಿ ಹಾಡಿದ್ದಾರೆ. ಹಾಗೂ ರತ್ನಮಾಲ ಅಣ್ಣಿಗೇರಿಯವರಿಂದ ಹಿಡಿದು ಅನೇಕ ನಾಟಕ ಕಲಾವಿದರು ಇವರ ಕವನಗಳನ್ನು ನಾಟಕಗಳಲ್ಲಿ ಹಾಡುತ್ತಾರೆ. ಇವರು ಹಲವಾರು ಸಾಹಿತ್ಯ ಸಮ್ಮೇಳನ, ಚುಟುಕ ಸಮ್ಮೇಳನ, ಉತ್ಸವಗಳು, ವಲಯ ಮಟ್ಟದ ರಾಷ್ಟ್ರಮಟ್ಟದ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಕಡೆ ಇವರು ನೃತ್ಯಾಭಿನಯ ಕಾರ್ಯಕ್ರಮಗಳೂ ನಡೆದಿವೆ.

ಪ್ರಕಟಿತ ಕೃತಿಗಳು:
ಕವನ ಸಂ. - ಮಲೆನಾಡ ಮಲ್ಲಿಗೆ.
ಇತರೆ - ಕೆಂಡ ಸಂಪಿಗೆ.

ಲಭಿಸಿರುವ ಪ್ರಶಸ್ತಿಗಳು:
೧. ರಾಜ್ಯ ಮಟ್ಟದ ಮಹಿಳಾ ಸಮ್ಮೇಳನದಲ್ಲಿ 'ನೃತ್ಯಾಂಗನೆ ಬಿರುದು.

ವ್ಯಕ್ತಿ ಪರಿಚಯ

ಡಾ|| ಉಮಾಶಂಕರ್ ಕೆ.ಎಸ್.

೧.	ಹೆಸರು	:	ಡಾ|| ಕೆ.ಎಸ್. ಉಮಾಶಂಕರ್
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಮೈಸೂರು ನಗರ, ೦೫-೦೯-೧೯೬೯.
೪.	ಜಿಲ್ಲೆ - ರಾಜ್ಯ	:	ಮೈಸೂರು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂಡಿ. ಆಯುರ್ವೇದ.
೬.	ವೃತ್ತಿ	:	ಸಹಾಯಕ ಪ್ರಧ್ಯಾಪಕರು. ಸರ್ಕಾರಿ ಆಯುರ್ವೇದ ವೈದ್ಯ ಮಹಾ ವಿದ್ಯಾಲಯ, ಮೈಸೂರು.
೭.	ಕೌಟುಂಬಿಕ	:	ಪತ್ನಿ; ಆರ್. ಛಾಯಾ, ಪುತ್ರ; ಕೆ.ಯು. ಸುಹಾಸ್. ಪುತ್ರಿ; ಕೆ.ಯು. ಸಿಂಧು
೮.	ಸದ್ಯದ ವಿಳಾಸ	:	೭೬೦ 'ಧನ್ವಂತರಿ'೧೯ನೇ ಅಡ್ಡರಸ್ತೆ, ೨೭ನೇ ಮುಖ್ಯರಸ್ತೆ, ೨ನೇ ಹಂತ, ಜೆ.ಪಿ ನಗರ ಮೈಸೂರು.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೨೧ - ೨೩೭೨೭೮೨
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಡಾ, ಕೆ, ಆರ್. ಶ್ರೀಕಂಠಮೂರ್ತಿ ಮತ್ತು ಲಲಿತಮ್ಮ ದಂಪತಿಗಳ ಪುತ್ರ. ಮೈಸೂರಿನಲ್ಲಿ ಜನಿಸಿದರು. ತಂದೆ ಆಯುರ್ವೇದ ಕಾಲೇಜಿನ ನಿವೃತ್ತ ಪ್ರಾಚಾರ್ಯರು. ಆಯುರ್ವೇದ ಶಿಕ್ಷಣ ತಜ್ಞರಾದ ಇವರು ವಿದ್ವಾಂಸರು ಹಾಗು ಲೇಖಕರು ಗ್ರಂಥ ಕರ್ತರೂ ಆಗಿದ್ದರು. ಪ್ರಾಥಮಿಕ ಶಿಕ್ಷಣ ಮೈಸೂರಿನಲ್ಲಾದರೆ ಪ್ರೌಢ ಶಿಕ್ಷಣ ಬೆಂಗಳೂರಿನಲ್ಲಾಯಿತು. ಪಿ.ಯು.ಸಿ. ಶಿಕ್ಷಣವೂ ಬೆಂಗಳೂರಿನಲ್ಲೇ. ಆಯುರ್ವೇದ ಶಿಕ್ಷಣ – ಬಿ.ಎ.ಎಂಸ್. ಪದವಿ ಸರ್ಕಾರಿ ಆಯುರ್ವೇದ ಕಾಲೇಜ್ ಮೈಸೂರು ೧೯೮೪, ಬಿ.ಎ.ಎಂಸ್. ಆಲೋಪಥಿ ಶಿಕ್ಷಣ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಮೆಡಿಕಲ್ ಕಾಲೇಜ್, ೧೯೮೫–೮೭ ಎಂಡಿ ಆಯುರ್ವೇದಕಾಯ ಚಿಕತ್ಸಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಸರ್ಕಾರಿ ಬಿ.ಎ.ಎಂಸ್. ಮಹಾವಿದ್ಯಾಲಯ ಮೈಸೂರು. ವೃತ್ತಿಯಿಂದ ಆಯುರ್ವೇದ ಪ್ರಧ್ಯಾಪಕರಾದರೂ ಪ್ರವೃತ್ತಿಯಿಂದ ಸಾಹಿತಿಗಳು. ಮಾಸ್ತಿ, ಆರ್. ಕೆ. ನಾರಾಯಣ್, ಎಸ್. ಎಲ್ ಭೈರಪ್ಪ ಹಾಗೂ ತ.ರಾ.ಸು. ಇವರ ಕಾದಂಬರಿಗಳು ಹಾಗೂ ನಿಸ್ಸಾರ್ ಮತ್ತು ಅಡಿಗರ ಕವನಗಳು ಇವರ ಮೇಲೆ ಪ್ರಭಾವ ಬೀರಿದೆ. ಇವರ ಬರೆಹಗಳು ಸುಧಾ, ಆಂದೋಲನ ಮುಂತಾದ ಕನ್ನಡ ಪತ್ರಿಕೆಗಳಲ್ಲಿ ಹಾಗೂ 'ಸ್ಟಾರ್ ಆಫ್ ಮೈಸೂರು'ಇಂಗ್ಲೀಷ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈ ಪತ್ರಿಕೆಯ ವಿಶೇಷ ಸಂಚಿಕೆಗಳಿಗೆ ಇವರು ಸತತವಾಗಿ ೨೫ ವರ್ಷಗಳು ಇಂಗ್ಲೀಷ್ ಲೇಖನಗಳನ್ನು ಬರೆದಿದ್ದಾರೆ. ಇವರು ಆಯುರ್ವೇದಕ್ಕೆ ಸಂಬಂಧಿಸಿದಂತೆ ವೈದ್ಯ ಸಾಹಿತ್ಯದಲ್ಲಿ ಸಾಕಷ್ಟು ಕೃಷಿ ಮಾಡಿದ್ದಾರೆ. ೧೯೮೭ರಲ್ಲಿ ಇವರ ವೃತ್ತಿ ಆರಂಭ. ೨೦೦೦ದವರಗೆ ಹಲವಾರು ಊರುಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ ಉಪನ್ಯಾಸಕಾರಾಗಿ, ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆಯ ಗೌರವ ಕಾರ್ಯದರ್ಶಿಯಾಗಿ, ಚುಟುಕು ಸಾಹಿತ್ಯ ಪರಿಷತ್ತಿನ ಧರ್ಮ ದರ್ಶಿಯಾಗಿ, ಕರ್ನಾಟಕದ ಆಯುರ್ವೇದ ಮಂಡಲದ ಸದಸ್ಯರಾಗಿ ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು ಮೈಸೂರು ಶಾಖೆಯ ಸ್ಥಾಪಕ ಸದಸ್ಯರಾಗಿ, ಹಳೆಯ ವಿದ್ಯಾರ್ಥಿ ಸಂಘದ ಗೌ.ಖಜಾಂಚಿಯಾಗಿ ಇನ್ನೂ ಹಲವು ಸಂಘಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ ಹಲವು ಕಿರು ಹೊತ್ತಿಗೆಗಳು ಪ್ರಕಟವಾಗಿವೆ. ಮೈಸೂರು ವಿಶ್ವವಿದ್ಯಾಲಯ ಜಾನಪದ ವಿಶ್ವಕೋಶದಲ್ಲಿ ಇವರ ಲೇಖನವಿದೆ.

ಪ್ರಕಟಿತ ಕೃತಿಗಳು:

ವೈದ್ಯಕೀಯ – ಹಳ್ಳಿಯ ವೈದ್ಯ (ಪರಿಷ್ಕರಣೆ), ಪಂಚಕರ್ಮ ಚಿಕಿತ್ಸೆ, ನೀರಿನಿಂದ ಹರಡುವ ರೋಗಗಳು. **ಜೀವನಚರಿತ್ರೆ** – ಡಾ|| ಸ.ಜಿ. ನಾಗಲೋಟಿಮಠ.

ಲಭಿಸಿದ ಪ್ರಶಸ್ತಿಗಳು:

೧. ೧೯೯೪ – ಮೈಸೂರು ಜಿಲ್ಲಾಡಳಿತದಿಂದ ಪ್ರಶಂಸಾ ಪತ್ರ.

೨. ೨೦೦೫ – ಫ್ಯಾಮಿಲಿ ಪ್ಲಾನಿಂಗ್ ಅಸೋಸೊಯೇಷನ್ ಮೈಸೂರು ಪುರಸ್ಕಾರ.

೩. ೨೦೦೮ – ರೆಡ್ಡಿ ಹೆಲ್ತ್ ಕೇರ್ ಸಂಸ್ಥೆ ವಿಶ್ವವೈದ್ಯರ ದಿನಾಚರಣೆಯಂದು ಗೌರವಿಸಿದೆ.

೪. ೨೦೧೦ – ಕ.ಸಾ.ಪ. ಪಿರಿಯಾಪಟ್ಟಣ ಆಯುರ್ವೇದ ಕ್ಷೇತ್ರದಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ

ಕಮಲಾ ಜಿ. ಹೆಗಡೆ.

೧.	ಹೆಸರು	:	ಕಮಲಾ ಜಿ. ಹೆಗಡೆ.
೨.	ಕಾವ್ಯನಾಮ	:	ಕಮಲಾ ಕೊಂಡದಕುಳಿ
೩.	ಹುಟ್ಟಿದ ಸ್ಥಳ ದಿನಾಂಕ	:	ಕಲ್ಲಬ್ಬೆ, ೨೧-೦೫-೧೯೬೬.
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಸ್.ಎಸ್.ಎಲ್.ಸಿ.
೬.	ವೃತ್ತಿ	:	ಮನೆವಾರ್ತೆ.
೭.	ಕೌಟುಂಬಿಕ	:	ಪತಿ; ಗಣಪತಿ ಹೆಗಡೆ ಕೊಂಡದಕುಳಿ. ಪುತ್ರರು; ಕಾರ್ತೀಕ್ ಕೊಂಡದಕುಳಿ, ಕಿಶೋರ್ ಕೊಂಡದಕುಳಿ.
೮.	ಸದ್ಯದ ವಿಳಾಸ	:	ಕಮಲಾ ಕೊಂಡದಕುಳಿ, ಕಲ್ಲಬ್ಬೆ ಪೋ. ಕುಮಟಾ ತಾ. ಉ.ಕ.-೫೮೧೩೬೨.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೮೬-೨೬೮೪೯೨, ೮೧೦೫೯೫೭೩೭೨.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕು ಕಲ್ಲಬ್ಬೆಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ, ಹಿರಿಯ ಪ್ರಾಥಮಿಕ ಶಾಲೆ ಕಲ್ಲಬ್ಬೆಯಲ್ಲಾಯಿತು. ಪ್ರೌಢ ಶಿಕ್ಷಣ ವಿದ್ಯಾನಿಕೇತನ ಪ್ರಗತಿ ವಿದ್ಯಾಲಯ ವಖಾರೂರಿನಲ್ಲಾಯಿತು. ಶಾಲಾ ದಿನಗಳಲ್ಲಿಯೇ ಇವರಿಗೆ ಸಾಹಿತ್ಯದ ಬಗ್ಗೆ ಆಸಕ್ತಿವುಂಟಾಯಿತು. ಕಾದಂಬರಿಗಳನ್ನು ಓದುತ್ತಿದ್ದರು. ರಾಮಯಣ, ಮಹಾಭಾರತ, ಭಾಗವತ ಹಾಗೂ ಮಂಕುತಿಮ್ಮನ ಕಗ್ಗ ಇವರ ಮೇಲೆ ಪ್ರಭಾವ ಬೀರಿತು. ಸೂ.ರಂ. ಎಕ್ಕುಂಡಿ, ಡಿ.ವಿ.ಜಿ. ದೇ.ರಾಜೇ. ಸೀತರಾಮಯ್ಯ, ನಿಸಾರ ಅಹಮದ್ ಹಾಗೂ ಕೆ.ಎಸ್. ನಾರಯಣಾಚಾರ್ಯ ಮುಂತಾದವರ ಸಾಹಿತ್ಯ ಓದಿ ಸ್ಫೂರ್ತಿಗೊಂಡರು. ಕವನ, ಮಕ್ಕಳ ಕವಿತೆಗಳು ಇತ್ಯಾದಿ ಬರೆಯ ತೊಡಗಿದರು. ಇವರ ಬರೆಹಗಳು ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ಕರಾವಳಿ, ಮುಂಜಾವು, ಹೊಸದಿಂಗಂತ, ಲೋಕಧ್ವನಿ, ಜನ ಮಾಧ್ಯಮ, ಧ್ಯೇಯ ನಿಷ್ಠೆ, ಪತ್ರಕರ್ತ, ನಾಗರಿಕ, ಮಂಗಳಾ, ಜೀವನ ಶಿಕ್ಷಣ, ಹೇಮ ಪುರ, ಸುಧಾ, ತರಂಗ, ಕೆನರಾ ವಿಜಯ ಹೊಂಗಿರಣ, ಚೈತ್ರ ರಶ್ಮಿ, ಉಳುಮೆ, ಗೋವಾ ಕೇಸರಿ, ಅಕ್ಷಯ ಹಾಗೂ ಯುಗ ಪುರುಷ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವರು ಸಿದ್ದಾಪುರದಲ್ಲಿ ಜರುಗಿದ ೧೪ನೇ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕುಮಟಾದಲ್ಲಿ ನಡೆದ ೧೫ನೇ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಕಾವ್ಯವಾಚನ ಮಾಡಿದರು. ಇವರು ಕಾರವಾರದ ಆಕಾಶವಾಣಿಯಲ್ಲಿ ಕವನ ವಾಚನ ಪ್ರವಾಸ ಮಾಡುತ್ತಿರುತ್ತಾರೆ. ಇವರು ಭಾವಗೀತೆಗಳು,.ಹನಿಗವನ ಹಾಗೂ ಭಕ್ತಿ ಗೀತೆಗಳನ್ನು ಬರೆಯುತ್ತಿರುತ್ತಾರೆ. ಹಲವಾರು ಕೃತಿಗಳು ಪ್ರಕಟಣೆಗೆ ಸಿದ್ಧಾವಗಿದೆ.

ಪ್ರಕಟಿತ ಕೃತಿಗಳು:
ಕವನ ಸಂ. – ಪ್ರತೀಕ್ಷೆ.
ಮಕ್ಕಳ ಕವಿತೆಗಳು – ಮುಗುಳು.
ಪ್ರೌಢ ಕವನ ಸಂ. – ಅಂತರಾಳ.

ಲಭಿಸಿರುವ ಪ್ರಶಸ್ತಿಗಳು:
೧. ಜಿಲ್ಲಾ ಮಟ್ಟದ ಕವನ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ.
೨. ಶಡೇಗೋಡಿ ಧಾರೇಶ್ವರ ಸೇವಾ ಸಂಸ್ಥೆ ಸ್ಪರ್ಧೆಯಲ್ಲಿ ತೃತೀಯ ಸ್ಥಾನ.

ವ್ಯಕ್ತಿ ಪರಿಚಯ

ಕರಿಸ್ವಾಮಿ.ಕೆ.

೧. ಹೆಸರು	:	ಕರಿಸ್ವಾಮಿ.ಕೆ.
೨. ಕಾವ್ಯನಾಮ	:	ಇರುವುದಿಲ್ಲ
೩. ಹುಟ್ಟಿದ ಸ್ಥಳ ದಿನಾಂಕ	:	ಶಿರಾ, ಜವನಹಳ್ಳಿ. ೧೫.೦೧-೧೯೭೩.
೪. ಜಿಲ್ಲೆ - ರಾಜ್ಯ	:	ತುಮಕೂರು, ಕರ್ನಾಟಕ.
೫. ವಿದ್ಯಾಭ್ಯಾಸ	:	ಎಂ.ಎ. ಜರ್ನಲಿಸಂ
೬. ವೃತ್ತಿ	:	ಪತ್ರಕರ್ತ
೭. ಕೌಟುಂಬಿಕ	:	ಪತ್ನಿ; ರೂಪ. ಪುತ್ರಿ; ಮೈತ್ರಿ. ಪುತ್ರ; ಪ್ರಯಾಗ್
೮. ಸದ್ಯದ ವಿಳಾಸ	:	ನಂ. ೭೭೮, ೭ನೇ ಮೇಯಿನ್, ನರ್ಮದಾ ನದಿ ರಸ್ತೆ. ಬೃಂದಾವನ ನಗರ, ಬೆಂಗಳೂರು-೫೬೦೦೧೯
೯. ಖಾಯಂ ವಿಳಾಸ	:	S/o ಕೆಂಚಣ್ಣ, ಜವನಹಳ್ಳಿ, ಗುಳಿಗೇನಹಳ್ಳಿ (ಅಂಚೆ)-೫೭೨೧೩೨
೧೦. ದೂರವಾಣಿ ಸಂಖ್ಯೆ	:	೯೩೪೩೩೮೧೮೨೦
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ತುಮಕೂರಿನಲ್ಲಿ ಜನಿಸಿದರು. ಕೆಂಚಣ್ಣನವರ ಮಗ. ಬಿ.ಎಸ್ಸಿ ಪದವೀಧರರಾಗಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಮಾಡಿದ್ದಾರೆ. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವೀಧರರು. ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯದಲ್ಲಿ ಆಸಕ್ತರು. ವಿಜಯ ಕರ್ನಾಟಕ ದಿನಪತ್ರಿಕೆಯ ಗಂಗಾವತಿಯಲ್ಲಿ ವೃತ್ತಿಜೀವನ ಆರಂಭ. ಐದು ವರ್ಷಗಳು ಸ್ಥಾನಿಕ ಸಂಪಾದಕರಾಗಿ ಸೇವೆ. ಬೆಂಗಳೂರು ಮತ್ತು ಬಾಗಲಕೋಟೆಗಳಲ್ಲಿಯೂ ವಿಜಯಕರ್ನಾಟಕ ದಿನಪತ್ರಿಕೆಯ ಹಿರಿಯ ಉಪಸಂಪಾದಕರಾಗಿ ಸೇವೆಸಲ್ಲಿಸಿದರು. ನಂತರ ಇಂಡಿಯಾ ಇನ್ಫೋಡಾಟ್ ಕಾಮ್‌ನಲ್ಲಿ ಕಾಪಿ ಎಡಿಟರಾಗಿ ಸೇವೆಸಲ್ಲಿಸಿದರು. ಟೈಮ್ಸ್ ಇಂಟರ್‌ನೆಟ್ ಲಿಮಿಟೆಡ್‌ನಲ್ಲಿ ಸೀನಿಯರ್ ಕಾಪಿ ಎಡಿಟರ್ ಆಗಿಯೂ ಕಾರ್ಯ ನಿರ್ವಹಿಸಿದರು. ಪ್ರಸ್ತುತ ಬೆಂಗಳೂರಿನಲ್ಲಿ ವಿಜಯ ಕರ್ನಾಟಕ ದಿನ ಪತ್ರಿಕೆಯ ಸಹಾಯಕ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳಾದ ಇವರಿಗೆ ರಂಗಭೂಮಿ ಹವ್ಯಾಸ. ವಿಜ್ಞಾನ ಮತ್ತು ಪರಿಸರಗಳ ವಿಷಯಗಳಲ್ಲಿ ಆಸಕ್ತಿವುಳ್ಳವರಾಗಿದ್ದಾರೆ. ೨೦೦೬ರಲ್ಲಿ ಇವರು ರಚಿಸಿದ ನಾಟಕ ಪ್ರಕಟವಾಯಿತು. ಪುಸ್ತಕ ಪ್ರಾಧಿಕಾರ ಲೇಖಕರ ಪ್ರಥಮ ಕೃತಿಗೆ ನೀಡುವ ಧನ ಸಹಾಯ ಇವರ 'ಸಿಂಗಾರಿತ್ಲು' ನಾಟಕಕ್ಕೆ ದೊರೆತಿದೆ. ೧೯೯೮ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಕಟಿಸಿದ ವಾರ್ಷಿಕ ಕಾವ್ಯದಲ್ಲಿ ಇವರ ಕವನ ಸೇರ್ಪಡೆಯಾಗಿದೆ. ೧೯೯೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ವಾರ್ಷಿಕ ಯುವಕಥೆಯಲ್ಲಿ ಇವರ 'ಸಿಂಗಾರಿತ್ಲು' ಕಥೆ ಸೇರಿದೆ. ೧೯೯೪ರಲ್ಲಿ ದೆಹಲಿಯ ಪೊಯಟ್ರಿ ಸೊಸೈಟಿ ಆಫ್ ಇಂಡಿ-ಯಾ ಸಂಸ್ಥೆ ೧೬ ವರ್ಷದೊಳಗಿನ ಯುವ ಕವಿಗಳಿಗೆ ಮೈಸೂರಿನಲ್ಲಿ ನಡೆಸಿದ ಕಾವ್ಯ ಕಮ್ಮಟಕ್ಕೆ ಇವರು ಆಯ್ಕೆಯಾಗಿದ್ದರು. ಇದೇ ಸಂಸ್ಥೆ ಹೊರತಂದ 'ಹದಿ ಹೆಜ್ಜೆ' ಎಂಬ ಕನ್ನಡ ಮತ್ತು ಇಂಗ್ಲೀಷ್ ಕವನ ಸಂಕಲನಗಳಲ್ಲಿ ಇವರ ಕವನಗಳು ಸೇರಿವೆ. ಬೆಂಗಳೂರು ಆಕಾಶವಾಣಿಯಿಂದ ಇವರ ಕವನಗಳು ಪ್ರಸಾರವಾಗಿವೆ. 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್' ಪ್ರಕಟಿಸಿರುವ ಗ್ರಂಥದಲ್ಲಿ ಇವರು ಮಠಗಳ ಕುರಿತು ನಡೆಸಿದ ಸಂದರ್ಶನವನ್ನಾಧರಿಸಿದ 'ಮಠ ಕಟ್ಟಿ ನೋಡು' ಲೇಖನ ಪ್ರಕಟವಾಗಿದೆ.

ಪ್ರಕಟಿತ ಕೃತಿಗಳು:
ನಾಟಕ – ಸಿಂಗಾರಿತ್ಲು.

ಲಭಿಸಿರುವ ಪ್ರಶಸ್ತಿಗಳು:
೧. ೨೦೦೬ – 'ಸಿಂಗಾರಿತ್ಲು' ಕೃತಿಗೆ ಕ.ಸಾ.ಪ.ನ ದತ್ತಿ ನಿಧಿ – ಅರಳು ಪ್ರಶಸ್ತಿ.
೨. ೧೯೯೮ – ೨೦೦೦ ಬೆಂಗಳೂರು ಕ್ರೈಸ್ಟ್ ಕಾಲೇಜ್ ಕಾವ್ಯ ಸ್ಪರ್ಧೆಯಲ್ಲಿ ಬಹುಮಾನ
೩. 'ಸಂಕ್ರಮಣ' ವಾರ್ಷಿಕ ಚುಟುಕ ಕವನ ಸ್ಪರ್ಧೆಯಲ್ಲಿ ಬಹುಮಾನ.

ವ್ಯಕ್ತಿ ಪರಿಚಯ

ಕರಿಸಿದ್ದಪ್ಪ. ಎಸ್.

೧.	ಹೆಸರು	:	ಎಸ್. ಕರಿಸಿದ್ದಪ್ಪ ಕುಂಬಾರ ರಾಮಗಿರಿ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ರಾಮಗಿರಿ ಹೋಳಲ್ಕೆರೆ ತಾ. ೧೨-೫-೧೯೫೮.
೪.	ಜಿಲ್ಲೆ - ರಾಜ್ಯ	:	ಚಿತ್ರದುರ್ಗ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಬಿ.ಇ.ಡಿ., ಡಿಪ್ಲೊಮಾ ಇನ್ ಇಂಗ್ಲೀಷ್
೬.	ವೃತ್ತಿ	:	ಶಿಕ್ಷಕ
೭.	ಕೌಟುಂಬಿಕ	:	ಪತ್ನಿ; ನಾಗರತ್ನಮ್ಮ. ಪುತ್ರಿಯರು; ಜಿ.ಕೆ. ದಿವ್ಯಾ, ಜಿ.ಕೆ.ತೇಜಸ್ವಿನಿ. ಪುತ್ರ; ಜಿ.ಕೆ. ಆನಂದಕುಮಾರ್
೮.	ಸದ್ಯದ ವಿಳಾಸ	:	ಎಸ್. ಕರಿಸಿದ್ದಪ್ಪ, ಶಿಕ್ಷಕರು, ಸ.ಹಿ. ಪ್ರಾಥಮಿಕ ಪಾಠಶಾಲೆ, ಹಳ್ಳದಕೇರಿ ಬಡಾವಣೆ, ಹರಿಹರ
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	ತಿಳಿಸಿಲ್ಲ
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕು ರಾಮಗಿರಿಯಲ್ಲಿ ಜನಿಸಿದರು. ಇವರು ಶ್ರೀ ಜಿ. ಶಿವರುದ್ರಪ್ಪ ಶ್ರೀಮತಿ ಚೆನ್ನಬಸಮ್ಮ ದಂಪತಿಗಳ ಪುತ್ರ. ಕನ್ನಡ ಸ್ನಾತಕೋತ್ತರ ಪದವೀಧರರು. ಬಿ.ಇ.ಡಿ. ಮಾಡಿದ್ದಾರೆ. ಇಂಗ್ಲೀಷನಲ್ಲಿ ಡಿಪ್ಲೊಮಾ ಮಾಡಿದ್ದಾರೆ. ವೃತ್ತಿಯಿಂದ ಶಾಲಾ ಶಿಕ್ಷಕರು. ಪ್ರವೃತ್ತಿಯಿಂದ ಸಾಹಿತಿಗಳು. ಶಾಲಾ ದಿನಗಳಲ್ಲಿಯೇ ಕವನ ರಚಿಸುತ್ತಿದ್ದರು. ಅಕ್ಷರದಾನ ಸಮಿತಿ ದಾವಣಗೆರೆ, ದಾವಣಗೆರೆ ಜಿಲ್ಲಾ ಸಂಪನ್ಮೂಲ ವ್ಯಕ್ತಿ. ಇವರು ಆಧುನಿಕ ಕವಿಗಳು ಕಂಡ ಬಸವಣ್ಣನ ವ್ಯಕ್ತಿ ಚಿತ್ರಣ, ೧೨ನೇ ಶತಮಾನದ ಕ್ರಾಂತಿಯ ಹೆಜ್ಜೆಗಳು ಬಸವ ಕೇಂದ್ರ ವಿರಕ್ತ ಮಠ. ಹರಿಹರ ಹಾಗೂ ವಿವಿಧ ಕವಿ ಗೋಷ್ಠಿ ಸಮ್ಮೇಳನಗಳಲ್ಲಿ ಪಾಲ್ಗೊಂಡು ಉಪನ್ಯಾಸ ಮಾಡಿದ್ದಾರೆ. 'ಕನ್ನಡ ಭಾಷಾ ಬೋಧನೆ ಪ್ರಾಥಮಿಕ ಶಾಲೆಗಳಲ್ಲಿ' ಕುರಿತು ರಚಿಸಿದ ಪ್ರಬಂಧವನ್ನು ಹಂಪೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದರು. 'ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ' ಕುರಿತು ರಚಿಸಿದ ಪ್ರಬಂಧವನ್ನು ಶಿಕ್ಷಣ ಇಲಾಖೆಗೆ ಸಲ್ಲಿಸಿದರು. ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ಸ್ಥಿತಿಗತಿಗಳ ಕುರಿತು ರಚಿಸಿದ ಪ್ರಬಂಧವನ್ನು ರಾಜ್ಯ ಮಟ್ಟದ ಸ್ಪರ್ಧೆಗೆ ಕಳುಹಿಸಿದರು. ೧೯೯೮ರಲ್ಲಿ ಇವರ 'ಶ್ರೀ ಗುರು ಕರಿ ಸಿದ್ದೇಶ್ವರ ಪುಣ್ಯ ಕ್ಷೇತ್ರ ದರ್ಶನ ರಾಮಗಿರಿ' ಕೃತಿಯು ರಾಮಗಿರಿ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸಮ್ಮುಖದಲ್ಲಿ ಪ್ರಕಟವಾಯಿತು. ೨೦೦೦ದಲ್ಲಿ ಇವರ 'ಎದೆಯಾಳ' ಕವನ ಸಂಕಲನವೂ ಹೊಳಲ್ಕೆರೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯೂ ಆಯಿತು. ಇವರ ಪ್ರಥಮ ಕವನ ಸಂಕಲವ ೧೯೯೬ರಲ್ಲಿ ಶಿಕ್ಷಕರ ದಿನಾಚರಣೆಯಂದು ಬಿಡುಗಡೆಯಾಯಿತು. ಇವರು ಬೆಂಗಳೂರಿನ ಕ.ಸಾ.ಪ.ದ ಆಜೀವ ಸದಸ್ಯರು. ಕನ್ನಡ ಸಾಹಿತ್ಯ ಪರಿಷತ್ ಹರಿಹರ ತಾಲೂಕು ಘಟಕದ ಕೋಶಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಪ್ರಕಟಿತ ಕೃತಿಗಳು:

ಕವನ ಸಂ. – ದೃಷ್ಟಿ ಸೃಷ್ಟಿ.

ಕ್ಷೇತ್ರ ಪರಿಚಯ – ಶ್ರೀ ಗುರು ಕರಿ ಸಿದ್ದೇಶ್ವರ ಪುಣ್ಯಕ್ಷೇತ್ರ ದರ್ಶನ ರಾಮಗಿರಿ.

ಲಭಿಸಿರುವ ಪ್ರಶಸ್ತಿಗಳು:

೧. ಬೂದಿಹಾಳ ಗ್ರಾಮಸ್ಥರಿಂದ ಸನ್ಮಾನ.

೨. ರಾಮಗಿರಿ ಗ್ರಾಮಸ್ಥರಿಂದ ಸನ್ಮಾನ.

ವ್ಯಕ್ತಿ ಪರಿಚಯ

ಕಲ್ಪನಾ ಅರುಣ

೧. ಹೆಸರು : ಕಲ್ಪನಾ ಅರುಣ

೨. ಕಾವ್ಯನಾಮ : ಇರುವುದಿಲ್ಲ.

೩. ಹುಟ್ಟಿದ ಸ್ಥಳ ದಿನಾಂಕ : ಹೊನ್ನಾವರ, ಕರ್ಕಿ, ೨೪-೦೪-೧೯೬೯.

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎ., ಬಿ.ಇಡಿ.

೬. ವೃತ್ತಿ : ಪ್ರೌಢಶಾಲಾ ಸಹ ಶಿಕ್ಷಕಿ.

೭. ಕೌಟುಂಬಿಕ : ಪತಿ; ಅರುಣ ಹೆಗಡೆ. ಪುತ್ರಿ; ವರ್ಷಾ ಹೆಗಡೆ.

೮. ಸದ್ಯದ ವಿಳಾಸ : ೫೭, ಚೈತನ್ಯ, ೫ನೇ ಮುಖ್ಯರಸ್ತೆ, ಶ್ರೀ ಲಕ್ಷ್ಮೀ ನಾರಾಯಣ ಬಡಾವಣೆ, ಮುನ್ನೆಕೊಳಾಲ, ಮಾರತಳ್ಳಿ, ಬೆಂಗಳೂರು-೫೬೦೦೩೭.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೭೩೧೮೨೧೧೭೯

೧೧. ಹಸ್ತಾಕ್ಷರ (ಸಹಿ) : ಕಲ್ಪನಾ ಅರುಣ

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಕರ್ಕಿಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಸರಕಾರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆ ಕರ್ಕಿಯಲ್ಲಾಯಿತು. ಪ್ರೌಢ ಶಿಕ್ಷಣ ಶ್ರೀ ಚೆನ್ನಕೇಶವ ಪ್ರೌಢಶಾಲೆ ಕರ್ಕಿಯಲ್ಲಾಯಿತು. ಪಿ.ಯು.ಸಿ. ಯಿಂದ ಬಿ.ಎ. ವರಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಾವಿದ್ಯಾಲಯ ಹೊನ್ನಾವರದಲ್ಲಾಯಿತು. ಬಿ.ಎಡ್. ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯ ಕುಮಟ. ಶಾಲಾ ದಿನಗಳಿಂದಲೇ ಇವರು ಸಾಹಿತ್ಯದಿಂದ ಆಕರ್ಷಿತರಾದರು. ಕಥೆ ಪುಸ್ತಕ ಓದುವುದು, ಭಾಷಣ ಕೇಳುವುದು ಅಭ್ಯಾಸವಾಯಿತು. ಸಂಗೀತ ಹವ್ಯಾಸವಿತ್ತು. ಇವರು ಶಾಲಾದಿನಗಳಲ್ಲಿ ಓದುವಾಗ ಗಮಯನ ಕಥೆ, ಈಗಿನ ನನ್ನವರು, ಮಕ್ಕಳ ಪದ್ಯ, ಮಕ್ಕಳ ಕವಿತೆಗಳು ಹಾಗೂ ಶಿಶು ಪ್ರಾಸ ಮುಂತಾದ ಸಾಹಿತ್ಯ ಇವರ ಮೇಲೆ ಪ್ರಭಾವ ಬೀರಿತು. ಕುವೆಂಪು, ಲಕ್ಷ್ಮೀನಾರಾಯಣ ಭಟ್ಟ, ಶಿವರಾಮ ಕಾರಂತರು, ಎಲ್.ಆರ ಹೆಗಡೆ ಮುಂತಾದ ಸಾಹಿತಿಗಳ ಪ್ರಭಾವವೂ ಇವರ ಮೇಲಾಯಿತು. ೧೯೯೪ರಲ್ಲಿ ಮುಂಡಗೋಡು ತಾ. ಕಾತೂರಿನ ಪ್ರೌಢಶಾಲೆಯಲ್ಲಿ ಇವರ ವೃತ್ತಿ ಜೀವನ ಆರಂಭಯಾಯಿತು. ೧೯೯೭ರಲ್ಲಿ ಬೆಂಗಳೂರಿಗೆ ವರ್ಗವಾಗಿ ಬಂದರು. ವರ್ತೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸಹಾಯಕ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವು ಮಕ್ಕಳ ಹಾಗೂ ಶಿಕ್ಷಕರ ಬರೆಹಗಳನ್ನು ನೆರವು ಪಡೆದು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ೨೫-೨೬ರ ವಯೋಮಾನದಲ್ಲಿ ಸಾಹಿತ್ಯ ಸೇವೆಯನ್ನು ಆರಂಭಿಸಿದರು. ಕರ್ಮವೀರ ಪತ್ರಿಕೆಯಲ್ಲಿ ಇವರ ಮೊದಲ ಬರೆಹ ಪ್ರಕಟವಾಯಿತು. ನಂತರ ಇವರ ಕವನ, ಹನಿಗವನ, ಲೇಖನ, ಕಥೆ, ಹೊಸರುಚಿ ಮುಂತಾದವು ಕರ್ಮವೀರ, ಹವ್ಯಕ, ರಾಜ್ಯ ಪ್ರಗತಿ, ವಿಜಯ ಕರ್ನಾಟಕ, ಸಖೀ, ಪ್ರಿಯಾಂಕ, ಹೊಸದಿಗಂತ ಇತ್ಯಾದಿ ಪತ್ರಿಕೆಗಳಲ್ಲಿ ವಿಕ್ರಮ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಗಿದೆ. ಇವರು ಕನ್ನಡ ಲೇಖಕಿಯರ ಸಂಘದ ಸದಸ್ಯೆ. ಹಲವಾರು ಸಂಘ ಸಂಸ್ಥೆಗಳ ಏರ್ಪಡಿಸಿದ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಹೊನ್ನಾವರದಲ್ಲಿ ನಡೆದ ಪ್ರಥಮ ಹವ್ಯಕ ಸಮ್ಮೇಳನದ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು. ಹವ್ಯಕ ಅಧ್ಯಯನ ಕೇಂದ್ರ ಏರ್ಪಡಿಸಿದ ಮಹಿಳಾ ಚಿಂತನ ಕಾರ್ಯಕ್ರಮದಲ್ಲಿ ಮಹಿಳಾ ಚಿಂತಕಿಯಾಗಿ ಪ್ರಬಂಧ ಮಂಡಿಸಿದ್ದಾರೆ. ಅಖಿಲ ಹವ್ಯಕ ಮಹಾಸಭೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಆಜೀವ ಸದಸ್ಯೆಯಾಗಿದ್ದಾರೆ. ಮಲ್ಲೇಶ್ವರದ ಹವ್ಯಕ ಸಂಪಾದಕ ಮಂಡಳಿಯಲ್ಲಿಯೂ ಇವರು ಸದಸ್ಯೆಯಾಗಿ ಒಂದು ವರ್ಷ ಸೇವೆ ಸಲ್ಲಿಸಿದ್ದಾರೆ.

ಪ್ರಕಟಿತ ಕೃತಿಗಳು:

ಶಿಶು ಸಾಹಿತ್ಯ – ಶಿಶು ಪ್ರಾಸಗಳು.

ವ್ಯಕ್ತಿ ಪರಿಚಯ

ಕವಿತಾ ಎಸ್ ಕುಲಕರ್ಣಿ

೧. ಹೆಸರು : ಶ್ರೀಮತಿ ಕವಿತಾ ಕುಲಕರ್ಣಿ

೨. ಕಾವ್ಯನಾಮ : ಕವಿಶ್ರೀ

೩. ಹುಟ್ಟಿದ ಸ್ಥಳ ದಿನಾಂಕ : ಹೈದರಾಬಾದ್, ೨೩–೧೦–೧೯೬೦

೪. ಜಿಲ್ಲೆ – ರಾಜ್ಯ : ಆಂಧ್ರಪ್ರದೇಶ

೫. ವಿದ್ಯಾಭ್ಯಾಸ : ಎಂ.ಎ., ಸಮಾಜ ವಿಜ್ಞಾನ.

೬. ವೃತ್ತಿ : ಗೃಹಿಣಿ

೭. ಕೌಟುಂಬಿಕ : ತಿಳಿಸಿಲ್ಲ

೮. ಸದ್ಯದ ವಿಳಾಸ : 3-10-9/D, Gokhale Nagara,
Ramantapura, Hyderabad - 500013

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೪೦–೨೭೦೩೮೨೮೩, ೦ ೯೦೩೨೫೮೬೨೬೪

೧೧. ಹಸ್ತಾಕ್ಷರ (ಸಹಿ) : ಕವಿತಾ. ಎಸ್. ಕುಲಕರ್ಣಿ

ಸಾಹಿತ್ಯ ಪರಿಚಯ

ಇವರು ಆಂಧ್ರಪ್ರದೇಶ ಹೈದರಾಬಾದಿನಲ್ಲಿ ಹುಟ್ಟಿದರು. ಇವರು ಪ್ರಾಥಮಿಕ, ಪ್ರೌಢ, ಪಿ.ಯು.ಸಿ ಎಲ್ಲ ಬೆಂಗಳೂರಿನಲ್ಲಿಯೇ ಮಾಡಿದರು. ಎಂ.ಇ.ಎಸ್. ಕಾಲೇಜಿನಲ್ಲಿ ಪದವಿ ಪಡೆದರು. ೧೯೭೧ರಲ್ಲಿ ವಿವಾಹವಾದರು. ಅಂಚೆ ಶಿಕ್ಷಣ ಮುಖಾಂತರ ಸ್ನಾತಕೋತ್ತರ ಪದವಿ ಪಡೆದರು. ೧೧ನೇ ತರಗತಿಯವರಗೆ ಕನ್ನಡ ಮಾಧ್ಯಮದಲ್ಲೇ ಓದಿದರು. ಶಾಲಾ ದಿನಗಳಲ್ಲಿಯೇ ಕಲೆ, ಸಾಹಿತ್ಯ ಹಾಗೂ ಇನ್ನಿತರ ಚಟುವಟಿಕೆಗಳ ಬಗ್ಗೆ ಉತ್ತೇಜನವಿತ್ತು. ಶಾಲೆಯಲ್ಲಿ ವಾರಕ್ಕೊಮ್ಮೆ ಒಂದು ಪಿರಿಯೆಡ್ ಹಾಡು, ನೃತ್ಯ, ನಾಟಕ, ವೃಂದಗಾನ, ಏಕಪಾತ್ರಾಭಿನಯ ಹಾಗೂ ಮೂಕಾಭಿನಯಗಳ ವೈವಿಧ್ಯಮಯ ಕಾರ್ಯಕ್ರಮಗಳಿಗಾಗಿ ಮೀಸಲಿತ್ತು. ಗಣ್ಯ ಅತಿಥಿಗಳಿಂದ ಭಾಷಣ ಇರುತ್ತಿತ್ತು. ಇವರು ಶಾಲವಾರ್ಷಿಕೋತ್ಸವ ವಿಜ್ಞಾನ ಹಾಗೂ ವಸ್ತು ಪ್ರದರ್ಶನಗಳಲ್ಲಿ, ಪ್ರಬಂಧ ಸ್ಪರ್ಧೆ ಆಟೋಟಗಳಲ್ಲಿಯೂ ಭಾಗವಹಿಸುತ್ತಿದ್ದರು. ಡಾ|| ಚನ್ನವೀರ ಕಣವಿ ಅವರ ಕವನಗಳಿಂದ ಪ್ರಭಾವಿತರಾಗಿ ಬರೆಯುವ ಪ್ರವೃತ್ತಿ ಬಂದು ಚಿಕ್ಕ ಪುಟ್ಟ ಕವನ. ಹನಿಗವನ ಬರೆಯಲಾರಂಭಿಸಿದರು. ಇವರು ವಿವಾಹ ನಂತರ ಪತಿ ಗೃಹ – ಹೈದರಾಬಾದ್ ವಾಸಿಯಾದರು. ಸ್ವಾತಂತ್ರ್ಯ ಹೋರಾಟಗಾರ **ಶ್ರೀನಿವಾಸರಾವ ಮಂಗಲವೇಡ** ಕುಟುಂಬದಿಂದ ಬಂದವರಾದ್ದರಿಂದ, ಹೋರಾಟ ಮನೋಭಾವ ಇವರ ಮನೆಯವರಿಗೂ ರಕ್ತಗತವಾಗಿ ಬಂದಿತ್ತು. ಇವರ ಪತಿಗೂ ಸಾಹಿತಿಗಳ ಸಂಘ ಜೀವನದ ಹವ್ಯಾಸವಿತ್ತು. ಇವರು ಹೈದರಾಬಾದಿಗೆ ಬಂದ ಮೇಲೆ ಇವರ ಹವ್ಯಾಸಗಳಿಗೂ ಪ್ರೋತ್ಸಾಹ ದೊರೆಯಿತು. ನಾಡ ಹಬ್ಬ ಕವಿ ಸಮ್ಮೇಳನಗಳಲ್ಲಿ ಭಾಗವಹಿಸ ತೊಡಗಿದರು. ೧೯೭೯ರಿಂದ ಕಾವ್ಯ ವಾಚಿಸ ತೊಡಗಿದರು. ಬಹು ಭಾಷಾ ಕವಿ ಸಮ್ಮೇಳನಗಳಲ್ಲಿ ಕನ್ನಡ ಕವಯತ್ರಿಯಾಗಿ ಕಾವ್ಯ ವಾಚಿಸುತ್ತಿದ್ದರು. ೧೯೯೫ ರಲ್ಲಿ ಬೆಂಗಳೂರಿನಲ್ಲಿ ನಡೆದ ಮಂಗಳ ವೇಡ ಶ್ರೀನಿವಾಸರಾಯರ ಜನ್ಮ ಶತಮಾನೋತ್ಸವದಲ್ಲಿ ಇವರು ಭಾಗವಹಿಸಿ 'ಶ್ರದ್ಧಾಂಜಲಿ' ಕವನವನ್ನು ಅರ್ಪಿಸಿದರು. ಗುಲ್ಬರ್ಗಾ, ಧಾರವಾಡಗಳಲ್ಲಿ ನಡೆದ ಇದೇ ಸಮಾರಂಭ-ಗಳಲ್ಲಿಯೂ ಭಾಗವಹಿಸಿದ್ದರು. ಹೈದರಾಬಾದಿನ ರಮಾನಂದ ತೀರ್ಥ ಟ್ರಸ್ಟ್ ಏರ್ಪಡಿಸಿದ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾಯರ ೮೫ನೇ ವಾರ್ಷಿಕೋತ್ಸವದಲ್ಲೂ ಭಾಗಿಯಾದ ಇವರು ಅವರ ಜೀವನ ವೃತ್ತಾಂತದ 'ತೆಲಗು ಸಿರಿ' ಕನ್ನಡ ಕವಿತೆ ವಾಚಿಸಿದರು. ೨೦೦೬ರಲ್ಲಿ ಬೀದರದಲ್ಲಿ ಜರುಗಿದ ೭೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಮಂತ್ರಿತ ಕವಯತ್ರಿಯಾಗಿ ಭಾಗವಸಿದ್ದರು. 'ಅವನಿ' ಪತ್ರಿಕೆಯಲ್ಲಿ ಇವರ ಕವನಗಳು ಅಚ್ಚಾಗಿವೆ. ಶಾರದ ವಿ. ಗೋಕಾಕರ 'ನಮ್ಮ ಬದುಕು ನಮ್ಮ ಬಾಳ್ವೆ' ಗ್ರಂಥದಲ್ಲಿಯೂ ಇವರ ಲೇಖನ ಪ್ರಕಟವಾಗಿದೆ. ಆಕಾಶವಾಣಿ ಹೈದರಾಬಾದ್ ಕನ್ನಡ ಕಾರ್ಯಕ್ರಮಗಳಲ್ಲಿ ಇವರ ಭಾಷಣ, ಕವನ ರಸ ಪ್ರಶ್ನೆ ಪ್ರಕಟವಾಗುತ್ತಿವೆ.

ಪ್ರಕಟಿತ ಕೃತಿಗಳು:
ಕವನ ಸಂ. – ವಿಸ್ಮಯ.

ವ್ಯಕ್ತಿ ಪರಿಚಯ

ಕಾಂತೇಶಾಚಾರ್ಯ ಕದರಮಂಡಲಗಿ

೧.	ಹೆಸರು	:	ಕಾಂತೇಶಾಚಾರ್ಯ ಕದರಮಂಡಲಗಿ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಬೆಂಗಳೂರು, ೨೦–೩–೧೯೭೯
೪.	ಜಿಲ್ಲೆ – ರಾಜ್ಯ	:	ಬೆಂಗಳೂರು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ. (ದ್ವೈತ ವೇದಾಂತದಲ್ಲಿ).
೬.	ವೃತ್ತಿ	:	ವಿಶ್ವ ಮಾಧ್ವ ಮಹಾಪರಿಷತ್ ಸಂಶೋಧನ ಕೇಂದ್ರದಲ್ಲಿ ಸಂಶೋಧಕರಾಗಿ ಕಾರ್ಯನಿರ್ವಹಣೆ.
೭.	ಕೌಟುಂಬಿಕ	:	ಪತ್ನಿ; ಉಷಾ ವಿ. ಪುತ್ರಿ; ಲಕ್ಷ್ಣಣಾ .ಕೆ.
೮.	ಸದ್ಯದ ವಿಳಾಸ	:	೧೬, ಉತ್ತರಾದಿ ಮಠ ಕಾಂಪೌಂಡ್, ಉತ್ತರಾದಿ ಮಠದ ರಸ್ತೆ, ಶಂಕರಪುರಂ, ಬಸವನಗುಡಿ, ಬೆಂಗಳೂರು–೫೬೦೦೦೪
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೪೮೩೪೬೫೨೩೧, ೯೪೪೮೬೭೬೫೪೮.
೧೧.	ಹಸ್ತಾಕ್ಷರ (ಸಹಿ)	:	ಕಾಂತೇಶಾಚಾರ್ಯ ಕದರಮಂಡಲಗಿ

ಸಾಹಿತ್ಯ ಪರಿಚಯ

ಇವರು ಬೆಂಗಳೂರಿನಲ್ಲಿ ಜನಿಸಿದರು. ಬೆಂಗಳೂರಿನ ಶ್ರೀನಗರದ ಸರ್ಕಾರಿ ಮಾದರಿ ಪ್ರಥಮಿಕ ಶಾಲೆಯಲ್ಲಿ ಐದನೆಯ ತರಗತಿವರಗೆ ಓದಿದರು ನಂತರ ಕಿನ್ನಾಳದ ಸರಕಾರಿ ಕೇಂದ್ರೀಯ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಏಳನೆಯ ತರಗತಿವರಗೆ ಓದಿದರು. ಸುಂಸ್ಕೃತ ಸಂಪ್ರದಾಯ ಕುಟುಂಬದಿಂದ ಬಂದ ಇವರಿಗೆ ಶಾಸ್ತ್ರದ ಮೇಲಿನ ಶ್ರದ್ಧೆವುಂಟಾಗಿ ೧೯೯೦ರಲ್ಲಿ ಬೆಂಗಳೂರಿನ ಜಯತೀರ್ಥ ವಿದ್ಯಾಪೀಠಕ್ಕೆ ಸೇರಿದರು. ಶಾಸ್ತ್ರಾಧ್ಯಯನ ಮಾಡಿದರು. ಶ್ರೀ ಮದುತ್ತರಾಧಿಮಠಧೀಶರಾದ ಶ್ರೀ ೧೦೦೮ ಶ್ರೀ ಸತ್ಯಾತ್ಮತೀರ್ಥ ಪಾದಂಗಳವರಲ್ಲಿ ಸುಧಾದಿ ಗ್ರಂಥಗಳ ಉನ್ನತ ವೇದಾಂತಧ್ಯಯನ ಮಾಡಿದರು. ಸಾಹಿತ್ಯಾಸಕ್ತರಾದ ಇವರಿಗೆ ಬರವಣಿಗೆಯ ಚಟ. ಸಮಯ ಸಿಕ್ಕಾಗಲೆಲ್ಲ ಬರೆಯುತ್ತಿದ್ದರು. ವಿದ್ಯಾಪೀಠದಲ್ಲಿ ಓದುತ್ತಿದ್ದಾಗಲೇ ಹಲವಾರು ಗ್ರಂಥಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಲೇಖನಗಳನ್ನು ಬರೆದಿದ್ದಾರೆ. ಸಂಶೋಧನಾ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ. ಉತ್ತರಾದಿ ಮಠದ ವಿಶ್ವ ಮಧ್ವ ಪರಿಷತ್ ಸಂಶೋಧನಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೨೦೦೫ರಿಂದ ಸಂಶೋಧನಾ ಕಾರ್ಯದಲ್ಲಿ ತೊಡಗಿದ್ದಾರೆ. ಇವರು ಶ್ರೀ ಸುಧಾ ಮಾಸಪತ್ರಿಕೆಯ ಅಂಕಣಕಾರರು. ದ್ವೈತ ವೇದಾಂತ ಅಧ್ಯಯನ ಹಾಗೂ ಸಂಶೋಧನ ಪ್ರತಿಷ್ಠಾನ ಸಂಸ್ಥೆಯ ಸಹ ಸಂಶೋಧಕರಾ-ಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ದ್ವೈತ ವೇದಾಂತದಲ್ಲಿ ಅತೀವ ಆಸಕ್ತಿಯುಳ್ಳ ಇವರು ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದ ಸಂಸ್ಥೆಯಿಂದ ದ್ವೈತ ವೇದಾಂತ ಎಂ.ಎ. ಪಡೆದಿದ್ದಾರೆ. ಪ್ರಸ್ತುತ ದಿಲ್ಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ವತಿಯಿಂದ ಡಾ॥ ಆನಂದ ತಿರ್ಥಾಚಾರ್ಯ ನಾಗಸಂಪಿಗೆ ಅವರ ಮಾರ್ಗದರ್ಶದಲ್ಲಿ ಮತತ್ರಯರೀತ್ಯಾ ಬಿಂಬ - ಪ್ರತಿಬಿಂಬ ಭಾವ ಸಮೀಕ್ಷಾ ಎಂಬ ವಿಷಯ ಕುರಿತು ಸಂಶೋಧನ ಪ್ರಬಂಧ ರಚನೆಯಲ್ಲಿ ನಿರತರಾಗಿದ್ದಾರೆ. ಭಾರತೀಯತೆ, ಹಿಂದೂ ಧರ್ಮ ಸಂಸ್ಕೃತಿಗಳನ್ನು ಮರೆಯುತ್ತಿರುವ ಇಂದಿನ ಜನರಲ್ಲಿ ಸಾಮಾಜಿಕ ಪ್ರಜ್ಞೆ - ಧಾರ್ಮಿಕ ಶ್ರದ್ಧೆಯನ್ನೂ ಜಾಗೃತಗೊಳಿಸುವ ದಿಶೆಯಲ್ಲಿ ಶ್ರೀಗಳವರೊಂದಿಗೆ ಸಂಚರಿಸುತ್ತ ಅವರ ತತ್ವೋಪದೇಶ ಕಾರ್ಯದಲ್ಲಿ ನೆರವಾಗುತ್ತಾ ಶ್ರೀಗಳವರ ಉಪನ್ಯಾಸಗಳನ್ನು ಸಂಗ್ರಹಿಸಿ ಗ್ರಂಥದ ರೂಪದಲ್ಲಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಶ್ರೀ ಜಯತೀರ್ಥರ ವಾದವಲೀ ಗ್ರಂಥಕ್ಕೆ ಕನ್ನಡ ಅನುವಾದ ಮಾಡಿದ್ದಾರೆ. ಧಾರವಾಡದಲ್ಲಿ ಜರುಗಿದ ಬೃಹತ್ ಜ್ಞಾನ ಸತ್ರದಲ್ಲಿ ಸಭಿಕರು ಕೇಳಿದ ಧಾರ್ಮಿಕ ಪ್ರಶ್ನೆಗಳಿಗೆ ಶ್ರೀ ಸತ್ಯಾತ್ಮರು ನೀಡಿದ ಉತ್ತರಗಳನ್ನು ಸಂಗ್ರಹಿಸಿ ಜಿಜ್ಞಾಸೆ ಗ್ರಂಥ ಪ್ರಕಟಿಸಿದ್ದಾರೆ.

ಪ್ರಕಟಿತ ಕೃತಿಗಳು:

ಶಾಸ್ತ್ರ - ಅನುವಾದ: ವಾದವಲೀ. ಪ್ರವಚನ ಸಂ. - ಸತ್ಯಾತ್ಮ ಸುಧಾ, ದೀಮಹಿ, ವೈಷ್ಣವೆ, ಬಹುಚಿತ್ರ ಜಗತ್, ಗೋವಿಂದ, ರಾಮಯಣ ಸಂದೇಶ ಭಾಗ ೧, ೨.

ವ್ಯಕ್ತಿ ಪರಿಚಯ

ಕಾತ್ಯಾಯಿನಿ ಕುಂಜಿಬೆಟ್ಟು

೧.	ಹೆಸರು	:	ಕಾತ್ಯಾಯಿನಿ ಕುಂಜಿಬೆಟ್ಟು
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಕರಂದಾಡಿ ಗ್ರಾಮ, ೧೭–೧೧–೧೯೭೬
೪.	ಜಿಲ್ಲೆ – ರಾಜ್ಯ	:	ಉಡುಪಿ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಕನ್ನಡದಲ್ಲಿ ಸ್ನೋತಕೋತ್ತರ ಪದವಿ. ಹಿಂದೂಸ್ಥಾನಿ ಸಂಗೀತದಲ್ಲಿ ಮುಂಬೈ ಅಖಿಲ ಭಾರತ ಮಹಾ ಗಂಧರ್ವ ವಿದ್ಯಾಲಯದ ವಿಶಾರದ ಪದವಿ
೬.	ವೃತ್ತಿ	:	ಉಪನ್ಯಾಸಕಿ,
೭.	ಕೌಟುಂಬಿಕ	:	ಪತಿ: ರವಿರಾಜ ಹೆಚ್.ಪಿ, ಪುತ್ರ; ಸಂಹಿತಅಂಶು. ಆರ್.
೮.	ಸದ್ಯದ ವಿಳಾಸ	:	ಛಾಯಾನಟ್, ಬುಡ್ನಾರ್ ರಸ್ತೆ, ಕುಂಜಿಬೆಟ್ಟು, ಉಡುಪಿ ೫೭೬೧೦೩.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೮೪೫೨೪೦೩೦೯, ೯೮೪೪೫೪೮೬೧೦.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉಡುಪಿ ಜಿಲ್ಲೆ ಕಾಪು ಬಳಿಯ ಕರಂದಾಡಿ ಗ್ರಾಮದಲ್ಲಿ ಜನಿಸಿದರು. ಇವರು ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರೆ. ಹಿಂದೂಸ್ಥಾನಿ ಸಂಗೀತದಲ್ಲಿ ಮುಂಬೈ ಅಖಿಲ ಭಾರತ ಮಹಾ ಗಂಧರ್ವ ವಿದ್ಯಾಲಯದ ವಿಶಾರದ ಪದವಿ ಮಾಡಿದ್ದಾರೆ. ಪಳಕಳ ಸೀತಾರಾಮ ಭಟ್ಟರ ಸಮಗ್ರ ಕೃತಿಗಳ ಬಗ್ಗೆ ಮಹಾ ಪ್ರಬಂಧದ ರಚನೆಯಲ್ಲಿ ತೊಡಗಿದ್ದಾರೆ. ಬಾಲ್ಯದಲ್ಲಿ ಇವರ ಅಮ್ಮ ಹಾಗೂ ಅಜ್ಜಿ ಹಾಡುತ್ತಿದ್ದ ಜೋಗುಳ ಹಾಡುಗಳು, ಉದಯರಾಗಗಳು, ಶಿಶು ಗೀತೆಗಳು, ಭಕ್ತಿ ಗೀತೆಗಳು ಹಾಗೂ ಜನಪದ ಗೀತೆಗಳ ಸಂಗೀತ ಮೈ ಮರೆಸಿದರೆ, ಸಾಹಿತ್ಯ ಕಿವಿ ಚುರುಕುಗೊಳಿಸುತ್ತಿತ್ತು. ಹಾಗಾಗಿ ಆಗಿನಿಂದಲೇ ಬಾಲಕಿಯನ್ನು ಸಂಗೀತ ಸಾಹಿತ್ಯ ಕೈ ಬೀಸಿ ಕರೆಯ ತೊಡಗಿತು. ಸಚಿತ್ರ ಮಕ್ಕಳ ಕಥೆಗಳನ್ನು ಓದುವ ಉತ್ಸಾಹ ಮೂಡಿಸುತ್ತಿತ್ತು. ಬಾಲ್ಯದಿಂದಲೇ ಸಾಹಿತ್ಯದ ಬಗ್ಗೆ ಒಲವು ಹೆಚ್ಚಲು ಮಾವ ಶ್ರೀ ಗುರುರಾಜ ಮಾರ್ಪಳ್ಳಿ – ಸೋದರ ಮಾವ ಇವರಿಂದ ಸಾಹಿತ್ಯ, ಸಂಗೀತಗಳಲ್ಲಿಯ ಆಸಕ್ತಿಗೆ ಕಾರಣವಾಯಿತು. ಕಥೆ, ಕಾದಂಬರಿ ಹಾಗೂ ನಾಟಕ ಬರೆಯಲು ಪ್ರೇರಣೆ ನೀಡಿತು. ಇವರ ಮೇಲೆ ಶಿವರಾಮ ಕಾರಂತರ ಹಾಗೂ ಎಸ್. ಎಲ್. ಭೈರಪ್ಪನವರ ಕಾದಂಬರಿಗಳು ಪ್ರಭಾವ ಬೀರಿತು. ಇವರು ಕಾಲೇಜು ದಿನಗಳಲ್ಲೆ ವಿಮರ್ಶಾ ಲೇಖನಗಳನ್ನು ಬರೆಯುತ್ತಿದ್ದರು. ಅವು ಕಾಲೇಜು ಮ್ಯಾಗಜೈನ್‌ನಲ್ಲಿ ಪ್ರಕಟವಾಗುತ್ತಿದ್ದವು. ಇವರ ನಾಟಕ, ಸಂಗೀತಗಳ ಕುರಿತಾದ ವಿಮರ್ಶಾ ಲೇಖನಗಳು ಉದಯವಾಣಿಯಲ್ಲಿ ಹಾಗೂ ಇತರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು ತುಳುವಿನಲ್ಲಿಯೂ ಕಥೆ, ಕಾದಂಬರಿ ಬರೆಯುತ್ತಾರೆ. ಇವರು ೫ ವರ್ಷ ಪ್ರಾಥಮಿಕ ಶಾಲೆ, ೫ ವರ್ಷ ಪ್ರೌಢಶಾಲೆ ಹಾಗೂ ೨ ವರ್ಷ ಎಮ್.ಜಿ.ಎಮ್. ಕಾಲೇಜು ಉಡುಪಿಯಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಬರೆಹಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವರು ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿ ಕಾವ್ಯ ವಾಚನ ಮಾಡಿದ್ದಾರೆ. ಮಂಗಳೂರು ಆಕಾಶವಾಣಿಯಲ್ಲಿ ಇವರ ಕನ್ನಡ ಹಾಗೂ ತುಳು ಕಥೆಗಳು ಪ್ರಸಾರವಾಗಿವೆ. ತುಳು ಅಕಾಡೆಮಿ, ಜಿಲ್ಲಾ ಹಾಗೂ ತಾಲೂಕು ಸಾಹಿತ್ಯ ಸಮ್ಮೇಳನಗಳ ಕವಿಗೋಷ್ಠಿಯಲ್ಲಿ ಕವನ ವಾಚಿಸಿದ್ದಾರೆ. ಹಲವು ನಾಟಕಗಳಲ್ಲಿ ಹಿನ್ನೆಲೆ ಗಾಯಕಿಯಾಗಿ ಹಾಡಿದ್ದಾರೆ. ಮುಂಬೈ ನಾಟಕ ಸ್ಪರ್ಧೆಗಳಲ್ಲಿ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. ರೋಟರಿ, ಲಯನ್ಸ್ ಸಂಸ್ಥೆಗಳಲ್ಲಿ ಉಪನ್ಯಾಸ ಮಾಡಿರುವ ಇವರು ಹಲವು ಸಂಸ್ಥೆಗಳ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಮೈನಾ ಹಕ್ಕಿ ಹಾಡಿದಾಗ; **ನಾಟಕ** – ಮೂರು ನಾಟಕಗಳು.
ಕಾದಂಬರಿ – ತೊಗಲುಗೊಂಬೆ, **ತುಳು** – ಕಬರ್ಗತ್ತಲೆ.

ಲಭಿಸಿದ ಪ್ರಶಸ್ತಿಗಳು:
೧. ೨೦೦೫ – 'ಸಂದ ದಾರಿ'ಕವನಕ್ಕೆ ಕರಾವಳಿ ಲೇಖಕಿಯ ಸಂಘದ ದತ್ತಿ ನಿಧಿ ಪ್ರಶಸ್ತಿ.
೨. ೨೦೦೭ – ತುಳು ಕೃತಿಗೆ ತುಳು ಕೂಟ ಉಡುಪಿಯ ಪಣಿಯಾಡಿ ಪ್ರಶಸ್ತಿ.
೩. ೨೦೧೦ – 'ತೊಗಲು ಗೊಂಬೆ'ಕೃತಿಗೆ ಕಸಪಾ ಮಲ್ಲಿಕಾದತ್ತಿ ಪ್ರಶಸ್ತಿ.
೪. ೨೦೧೦ 'ನಿದ್ರಾ ನಗರಿ'ನಾಟಕಕ್ಕೆ ಉಡುಪಿಯ ರಥಬೀದಿ ಗೆಳೆಯರ ಬಹುಮಾನ

ವ್ಯಕ್ತಿ ಪರಿಚಯ

ಕಾವ್ಯಶ್ರೀ ಕುಳಮರ್ವ

೧. ಹೆಸರು	:	ಕಾವ್ಯಶ್ರೀ ಕುಳಮರ್ವ
೨. ಕಾವ್ಯನಾಮ	:	ಇರುವುದಿಲ್ಲ
೩. ಹುಟ್ಟಿದ ಸ್ಥಳ ದಿನಾಂಕ	:	ಕಾಸರಗೋಡು, ೨-೧೧-೧೯೯೧
೪. ಜಿಲ್ಲೆ - ರಾಜ್ಯ	:	ಕಾಸರಗೋಡು, ಕೇರಳ.
೫. ವಿದ್ಯಾಭ್ಯಾಸ	:	ಹಿಂದಿ ರಾ.ಭಾ. ಪ್ರವೀಣ.
೬. ವೃತ್ತಿ	:	ವಿದ್ಯಾರ್ಥಿನಿ
೭. ಕೌಟುಂಬಿಕ	:	-
೮. ಸದ್ಯದ ವಿಳಾಸ	:	ಕಾವ್ಯಶ್ರೀ ಕುಳಮರ್ವ, ವಿ.ಬಿ. ಕುಳಮರ್ವರ ಮಗಳು, ಶ್ರೀ ನಿಧಿ , ನಾರಯಣಮಂಗಲ, ಕುಂಬಳೆ ಅಂಚೆ-೬೭೧೩೨೧. ಕಾಸರಗೋಡು ಜಿಲ್ಲೆ, ಕೇರಳ.
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೪೯೯೮-೨೧೩೫೧೫
೧೧. ಹಸ್ತಾಕ್ಷರ (ಸಹಿ)	:	ಕಾವ್ಯಶ್ರೀ ಕುಳಮರ್ವ

ಸಾಹಿತ್ಯ ಪರಿಚಯ

ಇವರು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ ಕಾಸರಗೋಡಿನಲ್ಲಿ ಜನಿಸಿದರು. ಇವರು ಶ್ರೀ ವಿ.ಬಿ. ಕುಳಮರ್ವ ಮತ್ತು ಶ್ರೀಮತಿ ಲಲಿತಾ ಲಕ್ಷ್ಮೀ ಕುಳಮರ್ವ ದಂಪತಿಗಳ ಪುತ್ರಿ. ಪ್ರಾಥಮಿಕ ಶಿಕ್ಷಣ ಕುಂಬಳೆ. ಪ್ರೌಢ ಶಿಕ್ಷಣವೂ ಅಲ್ಲೇ. ಪದವಿ ಪೂರ್ವ ಪುತ್ತೂರು. ಮೆಡಿಕಲ್ ಕಾಲೇಜು ಮೈಸೂರಿನಲ್ಲಿ ಬಿ.ಎ.ಎಂ.ಎಸ್. ಆಯುರ್ವೇದ ದ್ವಿತೀಯ ವರ್ಷ ಓದುತ್ತಿದ್ದಾರೆ. ಶಾಲದಿನಗಳಲ್ಲಿಯೇ ಸಾಹಿತ್ಯಾಸಕ್ತರಾದ ಇವರು ಕಥೆ, ಕವನ, ಪ್ರಬಂಧ ರಚಿಸತೊಡಗಿದರು. ಕಾರವಲ್ ಪತ್ರಿಕೆಯಲ್ಲಿ ಪ್ರಕಟವಾದವು. ಸಾಹಿತ್ಯದ ಬಗ್ಗೆ ಪ್ರೋತ್ಸಾಹಿಸಿದವರು ಕಯ್ಯಾರ ಕಿಞ್ಞಣ್ಣ ರೈ, ವಿ.ಬಿ ಆರ್ತಿಕಜೆ, ಎಂ.ವಿ.ಭಟ್ ಮುಂತಾದವರು. ಇವರ ಬರೆಹಗಳು ಉತ್ತರದೇಶ, ಹೊಸದಿಗಂತ, ಉದಯವಾಣಿ ಯುಗಪುರುಷ ಹಾಗೂ ಕಾಲೇಜಿನ ವಿಶೇಷಾಂಕಗಳಲ್ಲಿ ಪ್ರಕಟವಾಗುತ್ತವೆ. ದಕ್ಷಿಣ ಕನ್ನಡ ಜಿಲ್ಲ ಮಕ್ಕಳ ಸಾಹಿತ್ಯ ಸಂಗಮದ ಸಾಹಿತ್ಯ ಸಮ್ಮೇಳನಗಳಲ್ಲಿ ೧೨ ವರ್ಷಗಳಿಂದ ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸುತ್ತಾರೆ. ಚುಟುಕ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾರೆ. ಹಲವು ಕಮ್ಮಟ ಹಾಗೂ ಬರೆಹ ಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಎಂಟನೆಯ ತರಗತಿಯಲ್ಲಿ ಓದುವಾಗಲೇ ಯುಗ ಪುರುಷ ಸಾಹಿತ್ಯ ಬಳಗದ ಮಕ್ಕಳ ಹಬ್ಬ ಸಮ್ಮೇಳನದ ಅಧ್ಯಕ್ಷೆಯಾಗಿದ್ದರು. ಎಸ್.ಎಸ್.ಎಲ್.ಸಿ.ಯಲ್ಲಿ ನೂರಕ್ಕೆ ನೂರು ಅಂಕ ಪಡೆದಾಗ ಮಂಗಳೂರಿನ ಸವಿತಾ ಮಿತ್ರ ಬಳಗ ಡಾ, ರಾಜಕುಮಾರ್ ಕನ್ನಡ ಕಂದ ಪ್ರಶಸ್ತಿ ಇತ್ತು ಗೌರವಿಸಿದ್ದಾರೆ. ಇವರು ೧೪ನೇ ವಯಸ್ಸಿಗೇ ಹಿಂದಿ ರಾಷ್ಟ್ರ ಭಾಷಾ ಪ್ರವೀಣ ಪದವೀಧರೆಯಾಗಿದ್ದಾರೆ. ಇವರ ಅಸಾಧಾರಣ ಪ್ರತಿಭೆಯನ್ನು ಗುರುತಿಸಿ ಕಿನ್ನಗೋಳಿ, ಕಾಸರಗೋಡು ಹಾಗೂ ಕರ್ನಾಟಕ ಕೇರಳ ರಾಜ್ಯಗಳ ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿವೆ. ಇವರು ಇಪ್ಪತ್ತಕ್ಕೂ ಹೆಚ್ಚು ಕವಿ ಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಪರಿಸರ ಪಲ್ಲವಿ, ಚೆಲುವಿನ ಹೂ ಮಾಲೆ

ಲಭಿಸಿರುವ ಪ್ರಶಸ್ತಿಗಳು:

೧. ಬೆಂಗಳೂರಿನ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ.

೨. ಶ್ರೀ ಅಖಿಲ ಹವ್ಯಕ ಪ್ರತಿಭಾ ಪುರಸ್ಕಾರ – ಮೂರು ಬಾರಿ

೩. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸಮಿತಿ ಭಾವಗೀತೆ ಗಾಯನ ಸ್ಪರ್ಧೆಯಲ್ಲಿ ಬಹುಮಾನ.

೪. ಡಾ|| ಶಿವರಾಮ ಕಾರಂತರ ಜನ್ಮ ಶತಾಬ್ದಿ ಅಂಗವಾಗಿ ನಡೆದ ಕಾವ್ಯರಚನಾ ಸ್ಪರ್ಧೆಯಲ್ಲಿ ಬಹುಮಾನ.

ವ್ಯಕ್ತಿ ಪರಿಚಯ



ಕಾವೇರಮ್ಮ ಬಿ.ಆರ್.

೧.	ಹೆಸರು	:	ಬಿ.ಆರ್. ಕಾವೇರಮ್ಮ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಕದ್ನೂರು – ೧೪–೧೦–೧೯೨೧
೪.	ಜಿಲ್ಲೆ – ರಾಜ್ಯ	:	ಕೊಡಗು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ (ಆನರ್ಸ್), ಎಂ.ಎ, ಬಿ.ಟಿ
೬.	ವೃತ್ತಿ	:	ಉಪಾಧ್ಯಾಯನಿ
೭.	ಕೌಟುಂಬಿಕ	:	ಅವಿವಾಹಿತೆ
೮.	ಸದ್ಯದ ವಿಳಾಸ	:	ಎ ೯, ರೂಬಿ ಬ್ಲಾಕ್, ಸಂಕಲ್ಪ ಮಣಿ ಮಂದಿರ, ದಿವಾನರ ರಸ್ತೆ, ಲಕ್ಷ್ಮೀಪುರ, ಮೈಸೂರು – ೫೭೦೦೦೪
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೨೩೩೦೩೪೧
೧೧.	ಹಸ್ತಾಕ್ಷರ (ಸಹಿ)	:	ಬಿ. ಆರ್. ಕಾವೇರಮ್ಮ

ಸಾಹಿತ್ಯ ಪರಿಚಯ

ಇವರು ಕೊಡಗು ಜಿಲ್ಲೆಯ ವಿರಾಜಪೇಟೆ ಸಮೀಪದ ಕದ್ನೂರಲ್ಲಿ ಜನಿಸಿದರು. ಇವರು ಬಿ.ಎಸ್. ರಘುನಾಥಯ್ಯ ಮತ್ತು ಶ್ರೀಮತಿ ಗೌರಮ್ಮ ದಂಪತಿಗಳ ಪುತ್ರಿ. ತಂದೆ ಕೊಡಗಿನಲ್ಲಿದ್ದ ಬ್ರಿಟಿಷರ ಕೈ ಕೆಳಗೆ ನೌಕರಿ ಮಾಡುತ್ತಿದ್ದರು. ನಂತರ ಬಿಟ್ಟು ಕಾಫಿ ಪ್ಲಾಂಟರ್ ಬಳಿ ಹೋದರು. ಸೋಮಾವಾರ ಪೇಟೆಯಲ್ಲಿ ಪ್ರಾಥಮಿಕ ಶಿಕ್ಷಣ. ಶನಿವಾರ ಸಂತೆಯಲ್ಲಿ ನಾಲ್ಕನೇ ತರಗತಿ ಓದು. ಕೊಡ್ಲಿ ಪೇಟೆಯಲ್ಲಿ ಮುಂದುವರಿಯಿತು. ೧೯೩೬ರಲ್ಲಿ ಕುಟುಂಬ ಮೈಸೂರಿಗೆ ಬಂತು. ಮಹಾರಾಣಿ ಹೈಸ್ಕೂಲಿನಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ. ಸಾಹಿತ್ಯದ ಒಲವಿದ್ದ ಇವರು ಆಗಲೇ ಬರೆಯುತ್ತಿದ್ದ ಪ್ರಬಂಧಗಳು ಉಪಧ್ಯಾಯರ ಮೆಚ್ಚುಗೆಗೆ ಪಾತ್ರವಾಗಿತ್ತು. ಕನ್ನಡದಲ್ಲಿ ಪ್ರಥಮ ಸ್ಥಾನ. ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ. ೧೯೩೯ರಲ್ಲಿ ಮಹಾರಾಣಿ ಇಂಟರ್ ಮೀಡಿಯೇಟ್ ಕಾಲೇಜಿಗೆ ಸೇರ್ಪಡೇ. ತಿ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಕುವೆಂಪು ಇತ್ಯಾದಿ ಕನ್ನಡಕ್ಕೂ ಎಸ್.ವಿ. ರಂಗಣ್ಣ, ಕೆ. ಶ್ಯಾಮರಾಯರು ಇಂಗ್ಲೀಷ್ ಪಾಠ ಹೇಳಲು ಬರುತ್ತಿದ್ದರು. ಇವರು ಬಿ.ಎ. ಆನರ್ಸ್‌ಗೆ ಬಂದಾಗ ಇತಿಹಾಸ ಪಾಠ ಹೇಳಲು ಡಾ|| ಎಂ.ಎಚ್. ಕೃಷ್ಣ ಬರುತ್ತಿದ್ದರು. ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ಶುರುವಾಯಿತು. ಇವರು ಅದರಲ್ಲಿ ಭಾಗವಸಿದರು. ೧೯೪೪ರಲ್ಲಿ ಪದವಿಗಳಿಸಿದರು. ಖಾಸಗಿ ಶಾಲೆಯೊಂದರಲ್ಲಿ ನೌಕರಿಗೆ ಸೇರಿದರು. ೧೯೪೫ರಲ್ಲಿ ಮಹಾರಾಣಿ ಹೈಸ್ಕೂಲಿನಲ್ಲಿ ಉಪಾಧ್ಯಾಯನಿಯಾದರು. ಬೇರೆ, ಬೇರೆ ಊರುಗಳಲ್ಲಿ ಕೆಲಸ ಮಾಡಿ ಬಡ್ತಿ ಪಡೆದು ಮತ್ತೆ ಮೈಸೂರಿಗೆ ಬಂದು ೧೯೭೬ರಲ್ಲಿ ನಿವೃತ್ತರಾದರು. ಬಾಲ್ಯದಲ್ಲೇ ಇವರ ಮೇಲೆ ಪ್ರಭಾವ ಬೀರಿದ ಪ್ರಜಾಮತ ಕೈಗೆ ಸಿಕ್ಕ ಪುಸ್ತಕಗಳನ್ನೆಲ್ಲ ಓದುವ ಹವ್ಯಾಸ. ಗಾಂಧೀಜಿ ಪ್ರಭಾವದಿಂದ ದೇಶ ಪ್ರೇಮ ಬೆಳೆಯಿತು. ಕ್ರೀಡಾ ಪ್ರಿಯೆ. ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿದ್ದಾರೆ. ೧೯೩೯ರಲ್ಲೇ ಇವರು ಕವನ ರಚಿಸಿದರು. 'ಸೂರ್ಯಾಸ್ತ'ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಯಿತು. ಸುಮಾರು ೨೫ಕ್ಕೂ ಹೆಚ್ಚು ಕವನ, ಕಥೆ ಲೇಖನಗಳನ್ನು ಬರೆದಿದ್ದಾರೆ. ಹಲವಾರು ಭಾಷಣಗಳನ್ನು ಮಾಡಿದ್ದಾರೆ. ಸಂಗೀತ ಪ್ರಿಯರು. ೧೯೯೯ರಲ್ಲಿ ಆದ ಅಪಘಾತದಲ್ಲಿ ಆಘಾತಗೊಂಡರು ಕ್ಯಾನ್ಸರ್ ರೋಗ ಪೀಡಿತರಾದರು. 'ಶಸ್ತ್ರ ಚಿಕಿತ್ಸೆ'ಯಲ್ಲಿ ಒಂದು ಕಾಲು ತೆಗೆದರು. ೮೯ ವಯೋಮಾನದ ಅವಿವಾಹಿತ ಹೆಣ್ಣು ಹೆಂಗಸು ಯಾರ ಆಶ್ರಯವಿಲ್ಲದಿದ್ದರೂ ಒಂಟಿ ಕಾಲಿನ ಒಂಟಿ ಜೀವಿಯಾಗಿ ಕಾಲಾಯಾಪನೆ ಮಾಡುತ್ತಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ – ತೋಚಿದ್ದು ಗೀಚಿದ್ದು. ಕಥಾ ಸಂ – ಏಳು ಬೀಳುಗಳ ಪಯಾಣ.

ಲಭಿಸಿರುವ ಪ್ರಶಸ್ತಿಗಳು:

೧. ಆಕಾಶವಾಣಿ ಮೈಸೂರು ಇವರಿಂದ ಹಿರಿಯ ನಾಗರಿಕರಿಗೆ ಸನ್ಮಾನ.
೨. ಮಹಾರಾಣಿ ಹೈಸ್ಕೂಲಿನ ಶತಮಾನೋತ್ಸವದಲ್ಲಿ ಸನ್ಮಾನ.
೩. ಉಪಧ್ಯಾಯರ ಶಿಕ್ಷಣ ಕಾಲೇಜಿನ ವಜ್ರ ಮಹೋತ್ಸವದಲ್ಲಿ ಸನ್ಮಾನ.
೪. ೨೦೦೮ – ಸ್ವಾತಂತ್ರ್ಯ ಸಮರ ಸ್ಮಾರಕ ರೈಲು ಮೈಸೂರಿಗೆ ಬಂದಾಗ ಸನ್ಮಾನ.

ವ್ಯಕ್ತಿ ಪರಿಚಯ

ಕಾಶೀನಾಥ ರೆಡ್ಡಿ. ಎಚ್.

೧.	ಹೆಸರು	:	ಕಾಶೀನಾಥ ರೆಡ್ಡಿ. ಎಚ್.
೨.	ಕಾವ್ಯನಾಮ	:	'ಸರ್ವಜ್ಞಸುತ'
೩.	ಹುಟ್ಟಿದ ಸ್ಥಳ ದಿನಾಂಕ	:	ಹಣಕುಣಿ, ಹುಮನಾಬಾದ ತಾ. ೧೫–೧–೪೭
೪.	ಜಿಲ್ಲೆ – ರಾಜ್ಯ	:	ಬೀದರ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ. ಕನ್ನಡ, ಎಂ.ಎ. ಇತಿಹಾಸ, ಎಂ.ಎ. ಸ.ಸಂ. ಮತ್ತು ಪತ್ರಿಕೋದ್ಯಮ, ಬಿ.ಇಡಿ.
೬.	ವೃತ್ತಿ	:	ನಿವೃತ್ತ ಉಪನ್ಯಾಸಕ, ಸದ್ಯ ಖಾಸಗಿ ಕಾಲೇಜಿನ ಪ್ರಾಚಾರ್ಯ.
೭.	ಕೌಟುಂಬಿಕ	:	ಪತ್ನಿ; ಈಶ್ವರಮ್ಮ. ಪುತ್ರ; ನಾಗಾರ್ಜುನ ರೆಡ್ಡಿ. ಪುತ್ರಿಯರು; ಪ್ರತಿಭಾ ದತ್ತಾ ರೆಡ್ಡಿ ಆರಾದೆ, ಪ್ರಮಿಳಾ ಶ್ರಾವಣಕುಮಾರ ಲಾಧಾ, ಪರಂ ಜ್ಯೋತಿ ರಾಜೇಂದ್ರರೆಡ್ಡಿ.
೮.	ಸದ್ಯದ ವಿಳಾಸ	:	೨೧/೮೮, ವಾಂಜಿರಾ ಬಡಾವಣೆ, ನೀರಿನ ಟಾಂಕಿ ಹತ್ತಿರ, ಕಲ್ಲೂರ ರಸ್ತೆ, ಹುಮನಾಬಾದ, ಬೀದರ ಜಿಲ್ಲೆ–೫೮೫೩೩೦
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೯೭೨೬೭೯೩೧೭
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬೀದರ ಜಿಲ್ಲೆ ಹುಮನಾಬಾದ್ ತಾಲೂಕು ಹಣಕುಣಿಯಲ್ಲಿ ಜನಿಸಿದರು. ಹುಟ್ಟೂರಿನಲ್ಲೇ ನಾಲ್ಕನೇ ತರಗತಿಯವರಗಿನ ಪ್ರಾಥಮಿಕ ಶಿಕ್ಷಣ. ಐದರಿಂದ ಎಸ್.ಎಸ್.ಎಲ್.ಸಿ ವರಗೆ ಹುಮನಾಬಾದ್. ಬಿ.ಎ. ವರಗೆ ಬಸವ ಕಲ್ಯಾಣ. ಮಹಾರಾಷ್ಟ್ರ ಶಿವಾಜಿ ವಿಶ್ವವಿವಿದ್ಯಾನಿಲಯದಿಂದ ಕನ್ನಡ ಎಂ.ಎ. ಮೈಸೂರು ವಿಶ್ವವಿವಿದ್ಯಾನಿಲಯದಿಂದ ಇತಿಹಾಸ ಎಂ.ಎ. ಇವರು ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ಎಂ.ಎ., ಬಿ.ಎಡ್. ಪದವಿ ಕೂಡ ಪಡೆದಿದ್ದಾರೆ. ೧೯೬೯ರಲ್ಲಿ ಶಾಲ ಶಿಕ್ಷಕರಾಗಿ ವೃತ್ತಿ ಜೀವನ ಆರಂಭ. ಉಪನ್ಯಾಸಕರಾಗಿ ೨೦೦೫ರಲ್ಲಿ ನಿವೃತ್ತಿ. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ೧೯೭೦ರಲ್ಲೇ ಜನಪದ ಸಾಹಿತ್ಯ ಹಾಗೂ ಶಾಸನ ಸಂಗ್ರಹದಲ್ಲಿ ತೊಡಗಿದರು. ಹಳ್ಳಿಯಿಂದ ಹಳ್ಳಿಗೆ ಸುತ್ತಾಡಿ ಹಂತಿ ಹಾಡುಗಳು, ರಿವಾಯತ್ ಹಾಡುಗಳು, ಗಾದೆಗಳು, ಒಗಟುಗಳು, ಒಡಪುಗಳು, ಖುಲಾವಿ ಹಾಡುಗಳು, ಸಂಪ್ರದಾಯದ ಹಾಡುಗಳು, ತತ್ವಪದಗಳನ್ನು ಸಂಗ್ರಹಿಸಿದರು. ಜನಪದ ಕವಿಗಳ ಮಾಹಿತಿಯನ್ನೂ ಸಂಗ್ರಹಿಸಿ ಪ್ರಕಟಿಸಿದರು. ೧೯೮೭ರಲ್ಲಿ ಇವರು ಜಾನಪದ ಮತ್ತು ಯಕ್ಷಗಾನ ಅಕೆಡಾಮಿಯ ಸದಸ್ಯರಾಗಿದ್ದರು. ಇವರ ಪ್ರಥಮ ಕೃತಿ ಭೂ ಕೈಲಾಸ ಮತ್ತು ಚಂದ್ರ ಶಿರೋಮಣಿ ಬಯಲಾಟ ಗ್ರಂಥವು ಗುಲ್ಬರ್ಗಾ ಹಾಗೂ ಶಿವಾಜಿ ವಿಶ್ವ ವಿದ್ಯಾನಿಲಯ ಎಂ.ಎ. ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವಾಯಿತು. ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಜಾನಪದ ಸಂಪುಟಗಳಲ್ಲಿ ಆಚರಣೀಯ ಹಾಡುಗಳ ಸಂಗ್ರಹ ಸೇರ್ಪಡೆ ಆಗಿದೆ. ಇವರ ಹಲವಾರು ಲೇಖನಗಳು ಪ್ರಜಾವಾಣಿ, ಕನ್ನಡ ಪ್ರಭ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು ಕವನ, ಸ್ಥಳ ಚರಿತ್ರೆ, , ಜೀವನ ಚರಿತ್ರೆ, ವ್ಯಕ್ತಿ ಚಿತ್ರಗಳ ಕುರಿತು ಬರೆದಿದ್ದಾರೆ. ಇವರು ರಚಿಸಿರುವ ಗ್ರಂಥಗಳ ಮೇಲೆ ಅನೇಕ ವಿದ್ಯಾರ್ಥಿಗಳು ಎಂ.ಫಿಲ್. ಹಾಗೂ ಪಿ.ಹೆ.ಚ್.ಡಿ. ಮಾಡಿದ್ದಾರೆ. ಇವರಲ್ಲಿ ಸುಮಾರು ೫೦೦೦ ಗ್ರಂಥಗಳ ಸಂಗ್ರಹವಿದೆ. ಇವರ ಮೇಲೆ ಮಾಸ್ತಿ, ಕುವೆಂಪು, ಭೈರಪ್ಪ ಪ್ರಭಾವ ಬೀರಿದ್ದಾರೆ.''ಕಲ್ಯಾಣ ಕಲಾಶ್ರೀ ಅಭಿನಂದನಾ ಗ್ರಂಥ ಸಂಪಾದಕರು. ಇವರು ಹುಮನಾಬಾದ್ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು.

ಪ್ರಕಟಿತ ಕೃತಿಗಳು:

ಜಾನಪದ – ಭೂ ಕೈಲಾಸ ಮತ್ತು ಚಂದ್ರಶಿರೋಮಣಿ, ನಿಜಲಿಂಗಪ್ಪ ಭದ್ರೇಶ್ವರ ಅನುಭವ ಪದಗಳು. ಶಿಲ್ಲಪ್ಪ ಕವಿಯ ಬದುಕು ಬರೆಹ. ಮರಕುಂದಿ ಬಸವಣಪ್ಪನ ಭಜನೆಗಳು, ಕಲ್ಯಾಣ ನಾಡಿನ ಪರಂಜ್ಯೋತಿ ಆಚರಣೆಯ ಹಾಡುಗಳು.

ಚರಿತ್ರೆ – ಶ್ರೀ ವೀರಭದ್ರೇಶ್ವರ ಚರಿತ್ರೆ, ಕಾಯಕವೀರ ಮೋಳಿಗೆಯ ಮಾರಯ್ಯ.

ಕವನ ಸ.ಂ – ಕೋರಿಕೆ.

ಲೇ. ನ ಸಂ. – ಸಾಹಿತ್ಯ ಸುಧಾ, ಸಾಹಿತ್ಯ ಸುರಭಿ.

ಲಭಿಸಿರುವ ಪ್ರಶಸ್ತಿಗಳು:

೧. ೧೯೭೪ – ಸರ್ವಜ್ಞನ ವಚನಗಳ ಕಂಠಪಾಠ ಸ್ಪರ್ಧೆಯಲ್ಲಿ ಬಹುಮಾನ.

೨. ಜಿಲ್ಲಾ ಆದರ್ಶ ಶಿಕ್ಷಕ. ೩. ಆದರ್ಶ ಉಪನ್ಯಾಸಕ ಪ್ರಶಸ್ತಿ.

೪. ಕನ್ನಡ ರಾಜ್ಯೋತ್ಸವ ಪ್ರಶಸ್ತಿ. ೫. ಸುವರ್ಣ ಕನ್ನಡಿಗ ಪ್ರಶಸ್ತಿ. ೬. ಕಲ್ಯಾಣ ರತ್ನ ಪ್ರಶಸ್ತಿ.

ವ್ಯಕ್ತಿ ಪರಿಚಯ

ಕುತ್ಯಾಳ ನಾಗಪ್ಪ ಗೌಡ

೧. ಹೆಸರು : ಕುತ್ಯಾಳ ನಾಗಪ್ಪ ಗೌಡ

೨. ಕಾವ್ಯನಾಮ : ಕಿರಣ

೩. ಹುಟ್ಟಿದ ಸ್ಥಳ ದಿನಾಂಕ : ಕನಕಮಜಲು, ೨೦-೪-೧೯೪೦.

೪. ಜಿಲ್ಲೆ - ರಾಜ್ಯ : ದಕ್ಷಿಣ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ.

೬. ವೃತ್ತಿ : ಹೆಡ್ ಪೋಸ್ಟ್ ಮಾಸ್ಟರ್ (ನಿವೃತ್ತ)

೭. ಕೌಟುಂಬಿಕ : ಪತ್ನಿ; ಮನೋರಮ. ಪುತ್ರಿ; ಸುಮನಾ.
ಪುತ್ರರು; ಶಿವಪ್ರಸಾದ, ಗುರುಪ್ರಸಾದ

೮. ಸದ್ಯದ ವಿಳಾಸ : ಕಿರಣ ಕುಟೀರ, ಸುಳ್ಯ, ದ.ಕ.-೫೭೪೨೩೯

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೨೫೭-೨೩೦೧೨೧

೧೧. ಹಸ್ತಾಕ್ಷರ (ಸಹಿ) : ನಾಗಪ್ಪ ಗೌಡ.

ಸಾಹಿತ್ಯ ಪರಿಚಯ

ಇವರು ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲೂಕು ಕನಕಮಜಲು ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ. ಪ್ರೌಢ ಶಿಕ್ಷಣ ಸುಳ್ಯದ ಬೋರ್ಡ್ ಹೈ ಸ್ಕೂಲಿನಲ್ಲಿ. ಪ್ರೌಢ ಶಿಕ್ಷಣ ಉಡುಪಿಯ ಪೂರ್ಣಪ್ರಜ್ಞ ಸಂಜೆ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಪಿ.ಯು.ಸಿ.ನಲ್ಲಿ ಐದನೆಯ ರ್‍ಯಾಂಕ್. ಮೈಸೂರಿನ ವಿಶ್ವವಿದ್ಯಾಲಯದ ಅಂಚೆ ಮತ್ತು ತೆರಪಿನ ಶಿಕ್ಷಣದಿಂದ ಸ್ನಾತಕೋತ್ತರ ಪದವಿ. ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗಲೇ ಸಾಹಿತ್ಯ ರಚನೆಗೆ ತೊಡಗಿ ಬಯಕೆ ಕವಿತೆ ರಚಿಸಿದರು. ಇದು ಮಾಸ್ತಿಯವರ ಜೀವನಾ ಪತ್ರಿಕೆಯಲ್ಲಿ ಪ್ರಕಟವಾಯಿತು. ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಕುವೆಂಪು ಕವಿತೆಗಳಿಂದ ಪ್ರಾಭಾವಿತರಾದರು. ನಂತರ ಇವರ ಬರೆಹಗಳು ಗೋಕುಲ, ಪ್ರಜಾವಾಣಿ, ಸುಧಾ, ಮಯೂರ, ತರಂಗ, ಉದಯವಾಣಿ. ತುಷಾರ, ಕರ್ಮವೀರ, ವಿಜಯ ಕರ್ನಾಟಕ, ಕನ್ನಡ ಪ್ರಭ ಮುಂತಾದ ಜನಪ್ರಿಯ ಪತ್ರಿಕೆಗಳು ಹಾಗೂ ಕವಿತಾ, ಲಹರಿ, ಸಂಕ್ರಮಣ, ಸಂಕಲನ ಮುಂತಾದ ಸಾಹಿತ್ಯಕ ಪತ್ರಿಕೆಗಳಲ್ಲೂ ಪ್ರಕಟವಾಯಿತು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಸಂಕಲನಗಳಲ್ಲಿ ಇವರ ಕವಿತೆಗಳು ಪ್ರಕಟವಾಗಿವೆ. ಸುವರ್ಣ ಕರ್ನಾಟಕ ಸಂದರ್ಭದಲ್ಲಿ ಪ್ರಕಟವಾದ ಸುವರ್ಣ ಸಂಪುಟದಲ್ಲಿ ಇವರ ಕವಿತೆ ಪ್ರಕಟವಾಗಿದೆ. ನುಡಿಯಾಸೆಗೆ, ಮುಕ್ತ ಹಂಸ, ಶೀಟೂರು, ಆವರಶ್ರೀ, ಅನನ್ಯ ಮುಂತಾದ ಅಭಿನಂದನಾ ಗ್ರಂಥಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. ಹೊಸಜನಾಂಗದ ಕಾವ್ಯ, ದಕ್ಷಿಣ ಕನ್ನಡ ಕಾವ್ಯ, ಕರಾವಳಿ ಕಾವ್ಯ ಮುಂತಾದ ಸಂಕಲನಗಳಲ್ಲಿಯೂ ಇವರ ಕವನಗಳು ಸೇರಿವೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸೇರಿದಂತೆ ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿ ಕಾವ್ಯ ವಾಚನ ಮಾಡಿದ್ದಾರೆ. ಮಂಗಳೂರು ಆಕಾಶವಾಣಿಯಲ್ಲಿ ಇವರ ಕವನ, ಚಿಂತನಗಳು ಪ್ರಸಾರವಾಗಿವೆ. ಪಠ್ಯ ಪುಸ್ತಕಗಳಲ್ಲಿ ಇವರ ಕವನ ಆಯ್ಕೆಯಾಗಿದೆ. ಇವರ ತುಳು ಕವಿತೆಗಳು ತುಳು ವಿಶ್ವ ಸಮ್ಮೇಳನದ ಸಂದರ್ಭದಲ್ಲಿ ಹೊರತರಲಾದ ಸಂಪುಟಗಳಲ್ಲಿ ಸ್ಥಾನ ಪಡೆದಿದೆ. ಆಂಧ್ರ ಪ್ರದೇಶ ದ್ರಾವಿಡ ವಿಶ್ವವಿದ್ಯಾಲಯದವರು ಪ್ರಕಟಿಸಿರುವ ಇಂಚಿಪೂದ ತುಳುಕಬಿತಲು ಸಂಕಲನದಲ್ಲಿ ಇವರ ಕವಿತೆ ಸೇರಿದೆ. ಗೋಪಾಲ ಕೃಷ್ಣ ಅಡಿಗರ ನೇತೃತ್ವದ ರೈಟರ್ಸ್ ಕ್ಲಬ್ ಸದಸ್ಯರಾಗಿದ್ದರು. ಸುಳ್ಯದ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಪ್ರಕಟಿತ ಕೃತಿಗಳು:

ಕಾವ್ಯ – ಒಳದನಿ, ಪರಸ್ಪರ, ಲಬ್ಧ, ದ್ವೀಪದಲ್ಲಿ ದ್ವಿಪದಿ, ಏಕಾಂಗಿಯ ಅನೇಕತೆ.

ಲೇ. ನ ಸಂ. – ನೋಟ. **ಸಂಪಾದಿತ** – ಸುವರ್ಣ ಸಂಪಿಗೆ, ನಡೆದ ದಾರಿಯ ನೆನಪುಗಳು.

ಇತರೆ – ಅಟ್ಟದಲ್ಲಿ ಒಂದು ರಾತ್ರಿ.

ಲಭಿಸಿರುವ ಪ್ರಶಸ್ತಿಗಳು:

೧. ಸುಳ್ಯದಲ್ಲಿ ಜರುಗಿದ ೭ನೇ ಜಿಲ್ಲಾ ಸಾಹಿತ ಸಮ್ಮೇಳನದಲ್ಲಿ ಸನ್ಮಾನ.

೨. ಜಿಲ್ಲಾ ಸಾಹಿತ್ಯ ಪರಿಷತ್ತಿನಿಂದ ಉತ್ತಮ ಅಂಚೆ ಪಾಲಕ ಪ್ರಶಸ್ತಿ.

೩. ತಾಲೂಕಿನ ರಾಜ್ಯೋತ್ಸವದಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ

ಕುಲಕರ್ಣಿ. ಎಚ್.ಎಸ್.

೧. ಹೆಸರು : ಎಚ್.ಎಸ್. ಕುಲಕರ್ಣಿ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಕಲಾದಗಿ, ೦೯-೧೧-೧೯೩೦.

೪. ಜಿಲ್ಲೆ - ರಾಜ್ಯ : ಬಾಗಲಕೋಟೆ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎ. (ಆನರ್ಸ್).

೬. ವೃತ್ತಿ : ನಿವೃತ್ತ, ಸೆಂಟ್ರೆಲ್ ಗವರ್ನಮೆಂಟ್ ಕ್ಲಾಸ್-೧ ಆಫೀಸರ.

೭. ಕೌಟುಂಬಿಕ : ಪತ್ನಿ; ಶ್ರೀಮತಿ ಲಲಿತಾ ಹಣಮಂತ ಕುಲಕರ್ಣಿ.
ಪುತ್ರರು; ಪ್ರಶಾಂತ, ಪ್ರಬೋಧ,
ಪುತ್ರಿಯರು; ಸರಿತಾ, ಅನಿತಾ

೮. ಸದ್ಯದ ವಿಳಾಸ : 'Narmada Nivasa', B-6-A, DDA MIG Flat, Vatika Apartment, Mayapori, New Delhi-110064

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೧೧-೨೫೧೩೮೭೯೫, ೯೯೫೮೪೫೭೭೬೯

೧೧. ಹಸ್ತಾಕ್ಷರ (ಸಹಿ) :



ಸಾಹಿತ್ಯ ಪರಿಚಯ

ಇವರು ಬಾಗಲಕೋಟೆ ಜಿಲ್ಲಾ ಕಲಾದಗಿಯಲ್ಲಿ ಜನಿಸಿದರು. ಇವರು ಬಿಜಾಪುರದ ಶ್ರೀ ಶಂಕರರಾವ್ ಕುಲಕರ್ಣಿ ಅವರ ಪುತ್ರ. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಬಿ.ಎ. (ಆನರ್ಸ್) ಪದವೀಧರ. ೧೯೫೩ರಲ್ಲಿ ಸರ್ಕಾರಿ ನೌಕರರಾಗಿ ವೃತ್ತಿ ಜೀವನ ಆರಂಭ. ೧೯೯೮ರ ರಲ್ಲಿ ಕೇಂದ್ರ ಸರ್ಕಾರದ ಕ್ಲಾಸ್ ಒನ್ ಅಧಿಕಾರಿಗಳಾಗಿ ನಿವೃತ್ತಿ. ಇವರು ವೃತ್ತಿಯಿಂದ ಸರ್ಕಾರಿ ನೌಕರರಾದ ಇವರು ಪ್ರವೃತ್ತಿಯಿಂದ ಸಾಹಿತಿಗಳಾದರೂ ಹವ್ಯಾಸಿ ರಂಗಕರ್ಮಿ. ಒಂದು ಕವನ ಸಂಕಲನ, ನಾಲ್ಕು ಸಾಮಾಜಿಕ ನಾಟಕಗಳನ್ನು ಪ್ರಕಟಿಸಿರುವುದಲ್ಲದೆ ಎರಡು ನಾಟಕಗಳನ್ನು ಅನುವಾದ ಮಾಡಿದ್ದಾರೆ. ೧೯೫೬ರಿಂದ ರಂಭೂಮಿಯಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ. ಇವರು ಕಟ್ಟಿದ ಒಂದು ಕನ್ನಡ ತಂಡ ೧೯೫೬ ರಿಂದ ೧೯೬೨ ರವರಗೆ ಪುರಂದರದಾಸ, ಬಹದ್ದೂರಗಂಡ ಮುಂತಾದ ಐದು ನಾಟಕಗಳನ್ನು ನಿರ್ದೇಶಿಸಿದ್ದಾರೆ. ೧೯೬೪ ರಿಂದ ೧೯೯೨ ಅವಧಿಯಲ್ಲಿ 'ಕನ್ನಡ ಭಾರತಿ ಹೊಸ ದೆಹಲಿ'ಕನ್ನಡ ಸಾಂಸ್ಕೃತಿಕ ಸಂಘದ ಸದಸ್ಯರಾಗಿ ಇವರು ಕುರಿ, ಮ್ಯಾಕ ಬತ್ ಮುಂತಾದ ಹನ್ನೊಂದು ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. ಇವರು ದೆಹಲಿಯಲ್ಲಿ ಕನ್ನಡಿಗರು ವಾಸಿಸುವ ಕಾಲೋನಿಗಳಿಗೆ ಹೋಗಿ ಅವರಿಗೆ ನಾಟಕ ರಂಗದಲ್ಲಿ ಆಸಕ್ತಿವುಂಟ ಮಾಡಿದ್ದಾರೆ. ದೆಹಲಿ ಕರ್ನಾಟಕ ಸಂಘ ಆಯೋಜಿಸಿವ ವಾರ್ಷಿಕ ಏಕಾಂಕ ನಾಟಕ ಸ್ಪರ್ಧೆಗಳಲ್ಲಿ ನಾಟಕಗಳನ್ನು ಪ್ರಸ್ತುತ ಪಡಿಸುತ್ತ ಬಂದಿದ್ದಾರೆ. ಇವರು ನವರಸ, ಕತ್ತಲ ರಾತ್ರಿ, ಹರಕೆಯ ಕುರಿ ಮುಂತಾದ ಹದಿನೆಂಟು ನಾಟಕಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ. ೧೯೫೭ ರಿಂದ ೧೯೬೩ರ ಈ ಅವಧಿಯಲ್ಲಿ ಕೆಲವು ಮರಾಠಿ ನಾಟಕಗಳನ್ನು ನಿರ್ದೇಶಿಸಿದ್ದಾರೆ ಹಾಗೂ ಅಭಿನಯಿಸಿದ್ದಾರೆ. ೧೯೭೫ರಿಂದ ಇವರು ಹಿಂದೀ ನಾಟಕಗಳಲ್ಲೂ ಭಾಗವಹಿಸಿದ್ದಾರೆ. ನೂರಾರು ಕನ್ನಡ ರೇಡಿಯೋ ನಾಟಕಗಳಲ್ಲಿ ಭಾಗವಹಿಸಿದ್ದಾರೆ. ಇವರು ಕನ್ನಡ ರಂಗಭಾಮಿಯ ನಟ, ನಿರ್ದೇಶಕ, ಸಂಘಟಕರಾಗಿ ೪೦ ವರ್ಷಗಳಿಂದ 'ದುಡಿಯುತ್ತಾ' ಬಂದಿದ್ದಾರೆ. ಕೆಲವು ಟೆಲಿ ಫಿಲ್ಮ ಹಾಗೂ ಸೀರಿಯಲ್‌ಗಳಲ್ಲೂ ಭಾಗವಹಿಸಿದ್ದಾರೆ. ಇವರ ಪ್ರತಿಭೆಯನ್ನು ಗುರುತಿಸಿ ಹತ್ತಾರು ಪ್ರಶಸ್ತಿ, ಗೌರವಗಳು ಹುಡುಕಿಕೊಂಡು ಬಂದಿವೆ.

ಪ್ರಕಟಿತ ಕೃತಿಗಳು:
ಕವನ ಸಂ. – ಬಾಳಿನ ತಿರುಳು.
ನಾಟಕ – ಯಮನ ಸಾವು, ಸಿಡಲಿನ ಬಡಿತ, ಏನಿದೆ ಈ ಮುದುಕನ ಗುಟ್ಟು, ಸಾವಿತ್ರಿ.
ಅನುವಾದ – ಪಾನಂ ಪಿಳ್ಳೆ ಪಾಟೀಲರು (ಇಂಗ್ಲೀಷ್), ಹುಟ್ಟಿದ ಜಾತಿ ಹುಗಿದರೂ ಹೋಗದು (ಮರಾಠಿ).

ಲಭಿಸಿರುವ ಪ್ರಶಸ್ತಿಗಳು:
೧. ೧೯೮೭ – ನವದೆಹಲಿ ಅಂತರ ಮಂತ್ರಾಲಯ ನಾಟಕ ಸ್ಪರ್ಧೆ ಚಿನ್ನದ ಪದಕ.
೨. ೧೯೯೯ – ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್ ಪುರಸ್ಕಾರ.
೩. ೧೯೯೯ – ಬೆಂಗಳೂರು ವಿ.ಕೆ.ಎಂ. ಕಲಾವಿದರಿಂದ ಸನ್ಮಾನ.
೪. ೧೯೯೯ – ಜನಕ ಪುರಿ ಕನ್ನಡ ಕೂಟದಿಂದ ರಾಜ್ಯೋತ್ಸವ ಸನ್ಮಾನ.
೫. ೨೦೦೪ – ಜನಕಪುರಿ ಕನ್ನಡ ಕೂಟದಿಂದ 'ಕನ್ನಡ ಕೂಟ ರತ್ನ'ಪ್ರಶಸ್ತಿ.

ವ್ಯಕ್ತಿ ಪರಿಚಯ

ಕುಳಮರ್ವ. ವಿ.ಬಿ.

೧. ಹೆಸರು : ವೆಂಕಪ್ಪ ಭಟ್ ಕುಳಮರ್ವ

೨. ಕಾವ್ಯನಾಮ : ವಿ.ಬಿ. ಕುಳಮರ್ವ

೩. ಹುಟ್ಟಿದ ಸ್ಥಳ ದಿನಾಂಕ : ಕಾಸರಗೋಡು, ೭-೧೨-೧೯೫೩

೪. ಜಿಲ್ಲೆ - ರಾಜ್ಯ : ಕಾಸರಗೋಡು, ಕೇರಳ.

೫. ವಿದ್ಯಾಭ್ಯಾಸ : ಎಂ.ಎ., ಬಿ.ಇಡಿ.

೬. ವೃತ್ತಿ : ನಿವೃತ್ತ ಅಧ್ಯಾಪಕ.

೭. ಕೌಟುಂಬಿಕ : ಪತ್ನಿ; ಲಲಿತಾಲಕ್ಷ್ಮಿ ಕುಳಮರ್ವ.
ಪುತ್ರಿಯರು; ರಾಜಶ್ರೀ, ಕಾವ್ಯಶ್ರೀ.

೮. ಸದ್ಯದ ವಿಳಾಸ : ವಿ.ಬಿ. ಕುಳಮರ್ವ, ಶ್ರೀ ನಿಧಿ, ನಾರಯಣಮಂಗಲ,
ಕುಂಬಳೆ ಅಂಚೆ-೬೭೧೩೨೧.
ಕಾಸರಗೋಡು ಜಿಲ್ಲೆ, ಕೇರಳ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೪೯೯೮-೨೧೩೫೧೫, ೦೯೪೪೬೪೮೮೪೫೮೫.

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಕೇರಳ ರಾಜ್ಯ ಕಾಸರಗೋಡು ಜಿಲ್ಲೆ ಕಾಸರಗೋಡಿನಲ್ಲಿ ಜನಿಸಿದರು. ಇವರು ಏಳನೆಯ ತರಗತಿಯವರಗೆ ಕುಂಟಿಕಾನನದಲ್ಲಿ ಪ್ರೌಢ ಶಿಕ್ಷಣ ನೀರ್ಚಾಲುವಿನಲ್ಲಿ. ಪದವಿ ಪೂರ್ವ ಪುತ್ತೂರಿನಲ್ಲಿ, ಪದವಿಯೂ ಅಲ್ಲೇ ಪಡೆದರು. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಕನ್ನಡ ಎಂ.ಎ. ಮಣಿಪಾಲ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಎಡ್. ಪದವಿ ಪಡೆದರು. ಶಾಲಾ ದಿನಗಳಲ್ಲೇ ಇವರಿಗೆ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿ ಕವನ, ಪ್ರಬಂಧ ರಚಿಸುತ್ತಿದ್ದರು, ಭಾಷಣ ಮಾಡುತ್ತಿದ್ದರು. ವಾಲೀಬಾಲ್, ಬ್ಯಾಡ್‌ಮಿಂಟನ್ ಆಟಗಾರ. ಈಜು ಮಿಮಿಕ್ರಿ ಹವ್ಯಾಸ. ಬಿಡುವಿದ್ದಾಗ ಕೃಷಿಯಲ್ಲಿ ತೊಡಗುತ್ತಿದ್ದರು. ಡಾ|| ಕಯ್ಯಾರ ಕಿಞ್ಞಣ್ಣ ರೈ, ಡಾ|| ಅಮೃತ ಸೋಮೇಶ್ವರ, ಡಿ.ವಿ.ಜಿ., ಬೇಂದ್ರೆ, ಕಾರಂತರು, ಮಾಸ್ತಿ, ಪ್ರೊ. ಅರ್ತಿಕಜೆ ಇತ್ಯಾದಿ ಸಾಹಿತಿಗಳು ಇವರ ಮೇಲೆ ಪ್ರಭಾವ ಬೀರಿದರು. ಕೆಲವರು ಗುರುಗಳೂ ಆಗಿದ್ದರು. ಕುಮಾರವ್ಯಾಸನ ಪ್ರಭಾವದಿಂದ ಷಟ್ಪದಿ ರಚಿಸಿದರು. ಉದಯವಾಣಿ, ವಿಜಯ ಕರ್ನಾಟಕ, ಹೊಸ ದಿಗಂತ, ಪ್ರಜಾವಾಣಿ, ಕಾರವಲ್, ಉತ್ತರದೇಶ, ತುಷಾರ, ಮಲ್ಲಿಗೆ, ವಿವೇಕ ಸಂಪದ, ಕರ್ಮವೀರ, ವಿಕ್ರಮ ಹಾಗೂ ಕಲಾ ದರ್ಶನ ಮೊದಲಾದ ಪತ್ರಿಕೆಗಳಲ್ಲಿ ಇವರ ಕವನ, ಲೇಖನಗಳು ಪ್ರಕಟವಾಗಿವೆ. ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ಕೇಂದ್ರ ಸಮಿತಿಯ ಅಧ್ಯಕ್ಷರಾಗಿ ೨೧ ಬಾರಿ ಮಕ್ಕಳ ಸಾಹಿತ್ಯ ಸಮ್ಮೇಳನ ವ್ಯವಸ್ಥೆಗೊಳಿಸಿದ್ದಾರೆ. ಜಿಲ್ಲಾ, ರಾಜ್ಯ, ರಾಷ್ಟ್ರ ಮಟ್ಟದ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಉಪನ್ಯಾಸ ಮಾಡಿ ಪ್ರಬಂಧ ಮಂಡಿಸಿದ್ದಾರೆ. ಕವಿ ಗೋಷ್ಠಿ, ಧಾರ್ಮಿಕ ಸಭೆ, ಶೈಕ್ಷಣಿಕ ಸಮಾರಂಭಗಳಲ್ಲಿ ಅತಿಥಿ, ಉದ್ಘಾಟಕ ಹಾಗೂ ಅಧ್ಯಕ್ಷರಾಗಿ ಭಾಗವಹಿಸಿದ್ದಾರೆ. ಕೇರಳ ರಾಜ್ಯ ಕನ್ನಡ ಪಠ್ಯ ಪುಸ್ತಕ ರಚನಾ ಸಮಿತಿ ಸದಸ್ಯರಾಗಿದ್ದರು. ಹತ್ತಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸಿದ್ದಾರೆ. ಮನೆಯಲ್ಲೇ ಸಾಹಿತ್ಯ ಗೋಷ್ಠಿಗಳನ್ನು ನಡೆಸಿದ್ದಾರೆ. ಸ್ಮರಣ ಸಂಚಿಕೆಗಳ ಸಂಪಾದಕರಾಗಿದ್ದಾರೆ. ಇವರದೇ ಆದ ಸೌಮ್ಯ ಪ್ರಕಾಶನವಿದೆ. ಅಂಚೆ ಚೀಟಿ, ನಾಣ್ಯ, ತಾಳೆಯೋಲೆ ಸಂಗ್ರಾಹಕರು. ರೋಗಿಗಳಿಗೆ ಉಚಿತ ಪ್ರಾಣ ಚೈತನ್ಯ ಚಿಕಿತ್ಸೆ ನೀಡುತ್ತಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಕಾರಂಜಿ, ಒಳದನಿ. **ಕ್ಷೇತ್ರ ಪರಿಚಯ** – ಶ್ರೀ ಪಾರ್ಥಸಾರಥಿ.
ವಿದ್ಯಾರ್ಥಿಗಳಿಗೆ – ವ್ಯಾಕರಣ ಮತ್ತು ಛಂದಸ್ಸು, ವ್ಯವಹಾರ ಮಾರ್ಗದರ್ಶಿ.

ಲಭಿಸಿರುವ ಪ್ರಶಸ್ತಿಗಳು:
೧. ೧೯೯೮ – ಸುವರ್ಣ ಸ್ವಾತಂತ್ರ್ಯ ದೇಶಭಕ್ತಿ ಗೀತೆಗೆ ಬಹುಮಾನ.
೨. ೨೦೦೮ – ಕವನಕ್ಕೆ ರಾಷ್ಟ್ರ ಕವಿ ಕುವೆಂಪು ಕಾವ್ಯ ಪುರಸ್ಕಾರ.
೩. ೨೦೧೦ – ಚುಟುಕ ಸಾಹಿತ್ಯ ಪರಿಷತ್ತು ಗೌರವ ಪ್ರಶಸ್ತಿ.
೪. ೨೦೧೦ – ಶ್ರೀ ಅಖಿಲ ಹವ್ಯಕ ಮಹಾಸಭೆಯಿಂದ ವಿದ್ವತ್ ಸನ್ಮಾನ.

ವ್ಯಕ್ತಿ ಪರಿಚಯ



ಕೇಶವಮೂರ್ತಿ ರಾವ್. ಎನ್.

೧.	ಹೆಸರು	:	ಎನ್. ಕೇಶವಮೂರ್ತಿ ರಾವ್.
೨.	ಕಾವ್ಯನಾಮ	:	ನೀರಗುಂದ ಕೇಶವಮೂರ್ತಿ ರಾವ್
೩.	ಹುಟ್ಟಿದ ಸ್ಥಳ ದಿನಾಂಕ	:	ಬಾಗೂರು, ೯-೬-೧೯೪೨
೪.	ಜಿಲ್ಲೆ - ರಾಜ್ಯ	:	ಚಿತ್ರದುರ್ಗ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ.
೬.	ವೃತ್ತಿ	:	ಭಾರತೀಯ ದೂರವಾಣಿ ಕಾರ್ಖಾನೆ, ಬೆಂಗಳೂರು
೭.	ಕೌಟುಂಬಿಕ	:	ಪತ್ನಿ; ಲಕ್ಷ್ಮಿ. ಪುತ್ರ; ಶ್ರೀಕಾಂತ
೮.	ಸದ್ಯದ ವಿಳಾಸ	:	ನಂ. ೧೯೫, 'ನಿಸರ್ಗ', ಅಮರಜ್ಯೋತಿನಗರ, ದೊಮ್ಮಲೂರು, ಬೆಂಗಳೂರು-೫೬೦೦೭೧
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦-೨೫೩೩೫೧೯೮೫
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕು ಬಾಗೂರಿನಲ್ಲಿ ಜನಿಸಿದರು. ಪೂರ್ವೀಕರ ಊರು ನೀರಗುಂದ. ತಂದೆ ಶಾನುಭೋಗರು. ಪ್ರಾಥಮಿಕ ಶಿಕ್ಷಣ ಬಾಗೂರಿನಲ್ಲೇ. ಪ್ರೌಢ ಹೊಸದುರ್ಗ. ೧೯೬೪ರಲ್ಲಿ ಬೆಂಗಳೂರಿಗೆ ಬಂದರು. ಐ.ಟಿ.ಐ.ನಲ್ಲಿ ತರಬೇತಿ. ಭಾರತೀಯ ದೂರವಾಣಿ ಕಾರ್ಖಾನೆಯಲ್ಲಿ ವೃತ್ತಿ ಜೀವನ ಆರಂಭ. ಸಂಜೆ ಕಾಲೇಜಿನಲ್ಲಿ ಪಿ.ಯು.ಸಿ ವ್ಯಾಸಂಗ. ಬಿ.ಎ. ಪದವಿ ಗಳಿಕೆ. ಬಾಲ್ಯದಿಂದಲೂ ಮನೆಯಲ್ಲಿ ಸಂಗೀತ ಸಾಹಿತ್ಯ ವಾತವರಣ. ಮನೆಯಲ್ಲಿ ಗಳಗನಾಥರ, ಬಿ. ವೆಂಕಟಾಚಾರ್ಯರ ಕೃತಿಗಳಿತ್ತು. ಪ್ರಸಿದ್ಧ ಸಾಹಿತಿಗಳೆಲ್ಲರ ಕೃತಿಗಳೂ ಲಭ್ಯ. ಓದುವ ಹುಚ್ಚು ಆರಂಭ. ಶಾಲೆಯಲ್ಲಿ ತರುತ್ತಿದ್ದ ಬರೆಹದ ಪತ್ರಿಕೆಗೆ ಏನೇನೋ ಬರೆಯುತ್ತಿದ್ದರು. ನಾಟಕಗಳನ್ನು ಆಡುತ್ತಿದ್ದರು. ಹೈಸ್ಕೂಲಿನಲ್ಲೇ ಇವರಿಗೆ ಸಾಹಿತ್ಯ ದಿಗ್ಗಜರ ಗ್ರಂಥಗಳ ಪರಿಚಯ. ಅ.ನ.ಕೃ., ತಾ.ರ.ಸು., ಬೀ.ಚಿ., ನಾಡಿಗೇರ್, ಕಾರಂತರು, ಡಿ.ವಿ.ಜಿ., ಮಾಸ್ತಿ, ವಿ.ಸೀ. ಮುಂತಾದ ಸಾಹಿತಿಗಳ ಪ್ರಭಾವ. ಅ.ನ.ಕೃ., ರಾಮಮೂರ್ತಿ ನೇತೃತ್ವದ 'ಕರ್ನಾಟಕ ಸಂಯುಕ್ತ ರಂಗ'ದ ಕನ್ನಡ ಚಳವಳಿ ಕಾವೇರಿದ ಕಾಲ. ದಿನವೂ ಪತ್ರಿಕೆಗಳಲ್ಲಿ ಅದೇ ಸುದ್ದಿ. ಅ.ನ.ಕೃ., ನಾಡಿಗೇರ್ ಹಾಗೂ ರಾಮಮೂರ್ತಿಗಳ ಭಾಷಣಗಳನ್ನು ತಪ್ಪದೇ ಕೇಳುತ್ತಿದ್ದರು. ಬಸವನ ಗುಡಿಯ ಗೋಖಲೆ ಸಾರ್ವಜನಿಕ ಸಂಸ್ಥೆಯ ಪುಸ್ತಕ ಭಂಡಾರದಲ್ಲಿ ಅತ್ಯಮೂಲ್ಯ ಗ್ರಂಥಗಳಿವೆ. ಅವುಗಳನ್ನು ಪರಿಚಯ ಮಾಡಿಕೊಳ್ಳಲು ಹೋದಾಗಲೆಲ್ಲ ಡಿ.ವಿ.ಜಿ. ಅವರ ದರ್ಶನ ಲಾಭ ಅದೇ ಭಾಗ್ಯ. ಅಲ್ಲಿಗೆ ರಾಜರತ್ನಂ, ವಿ.ಸೀ., ಮಾಸ್ತಿ, ತಿ.ತಾ. ಶರ್ಮ ಮುಂತಾದ ಹಿರಿಯ ಸಾಹಿತಿಗಳ ಉಪನ್ಯಾಸಗಳನ್ನು ಕೇಳುವ ಸುಯೋಗ. ಇವರ ಬರೆಹಗಳಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗತೊಡಗಿತ್ತು. ದೂರವಾಣಿ ಕಾರ್ಖಾನೆಯಲ್ಲಿ ಕೆಲವು ಕಾಲ ನಿರುದ್ಯೋಗಿಯಾದಾಗ ಹಿ.ಮ.ನಾ. ಅವರ 'ಹಿಮಾಲಯ ಪತ್ರಿಕಾಲಯದಲ್ಲಿ ನೌಕರಿ. ಇವರ ಬರೆಹಗಳು ಸುಧಾ, ಮಯೂರ, ತುಷಾರ, ತರಂಗ, ಕನ್ನಡ ಪ್ರಭ, ಕಸ್ತೂರಿ, ಕರ್ಮವೀರ, ಮಂಗಳ, ವಿನೋದ ಮುಂತಾದ ಪತ್ರಿಕೆಗಳಲ್ಲಿ ಮುನ್ನೂರಕ್ಕೂ ಹೆಚ್ಚು ಪ್ರಕಟವಾಗಿವೆ. ಇವರು ನಾಡು-ನುಡಿ, ಹಾಸ್ಯ, ಹರಟೆ, ಪುಸ್ತಕ ಪರಿಚಯ, ಲೇಖಕರ ಪರಿಚಯ ಕುರಿತು ಬರೆದಿದ್ದಾರೆ. ಶಾಮಂ ಕೃಷ್ಣರಾಯರು ಸಂಪಾದಿಸಿರುವ ಅ.ನ.ಕೃ. ತ.ರಾ.ಸು. ಹಾಗೂ ಬೀ.ಚಿ. ಗ್ರಂಥಗಳಲ್ಲಿಯೂ ಇವರ ಲೇಖನಗಳಿವೆ. ಅಲ್ಲದೆ ಅಂಕುರ, ಭೂಮಿಕ, ಹಾಸ್ಯಾಂಬರ, ಹಾಸ್ಯ ಸಂಚಯ ಮುಂತಾದ ಸಂಪಾದಿತ ಗ್ರಂಥಗಲಲ್ಲಿಯೂ ಇವರ ಲೇಖನಗಳು ಸೇರಿವೆ. ೧೯೯೮ರಲ್ಲಿ ನಿವೃತ್ತಿಯಾದರು. ಬರೆಯುವ ಪ್ರವೃತ್ತಿ ಬಿಟ್ಟಿಲ್ಲ.

ಪ್ರಕಟಿತ ಕೃತಿಗಳು:
ಹಾಸ್ಯ ಲೇ- ನ ಸಂ. – ಕೇಶವನ ಕಟ್ಟೆ ಪುರಾಣ.

ಲಭಿಸಿರುವ ಪ್ರಶಸ್ತಿಗಳು:
೧. ೧೯೮೦ – ಹೊಸದುರ್ಗ ೨೫ನೇ ಕನ್ನಡ ರಾಜ್ಯೋತ್ಸವ ಬೆಳ್ಳಿ ಹಬ್ಬದ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ

ಕೃಷ್ಣ ಶರ್ಮ. ಯ.

೧.	ಹೆಸರು	:	ಯಲ್ಲಾಪುರ ಕೃಷ್ಣ ಶರ್ಮ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಬಿಸಗೋಡು ಗ್ರಾಮ, ೨೮-೦೮-೧೯೩೮.
೪.	ಜಿಲ್ಲೆ - ರಾಜ್ಯ	:	ಯಲ್ಲಾಪುರ ತಾಲೂಕು, ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಕನ್ನಡ ಪಂಡಿತ, ರಾಷ್ಟ್ರಭಾಷಾ ವಿಶಾರದ, ಹಿಂದೀ ರತ್ನ.
೬.	ವೃತ್ತಿ	:	ಅರ್ಚಕ
೭.	ಕೌಟುಂಬಿಕ	:	ಪತ್ನಿ; ಕುಸುಮಾ, ಇಬ್ಬರು ಪುತರು, ಒಬ್ಬ ಪುತ್ರಿ.
೮.	ಸದ್ಯದ ವಿಳಾಸ	:	ನಂ. ೧೦, ೮ನೇ ಮುಖ್ಯರಸ್ತೆ, ಗಿರಿನಗರ ೩ನೇ ಹಂತ, ಬೆಂಗಳೂರು-೫೬೦೦೮೫.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦ - ೨೬೪೨೧೬೯೭
೧೧.	ಹಸ್ತಾಕ್ಷರ (ಸಹಿ)	:	ಯು. ಕೃಷ್ಣ ಶರ್ಮ.

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲೂಕು ಬಿಸಗೋಡು ಗ್ರಾಮದಲ್ಲಿ ಜನಿಸಿದರು. 'ಮೇಲಿನ ಮನೆ'ಎಂಬ ಪುರೋಹಿತ ವಂಶದಿಂದ ಬಂದವರು. ಬಾಲ್ಯದಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶವಿರಲಿಲ್ಲ. ಗ್ರಾಮದಲ್ಲಿ ಶಾಲೆ ಇರಲಿಲ್ಲ. ಮನೆಯಲ್ಲೇ ಓದು ಬರೆಹವಾಯಿತು. ಇವರಿಗೆ ವಿದ್ಯೆ ಕಲಿಯುವ ಉತ್ಸಾಹ. ೨೩ನೇ ವಯಸ್ಸಿನಲ್ಲಿ ಶೃಂಗೇ-ರಿಯ ಶ್ರೀ ಸದ್ವಿದ್ಯಾ ಸಂಜೀವಿನೀ ಮಹಾಪಾಠ ಶಾಲೆಯಲ್ಲಿ ವೇದ ಹಾಗೂ ಸಂಸ್ಕೃತ ಅಭ್ಯಾಸ ಮಾಡಿದರು. ನಂತರ ಬೆಂಗಳೂರಿನ ಅದೇ ಶಾಖೆಯಲ್ಲಿ ಪೂರ್ವ ಮೀಮಾಂಸ ಶಾಸ್ತ್ರ ಓದಿದರು. ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಅಲಂಕಾರ ಶಾಸ್ತ್ರ ಅಭ್ಯಾಸ ಮಾಡಿದರು. ಸಜ್ಜನರಾವ್ ವೃತ್ತದ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ ೧೯೬೪ರಲ್ಲಿ ಸಹಾಯಕ ಅರ್ಚಕರಾಗಿ ವೃತ್ತಿ ಜೀವನ ಆರಂಭಿಸಿದರು. ನಂತರ ಪ್ರಧಾನ ಅರ್ಚಕರಾಗಿ ಬಡ್ತಿ ಪಡೆದು ೨೦೦೨ರಲ್ಲಿ ನಿವೃತ್ತರಾದರು. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಸಮಯ ಸಿಕ್ಕಾಗಲೆಲ್ಲ ತೋಚಿದ್ದು ಗೀಚ ತೊಡಗಿದರು. ಸುಧರ್ಮ, ನಾಗರಿಕ, ಪ್ರಜ್ಞಾ ಲೋಕಗಳಲ್ಲಿ ಇವರ ಸಂಸ್ಕೃತ ಲೇಖನಗಳು ಪ್ರಕಟವಾಗ ತೊಡಗಿತು. ಹಾಗೇ ಕನ್ನಡ ನುಡಿ, ಪ್ರಬುದ್ಧ ಕರ್ನಾಟಕ, ಕರ್ನಾಟಕ ಭಾರತಿ, ಸಾಧನೆ, ಕರ್ನಾಟಕ ಲೋಚನ ಹಾಗೂ ಋಜುವಾತು ಮುಂತಾದ ಸಾಹಿತ್ಯಕ ಪತ್ರಿಕೆಗಳಲ್ಲಿ ಇವರ ಕನ್ನಡ ಲೇಖನಗಳು ಪ್ರಕಟವಾದವು. ಶಂಕರ ಕೃಪ, ಸ್ವರ್ಣವಲ್ಲಿ ಪ್ರಭಾ ಸಾಂಸ್ಕೃತಿಕ ಪತ್ರಿಕೆಗಳಲ್ಲೂ ಪ್ರಸಾದ್, ಮಾಮಿಡಿ, ತರಳಬಾಳು, ನುಡಿ ಜೇನು, ಕಲಾದರ್ಶನ ಮುಂತಾದ ಜಿಲ್ಲಾ ಮಟ್ಟದ ಪತ್ರಿಕೆಗಳಲ್ಲಿಯೂ ಇವರ ಲೇಖನಗಳು ಪ್ರಕಟವಾಗಿವೆ. ಇವರ ಮಕ್ಕಳ ಕಥೆ ಮಹಾರಾಷ್ಟ್ರ ಶಿಕ್ಷಣ ಇಲಾಖೆ ಪಠ್ಯ ಪುಸ್ತಕದಲ್ಲಿದೆ. ಸ್ಮರಣ ಸಂಚಿಕೆ, ಅಭಿನಂದನ ಗ್ರಂಥಗಳಲ್ಲೂ ಇವರ ಲೇಖನಗಳು ಪ್ರಕಟವಾಗಿವೆ. ಇವರು ಕವಿರಾಜ ಮಾರ್ಗಕಾರನು ಹೇಳಿರುವ 'ಧ್ವನಿಯೆಂಬುದಳಂ ಕಾರಂ'ಬಗ್ಗೆ ವಾದ ಮಾಡಿ ಸಮರ್ಪಕ ಉತ್ತರ ನೀಡಿದ್ದಾರೆ. ಇವರು ಬೆಂಗಳೂರಿನ ಕ.ಸಾ.ಪ., ಸಂಸ್ಕೃತ ಸಾಹಿತ್ಯ ಪರಿಷತ್ತು, ಮಧ್ಯ ಪ್ರದೇಶದ ಸಾಗರ ವಿಶ್ವವಿದ್ಯಾಲಯ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಅಖಿಲ ಹವ್ಯಕ ಮಹಾಸಭೆಗಳ ಆಜೀವ ಸದಸ್ಯರು. ಇವರ ಸ್ವಂತ ಪ್ರಕಾಶನವಿದ್ದು ಪ್ರಕಟಿಸಿದ ೧೭ ಕೃತಿಗಳನ್ನು ಉಚಿತವಾಗಿ ಹಂಚಿರುವ ಅಪರೂಪದ ಲೇಖಕರು.

ಪ್ರಕಟಿತ ಕೃತಿಗಳು:

ಲೇ. ನ ಸಂ. – ಹವ್ಯಾಸದ ಬರೆಹಗಳು. **ಮಕ್ಕಳ ಸಾಹಿತ್ಯ** – ಚಿಕ್ಕವರಿಗೆ ಚೊಕ್ಕ ಕಥೆಗಳು, (ಅನುವಾದ) ಎರಡು ಹಕ್ಕಿಗಳು. **ಕಾವ್ಯ ಮೀಮಾಂಸೆ** – ಧ್ವನಿಯೆಂಬುದಳಂ ಕಾರಂ, ಅಲಂಕಾರಾಂತರ್ಭಾವ ವಾದ. **ಅಧ್ಯಾತ್ಮಿಕ** – ಅಷ್ಟೋತ್ತರ ಶತನಾಮಾವಳಿ, ನುತಿ ಕುಸುಮಾಂಜಲಿ

ಲಭಿಸಿರುವ ಪ್ರಶಸ್ತಿಗಳು:

೧. ೧೯೮೯ – ಬೆಂಗಳೂರಿನ ವೇದ ಧರ್ಮ ಪರಿಪಾಲನಾ ಸಭ – 'ವೇದ ಧರ್ಮ ನಿರತ'ಪ್ರಶಸ್ತಿ

೨. ೨೦೦೫ – ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ.

ವ್ಯಕ್ತಿ ಪರಿಚಯ



ಕೃಷ್ಣಶರ್ಮ ಕಾಶ್ಯಪ. ಜಿ.

೧. ಹೆಸರು : ಜಿ. ಕೃಷ್ಣಶರ್ಮ ಕಾಶ್ಯಪ

೨. ಕಾವ್ಯನಾಮ : ಕಾಶ್ಯಪ

೩. ಹುಟ್ಟಿದ ಸ್ಥಳ ದಿನಾಂಕ : ವಂಟಿಕೊಪ್ಪಲು, ೧೫-೦೭-೧೯೪೨

೪. ಜಿಲ್ಲೆ - ರಾಜ್ಯ : ಮೈಸೂರು - ಕರ್ನಾಟಕ

೫. ವಿದ್ಯಾಭ್ಯಾಸ : ವಾಣಿಜ್ಯ ಪದವೀಧರ

೬. ವೃತ್ತಿ : ನಿವೃತ್ತ

೭. ಕೌಟುಂಬಿಕ : ಬ್ರಹ್ಮಚಾರಿ

೮. ಸದ್ಯದ ವಿಳಾಸ : ಕ್ರಮಾಂಕ ೩೦೨, ಶ್ರೀ ರಾಜೇಶ್ವರಿ, ಮೀನಾಕ್ಷಿ ಮ್ಯಾನರ್, ೫ನೇ ಅಡ್ಡರಸ್ತೆ, ೧೦ನೇ ಡಿ ಮುಖ್ಯರಸ್ತೆ, ಜಯನಗರ, ೧ನೇ ಹಂತ, ಬೆಂಗಳೂರು - ೫೬೦ ೦೦೧೧

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೨೬೫೭೧೭೨೮. ೯೮೪೫೭೩೩೫೭೮

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಮೈಸೂರಿನಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಬೆಂಗಳೂರು ಮಾಧ್ಯಮಿಕವೂ ಅಲ್ಲೇ. ಪ್ರೌಢಶಾಲೆಯ ವಿದ್ಯಾಭ್ಯಾಸ, ಕಾಲೇಜು ಓದು ಮುಗಿಸಿ ಪದವೀಧರರಾದರು. ಇಂದಿನ ಎಂ.ಇ.ಎಸ್. ಕಾಲೇಜ್. ಕಾವ್ಯ ಓದುವುದರಿಂದ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡರು. ನಂತರ ಕವನ ರಚಿಸತೊಡಗಿದರು. ಮುಂದೆ ನಾಟಕ ರಚನೆಯಾಯಿತು. ಹಾಗೇ ಕಥೆ, ಕಾದಂಬರಿಗಳನ್ನು ಬರೆಯತೊಡಗಿದರು. ಚಿತ್ರಕಲೆ, ಶಾಸ್ತ್ರೀಯ ಸಂಗೀತಗಳು ಹವ್ಯಾಸವಾಯಿತು. ಜಲವರ್ಣ, ತೈಲವರ್ಣ ಚಿತ್ರಗಳನ್ನು ರಚಿಸುವುದರ ಜೊತೆಗೆ ವ್ಯಂಗ್ಯಚಿತ್ರಗಳನ್ನು ರೇಖಿಸತೊಡಗಿದರು. ಕರ್ನಾಟಕ, ಹಿಂದೂಸ್ಥಾನಿ ಎರಡೂ ಶಾಸ್ತ್ರೀಯ ಸಂಗೀತದಲ್ಲೂ ಅಭಿರುಚಿ. ಕುವೆಂಪು ರಾಮಯಣ ದರ್ಶನಂ. ಡಿ.ವಿ.ಜಿ. ಮಂಕುತಿಮ್ಮನ ಕಗ್ಗ. ದರಾ. ಬೇಂದ್ರೆ ಅವರ ನಾಕು ತಂತಿ ಕೃತಿಗಳಿಂದ ಇವರು ಹೆಚ್ಚು ಪ್ರಭಾವಿತರಾದರು. ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ಇವರ ವೃತ್ತಿ ಜೀವನ ಆರಂಭವಾಯಿತು. ಸಹೋದ್ಯೋಗಿಗಳ ಸಹವಾಸದಿಂದ ಲಲಿತ ಕಲಾ ಸಂಘ, ಕನ್ನಡ ಯುವಕ ಸಂಘಗಳ ಸದಸ್ಯರಾಗಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸ ತೊಡಗಿದರು. ಬಡ್ತಿಗಳೊಂದಿಗೆ ಒಟ್ಟು ೩೩ವರ್ಷಗಳ ಸೇವೆ ಸಲ್ಲಿಸಿ ಸ್ವಯಂ ಇಚ್ಛೆಯಿಂದ ನಿವೃತ್ತರಾದರು. ನಂತರವೇ ಇವರು ಸಾಹಿತ್ಯದ ಬಗ್ಗೆ ಹೆಚ್ಚು ಗಮನ ಕೊಡುವಂತಾಯಿತು. ಮಕ್ಕಳ ಕವನ, ನಾಟಕ ರಚಿಸುವುದರ ಜೊತಗೆ ಚಿತ್ರಕಲೆ, ವ್ಯಂಗ್ಯಚಿತ್ರಗಳ ರಚನೆಗೂ ತೊಡಗಿದರು. ೧೯೮೩ರಿಂದ ಇವರು ರಚಿಸಿದ ಹಲವಾರು ಕವನಗಳು ವಿವಿಧ ಸಂಸ್ಥೆಗಳು ಪ್ರಕಟಿಸಿದ ಕವನ ಸಂಗ್ರಹಗಳಲ್ಲಿ ಸೇರಿವೆ. ಮೈಸೂರಿನ ಕಮಲ ಕೃಷ್ಣ ಪ್ರಕಾಶನ ಹೊರ ತಂದ ಕಥಾಸಂಕಲನದಲ್ಲಿ ಇವರ 'ಫಲಿಸಿದ ಪ್ರತಿಫಲ' ಕಥೆ ಪ್ರಕಟವಾಗಿದೆ. ವಿನೋದ ಪತ್ರಿಕೆಯಲ್ಲಿ ಇವರ ಕಥೆ, ಕವನ, ಹಾಸ್ಯ, ವ್ಯಂಗ್ಯಚಿತ್ರ ಪ್ರಕಟವಾಗುತ್ತಿರುತ್ತದೆ. ಇವರ ಕೃತಿಗಳಿಗೆ ಹತ್ತಾರು ಸಂಘ-ಸಂಸ್ಥೆಗಳಿಂದ ಗೌರವ ಪ್ರಶಸ್ತಿ ಪತ್ರಗಳು ಲಭಿಸಿವೆ.

ಪ್ರಕಟಿತ ಕೃತಿಗಳು:
ಕಾವ್ಯ- ಶ್ರೀ ಭಗವನ್ನಾಮ ಸಂಕೀರ್ತನೆ, ಕಾರ್ಗಿಲ್ ಕನ್ನಡಿ.

ಲಭಿಸಿರುವ ಪ್ರಶಸ್ತಿಗಳು:
೧. ೧೯೭೭ - ಕ.ಸಾ.ಪ. ವಜ್ರ ಮಹೋತ್ಸವದಲ್ಲಿ ತೈಲವರ್ಣ ಕೃತಿಗೆ ಪ್ರಶಸ್ತಿ.
೨. ೧೯೮೭ - ಹಿ.ವಿ.ಕಾ. ಲಲಿತ ಕಲಾ ಸಂಘದ ಪ್ರಶಸ್ತಿ
೩. ೧೯೯೭ - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಪ್ರಶಸ್ತಿ.
೪. ೧೯೮೯ - ಆಚಾರ್ಯ ಚಿತ್ರ ಕಲಾ ಭವನ ವಾರ್ಷಿಕೋತ್ಸವದಲ್ಲಿ ಚಿತ್ರಕಲೆಗೆ ಪ್ರಶಸ್ತಿ.

ವ್ಯಕ್ತಿ ಪರಿಚಯ

ಗಂಗಾಧರ ಶಾಸ್ತ್ರಿ ನಾಜಗಾರು.

೧.	ಹೆಸರು	: ಗಂಗಾಧರ ಶಾಸ್ತ್ರಿ ನಾಜಗಾರು.
೨.	ಕಾವ್ಯನಾಮ	: ನಾಶಾ, ಯಕ್ಷಜ್ಞ, ೩೩, ಗುಮ್ಮ, ಗುಪ್ತಚಿತ್ರ.
೩.	ಹುಟ್ಟಿದ ಸ್ಥಳ ದಿನಾಂಕ	: ಗುಣವಂತೆ, ಹೊನ್ನಾವರ ೨೪-೧೦-೧೯೩೨.
೪.	ಜಿಲ್ಲೆ - ರಾಜ್ಯ	: ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	: ಸಂಸ್ಕೃತ ಭಾಷಾಭಿಜ್ಞ, ಭಾಷಾರತ್ನ, ಎಸ್.ಎಸ್.ಎಲ್.ಸಿ, ಟಿ.ಸಿ.ಹೆಚ್.
೬.	ವೃತ್ತಿ	: ನಿವೃತ್ತ ಅಧ್ಯಾಪಕ
೭.	ಕೌಟುಂಬಿಕ	: ಪತ್ನಿ; ಪಾರ್ವತಿ. ಪುತ್ರರು, ಗೌರೀಶ, ಸತೀಶ, ಶಂಭು. ಪುತ್ರಿ; ಲಕ್ಷ್ಮಿ.
೮.	ಸದ್ಯದ ವಿಳಾಸ	: ಪ್ರಭಾತ ನಗರ, ಹೊನ್ನಾವರ-೫೮೧೩೩೪
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೯೮೪೪೯೫೨೭೩೧.
೧೧.	ಹಸ್ತಾಕ್ಷರ (ಸಹಿ)	:

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಗುಣವಂತೆ ಗ್ರಾಮದಲ್ಲಿ ಜನಿಸಿದರು. ಎಸ್.ಎಸ್.ಎಲ್.ಸಿ. ಮಾಡಿ ಟ್.ಸಿ.ಹೆಚ್. ತರಬೇತಿ ಪಡೆದಿದ್ದಾರೆ. ಸಂಸ್ಕೃತ ಭಾಷಾಬಿಜ್ಞ, ಭಾಷಾರತ್ನಗಳನ್ನು ಮಾಡಿ ಕೊಂಡಿದ್ದಾರೆ. ವೃತ್ತಿಯಿಂದ ಅಧ್ಯಾಪಕರು, ಪ್ರವೃತ್ತಿಯಿಂದ ಸಾಹಿತಿಗಳು. ಶಾಲಾದಿನಗಳಿಂದಲೇ ಸಾಹಿತ್ಯಾಸಕ್ತರಾದ ಇವರು ೧೯೬೧ರಲ್ಲಿ 'ಶೃಂಗಾರ ಮಂಟಪ'ವೇದಿಕೆಯನ್ನು ಸ್ಥಾಪಿಸಿದರು. ವೇದಿಕೆಯಲ್ಲಿ ಕವಿಗೋಷ್ಠಿ, ಸಾಹಿತ್ಯ ಗೋಷ್ಠಿ ಚಟುವಟಿಕೆಗಳನ್ನು ಸಂಘಟಿಸಿ ಖ್ಯಾತ ಲೇಖಕರಾದ ಆ.ನ.ಕೃ. ಬೀಚಿ, ಬೇಂದ್ರೆ, ಕೃಷ್ಣಮೂರ್ತಿ ಪುರಾಣಿಕ, ಸೂ.ರಂ. ಎಕ್ಕುಂಡಿ, ಗೌರೀಶ ಕಾಯ್ಕಿಣಿ, ವೀ.ಸಿ., ಪಾಂಡೇಶ್ವರ್, ಬಿ.ಹೆಚ್. ಶ್ರೀಧರ್ ಮುಂತಾದವರನ್ನು ಕರೆಸಿ ಭಾಷಣ ಮಾಡಿಸಿ ಕನ್ನದ ಜಾಗೃತಿ ಉಂಟುಮಾಡಿದ್ದಾರೆ. ೧೯೬೦-೬೧ರಲ್ಲಿ 'ಶಕುಂತಲಾ' ನಾಟಕ ರೂಪಾಂತರಿಸಿದರು. ೧೯೫೮ರಲ್ಲಿ ಇವರ ಚೊಚ್ಚಲ ಕೃತಿ ಕವನ ಸಂಕಲನ ಬಿಡುಗಡೆಯಾಯಿತು. ಇವರ 'ಎಲ್ಲೆಲ್ಲೂ ಸೊಬಗಿದೆ' ಎಂಬ ಕವನ ಯಕ್ಷಗಾನ ಭಾಗವತರಿಂದ ಜನಪ್ರಿಯವಾಯಿತು. ೧೯೬೦ರಲ್ಲಿ ಧಾರವಾಡ ಆಕಾಶವಾಣಿಯಿಂದ ಏಕಾಂಕ ನಾಟಕ ಪ್ರಸಾರವಾಗಿದೆ. ಹಲವು ಪ್ರಕಟವಾಗಿವೆ. ಇವರು ಹಲವು ಯಕ್ಷಗಾನ ಪ್ರಸಂಗಗಳನ್ನೂ ರಚಿಸಿದ್ದಾರೆ. ಬ್ರಷ್ಟಾಚಾರದ ವಿರುದ್ಧ ಸಮರ ಸಾರುವ ಉದ್ದೇಶದಿಂದ ೧೯೭೯-೮೦ರಲ್ಲಿ ಆಚಾರ ಎಂಬ ವಾರ ಪತ್ರಿಕೆಯನ್ನು ಆರಂಭಿಸಿದರು. ಅದರಲ್ಲಿ ವೈಚಾರಿಕ ಹಾಗೂ ವಿಮರ್ಶಾತ್ಮಕ ಲೇಖನಗಳನ್ನು ಇವರೇ ಹಲವಾರು ಕಾವ್ಯನಾಮಗಳಿಂದ ಬರೆದರು. ತಾಲೂಕು, ಜಿಲ್ಲಾ ಹಲವು ಸಾಹಿತ್ಯ ಸಮ್ಮೇಳನ ಕವಿಗೋಷ್ಠಿಗಳ ಅಧ್ಯಕ್ಷತೆವಹಿಸಿದ್ದಾರೆ. 'ಯಕ್ಷಜ್ಞ' ಕಾವ್ಯನಾಮದಲ್ಲಿ ಯಕ್ಷಗಾನ ಆಟಗಳ ರಂಗ ವಿಮರ್ಶೆ, 'ನಾಶಾ' ಹೆಸರಿನಲ್ಲಿ ವಿಡಂಬನಾತ್ಮಕ ಲೇಖನಗಳು, 'ಗುಮ್ಮ'ಹಾಗೂ 'ಗುಪ್ತಚಿತ್ರ' ಹೆಸರಿನಲ್ಲಿ ವಿವಿಧ ಪತ್ರಿಕೆಗಳಲ್ಲಿ ತನಿಖಾ ವರದಿಗಳು ಪ್ರಕಟವಾಗಿವೆ. ೧೯೬೦-೭೦ರಲ್ಲಿ ಶೃಂಗಾರ ಮುದ್ರಣ ಮತ್ತು ಪ್ರಕಾಶನ ಆರಂಭಿಸಿ ಹಲವು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಅನುವಾದಿಸಿದ 'ಧರ್ಮ ಸಿಂಧು' ಗ್ರಂಥಕ್ಕೆ ರಾಜ್ಯ ಪ್ರಶಸ್ತಿ ಬಂದಿದೆ. ೧೯೬೨ರಲ್ಲಿ ಸಾಹಿತ್ಯ, ಸಂಗೀತ, ನಾಟಕ ಹಾಗೂ ಯಕ್ಷಗಾನ ಮುಂತಾದ ಲಲಿತ ಕಲೆಗಳಿಗೆ ಮೀಸಲಾದ 'ಶೃಂಗಾರ' ತ್ರೈಮಾಸಿಕವನ್ನು ಪ್ರಾರಂಭಿಸಿ ಉತ್ತಮ ಲೇಖಕ ಬಳಗವನ್ನು ಸೃಷ್ಟಿಸಿದರು. ೧೯೭೧ರಲ್ಲಿ ಇವರು ಪ್ರಥಮ ಬಾರಿಗೆ ಸಂಘಟಿಸಿ ನಡೆಸಿದ 'ಜಿಲ್ಲಾ ಸಾಹಿತ್ಯ ಸಮ್ಮೇಳನ'ವೇ ನಂತರ ಕನ್ನಡ ಸಾಹಿತ್ಯ ಪರಿಷತ್ ಕೂಡ ರಾಜ್ಯಾದ್ಯಂತ ಜಾರಿಗೆ ತಂದಿದ್ದು ಈಗ ಇತಿಹಾಸವಾಗಿದೆ.

ಪ್ರಕಟಿತ ಕೃತಿಗಳು:

ಕವನ ಸಂ. – ಸುಮ ಸಂಚಯ. **ನಾಟಕ** – ಯೋಗ್ಯ ಸಂಬಂಧ. **ಇತರೆ** – ಹೊಸದೃಷ್ಟಿ, ಒಂದಿಷ್ಟು ವಿಚಾರಗಳು. **ಯಕ್ಷಗಾನ** – ಯಕ್ಷಗಾನ ಸಿದ್ಧಾಂತ ಮತ್ತು ಹೊಸ ಆಯಾಮ

ಲಭಿಸಿರುವ ಪ್ರಶಸ್ತಿಗಳು:

೧. ಕೆ. ಶಾಮರಾವ್ ವಿಠ್ಠಲ ಹೆಸರಿನ ಪ್ರತಿಷ್ಟಿತ ಪತ್ರಿಕಾ ಪ್ರಶಸ್ತಿ.
ಹಲವಾರು ಸನ್ಮಾನಗಳು.

ವ್ಯಕ್ತಿ ಪರಿಚಯ

ಗಜಾನನ ಮಂಜುನಾಥ ಭಟ್ಟ ಕೆ.ವಿ.

೧. ಹೆಸರು : ಗಜಾನನ ಮಂಜುನಾಥ ಭಟ್ಟ

೨. ಕಾವ್ಯನಾಮ : ಗಮಕ

೩. ಹುಟ್ಟಿದ ಸ್ಥಳ ದಿನಾಂಕ : ಕೆಳಗಿನ ವಾಜಗಾರು ೧೨-೬-೧೯೩೮

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಎಸ್.ಎಸ್.ಸಿ, ಹಿಂದಿ ರಾಷ್ಟ್ರ ಭಾಷಾ, ಕನ್ನಡ - ಜಾಣ, ಸಂಸ್ಕೃತ ತೃತೀಯ ಕುಸುಮ.

೬. ವೃತ್ತಿ : ಕೃಷಿ.

೭. ಕೌಟುಂಬಿಕ : ಪತ್ನಿ; ಕಮಲಾಭಟ್ಟ. ಪುತ್ರರು; ಉಮಾಪತಿ,
ನಾಗಪತಿ, ರಘುಪತಿ, ದಿವಸ್ಪತಿ.
ಪುತ್ರಿಯರು; ಸುಮನಾ, ಶಾಂಭವಿ

೮. ಸದ್ಯದ ವಿಳಾಸ : ದುರ್ಗಾ ನಿವಾಸ, ವಾಜಾಗಾರು,
ಹೆಗ್ಗರಣಿ, ೫೮೧೩೩೧ ಮಾರ್ಗ, ಸಿರಸಿ ಉ.ಕ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೮೪ - ೨೪೯೪೪೪, ೯೪೪೯೬೫೫೯೦೫

೧೧. ಹಸ್ತಾಕ್ಷರ (ಸಹಿ) :



ಸಾಹಿತ್ಯ ಪರಿಚಯ

ಇವರು ಉ.ಕ. ಹೆಗ್ಗರಣಿಯಲ್ಲಿ ಜನಿಸಿದರು. ಇವರು ಶ್ರೀ ಮಂಜುನಾಥ ಭಟ್ಟ ಮತ್ತು ಶ್ರೀಮತಿ ಮಹಾದೇವಿ ಭಟ್ಟ ದಂಪತಿಗಳ ಪುತ್ರ. ಎಸ್. ಎಸ್.ಸಿ. ಮಾಡಿ ಕನ್ನಡ ಕಾವ, ಸಂಸ್ಕೃತ ಅಭ್ಯಾಸ ಮಾಡಿ, ಪೂನಾ, ಹಿಂದಿ ಪ್ರವೇಶಿಕಾ ಮಾಡಿದ್ದರೆ. ವೃತ್ತಿಯಿಂದ ಕೃಷಿಕರು ಪ್ರವೃತ್ತಿಯಿಂದ ಸಾಹಿತಿಗಳು. ಯಕ್ಷಗಾನ ಇವರ ಪ್ರೀತಿಯ ಹವ್ಯಾಸ. ಸಾಹಿತ್ಯದಲ್ಲಿ ಕವನ, ಕಾದಂಬರಿ ರಚಿಸಿದ್ದಾರೆ. ಯಕ್ಷಗಾನ ಭಾಗವತಿಕೆ, ಮದ್ದಳೆ ಹಾಗೂ ಚಂಡೆ ವಾದನ, ಅರ್ಥಗಾರಿಕೆ ಬಯಲಾಟ ಪ್ರಸಂಗ ರಚನೆ ಹೀಗೆ ಎಲ್ಲ ಯಕ್ಷ ಪ್ರಕಾರಗಳಲ್ಲಿ ಭಾಗವಹಿಸುತ್ತಾರೆ. ಗೋಷ್ಠಿಗಳಲ್ಲಿ ಭಾಷಣ ಮಾಡುತ್ತಾರೆ. ಯಕ್ಷ ಕ್ಷೇತ್ರದಲ್ಲಿ ೨೦ನೇ ವಯಸ್ಸಿನಿಂದಲೇ ಪ್ರಾರಂಭವಾದ ಇವರ ಗುರುಮುಖ ಸೇವೆ ಸತತವಾಗಿ ನಡದೇ ಇದೆ. ವಿದ್ಯಾರ್ಥಿಗಳಿಗೆ ಆಟ, ಅರ್ಥಗಾರಿಕೆಯನ್ನು ಕಲಿಸಿದ್ದಾರೆ. 'ಚಿಗುರು ಬಳಗ' ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅರ್ಥಗಾರಿಕೆ ಕಲಿಸಿದ್ದಾರೆ. 'ಯಕ್ಷ ವೇದಿಕೆ'ಹುಟ್ಟು ಹಾಕಿ ಗೋಷ್ಠಿ ನಡೆಸಿ ಯಕ್ಷಗಾನ ಸಪ್ತಾಹ ನಡೆಸಿದ್ದಾರೆ. ಅನೇಕ ಸ್ಮರಣ ಸಂಚಿಕೆಗಳಲ್ಲಿ ಯಕ್ಷಗಾನದ ಬಗ್ಗೆ ಲೇಖನ ಬರೆದಿದ್ದಾರೆ. ಏಕ ಪಾತ್ರ ಅರ್ಥಗಾರಿಕೆಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳಿಸಿದ್ದಾರೆ. ಈ ವರೆಗೂ ಸಾವಿರಕ್ಕೂ ಹೆಚ್ಚು ತಾಳ ಮದ್ದಳೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಸುಧನ್ವ, ಬಭ್ರುವಾಹನ, ಕೃಷ್ಣ, ಕರ್ಣ, ಅರ್ಜುನ, ಭೀಷ್ಮ, ಸುಭದ್ರೆ, ಅಂಬೆ ಇತ್ಯಾದಿ ಇವರ ಪ್ರಿತಿಯ ಪಾತ್ರಗಳು. ಇವರು ಹಲವಾರು ಸೇವಾಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇವಾ ಸಹಕಾರಿ ಸಂಘದ ಕಾರ್ಯದರ್ಶಿಯಾಗಿ, ಪಂಚಾಯತ್ ಅಧ್ಯಕ್ಷರಾಗಿ ತಾಲೂಕು ಬೋರ್ಡ್ ಸದಸ್ಯರಾಗಿ, ಪ್ರೌಢಶಾಲೆ ಆಡಳಿತ ಕಮಿಟಿಯ ಸದಸ್ಯರಾಗಿ, ಬಯಲಾಟ ಮೇಳದ ಅಧ್ಯಕ್ಷರಾಗಿ, ಕನ್ನಡ ಕಲಾ ಕೂಟ - ಯಕ್ಷ ಚತ್ವಾರಿಗಳ ನಿರ್ಮಾಪಕರಾಗಿ, ಯಕ್ಷ ವೇದಿಕೆ ಕಂಚೀ ಕೈರುವಾರಿಗಳಾಗಿ ಶಿವಳ್ಮನೆ ಯುವಕ ಸಂಘದ ಸ್ಮರಣ ಸಂಚಿಕೆಯ ಪ್ರಧಾನ ಸಂಪಾದಕರಾಗಿ ಇತ್ಯಾದಿ ಇನ್ನೂ ಇಂತಹ ಹಲವಾರು ಶೈಕ್ಷಣಿಕ, ಸಾಮಾಜಿಕ ಹಾಗೂ ಯಕ್ಷಗಾನ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಸಿದ್ದಾರೆ ಇವರು ನಚಿಕೇತ, ನಾಗಮಂಡಲ ಮುಂತಾದ ೨೫ಕ್ಕೂ ಹೆಚ್ಚು ಕಾಲ್ಪನಿಕ, ಐತಿಹಾಸಿಕ ಪ್ರಸಂಗಗಳನ್ನು ರಚಿಸಿದ್ದಾರೆ. ಹಲವಾರು ಸಂಘಗಳು ಇವರನ್ನು ಗೌರವಿಸಿ, ಸನ್ಮಾನಿಸಿ ಪ್ರಶಸ್ತಿಗಳನ್ನಿತ್ತಿವೆ.

ಪ್ರಕಟಿತ ಕೃತಿಗಳು:
ಯಕ್ಷಗಾನ - ಪರಿಸರ ನಿವೇದನೆ, ಗಂಧರ್ವಾರ್ಜುನ.

ಲಭಿಸಿರುವ ಪ್ರಶಸ್ತಿಗಳು:

೧. ೧೯೬೦ - ಒಕ್ಕಲುತನ, ಪಶು ಸಂಗೋಪನೆ ಸಮಾಜ ಶಿಕ್ಷಣಾ ತರಬೇತಿ ಪ್ರಶಸ್ತಿ.
೨. ೧೯೬೧ - ಸಹಕಾರಿ ಗ್ರಾಮೋದ್ಯೋಗ ಶಿಕ್ಷಣ ತರಬೇತಿ ಪ್ರಶಸ್ತಿ.
೩. ೧೯೯೯ - ಕಂಚೀ ಕೈ ಯಕ್ಷ ವೇದಿಕೆಯ ಪುರಸ್ಕಾರ ಹಾಗೂ ಪ್ರಶಸ್ತಿ.
೪. ೨೦೦೮ - ಕರ್ನಾಟಕ ಜಾನಪದ ಪರಿಷತ್ತಿನ ಪ್ರಶಸ್ತಿ.
೫. ಸಿದ್ಧಾಪುರದ ೧೮ನೇ ಜಿಲ್ಲಾ ಕನ್ನಡ ಸಾ.ಸ.ದ ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ|| ಗಣಪತಿ ಭಟ್

೧. ಹೆಸರು : ಡಾ|| ಗಣಪತಿ ಭಟ್

೨. ಕಾವ್ಯನಾಮ : ಸಾರಂಗ

೩. ಹುಟ್ಟಿದ ಸ್ಥಳ ದಿನಾಂಕ : ಸಿದ್ದಾಪುರ ತಾ. ನಡುಮನೆ. ೧೯-೦೮-೧೯೫೮

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ. ಪಿಹೆಚ್.ಡಿ.

೬. ವೃತ್ತಿ : ವ್ಯಾಕರಣ ಪ್ರಾಧ್ಯಾಪಕ

೭. ಕೌಟುಂಬಿಕ : ಪತ್ನಿ; ಸವಿತಾ. ಪುತ್ರಿಯರು; ವಾಣಶ್ರೀ, ಪದ್ಮಶ್ರೀ.

೮. ಸದ್ಯದ ವಿಳಾಸ : ಡಾ|| ಗಣಪತಿ ಭಟ್, ಶ್ರೀ ಗುರು ಭಾರತೀ.
ಕವಲಕ್ಕಿ ಅಂಚೆ-೫೮೧೩೬೧.
ಹೊನ್ನಾವರ ತಾ., ಉ.ಕ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೮೭-೨೭೯೪೪೬

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಉ.ಕ ಜಿಲ್ಲೆ ಸಿದ್ದಾಪುರದಲ್ಲಿ ಜನಿಸಿದರು. ಪ್ರಾಥಮಿಕ ಹಾಗೂ ಪ್ರೌಢ ವಿದ್ಯಾಭ್ಯಾಸವನ್ನು ಹಳ್ಳಿಬೈಲ್ ಮತ್ತು ಇಟಗಿಯಲ್ಲಿ ಮಾಡಿದ್ದಾರೆ. ಶ್ರೀ ಶೃಂಗೇರಿ ಜಗದ್ಗುರು ಶಾರದಾ ಪೀಠದ ಶ್ರೀ ಮಠದ ಸದ್ವಿದ್ಯಾ ಸಂಜೀವಿನಿ ಮಹಾವಿದ್ಯಾಲಯದಲ್ಲಿ ವೇದಾಧ್ಯಯನ ಮತ್ತು ಸಂಸ್ಕೃತ ಅಧ್ಯಯನ ಹಾಗೂ ನಾಟಕ, ಸಾಹಿತ್ಯಗಳ ಅಧ್ಯಯನವನ್ನೂ ಮಾಡಿದ್ದಾರೆ. ಆಂಧ್ರ ಪ್ರದೇಶ ರಾಜಮಂಡ್ರಿ ಶ್ರೀ ಗೌತಮ ಸಂಸ್ಕೃತ ಮಹಾವಿದ್ಯಾಲಯದಲ್ಲಿ ವ್ಯಾಕರಣ ಶಾಸ್ತ್ರ ಹಾಗೂ ಮಹಾಭಾಷ್ಯಾಂತ ಅಧ್ಯಯನ ಮಾಡಿದ್ದಾರೆ. ೧೯೭೭ರಲ್ಲಿ ವಿಶಾಖಪಟ್ಟಣ ಆಂಧ್ರ ವಿಶ್ವಾವಿದ್ಯಲಯದಲ್ಲಿ ವ್ಯಾಕರಣ ವಿದ್ಯಾ ಪ್ರವೀಣ ಪ್ರಥಮ ಶ್ರೇಣಿಯಲ್ಲಿ ಮಾಡಿದ್ದಾರೆ. ೧೯೮೦ರಲ್ಲಿ ಆಂಧ್ರ ವಿಶ್ವವಿದ್ಯಾಲಯ ಸಂಸ್ಕೃತ ಎಂ.ಎ. ಮಾಡಿದ್ದಾರೆ. ೧೯೮೧ರಲ್ಲಿ ಟಿ.ಟಿ.ಡಿ. ತಿರುಪತಿಯ ಆಗಮ ಶಾಸ್ತ್ರದಲ್ಲಿ ವಿದ್ವಾನ್ ಮಾಡಿದ್ದಾರೆ. ೧೯೯೬ರಲ್ಲಿ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದಿಂದ ವ್ಯಾಕರಣ ಶಾಸ್ತ್ರದಲ್ಲಿ ಸಂಶೋಧನ ಮಾಡಿ ಪಿಹೆಚ್.ಡಿ. ಪದವಿಗಳಿಸಿದ್ದಾರೆ. ೧೯೭೭ ರಿಂದ ೯೬ರವರಗೆ ಮಂತ್ರಾಲಯ ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ, ಪುಣೆಯಲ್ಲಿ ಹಾಗೂ ಗಂಗಾವತಿಗಳಲ್ಲಿ ಅಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ಅಲ್ಲಿಂದೀಚಗೆ ಶ್ರೀ ರಾಘವೇಂದ್ರ ಭಾರತಿ ಸವೇದ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೯೧ರಲ್ಲಿ ಇವರು ಪುಣೆಯಲ್ಲಿ 'ಹವ್ಯಕ ಪುಣೆ'ಸಂಸ್ಥೆಯನ್ನು ಸ್ಥಾಪಿಸಿದರು. ಇವರು ಹಲವಾರು ಕಡೆ ಸಂಸ್ಕೃತ ಸಂಭಾಷಣಾ ಶಿಬಿರಗಳನ್ನು ನಡೆಸಿದ್ದಾರೆ. ಇವರು ವಿಶಾಖಪಟ್ಟಣ, ಪುರಿ, ಹರಿದ್ವಾರ, ಕಲ್ಕತ್ತಾ, ಕಾಶಿ, ತಿರುಪತಿ ಮುಂತಾದ ಕಡೆ ನಡೆದ ಅಖಿಲ ಭಾರತ ಪ್ರಾಚ್ಯ ವಿದ್ಯಾ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಇವರ ಇನ್ನೂರಕ್ಕೂ ಹೆಚ್ಚು ಲೇಖನಗಳು ದಿನ, ವಾರ ಹಗೂ ಮಾಸ ಪತ್ರಿಕೆಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಲೇಖನಗಳು ತೆಲಗು, ಮರಾಠಿ ಪತ್ರಿಕೆಗಳಲ್ಲೂ ಪ್ರಕಟವಾಗಿವೆ. ಇವರ ಕೆಲವು ಕೃತಿಗಳು ಪಠ್ಯ ಪುಸ್ತಕಗಳಾಗಿವೆ. ಇವರ ಪ್ರಾರಂಭ ಲೇಖನ **ಶ್ರೀ ಶೈಲ ಪ್ರಭಾ** ಎಂಬ ತೆಲಗು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಶ್ರೀ ಶಂಕರ ಕೃಪಾ, ಧರ್ಮ ಭಾರತಿ, ಸ್ವರ್ಣ ವಲ್ಲಿ ಪ್ರಭಾ ಪತ್ರಿಕೆಗಳಲ್ಲೂ ಪ್ರಕಟವಾಗಿದೆ.

ಪ್ರಕಟಿತ ಕೃತಿಗಳು:
ಸೂಕ್ತಿ ಸಂ. – ಹಿರಿಯರ ಹಿತನುಡಿಗಳು.
ಭಕ್ತಿಸ್ತೋತ್ರ – ಕುಸುಮಾಂಜಲಿ.
ಕವನ ಸಂ. – ಪದ್ಯಾಣನ ಪದ್ಯೋದ್ಯಾನ.
ಮಕ್ಕಳಿಗಾಗಿ – ಜನನಿ ಜನಕ, ತಂದೆ–ತಾಯಿ.
ಸಂಸ್ಕೃತ – ಶ್ರೀ ಶಂಕರ ಚರಿತಮ್.

ಲಭಿಸಿರುವ ಪ್ರಶಸ್ತಿಗಳು:
೧ ೧೯೯೫ – ಮಂತ್ರಾಲಯ ವಿದ್ಯಾ ಪೀಠದ ಅತ್ಯುತ್ತಮ ಅಧ್ಯಾಪಕ ಪ್ರಶಸ್ತಿ.

ವ್ಯಕ್ತಿ ಪರಿಚಯ

ಗಣಪತಿ ಮಹಾಬಲೇಶ್ವರ ಚಿತ್ರಿಗೆಮಠ

೧.	ಹೆಸರು	:	ಗಣಪತಿ ಮಹಾಬಲೇಶ್ವರ ಚಿತ್ರಿಗೆಮಠ
೨.	ಕಾವ್ಯನಾಮ	:	'ಗಮಚಿ'
೩.	ಹುಟ್ಟಿದ ಸ್ಥಳ ದಿನಾಂಕ	:	ಗೋಕರ್ಣ (ಉ.ಕ.) , ೨೪-೦೭-೧೯೩೩
೪.	ಜಿಲ್ಲೆ - ರಾಜ್ಯ	:	ಕಾರವಾರ ಜಿಲ್ಲೆ, ಕರ್ನಾಟಕ ರಾಜ್ಯ.
೫.	ವಿದ್ಯಾಭ್ಯಾಸ	:	ಎಂ.ಎ., ಎಂ.ಎಡ್., ಪಿ.ಜಿ.ಡಿ.ಡಿ.ಇ.
೬.	ವೃತ್ತಿ	:	ನಿವೃತ್ತ ಪ್ರಾಧ್ಯಪಕ
೭.	ಕೌಟುಂಬಿಕ	:	ಪತ್ನಿ; ಗಿರಿಜಾ. ಇಬ್ಬರು ಪುತರು. ಇಬ್ಬರು ಪುತ್ರಿಯರು
೮.	ಸದ್ಯದ ವಿಳಾಸ	:	ಗಣಪತಿ ಮಹಾಬಲೇಶ್ವರ ಚಿತ್ರಿಗೆಮಠ, ನಿವೃತ್ತ ಪ್ರಾಧಾಪಕ, ಕೋಟಿ ತೀರ್ಥ ರಸ್ತೆ, ಗೋಕರ್ಣ - ೫೮೧೩೨೬
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೮೬ - ೨೫೬೧೫೬, ೯೪೪೮೧೮೨೪೪೬
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಕಾರವಾರ ಜಿಲ್ಲೆ ಗೋಕರ್ಣದಲ್ಲಿ ಜನಿಸಿದರು. ಶ್ರೀ ಕ್ಷೇತ್ರ ಗೋಕರ್ಣದ ಸಂಸ್ಕೃತ ವೈದಿಕ ಅವಿಭಕ್ತ ಕುಟುಂಬದಿಂದ ಬಂದವರು. ಮನೆತನದಲ್ಲಿ ಎಲ್ಲರೂ ಅಧ್ಯಾಪಕ, ಅಧ್ಯಾಪಕಿ ವೃತ್ತಿ ಮಾಡಿದವರು. ಪ್ರಾಥಮಿಕ ಶಿಕ್ಷಣ ಗೋಕರ್ಣದಲ್ಲೇ. ಮಾಧ್ಯಮಿಕ ಗೋಕರ್ಣ ಹಾಗೂ ಬಂಕಿಕೊಡ್ಲದಲ್ಲಿ ಮಾಡಿದರು. ಕುಮುಟಾದ ಕೆನರಾ ಕಾಲೇಜಿನಲ್ಲಿ ೧೯೫೫ ರಲ್ಲಿ ಇಂಟರ ಮೀಡಿಯೇಟ್ ಮಾಡಿದರು. ಕಡುಬಡತನದ ಜೀವನ. ವಿದ್ಯಾಭ್ಯಾಸವನ್ನು ಮುಂದುವರೆಸಲಾಗಲಿಲ್ಲ. ೧೯೫೬ರಲ್ಲಿ ಪ್ರೌಢಶಾಲೆಯೊಂದರಲ್ಲಿ ಶಿಕ್ಷಕರಾಗಿ ವೃತ್ತಿ ಜೀವನ ಆರಂಭ. ನಂತರ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸಿದರು. ವೃತ್ತಿಯಲ್ಲಿದ್ದುಕೊಂಡೇ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಬಿ.ಎ. ಪದವಿ ಹಾಗೂ ಎಂ.ಎ ಸ್ನಾತಕೋತ್ತರ ಪದವಿಗಳನ್ನು ಪಡೆದರು. ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯದಿಂದ ಎಂ.ಎ. ಹಾಗೂ ಇಂಧಿರಾಗಾಂಧಿ ಮುಕ್ತ ವಿ.ಯಿ.ಯಿಂದ 'ಪಿ.ಜಿ.ಡಿ.ಡಿ.ಇ.'ಶಿಕ್ಷಣದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಮಾಡಿದರು. ಅಲ್ಲದೆ ಕನ್ನಡ ಜಾಣ, ಹಿಂದಿ ಪ್ರವೀಣ ಪದವಿಯನ್ನೂ ಪಡೆದಿದ್ದಾರೆ. ಮಾಧ್ಯಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಸೇವೆ ಆರಂಭಿಸಿದ ಇವರು ಮುಂದೆ ಹಿರಿಯ ಶಿಕ್ಷಕರಾಗಿ, ಮುಖ್ಯಾಧ್ಯಾಪಕರಾಗಿ, ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ನಿವೃತ್ತಿಯ ನಂತರ ಪ್ರಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಶಾಲಾ, ಕಾಲೇಜು ದಿನಗಳಲ್ಲಿ ವಿದ್ಯಾರ್ಥಿಯಾಗಿರುವಾಗ, ಶಿಕ್ಷಕರಾಗಿರುವಾಗ ವಿವಿಧ ಸಾಹಿತ್ಯ ಸ್ಪರ್ಧೆಗಳಲ್ಲಿ, ಸಂಗೀತ, ನೃತ್ಯ, ನಾಟಕ ಹಾಗೂ ಬಯಲಾಟಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಗಣಿತ ಮತ್ತು ಭಾಷೆ ಇವರ ನೆಚ್ಚಿನ ವಿಷಯಗಳು. ಗಣಿತ ಶಿಕ್ಷಕರೆಂದು ವಿದ್ಯಾರ್ಥಿಗಳಿಂದ ಗುರುತಿಸಲ್ಪಡುತ್ತಿದ್ದರೂ. ಇವರೊಬ್ಬ ರಂಗ ಕಲಾವಿದ, ಒಳ್ಳೆಯ ಮಾತುಗಾರ. ಎಂಟು ವರ್ಷ ಪತ್ರಕರ್ತರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರ ಬರೆಹಗಳು ಉದಯವಾಣಿ, ಮುಂಜಾವು, ಜನಾಂತರಂಗ, ವಿಜಯ ಕರ್ನಾಟಕ, ಜನವಾಹಿನಿ ಹಾಗೂ ಡೆಕ್ಕನ್ ಹೆರಾಲ್ಡ್‌ಗಳಲ್ಲಿ ಪ್ರಕಟಫಾಗುತ್ತಿರುತ್ತದೆ. ೧೯೯೧ರಲ್ಲಿ ಇವರ ಪ್ರಥಮ ಕೃತಿ 'ಜನ ಸಂಖ್ಯಾ ಶಿಕ್ಷಣ'ಪ್ರಕಟವಾಗಿದೆ ಇವರ ಹಲವಾರು ಮಾಸ ಪತ್ರಿಕೆಗಳಲ್ಲಿ, ಶಿಕ್ಷಣ ಸಂಸ್ಥೆಗಳ ಸಂಚಿಕೆಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಪ್ರಕಟವಾಗಿವೆ. ಚುಟುಕಗಳನ್ನು ರಚಿಸಿರುವ ಇವರಿಗೆ ಸಂಪ್ರದಾಯ ಯಕ್ಷಗಾನದ ಬಗ್ಗೆಯೂ ವಿಶೇಷ ಆಸಕ್ತಿವುಳ್ಳವರಾಗಿದ್ದಾರೆ.

ಪ್ರಕಟಿತ ಕೃತಿಗಳು:

ಶಿಕ್ಷಣ – ಜನ ಸಂಖ್ಯಾಯ ಶಿಕ್ಷಣ.

ಯಕ್ಷಗಾನ – ಸೊರಗುತ್ತಿರುವ ಸಂಪ್ರದಾಯಕ ಯಕ್ಷಗಾನ.

ಕವನ – ಚುಟುಕಗಳು.

ಇತರೆ – ಗಣಿತ ಬೋಧನೆ.

ವ್ಯಕ್ತಿ ಪರಿಚಯ



ಗಣೇಶ ತಿ. ಮಾಗೋಡು

೧. ಹೆಸರು : ಗಣೇಶ ತಿಮ್ಮಣ್ಣ ಹೆಗಡೆ ಮಾಗೋಡು

೨. ಕಾವ್ಯನಾಮ : ತಿ ಗಣೇಶ

೩. ಹುಟ್ಟಿದ ಸ್ಥಳ ದಿನಾಂಕ : ಮಾಗೋಡು, ಹೊನ್ನಾವರ. ೨೦-೨-೧೯೭೦

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಪಿ.ಯು.ಸಿ., ಕರ್ನಾಟಕ.

೬. ವೃತ್ತಿ : ಕೃಷಿ (ಚಿತ್ರಕಲಾ ತರಬೇತಿ ನಡೆಸುವುದು)

೭. ಕೌಟುಂಬಿಕ : ಪತ್ನಿ; ವನಿತಾ. ಪುತ್ರ; ವಿಘ್ನೇಶ.

೮. ಸದ್ಯದ ವಿಳಾಸ : ಹೆಬ್ಬಾನಕೆರೆ ಅಂಚೆ, ಹೊನ್ನಾವರ ತಾ. (ಉ.ಕ.)

೯. ಖಾಯಂ ವಿಳಾಸ : ಮಾಗೋಡು ಅಂಚೆ, ಹೊನ್ನಾವರ ತಾ. (ಉ.ಕ.)

೧೦. ದೂರವಾಣಿ ಸಂಖ್ಯೆ : ೦೮೩೮೭-೨೯೦೩೦೦, ೨೬೫೮೯೩,
೯೪೮೨೦೯೯೪೯, ೯೩೪೩೫೯೬೬೧೯

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಮಾಗೋಡದಲ್ಲಿ ಜನಿಸಿದರು. ಇವರು ಶ್ರೀ ತಿಮ್ಮಣ್ಣ ಗಣೇಶ ಹೆಗಡೆ ಮತ್ತು ಶ್ರೀಮತಿ ಸರಸ್ವತಿ ದಂಪತಿಗಳ ಪುತ್ರ. ಇವರು ಪ್ರಾಥಮಿಕ ಶಿಕ್ಷಣವನ್ನು ಮಾಗೋಡದಲ್ಲೇ ಪಡೆದರು. ಪ್ರೌಢ ಶಿಕ್ಷಣ ಎಸ್.ಕೆ.ಪಿ. ಜೂನಿಯರ್ ಕಾಲೇಜು ಅರೇಅಂಗಡಿಯಲ್ಲಿಯೂ, ಉನ್ನತ ಶಿಕ್ಷಣವನ್ನು ಸ್ಕೂಲ್ ಆಫ್ ಆರ್ಟ್ಸ್ ಧಾರವಾಡ -ಹಾಲಬಾವಿಯಲ್ಲಿಯೂ ಪಡೆದರು. ಇವರು ಯಕ್ಷಗಾನ ಹಿನ್ನಲೆ ಕುಟುಂಬದಿಂದ ಬಂದವರು. ವೃತ್ತಿಯಿಂದ ಕೃಷಿಕರು. ಪ್ರವೃತ್ತಿಯಿಂದ ಸಾಹಿತಿಗಳು. ಎ.ಕೆ. ಭಟ್ ಮತ್ತು ಜಿ. ಆರ್. ಭಟ್ಟ ಮುಂತಾದ ಗುರುಗಳ ಪ್ರಭಾವ ಇವರ ಮೇಲೆ ಬೀರಿದ್ದಾರೆ. ಸಾಹಿತ್ಯಾಸಕ್ತರಾದ ಇವರು ಕವನ, ಚುಟುಕ, ಹರಟೆ, ಲೇಖನ ಬರೆಯುತ್ತಾರೆ. ಬಾಲ್ಯದಿಂದಲೇ ಇವರು ಬಾಮಿನಿ, ವಾರ್ಧಕ, ಕಂದಪದ್ಯ, ರಗಳೆ ಇತ್ಯಾದಿ ಛಂದಸ್ಸುಗಳಲ್ಲಿ ಕಾವ್ಯ ರಚಿಸುತ್ತಿದ್ದರು. ಸುಗಮ ಸಂಗೀತ. ನಾಟಕಾಭಿನಯ, ಯಕ್ಷಗಾನ ಪಾತ್ರಭಿನಯ, ಅರ್ಥಧಾರಿ ಹಾಡುಗಾರಿಕೆ ಇತ್ಯಾದಿ ಹವ್ಯಾಸಗಳೊಂದಿಗೆ ನಾಟಕ ಪಾತ್ರಗಳ ಮೇಕಪ್ ಮಡುವುದು. ಜನಪದ, ನೃತ್ಯ, ಕೀರ್ತನ, ಗಮಕ ಹಾಗೂ ರಾಗ ಸಂಯೋಜನೆಯನ್ನೂ ಮಾಡುತ್ತಾರೆ. ಸಭೆ-ಸಮಾರಂಭಗಳಲ್ಲಿ ಭಾಗವಹಿಸಿ ಭಾಷಾಣ, ಪ್ರವಚನ ಮಾಡುತ್ತಾರೆ. ಚರ್ಚೆ ಮಾಡುತ್ತಾರೆ. ಇವರ ಕವನ, ವಿಮರ್ಶೆ ಮುಂತಾದ ಬರೆಹಗಳು ನಾಗರಿಕ, ಕನ್ನಡ ಜನತಾರಂಗ, ಸುಮುಖ, ಸಂಯುಕ್ತ ಕರ್ನಾಟಕ, ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ವಿಘ್ನೇಶ ಆರ್ಟ್ಸ್ ಹೆಸರನಡಿ ಇವರು ಚಿತ್ರ ಬರೆಯುವುದು, ಬೋರ್ಡ್ ಬರೆಯುವುದು ಮಾಡುತ್ತಾರೆ. ಪ್ರಾಥಮಿಕ ಮತ್ತು ಪ್ರೌಢಶಾಲ ಮಕ್ಕಳಿಗೆ ಚಿತ್ರಕಲಾ ಶಿಕ್ಷಣ ನೀಡುತ್ತಾರೆ. ಸ್ಕ್ರೀನ್ ಪ್ರಿಂಟಿಂಗ್, ಫೋಟೋಗ್ರಫಿ ಹಾಗೂ ವಿಡಿಯೋ ಗ್ರಫಿ ಕೂಡ ಮಾಡುತ್ತಾರೆ. ಇವರು ೧೯೮೯ರಲ್ಲಿ ಧಾರವಾಡದಲ್ಲಿ ಬಯಲು ರಂಗಮಂದಿರ ಉತ್ತೇಜನ-೮೯ , ೧೯೯೦ರಲ್ಲಿ ಕಲಾಭವನ ಉತ್ತೇಜನ-೯೦ ೧೯೯೦ರಲ್ಲಿ ಹೆತ್ತೂರ ಹತ್ತು ಕವಿಗಳು ಹಾಗೂ ಕತ್ತಲಲ್ಲಿ ತ್ರಿಮೂರ್ತಿ ನಾಟಕ ರಚನೆ ನಿರ್ದೇಶನ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ. ೨೦೦೯ರಲ್ಲಿ ಹೊನ್ನಾವರ ತಾಲೂಕು ಇಡುಗುಂಜಿಯಲ್ಲಿ ಉತ್ತೇಜನ-೨೦೦೯ ಕಾರ್ಯಕ್ರಮ ನಡೆಸಿದ್ದಾರೆ. ಇವರು ಸ್ಥಳದಲ್ಲೇ ಕ್ಷಣದಲ್ಲಿ ಗೀತೆ ರಚಿಸಿ ಅದಕ್ಕೆ ರಾಗ ಸಂಯೋಜಿಸಿ ಹಾಡುತ್ತಾ ಚಿತ್ರ ಬಿಡಿಸುವ ಕಾರ್ಯಕ್ರಮ ಗೀತ-ರಾಗ-ಚಿತ್ರ-ಗಾನ ಏಕವ್ಯಕ್ತಿ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಉತ್ಸವ, ಸಮ್ಮೇಳನಗಳಲ್ಲಿ ನಡೆಸಿಕೊಡುತ್ತಾರೆ.

ಪ್ರಕಟಿತ ಕೃತಿಗಳು:

ಕವನ ಸಂ. – ಕುರುಡು ಮೃಗ. **ಚುಟುಕ ಸಂ.** – ನೂರು ನುಚ್ಚು.

ಸಂಪಾದಿತ ಕವನ ಸಂ. –ಆರು ಜೀವ ನೂರು ಭಾವ.

ವ್ಯಕ್ತಿ ಪರಿಚಯ

ಗಣೇಶ. ವಿ.

೧. ಹೆಸರು	:	ವಿ. ಗಣೇಶ
೨. ಕಾವ್ಯನಾಮ	:	ಇರುವುದಿಲ್ಲ
೩. ಹುಟ್ಟಿದ ಸ್ಥಳ ದಿನಾಂಕ	:	ಹನಿಯ, ೭-೧೦-೧೯೪೭
೪. ಜಿಲ್ಲೆ - ರಾಜ್ಯ	:	ಶಿವಮೊಗ್ಗ, ಕರ್ನಾಟಕ.
೫. ವಿದ್ಯಾಭ್ಯಾಸ	:	ಎಂ.ಎಸ್.ಸಿ., ಎಂ.ಎ., ಬಿ.ಎಡ್.
೬. ವೃತ್ತಿ	:	ವಿಶ್ರಾಂತ ಪ್ರಾಂಶುಪಾಲರು.
೭. ಕೌಟುಂಬಿಕ	:	ಪತ್ನಿ; ನಿರ್ಮಲ ಗಣೇಶ. ಪುತ್ರರು; ಅವಿನಾಶ ವಿ.ಜಿ., ಆಕಾಶ ವಿ.ಜಿ.
೮. ಸದ್ಯದ ವಿಳಾಸ	:	ನಂ. ೫೬, ಚಾಮರಾಜ ಪೇಟೆ, ಸಾಗರ-೫೭೭೪೦೧. ಶಿವಮೊಗ್ಗ ಜಿಲ್ಲೆ.
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೮೧೮೩-೨೨೧೭೧೯, ೯೪೪೮೬೨೭೮೪೫.
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕು ಹನಿಯದಲ್ಲಿ ಜನಿಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ವಂದಗದ್ದೆ ಹೊಸನಗರ ತಾಲೂಕಿನಲ್ಲಿ ೧ ರಿಂದ ೪. ೫ ರಿಂದ ೮ ನಗರ ಪ್ರೌಢ ವಿದ್ಯಾಭ್ಯಾಸ ಸಾಗರ, ಶಿವಮೊಗ್ಗಗಳಲ್ಲಾಯಿತು. ಕಾಲೇಜು ಲಾಲ್ ಬಹದೂರ ಕಾಲೇಜ್ ಸಾಗರ. ಅಲ್ಲೇ ಬಿ.ಎಸ್.ಸಿ ಪದವಿ ಗಳಿಸಿದರು. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂ.ಎಸ್.ಸಿ. ಮ್ಯಾಥ್‌ಮೆಟಿಕ್ಸ್ ನಾಲ್ಕನೇ ರ್‍ಯಾಂಕನಲ್ಲಾಯಿತು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಸ್ನಾತಕೋತ್ತರ ಪದವಿ. ಬೆಂಗಳುರು ವಿಶ್ವವಿದ್ಯಾಲಯಯಲ್ಲಿ ಬಿ.ಎಡ್. ಆಯಿತು. ಸರ್ಕಾರಿ ಪದವಿಪೂರ್ವ ಕಾಲೇಜ್ ಸಾಗರದಲ್ಲಿ ವೃತ್ತಿ ಜೀವನ ಆರಂಭ. ನಂತರ ಶಿಕಾರಿ ಪುರ, ಭದ್ರಾವತಿ ಹಾಗೂ ನಿಟ್ಟೂರುಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಂತರ ಪ್ರಾಂಶುಪಾಲರಾಗಿ ಬಡ್ತಿ ಪಡೆದರು. ಒಟ್ಟು ೩೬ವರ್ಷಗಳ ಅನುಭವ. ಪ್ರವೃತ್ತಿಯಿಂದ ಸಾಹಿತಿಗಳಾದ ಇವರ ಸಾಹಿತ್ಯ ಚಟುವಟಿಕೆಗಳು ವಿದ್ಯಾರ್ಥಿ ದೆಸೆಯಿಂದಲೇ ಪ್ರಾರಂಭವಾಯಿತು. ಕಥೆ, ಕವನ ಹಾಗೂ ಲೇಖನಗಳನ್ನು ಬರೆಯತೊಡಗಿದರು. ನಾಡಿನ ಅನೇಕ ಪತ್ರಿಕೆಗಳಲ್ಲಿ ಇವರ ಸಣ್ಣ ಕಥೆಗಳು, ಕವನಗಳು ಹಾಗೂ ಲೇಖನಗಳು ಪ್ರಕಟವಾಗಿವೆ. ಇವರಿಗೆ ಕನ್ನಡದಷ್ಟೇ ಇಂಗ್ಲೀಷಿನಲ್ಲೂ ಪಾಂಡಿತ್ಯವಿದ್ದು ಅನುವಾದ ಕೂಡ ಮಾಡುತ್ತಾರೆ. ೨೦೦೦ನೇ ಇಸವಿಯಲ್ಲಿ ಪ್ರಥಮ ಕವನ ಸಂಕಲನ ಪ್ರಕಟವಾಯಿತು. ೨೦೦೫ರಲ್ಲಿ ಇವರು ಚಂದನ ಪತ್ರಿಕೆಯ ಸಂಪಾದಕರಾದರು. ೨೦೦೬ರಲ್ಲಿ ಇವರು ಉಡುಪರ ಆಯ್ದ ಕಾಥೆಗಳು ಸಂಪಾದಿಸಿದರು. ಇವರ ಬರೆಹಗಳು ನಾಡಿನ ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಹೊಸತು, ಓ ಮನಸೇ, ನಾವಿಕ, ಮಲೆನಾಡು, ಮಲ್ಲಿಗೆ, ಯುಗಪುರುಷ ಮುಂತಾದವುಗಳಲ್ಲಿ ಪ್ರಕಟವಾಗಿವೆ. ಇವರು ಮಕ್ಕಳ ಕಥೆಗಳನ್ನು ಬರೆಯುತ್ತಾರೆ. ಮಕ್ಕಳ ಕಥಾ ಸಂಕಲನ ಒಂದು ಮುದ್ರಣಾಲಯದಲ್ಲಿದೆ

ಪ್ರಕಟಿತ ಕೃತಿಗಳು:
ಕಥಾ ಸಂ. – ತಿರುಗುಬಾಣ.
ಕವನ ಸಂ. – ಅಂತರಂಗದ ಹೂವು.
ಸಂಪಾದಿತ ಕೃತಿ – ಉಡುಪರ ಆಯ್ದ ಕಥೆಗಳು, ಪತ್ರಿಕಾ ರತ್ನ ಪಟ್ಟಾಭಿ, ಚಂದನ.
ಅನುವಾದಿತ ಕಥಾ ಸಂ. – ಬರಗಾಲ

ವ್ಯಕ್ತಿ ಪರಿಚಯ

ಗಾಯತ್ರೀ ಎಸ್.ಉಡುಪ

೧.	ಹೆಸರು	: ಗಾಯತ್ರೀ ಎಸ್.ಉಡುಪ
೨.	ಕಾವ್ಯನಾಮ	: ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	: ಕಾರ್ಕಳ, ೨೫-೦೮-೧೯೫೬.
೪.	ಜಿಲ್ಲೆ - ರಾಜ್ಯ	: ಉಡುಪಿ ಜಿಲ್ಲೆ, ಕರ್ನಾಟಕ.
೫.	ವಿದ್ಯಾಭ್ಯಾಸ	: ಎಂ.ಎ., ಬಿ.ಎಡ್.
೬.	ವೃತ್ತಿ	: ಅಧ್ಯಾಪಿಕೆ
೭.	ಕೌಟುಂಬಿಕ	: ಪತಿ; ಕೊಡತ್ತೂರ ಸಚ್ಚಿದಾನಂದ ಉಡುಪ, ಮಕ್ಕಳು; ಮಿಥುನ, ರತುನ ಮತ್ತು ಶಕುನ
೮.	ಸದ್ಯದ ವಿಳಾಸ	: ಅನಂತ ಪ್ರಕಾಶ, ಕಿನ್ನಗೋಳಿ ೫೭೪೧೫೦
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೦೮೨೫೮-೨೨೦೦೧೨೨, ೯೪೪೮೧೧೪೧೭೯೬
೧೧.	ಹಸ್ತಾಕ್ಷರ (ಸಹಿ)	: ಗಾಯತ್ರೀ ಎಸ್.ಉಡುಪ

ಸಾಹಿತ್ಯ ಪರಿಚಯ

ಇವರು ಉಡುಪಿ ಜಿಲ್ಲೆ ಕಾರ್ಕಳದಲ್ಲಿ ಜನಿಸಿದರು. ಇವರು ಶ್ರೀ ಬಿ. ಶಿವರಾಂ ವಾರಂಬಳ್ಳಿ ಮತ್ತು ಶ್ರೀಮತಿ ಕಮಲಾಕ್ಷಿ ವಾರಂಬಳ್ಳಿ ದಂಪತಿಗಳ ಮಗಳು. ಎಂ.ಎ., ಬಿ.ಎಡ್. ಕನ್ನಡದಲ್ಲಿ ಮಾಡಿ ಶ್ರೀ ಸುಬ್ರಹ್ಮಣ್ಯ ಸ್ವಾಮಿ ಪ್ರೌಢ ಶಾಲೆಯಲ್ಲಿ ಅಧ್ಯಾಪಕಿಯಾಗಿದ್ದಾರೆ. ಇವರು ಕಿನ್ನಿಗೋಳಿಯ 'ಅನಂತ ಪ್ರಕಾಶ' ಮಾಸ ಪತ್ರಿಕೆಯ ಸಂಪಾದಕರಾದ ಶ್ರೀ ಸಚ್ಚಿದಾನಂದ ಉಡುಪರ ಪತ್ನಿ. ಸಾಹಿತ್ಯ ಸಂಸ್ಕೃತಿಗಳ ಹಿನ್ನಲೆಯ ಕುಟುಂಬ. ಹಾಗಾಗಿ ವಿದ್ಯಾರ್ಥಿ ದೆಸೆಯಲ್ಲಿ ಸಾಹಿತ್ಯಾಸಕ್ತಿ. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಜೂನಿಯರ್ ಉತ್ತೀರ್ಣರಾಗಿದ್ದಾರೆ. ಸತತ ಸಂಗೀತಾಭ್ಯಾಸಿ. ಸಂಗೀತ ತರಬೇತಿ ಶಿಬಿರಗಳಲ್ಲಿ ಭಾಗವಹಿಸುತ್ತಾರೆ. ಹತ್ತು ವರ್ಷಗಳಿಂದ ಆಕಾಶವಾಣಿಯಲ್ಲಿ ಭಾವಗೀತೆ, ಭಕ್ತಿ ಗೀತೆ ಹಾಡುವ 'ಬಿ' ಗ್ರೇಡ್ ಕಲಾವಿದೆ. ಸಂಗೀತ ತರಬೇತಿ ನಡೆಸುತ್ತಾರೆ. ಮಹಿಳಾ ಸಂಘಟನೆ, ಯುವಜನ ಮೇಳ ಸುವರ್ಣ ಸಹಕಾರಿ ಉತ್ಸವಗಳು ನಡೆಸುವ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದಾರೆ. ಸ್ವತಃ ಹುಟ್ಟು ಹಾಕಿದ 'ವಾಗ್ದೇವಿ ಭಜನಾ ಮಂಡಳಿ–೨೦೦೦' ನೂರೈವತ್ತಕ್ಕೂ ಹೆಚ್ಚು ಕಡೆ ಕಾರ್ಯಕ್ರಮಗಳನ್ನು ನೀಡಿದೆ. ಇವರು ೧೫ರ ಹರೆಯದಲ್ಲೇ ಕಥೆ, ಕವನದ ಸಾಹಿತ್ಯ ರಚನೆ ಪ್ರಾರಂಭಿಸಿದರು. ಇವೆಲ್ಲಾ 'ಕೃಷಿಕರ ಸಂಘಟನೆ' ಪತ್ರಿಕೆಯಲ್ಲಿ ಪ್ರಕಟವಾಯಿತು. ನಂತರ ಇವರ ಬರೆಹಗಳು ತುಷಾರ, ತರಂಗ, ಉದಯವಾಣಿ, ಮಂಗಳ, ಕನ್ನಡ ಪ್ರಭ ಇತ್ಯಾದಿ ಪತ್ರಿಕೆಗಳಲ್ಲಿಯೂ ಪ್ರಕಟವಾಗುತ್ತಿವೆ. ಮಂಗಳೂರು ಆಕಾಶವಾಣಿಯಲ್ಲಿ ಇವರ ರೂಪಕಗಳು, ಚಿಂತನಗಳು ಪ್ರಸಾರವಾಗುತ್ತಿವೆ. ಪತ್ರಿಕೆಗಳ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಾಹಿತ್ಯ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ. ತಾಲೂಕು ಜಿಲ್ಲಾ ಸಾಹಿತ್ಯ ಸಮ್ಮೇಳನ, ವಿಚಾರ ಗೋಷ್ಠಿ ಇತ್ಯಾದಿಗಳಲ್ಲಿ ಭಾಗವಹಿಸುತ್ತಾರೆ. ಇವರು ೧೯೮೬ರಲ್ಲಿ ಕಿನ್ನಿಗೋಳಿ ಜೇಸಿಸ್ ಸಂಸ್ಥೆ ಅಧ್ಯಕ್ಷೆ. ೧೯೯೦ರಲ್ಲಿ ಜೇಸಿರೇಟ್ ರಾಜ್ಯ ತರಬೇತುದಾರಳಾಗಿ ೨೫ ಕಡೆಗಳಲ್ಲಿ ತರಬೇತಿ ನೀಡಿದ್ದಾರೆ. ವಿವಿಧ ಮಹಿಳಾ ಸಂಸ್ಥೆಗಳ ಸದಸ್ಯೆಯಾಗಿದ್ದಾರೆ. ದ.ಕ. ಜಿಲ್ಲೆ ಮೂರು ಮಹಿಳಾ ಯಕ್ಷಗಾನ ಸಂಘಟನೆ ಹಾಗೂ ನಾಟಕಗಳಲ್ಲಿ ಹವ್ಯಾಸಿ ಸ್ತ್ರೀ ಪಾತ್ರಧಾರಣೆ. ಹಲವು ಸ್ಪರ್ಧೆಗಳ ತೀರ್ಪುಗಾರರಾಗಿದ್ದಾರೆ. ಹಲವು ಸಭೆ, ಸಮಾರಂಭಗಳಲ್ಲಿ ಅತಿಥಿಯಾಗಿ, ಭಾಷಾಣಗಾರ್ತಿಯಾಗಿ, ಸ್ಮರಣ ಸಂಚಿಕೆ ಸಂಪಾದಕಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಇನ್ನಷ್ಟು ಕವಿತೆಗಳು, ಗೃಹಿಣೀ ಗೀತಾ. **ಶಿಶು ಕಾವ್ಯ** – ಕಂದನ ಕನಸು, ಗೌರಿಯ ಗೊಂಬೆ, ಗೊಂಬೆ ತಂದ್ಕೊಡೆ. **ಕಥಾ ಸಂ.** – ಹಪ್ಪಳ ಮತ್ತು ಇತರ ಕಥೆಗಳು.

ಲಭಿಸಿರುವ ಪ್ರಶಸ್ತಿಗಳು:
೧. ೧೯೮೭ – ಕರ್ನಾಟಕ ರಾಜ್ಯ ಜೇಸಿರೇಟ್ – ರಾಜ್ಯದ ಅತ್ಯುತ್ತಮ ಜೇಸಿರೇಟ್ – ಪ್ರಶಸ್ತಿ.
೨. ಜೇಸಿ ಪ್ರಾದೇಶಿಕ ಸಮ್ಮೇಳನ ರಾಜ್ಯ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ಬಹುಮಾನ.
೩. ರಾಜ್ಯ ಜೇಸಿರೇಟ್ ಸಮ್ಮೇಳನದ ಏಕಪಾತ್ರಾಭಿನಯ ಪ್ರಥಮ ಸ್ಥಾನ.

ವ್ಯಕ್ತಿ ಪರಿಚಯ

ಗಿರಿಮನೆ ಶ್ಯಾಮರಾವ್

೧. ಹೆಸರು : ಗಿರಿಮನೆ ಶ್ಯಾಮರಾವ್

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಗಾಣದಹೊಳೆ ಗ್ರಾಮ, ಸಕಲೇಶಪುರ,
೨೯-೦೨-೧೯೫೬.

೪. ಜಿಲ್ಲೆ - ರಾಜ್ಯ : ಹಾಸನ ಜಿಲ್ಲೆ, ಕರ್ನಾಟಕ.

೫. ವಿದ್ಯಾಭ್ಯಾಸ : ಸಕಲೇಶಪುರ

೬. ವೃತ್ತಿ : ಕೃಷಿ, ವ್ಯಾಪಾರ.

೭. ಕೌಟುಂಬಿಕ : ಪತ್ನಿ; ಶಶಿಕಲ. ಪುತ್ರ; ಚೇತನ ಶರ್ಮ.

೮. ಸದ್ಯದ ವಿಳಾಸ : ಲಕ್ಷ್ಮೀಪುರಂ ಬಡವಣೆ,
ಸಕಲೇಶಪುರ ೫೭೩೧೩೪

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೭೩೯೫೨೫೫೧೪

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಹಾಸನ ಜಿಲ್ಲೆ ಸಕಲೇಶಪುರ ತಾಲೂಕು ಗಾಣದಹೊಳೆ ಗ್ರಾಮದಲ್ಲಿ ಜನಿಸಿದರು. ಇವರು ಶ್ರೀ ಜಿ.ಕೆ. ನಾರಾಯಣ ಭಟ್ ಮತ್ತು ಶ್ರೀಮತಿ ಲಕ್ಷ್ಮೀದೇವಿ ದಪತಿಗಳ ಪುತ್ರ. ಇವರ ಪ್ರಥಾಮಿಕ ಶಿಕ್ಷಣ ಹುಟ್ಟೂರಲ್ಲೇ, ಮಾಧ್ಯಮಿಕ ಮತ್ತು ಪ್ರೌಢ ಶಾಲಾಭ್ಯಾಸ ಸಕಲೇಶಪುರದಲ್ಲಿ. ಶಾಲಾದಿನಗಳಿಂದಲೇ ಸಾಹಿತ್ಯಾಸಕ್ತಿ, ಕಥೆ ಓದುತ್ತಿದ್ದರು. ಕ್ರೀಡೆ ಹವ್ಯಾಸ. ವೃತ್ತಿಯಿಂದ ಕೃಷಿಕರು. ವ್ಯಾಪರದಲ್ಲೂ ಆಸಕ್ತಿ. ಮೂವತ್ತೈದು ವರುಷಗಳ ಕಾಲ ಹುಟ್ಟೂರಲ್ಲೇ ಕೃಷಿಕರಾಗಿ ಕಳೆದರು. ನಂತರ ಹತ್ತು ವರ್ಷಗಳು ಔಷಧಿ ಅಂಗಡಿ ನಡೆಸುತ್ತಾ ಸಕಲೇಶಪುರದಲ್ಲಿ ನೆಲೆಸಿದ್ದಾರೆ. ಇವರು ಚುಟುಕ, ಲೇಖನ, ಕಾದಂಬರಿ ಇತ್ಯಾದಿ ಬರೆಯುತ್ತಾರೆ. ಇವರ ಬರೆಹಗಳು ಕನ್ನಡ ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವರ ಚುಟುಕ ಸಂಕಲನ ಪ್ರಥಮ ಕೃತಿ. ಇವರ ನಲವತ್ತೈದನೇ ವಯಸ್ಸಿನಲ್ಲಿ ಪ್ರಕಟವಾಯಿತು. ಇವರ ಮೊದಲ ಕಾದಂಬರಿ 'ಕಾಫಿ ನಾಡಿನ ಕಿತ್ತಳೆ'ಸುಧಾ ವಾರ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಈ ಕಾದಂಬರಿಯ ಕೆಲವು ಭಾಗವನ್ನು ಆಯ್ಕೆ ಮಾಡಿ ಮಕ್ಕಳ ಸಾಹಿತ್ಯ ಮಾಲೆಯಲ್ಲಿ ಪ್ರಕಟಿಸಿದೆ. ಇವರು ರಚಿಸಿದ 'ವ್ಯಕ್ತಿತ್ವ ವಿಕಸನ' ಲೇಖನ ಮಾಲೆ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಇವರದೊಂದು ಕಾದಂಬರಿ 'ಪಶ್ಚಿಮ ಬೆಟ್ಟದ ತಪ್ಪಲಿನಲ್ಲಿ' ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ 'ರಾಕ್ಷಸ' ಕಾದಂಬರಿ ಧಾರಾವಾಹಿಯಾಗಿ ಪ್ರಕಟವಾಗಿದೆ. 'ಒಂದು ಆನೆಯ ಸುತ್ತ' ಕಾದಂಬರಿ ಕರ್ಮವೀರ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಇವರು ಸಂಯುಕ್ತ ಕರ್ನಾಟಕದಲ್ಲಿ ಎರಡು ವರ್ಷಗಳಿಂದ 'ವಿಚಾರ ರಶ್ಮಿ'ಅಂಕಣಕಾರರಾಗಿದ್ದಾರೆ. ಇವರು ಒಟ್ಟು ೧೩ ಮಕ್ಕಳ ಕಥೆಗಳು ಸುಧಾ ಮತ್ತು ಕರ್ಮವೀರ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇತ್ತೀಚೆಗೆ 'ಮಾತು ಹೇಗಿದ್ದರೆ ಚೆನ್ನ?' ವ್ಯಕ್ತಿತ್ವ ಕುರಿತಾದ ಲೇಖನಮಾಲೆ ಪ್ರಜಾವಾಣಿಯಲ್ಲಿ ಪ್ರಕಟವಾಗಿದೆ. ಅದೇ ಪತ್ರಿಕೆಯಲ್ಲಿ 'ನುಡಿ ನಡೆ' ದಿನದ ಅಂಕಣವಾಗಿ ಬರೆಯುತ್ತಿದ್ದಾರೆ. ಹಾಸನ ಆಕಾಶಾವಾಣಿಯಲ್ಲಿ ಎರಡೂವರೆ ವರ್ಷಗಳಿಂದ 'ಚಿಂತನ' ಪ್ರಸಾರವಾಗುತ್ತಿದೆ. ಪತ್ರಿಕೆ, ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಇವರ ಸಂದರ್ಶನಗಳು ಪ್ರಸಾರವಾಗಿವೆ. ಇವರು ಸದ್ಯದಲ್ಲೇ ಪ್ರಕಾಶಕರು ಆಗಲಿದ್ದಾರೆ.

ಪ್ರಕಟಿತ ಕೃತಿಗಳು:
ಚುಟುಕ ಸಂ. – ಧ್ವನಿ, ಚಿಂತನ, ಜಿಜ್ಞಾಸೆ.
ಕಾದಂಬರಿ – ಕಾಫಿ ನಾಡಿನ ಕಿತ್ತಳೆ, ಪಶ್ಚಿಮ ಘಟ್ಟದ ತಪ್ಪಲಿನಲ್ಲಿ, ರಾಕ್ಷಸ, ಒಂದು ಆನೆಯ ಸುತ್ತ.
ಲೇ- ನ ಸಂ. – ಮಕ್ಕಳನ್ನು ಬೆಳೆಸುವುದು ಹೇಗೆ?.
ವೈಚಾರಿಕ – ವಿಚಾರ ರಶ್ಮಿ

ವ್ಯಕ್ತಿ ಪರಿಚಯ

ಗೀತಾ ಕೋಗಲೂರು

೧.	ಹೆಸರು	:	ಗೀತಾ ಕೋಗಲೂರು
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಹಿರೇಕೋಗಲೂರು. ೪-೧೨-೬೨
೪.	ಜಿಲ್ಲೆ - ರಾಜ್ಯ	:	ದಾವಣಗೆರೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ. ಕನ್ನಡ.
೬.	ವೃತ್ತಿ	:	ಹೊಲಿಗೆ ತರಬೇತಿ ನೀಡುವ ಶಿಕ್ಷಕಿ
೭.	ಕೌಟುಂಬಿಕ	:	ಅವಿವಾಹಿತರು
೮.	ಸದ್ಯದ ವಿಳಾಸ	:	ಗೀತಾಕೋಗಲೂರು, ಲೇಖಕಿ, ಹಿರೇಕೋಗಲೂರು, ಚೆನ್ನಗಿರಿ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೧೮೦-೨೫೫೭೦೪, ೯೪೪೮೯೨೫೧೦೪.
೧೧.	ಹಸ್ತಾಕ್ಷರ (ಸಹಿ)	:	ಗೀತಾಕೋಗಲೂರು

ಸಾಹಿತ್ಯ ಪರಿಚಯ

ಇವರು ದಾವಣಗೆರೆ ಜಿಲ್ಲೆ ಹಿರೇಕೋಗಲೂರಿನಲ್ಲಿ ಜನಿಸಿದರು. ಹುಟ್ಟಿನಿಂದಲೇ ಕಾಲುಗಳು ಸ್ವಾಸ್ಥ್ಯವಿಲ್ಲದೆ ಶಾಲೆಗೆ ಸೇರುವುದಾಗಲಿಲ್ಲ. ವಿದ್ಯಾಭ್ಯಾಸವಿಲ್ಲದೆ ಇರುವುದೂ ಸಾಧ್ಯವಿಲ್ಲ. ಮನೆಯಲ್ಲಿರುವ ವಿದ್ಯಾವಂತ ಹಿರಿಯರ ಸಹಾಯದಿಂದ ಅಕ್ಷರಾಭ್ಯಾಸ ಮಾಡಿದರು. ಓದು-ಬರೆಹ ಕಲಿತರು. ಆಗಿನಿಂದಲೇ ಸಾಹಿತ್ಯಾಸಕ್ತಿಯೂ ಹುಟ್ಟಿತು. ಕವನ, ಲೇಖನ ಬರೆಯಲಾರಂಭಿಸಿದರು. ಮೂವತ್ತೈದು ವಯಸ್ಸಿಗೆ ಮೈಸೂರು ಮುಕ್ತ ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪರೀಕ್ಷೆಗಳಿಗೆ ಕುಳಿತು ಉತ್ತೀರ್ಣರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ರತ್ನ ಪದವಿ ಪಡೆದರು. ಬೆಂಗಳೂರಿನ ಕಲಾ ಟೈಲರಿಂಗ ಸ್ಕೂಲ್ ಮುಖಾಂತರ ಅಂಚೆಯಲ್ಲಿ ಹೊಲಿಗೆ ಡಿಪ್ಲೊಮಾ ಮಾಡಿಕೊಂಡರು. ಪ್ರಸ್ತುತ ಹೊಲಿಗೆ ತರಬೇತಿ ನೀಡುವ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ರಚಿಸಿದ ಕವನ, ಲೇಖನ ಪ್ರತಿಕ್ರಿಯೆ, ವಾಚಕರವಾಣಿ ಇತ್ಯಾದಿ ಬರೆಹಗಳು ಪ್ರಸಿದ್ಧ ಪತ್ರಿಕೆಗಳಾದ ಪ್ರಜಾವಾಣಿ, ಸುಧಾ, ವನಿತಾ, ಗ್ರಾಮೀಣ ವಾಣಿ, ತಳಿರು ತೋರಣ, ಕನ್ನಡ ನುಡಿ, ಸ್ತ್ರೀ ಪ್ರಗತಿ ಮುಂತಾದ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವರು ಕಿರಣ್ ಬೇಡಿ ಯುವತಿ ಮಂಡಲಿ ಕಿತ್ತೂರು ಚೆನ್ನಮ್ಮ ಮಹಿಳಾ ಮಂಡಳಿ, ಸ್ನೇಹ ವೃಂದ ಯುವಕ ಸಂಘ ಮೇರಿಕ್ಯೂರಿ ಗ್ರಾಮಾಂತರ ವಿಜ್ಞಾನ ಘಟಕ ಮುಂತಾದ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಿರಂತರ ನಾಲ್ಕು ವರ್ಷಗಳಿಂದ ಇವರೇ ಸಂಪಾದಕಿಯಾಗಿರುವ ಉದಯ ಎಂಬ ವಾರ್ಷಿಕ ಕೈ ಬರೆಹ ಪತ್ರಿಕೆ ಹೊರತರಲಾಗುತ್ತಿದೆ. ಇದರಲ್ಲಿ ಉದಯೋನ್ಮುಖ ಲೇಖಕರ ಬರೆಹಗಳು ಇರುತ್ತವೆ. ಇವರು ಕಿತ್ತೂರು ಚೆನ್ನಮ್ಮ ಮಹಿಳಾ ಮಂಡಳಿ ಹಾಗೂ ಕಿರಣ್ ಬೇಡಿ ಯುವತಿ ಮಂಡಳಿ ಸಂಘಗಳ ಅಧ್ಯಕ್ಷರಾಗಿದ್ದಾರೆ. ಕಿತ್ತೂರು ಚೆನ್ನಮ್ಮ ಸ್ವಸಹಾಯ ಹಾಗೂ ಹಲವಾರು ಸಂಘಗಳ ನಿರ್ದೇಶಕಿಯಾಗಿದ್ದಾರೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್, ಮಕ್ಕಳ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯೆ. ಇವರು ತಾಲೂಕು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ, ತಾಲೂಕು ಜಿಲ್ಲಾ ರಾಜ್ಯ ಮಟ್ಟದ ಕವಿಗೋಷ್ಠಿಗಳಲ್ಲಿ, ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾರೆ. ಅನುಪಯುಕ್ತ ವಸ್ತುಗಳಿಂದ ಇವರು ಕರಕುಶಲ ವಸ್ತು ತಯಾರಿಸುತ್ತಾರೆ.

ಪ್ರಕಟಿತ ಕೃತಿಗಳು:
ಮಕ್ಕಳ ಕಾವ್ಯ ಸಂ. – ಪುಟ್ಟಿ ಆಟ. **ಕವನ ಸಂ.** – ಸಂಪದ್ಭರಿತ.
ಲೇ. ನ ಸಂ. – ಸಾಹಿತ್ಯ ಸಂಚಯ

ಲಭಿಸಿರುವ ಪ್ರಶಸ್ತಿಗಳು:
೧. ೧೯೯೯ – ಶಿವಮೊಗ್ಗದ ಕರ್ನಾಟಕ ಅಂಗವಿಕಲರ ಮಹಾಸಂಘದ ಪ್ರಶಸ್ತಿ.
೨. ೧೯೯೫ – ಶಿವಮೊಗ್ಗದ ಶಾರದಾ ಜೂನಿಯರ್ ಛೇಂಬರ್ ಯುವ ಪ್ರತಿಭಾ ಪ್ರಶಸ್ತಿ.
೩. ೨೦೦೧ – ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗ್ರಾಮೀಣ ಸಿರಿ ಪ್ರಶಸ್ತಿ.
೪. ೨೦೦೭ – ಧಾರವಾಡ ಚಿಲಿಪಿಲಿ ಪ್ರಕಾಶನ ಮಾಸ ಪತ್ರಿಕೆ ಶಿಕ್ಷಣ ಸಿರಿ ಪ್ರಶಸ್ತಿ.
೫. ೨೦೦೮ – ಮೈಸೂರು ಗ್ರಾಮಾಂತರ ಬುದ್ಧಿ ಜೀವಿಗಳ ಬಳಗ ದಾ.ರ. ಬೇಂದ್ರೆ ಕಾವ್ಯ ಪುರಸ್ಕಾರ ಇತ್ಯಾದಿ.

ವ್ಯಕ್ತಿ ಪರಿಚಯ

ಡಾ॥ ಗೀತಾ ಸೀತಾರಾಮ್

೧.	ಹೆಸರು	: ಡಾ॥ ಗೀತಾ ಸೀತಾರಾಮ್
೨.	ಕಾವ್ಯನಾಮ	: 'ಸ್ವಾತಿ', ಅಂಕಿತನಾಮ 'ಗೀತಾ/ಯದುಶೈಲ'
೩.	ಹುಟ್ಟಿದ ಸ್ಥಳ ದಿನಾಂಕ	: ಮೈಸೂರು, ೧೯-೦೭-೧೯೫೩.
೪.	ಜಿಲ್ಲೆ - ರಾಜ್ಯ	: ಮೈಸೂರು, ಕರ್ನಾಟಕ.
೫.	ವಿದ್ಯಾಭ್ಯಾಸ	: ಎಂ.ಎ., ಎಂ.ಲಿಬ್., ಪಿಹೆಚ್.ಡಿ.
೬.	ವೃತ್ತಿ	: ಗ್ರಂಥ ವಿಜ್ಞಾನಿ.
೭.	ಕೌಟುಂಬಿಕ	: ಪತಿ; ಡಾ॥ ಎ.ಆರ್. ಸೀತಾರಾಮ್. ಪುತ್ರರು; ದೀಪಕ್ ರಾಮ್, ದರ್ಶನ್ ರಾಮ್.
೮.	ಸದ್ಯದ ವಿಳಾಸ	: ಗ್ರಂಥಾಲಯ, ಸಿ.ಎಫ್.ಟಿ.ಆರ್.ಐ. ಮೈಸೂರು - ೫೭೦೦೨೦.
೯.	ಖಾಯಂ ವಿಳಾಸ	: ೨೦೮, ದೀಪ ದರ್ಶಿನಿ, ೨ನೇ ಮೈನ್, ಸಿ.ಎಫ್.ಟಿ.ಆರ್.ಐ. ಲೇಔಟ್, ಬೋಗಾದಿ ೨ನೇ ಹಂತ ಮೈಸೂರು-೫೭೦೦೨೬
೧೦.	ದೂರವಾಣಿ ಸಂಖ್ಯೆ	: ೨೫೪೭೮೩೭, ೯೬೮೬೧೨೪೯೦೨
೧೧.	ಹಸ್ತಾಕ್ಷರ (ಸಹಿ)	: ಗೀತಾ ಸೀತಾರಾಮ್ Geetha Seetharam

ಸಾಹಿತ್ಯ ಪರಿಚಯ

ಇವರು ಮೈಸೂರಿನಲ್ಲಿ ಹುಟ್ಟಿದರು. ಎಂ.ಎ. ಮಾಡಿ ಗ್ರಂಥಾಲಾಯ ವಿಜ್ಞಾನದಲ್ಲಿ ಎಂ.ಲಿಬ್. ಮಾಡಿ ಪಿ.ಹೆಚ್.ಡಿ ಪದವಿಯನ್ನೂ ಗಳಿಸಿದ್ದಾರೆ. ವೃತ್ತಿಯಿಂದ ಗ್ರಂಥವಿಜ್ಞಾನಿ ಪ್ರವೃತ್ತಿಯಿಂದ ಸಾಹಿತಿ. ಸಂಗೀತದ ಹವ್ಯಾಸವೂ ಇದೆ. ಇವರು ಸಂಗೀತ, ಸಾಹಿತ್ಯ ಎರಡೂ ಕ್ಷೇತ್ರಗಳಲ್ಲೂ ಸಾಕಷ್ಟು ಕೆಲಸ ಮಾಡಿದ್ದಾರೆ. ಇವರು ಕಥೆ, ಕಾದಂಬರಿ, ಹಾಸ್ಯಾ, ಪ್ರವಾಸ ಸಾಹಿತ್ಯ ಮುಂತಾದ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೃತಿ ರಚಿಸಿದ್ದಾರೆ. ಇವರ ಪ್ರಥಮ ಕಥಾ ಸಂಕಲನ 'ಕಡಲು'. ಇವರ ಹಲವಾರು ಕಾದಂಬರಿಗಳು ಪ್ರಮುಖ ಪತ್ರಿಕೆಗಳಲ್ಲಿ ಧಾರವಾಹಿಯಾಗಿ ಪ್ರಕಟವಾಗಿವೆ. ನಾಟಕ ಇತ್ಯಾದಿ ಆಕಾಶವಾಣಿಯಲ್ಲಿ ಪ್ರಸಾರವಾಗಿದೆ. ಇವರ ಬರೆಹಗಳು ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. 'ಶ್ರೀ ಮಾತಾ ಶಾರದಾ ದೇವಿ ಜೀವನ ಮತ್ತು ಸಂದೇಶಗಳ ಪ್ರಸ್ತುತತೆ' ಲೇಖನಕ್ಕೆ ರಾಜ್ಯ ಮಟ್ಟದ ಪ್ರಶಸ್ತಿ ದೊರೆತಿದೆ. 'ಕುವೆಂಪು ಮತ್ತು ಸಂಗೀತ'ಎಂಬ ವಿಮಾರ್ಶಾತ್ಮಕ ಅಧ್ಯಯನ ಮಾಡಿದ್ದಾರೆ. ಇವರ ಹೆಸರು 'ಈ ಶತಮಾನದ ಕರ್ನಾಟಕ ವಾಗ್ಗೇಯಕಾರರು' ಗ್ರಂಥದಲ್ಲಿಯೂ ಉಲ್ಲಿಖಿತವಾಗಿದೆ. ಇವರು ಐವತ್ತು ಸ್ವಂತ ರಚನೆಗಳನ್ನು ಕನ್ನಡ, ಸಂಸ್ಕೃತ, ಹಿಂದಿ ಹಾಗೂ ತಮಿಳು ಭಾಷೆಗಳಲ್ಲಿ ಮಾಡಿದ್ದಾರೆ. ಇವರ ವರ್ಣಗಳು, ಜಾವಳಿ, ಶಬ್ದಂ, ಪದಂ, ಕೃತಿ, ಪದವರ್ಣ ಹಾಗೂ ತಿಲ್ಲಾನಗಳು ಶಾಸ್ತ್ರೀಯ ಸಂಗೀತ–ನೃತ್ಯ ಕಾರ್ಯಕ್ರಮಗಳಿಗೆ ಸಾಮಗ್ರಿಯನ್ನೊ ದಗಿಸುತ್ತದೆ. ಇವರ 'ನೂಪುರ'(ಪುಸ್ತಕ) ಮತ್ತು 'ಗೀತ ರಶ್ಮಿ', 'ಗೀತ ಸಿಂಧು'(ಕ್ಯಾಸೆಟ್ ಆಲ್ಬಮ್) ದ್ವಂದ್ವ ಧ್ವನಿ ಸುರುಳಿಗಳಾಗಿವೆ. 'ವಸಂತ ಗೀತಾ'ಮಕ್ಕಳ ಹಾಡುಗಳ ಧ್ವನಿ ಸುರುಳಿ ಬಿಡುಗಡೆಯಾಗಿದೆ. ಮೈಸೂರಿನ 'ಗೀತಾಂಜಲಿ ಸೆಂಟೆರ್ ಆಫ್ ಫೈನ್ ಆರ್ಟ್ಸ್'ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಕರ್ನಾಟಕ ಶಾಸ್ತ್ರೀಯ ಗಾಯನದಲ್ಲಿ ಅನೇಕ ವಿದ್ಯಾರ್ಥಿಗಳನ್ನು ತಯಾರು ಮಾಡಿದ್ದಾರೆ. ಈಟಿವಿ ಎದೆ ತುಂಬಿ ಹಾಡುವೆನು ಕಾರ್ಯಕ್ರಮದ ಆಹ್ವಾನಿತ ' ತೀರ್ಪುಗಾರಾಗಿದ್ದರು. 'ಸಂವೇದನೆ' ಉದಯ ಟಿ.ವಿ.ಯಲ್ಲಿಯೂ ಪರಿಚಯಿಸಲ್ಪಟ್ಟಿದ್ದಾರೆ. ಇವರು ಯುರೋಪ್ ಮತ್ತು ಅಮೆರಿಕಾ ದೇಶಗಳಲ್ಲಿ ಸಂಗೀತ ಶಿಬಿರಗಳನ್ನು ನಡೆಸಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದ ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಗ್ರಂಥವಿಜ್ಞಾನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು:
ಕಥಾ ಸಂ.– ಕಡಲು.
ಕಾದಂಬರಿ – ಬೇಲಿ, ಆಸರೆ, ಉಂಗುರ, ಸಪ್ತಸ್ವರ, ನೆಳಲು, ಪೃಥಾ.
ನಾಟಕ – ಭೀಷ್ಮ, ಊರ್ಮಿಳಾ, ರಂಗದರ್ಶನ.
ಹಾಸ್ಯ ಸಂ. – ಗೀತಲಹರಿ.
ಪ್ರವಾಸ ಕಥನ – ಸಾಗಾರದಾಚೆ ಸಂಗೀತ ಯೋಗ.

ಲಭಿಸಿರುವ ಪ್ರಶಸ್ತಿಗಳು:
೧. ರಾಜ್ಯ ಮಟ್ಟದ ಮಹಿಳಾ ವೈಚಾರಿಕ ಲೇಖನ ಪ್ರಶಸ್ತಿ.
೨. ಸಿ.ಎಸ್.ಐ.ಆರ್.ನ ರಾಗ ಸಂಯೋಜನಾ ಪ್ರಶಸ್ತಿ.

ವ್ಯಕ್ತಿ ಪರಿಚಯ

ಗೀತಾ ಹರಿಹರ

೧. ಹೆಸರು : ಶ್ರೀಮತಿ ಗೀತಾ ಚಂದ್ರಶೇಖರ ಹರಿಹರ

೨. ಕಾವ್ಯನಾಮ : ಗೀತಾ ಹರಿಹರ

೩. ಹುಟ್ಟಿದ ಸ್ಥಳ ದಿನಾಂಕ : ರಬಕವಿ, ಜಮಖಂಡಿ ತಾ., ೪-೨-೧೯೬೮

೪. ಜಿಲ್ಲೆ - ರಾಜ್ಯ : ಬಾಗಲಕೋಟೆ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎಸ್ಸಿ., ಬಿ.ಇಡಿ., ಎಂ.ಎ. (ಕನ್ನಡ)

೬. ವೃತ್ತಿ : ವಿಜ್ಞಾನ ಶಿಕ್ಷಕಿ

೭. ಕೌಟುಂಬಿಕ : ಪತಿ; ಚಂದ್ರಶೇಖರ ಹರಿಹರ.
ಪುತ್ರಿ; ಶೃತಿ ಹರಿಹರ.

೮. ಸದ್ಯದ ವಿಳಾಸ : ಚಂದ್ರಶೇಖರ ಹರಿಹರ, ಕಲ್ಯಾಣಿ, ಕಾಳಿನಗರ,
ಸಿಂದಗಿ, ಬಿಜಾಪುರ-೫೮೬೧೨೮.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೭೩೧೪೮೦೫೧೪

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಬಾಗಲಕೋಟೆ ಜಿಲ್ಲಾ ಜಮಖಂಡಿ ತಾಲೂಕು ರಬಕವಿಯಲ್ಲಿ ಜನಿಸಿದರು. ಇವರು ಶ್ರೀ ಬಿ.ಬಿ. ಲೋಣಿ ಇವರ ಪುತ್ರಿ. ತಂದೆ ನಿವೃತ್ತ ಶಿಕ್ಷಕರು. ಇವರು ಎಂ.ಎ. ಕನ್ನಡ, ಬಿ.ಎಡ್. ಮಾಡಿ ಹೆಚ್.ಜಿ. ಬಾಲಕರ ಪ್ರೌಢಶಾಲೆ ಸಿಂದಗಿಯಲ್ಲಿ ವಿಜ್ಞಾನ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದರೆ. ವೃತ್ತಿಯಿಂದ ಶಿಕ್ಷಕಿಯಾದರೂ ಪ್ರವೃತ್ತಿಯಿಂದ ಸಾಹಿತಿ. ಪ್ರಾರಂಭದಿಂದಲೂ ಸಾಹಿತ್ಯಾಭಿರುಚಿ ಕಾರಣದಿಂದಲೇ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ತಮ್ಮ ಜೀವನಾನುಭವದ ಸ್ತ್ರೀತ್ವ ಸಂವೇದನೆಯ ಆಲೋಚನೆಗಳಿಗೆ ಕಲಾತ್ಮಕತೆಯ ನೆರವು ನೀಡಿ ಅದನ್ನು ಬರೆಹ ರೂಪದಲ್ಲಿ ಅಭಿವ್ಯಕ್ತಿಗೊಳಿಸಿದರು. ಅದು ಕವನ ರೂಪ ಪಡೆಯಿತು. ನಂತರ ಕಥೆ, ಕವನ ಲೇಖನ ಇತ್ಯಾದಿ ಸೃಜನಶೀಲ ಬರವಣಿಗೆಗೆ ತೊಡಗಿದರು. ಮಕ್ಕಳಿಗಾಗಿ ಬರೆದರು. ಶ್ರೀ ಕೋರಣ್ಣೇಶ್ವರ ಶಿವ ಯೋಗಿಗಳ ಜೀವನ ಕಥನವನ್ನು 'ಖಜೂರಿಯ ಕಲ್ಪತರು'ವೆಂಬ ಕಾದಂಬರಿ ರೂಪ ಕೊಟ್ಟರು. ಶ್ರೀ ರೇವಣ ಸಿದ್ದೇಶ್ವರ ಪುರಾಣವೆಂಬ ಚತುರ್ಮುಖ ಬೊಮ್ಮರಸ ಕವಿ ವಿರಚಿತ ಪುರಾಣವನ್ನು ಹೊಸಗನ್ನಡ ಗದ್ಯಾನುವಾದ ಮಾಡಿದರು. ಇವರು ರವೀಂದ್ರ ನಾಥ ಠಾಗೂರರ 'ಕ್ರಿಸೆಂಟ್ ಮೂನ್ ಕವನ ಸಂಗ್ರಹದಿಂದ ಕೆಲವು ಕವನಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಭಾರತೀಯ ಸಂಸ್ಕೃತಿ ಮತ್ತು ಪಾಶ್ಚಾತ್ತೀಕರಣ ಹಾಗೂ ಯೋಗ ಮತ್ತು ಅದರ ಆಯಾಮಗಳನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ. ಇವರು ಸಿಂದಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದ್ದಾರೆ ವಿಜಾಪುರ ಜಿಲ್ಲಾ ಮಟ್ಟದ ಶಿಕ್ಷಕ ಸಾಹಿತಿಗಳ ಸಂಘದ ಕಾರ್ಯಕಾರಿಣಿ ಸದಸ್ಯೆಯಾಗಿ ಕಾರ್ಯನಿರ್ವಹಿಸಿದ್ದಾರೆ. 'ಹರಿಹರ ಪ್ರಕಾಶನ ಖಜೂರಿಯ ಲೇಖಕ ಪ್ರಕಾಶಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರತಿಷ್ಠಿತ ರೋಟರಿ ಸಂಸ್ಥೆಯ ಅಂಗ ಸಂಸ್ಥೆ ಇನ್ನರ್ ವೀಲ್ ಸಂಸ್ಥೆ ಕಲ್ಯಾಣನಗರ ಸಿಂದಗಿಯ ಕಾರ್ಯಕಾರಿಣಿ ಸದಸ್ಯೆಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಹೂವಾಗಿ ನಕ್ಕವರೆ.
ಕಾದಂಬರಿ – ಖಜೂರಿಯ ಕಲ್ಪತರು.
ಮಕ್ಕಳಿಗಾಗಿ – ಖಜೂರಿಯ ಕೋರಣ್ಣೇಶ್ವರರು.

ವ್ಯಕ್ತಿ ಪರಿಚಯ

ಪ್ರೊ. ಗುರುಪಾದ ಕೆ. ಹೆಗಡೆ

೧. ಹೆಸರು	:	ಪ್ರೊ. ಗುರುಪಾದ ಕೆ. ಹೆಗಡೆ
೨. ಕಾವ್ಯನಾಮ	:	ಇರುವುದಿಲ್ಲ
೩. ಹುಟ್ಟಿದ ಸ್ಥಳ ದಿನಾಂಕ	:	ಉಂಬಳೇಕೊಪ್ಪ, ಶಿರಸಿ, ೧೮-೦೫-೧೯೪೧.
೪. ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫. ವಿದ್ಯಾಭ್ಯಾಸ	:	ಎಂ.ಎ.
೬. ವೃತ್ತಿ	:	ನಿವೃತ್ತ ಪ್ರೊಫೆಸರ್.
೭. ಕೌಟುಂಬಿಕ	:	ಪತ್ನಿ; ಸುಲೇಖಾ. ಪುತ್ರಿ; ಅಮರಜಾ. ಪುತ್ರ; ಅಜಿತೇಶ.
೮. ಸದ್ಯದ ವಿಳಾಸ	:	ನಂ. ೧೬೫, 'ಧೀಮತ್ ಸೌತ್ ಸೆಕೆಂಡ್ ಕ್ರಾಸ್, ಅನಿಕೇತನ ರಸ್ತೆ, ಕುವೆಂಪು ನಗರ ಮೈಸೂರು-೫೭೦೦೨೩.
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೮೨೧-೨೩೬೩೮೯೩, ೯೪೮೧೧೫೦೨೬೩.
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕು ಉಂಬಳೇಕೊಪ್ಪ ಎಂಬ ಹಳ್ಳಿಯಲ್ಲಿ ಜನಿಸಿದರು. ಹುಟ್ಟೂರಿನಲ್ಲಿ ನಾಲ್ಕನೇ ತರಗತಿಯವರಗೆ ಓದಿದರು. ನಂತರ ಶಾಲೆ ಬಿಟ್ಟು ಕೃಷಿ ಕಾಯಕದಲ್ಲಿ ತೊಡಗಿದರು. ವಿದ್ಯೆಗಾಗಿ ತುಡಿತ ಯಾರೋ ತಂದುಕೊಟ್ಟ ಸ್ವಬೋಧಿನಿಯಿಂದ ಮನೆಯಲ್ಲೇ ಕುಳಿತು ಹಿಂದಿ, ಇಂಗ್ಲೀಷ್, ಗಣಿತ ಕಲಿಕೆ ಖಾಸಗಿಯಾಗಿ ಎಸ್.ಎಸ್.ಎಲ್.ಸಿ. ಪಾಸಾದರು. ನಂತರ ಕಾಲೇಜು ವಿಶ್ವವಿದ್ಯಾಲಯ–ಗಳಿಗೆ ಸೇರಿ ವ್ಯಾಸಂಗ ಮುಂದುವರೆಸಿದರು. ಧಾರವಾಡದಲ್ಲಿ ಬಿ.ಎ. ಹಾಗೂ ಎಂ.ಎ. ಮಾಡಿದರು. ಪ್ರಥಮ ರ್‍ಯಾಂಕ್ ಗಳಿಸಿದರು. ೧೯೬೮ರಲ್ಲಿ ಸಾಗರದ ಲಾಲ್‌ಬಹದೂರ್ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿ, ರೀಡರ್ ಆಗಿ ಪ್ರಾಧ್ಯಾಪಕರಾಗಿ ೧೯೯೯ರಲ್ಲಿ ನಿವೃತ್ತರಾದರು. ಪ್ರಸ್ತುತ ಮೈಸೂರಿನಲ್ಲಿ ನೆಲಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ನಿರಂತರ ಸಂಶೋಧನ ಚಟುವಟಿಕೆ ಹಾಗೂ ರಿಸರ್ಚ್ ಪೇಪರ್ ಪಬ್ಲಿಕೇಷನ್‌ದಿಂದಾಗಿ ೧೯೭೧ರಲ್ಲಿ ವೃತ್ತಿ ಪ್ರಾರಂಭಿಸಿ ಮೂರೇ ವರ್ಷಗಳಲ್ಲಿ ಡಾಕ್ಟರೇಟ್‌ಗಾಗಿ ಅಲ್ಲದಿದ್ದರು ಪೋಸ್ಟ್ ಡಾಕ್ಟರೇಟ್ ಥೀಸೀಸ್ ಗೈಡಾಗಿ ಕಾರ್ಯನಿರ್ವಹಿಸಲು ಯು.ಜಿ.ಸಿ.ಯಿಂದ ಸುಪರ್‌ವೈಜರ್ ಹುದ್ದೆ ಸಂಪ್ರಾಪ್ತಿ. ೧೯೯೦ರಲ್ಲಿ ಯುರೋಪ್, ೧೯೯೪ರಲ್ಲಿ ಮೆಲ್ಬೋರ್ನ್, ೧೯೯೭ರಲ್ಲಿ ಭಾರತ ಹೀಗೆ ಪ್ರವಾಸ ಮಾಡಿ ಜಾಗತಿಕ ಸಂಸ್ಕೃತ ಮಹಾಧಿವೇಶನಗಳಲ್ಲಿ ಭಾಗವಹಿಸಿ ಸಂಶೋಧನ ಪ್ರಬಂಧಗಳನ್ನು ಪ್ರಸ್ತುತ ಪಡಿಸಿದ್ದಾರೆ. ಇವರ ಎಸ್.ಎಸ್.ಎಲ್.ಸಿ. ಸಂಸ್ಕೃತ ಪಠ್ಯ ಪುಸ್ತಕ ಸಮಿತಿ ಕುವೆಂಪು ವಿಶ್ವವಿದ್ಯಾಲಯ ಸಮಿತಿಗಳ ಅಧ್ಯಕ್ಷರಾಗಿ ೧೯೯೪–೨೦೦೪ ರವರಗೆ ಕಾರ್ಯನಿರ್ವಹಿಸಿದ್ದಾರೆ. ಇವರ ಕೆಲವು ಸಂಸ್ಕೃತ ಗ್ರಂಥಗಳನ್ನು ಶ್ರೀ ಶೃಂಗೇರಿ ಜಗದ್ಗುರುಗಳು ಸಾಗರದಲ್ಲಿ ಬಿಡುಗಡೆ ಮಾಡಿದ್ದಾರೆ. ಇವರು ಕನ್ನಡ, ಸಂಸ್ಕೃತ ಹಾಗೂ ಇಂಗ್ಲೀಷಿನಲ್ಲಿ ೧೫ಕ್ಕೂ ಹೆಚ್ಚು ಗ್ರಂಥಗಳು ಬಿಡುಗಡೆಯಾಗಿವೆ.

ಪ್ರಕಟಿತ ಕೃತಿಗಳು:

ಕವನ ಸಂ. – ವಾಸ್ತವ. **ಪ್ರವಾಸ ಕಥನ** – ಅಪೂರ್ವ ಪೂರ್ವ. **ಅಧ್ಯಾತ್ಮಿಕ** – ಆಧಾತ್ಮ ಶ್ರೀರಾಮ ಸ್ತೋತ್ರಂ, ಆಧ್ಯಾತ್ಮ ಸ್ತೋತ್ರ ಮಂತ್ರ ಭಾವ ಗೀತ, ಅಂತರಂಗ ದರ್ಶನ.
ಕಾವ್ಯ ಮೀಮಾಂಸ – ಕಾವ್ಯದಲ್ಲಿ ಧ್ವನಿ. **ವ್ಯಾಕರಣ** – ಸಂಸ್ಕೃತ ವ್ಯಾಕರಣ ದೀಪಿಕ.
ಇಂಗ್ಲೀಷ್ – ಥಾಟ್ಸ್ ಎನ್ ಲೈಟ್‌ನಿಂಗ್.

ಲಭಿಸಿರುವ ಪ್ರಶಸ್ತಿಗಳು:

೧. ೧೯೬೮ – ಸಂಸ್ಕೃತ ಪ್ರಥಮ ರ್‍ಯಾಂಕ್‌ಗಾಗಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಶಸ್ತಿ.
೨. ೧೯೭೩ – ಮೈಸೂರು ವಿಶ್ವವಿದ್ಯಾಲಯ ಸಂಶೋಧನ ಪ್ರಶಸ್ತಿ.
೩. ೧೯೮೦ –ಮೈಸೂರು ವಿಶ್ವವಿದ್ಯಾಲಯ ಸುವರ್ಣ ಮಹೋತ್ಸವ ಸಂಶೋಧನ ಪ್ರಶಸ್ತಿ.
೪. ೧೯೮೩ – ಮೈಸೂರು ದಸರಾ ಮಹೋತ್ಸವ 'ಸಂಸ್ಕೃತಕ್ಕೆ' ಮನ್ನಣೆ.
೫. ೧೯೯೩ – ಪುಣೆಯ ಅಖಿಲ ಭಾರತ ಪ್ರಾಚ್ಯ ಮಹಾಧಿವೇಶನದಲ್ಲಿ ಪಂಡಿತ ಪರಿಷತ್ ಪ್ರಶಸ್ತಿ, ಇತ್ಯಾದಿ.

ವ್ಯಕ್ತಿ ಪರಿಚಯ



ಗುರುರಾಜಾಚಾರ್. ಟಿ.

೧. ಹೆಸರು : ಟಿ ಗುರುರಾಜಾಚಾರ್

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ತೆಗ್ಗಿಹಾಳ್, ೧೩-೧೦-೧೯೪೬.

೪. ಜಿಲ್ಲೆ - ರಾಜ್ಯ : ಕೊಪ್ಪಳ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎ., ಬಿ.ಇಡಿ.

೬. ವೃತ್ತಿ : ನಿವೃತ್ತ, ಪ್ರೌಢಶಾಲಾ ಶಿಕ್ಷಕ

೭. ಕೌಟುಂಬಿಕ : ಪತ್ನಿ; ಶ್ರೀಮತಿ ಪದ್ಮ, ಪುತ್ರ ಟಿ, ಸಂದೀಪ್
ಪುತ್ರಿ; ಶ್ರೀಮತಿ ವಿಜಯಶ್ರೀ

೮. ಸದ್ಯದ ವಿಳಾಸ : ೩೧೨, ಒಂದನೇ ಮಹಡಿ, ೩ನೇ ಮುಖ್ಯರಸ್ತೆ,
ಪಾರ್ವತಿ ನಗರ, ಬಳ್ಳಾರಿ - ೫೮೩೧೦೩

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೯೨-೨೬೮೪೬೭, ೯೪೪೮೯೩೯೨೯೭

೧೧. ಹಸ್ತಾಕ್ಷರ (ಸಹಿ) :



ಸಾಹಿತ್ಯ ಪರಿಚಯ

ಇವರು ಕೊಪ್ಪಳ ಜಿಲ್ಲಾ ಕುಷ್ಟಗಿ ತಾಲೂಕು ತೆಗ್ಗಿಹಾಳ ಗ್ರಾಮದಲ್ಲಿ ಜನಿಸಿದರು. ಶ್ರೀ ಕೃಷ್ಣಾಚಾರ್ಯರು ಮತ್ತು ಶ್ರೀಮತಿ ರುಕ್ಮಿಣಿಬಾಯಿ ದಂಪತಿಗಳ ಪುತ್ರ. ಇವರದು ನಿಜಾಂ ಹೈದರಾಬಾದ್ ಕರ್ನಾಟಕದ ಜಹಗೀರ್‌ದಾರ್ ಮನೆತನ. ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರಲ್ಲೇ, ೫ನೇ ತರಗತಿ ಸೇಡಂ. ೬ ರಿಂದ ೧೦ ಕುಷ್ಟಗಿ. ಪಿ.ಯು.ಸಿ. ಬಳ್ಳಾರಿ ಕರ್ನಾಟಕ ವಿಶ್ವವಿದ್ಯಾಲಯ ಬಳ್ಳಾರಿಯಲ್ಲೇ ಬಿ.ಎ. ಪದವಿ ನಂತರ ಬಿ.ಎಡ್. ಇಂಗ್ಲೀಷ್ ಭಾಷೆಯ ಒಂದು ತಿಂಗಳ ತರಬೇತಿ. ಬಾಲಕಿಯರ ಪ್ರೌಢಶಾಲೆಯಲ್ಲಿ ೩೩ ವರ್ಷ ಸೇವೆ ಸಲ್ಲಿಸಿ ೨೦೦೪ರಲ್ಲಿ ನಿವೃತ್ತಿ. ಇವರು ಶಾಲಾ-ಕಾಲೇಜು ದಿನಗಳಲ್ಲಿಯೇ ಭಾಷಾಣ ಮಾಡುತ್ತಿದ್ದರು. ಪ್ರಬಂಧ ರಚಿಸುತ್ತಿದ್ದರು. ಸ್ಪರ್ಧೆಗಳಲ್ಲಿ ಭಾಗವಹಿ-ಸುತ್ತಿದ್ದರು. ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ವೃತ್ತಿಯಿಂದ ಶಿಕ್ಷಕರಾದರೂ ಪ್ರವೃತ್ತಿಯಿಂದ ಸಾಹಿತಿಗಳು. ಸಂಗೀತ ಇವರ ಹವ್ಯಾಸ. ಇವರು ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನ. ರಾಯಚೂರು ಜಿಲ್ಲಾ ಸಾಹಿತ್ಯ ಸಮ್ಮೇಳನ, ಹಂಪಿ ಉತ್ಸವ ೨೦೦೬ರಲ್ಲಿ, ಶಿವಮೊಗ್ಗದಲ್ಲಿ ನಡೆದ ೩೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾವ್ಯ ವಾಚನ ಮಾಡಿದ್ದಾರೆ. ಬೆಂಗಳೂರು ದೂರ ದರ್ಶನದ ಬಳ್ಳಾರಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕಗಳ ಆಶ್ರಯದಲ್ಲಿ ನಡೆದ ಕವಿ ಗೋಷ್ಠಿಗಳಲ್ಲಿ ಕವನ ವಾಚಿಸಿದ್ದಾರೆ. ಚಂದನದಲ್ಲಿಯೂ ಇವರ ಕವನ ಪ್ರಸಾರವಾಗಿದೆ. ೨೦೦೬ರಲ್ಲಿ ಮುಂಬಯಿ ಅಖಿಲ ಭಾರತ ಕನ್ನಡ ಸಾಸ್ಕೃತಿಕ ಸಮ್ಮೇಳನದಲ್ಲಿ ಕವನ ವಾಚಿಸಿದ್ದಾರೆ. ಇವರು ಸಿಂಗಪುರ್, ಥೈಲ್ಯಾಂಡ್ ಹಾಗೂ ಮಲೇಶಿಯಾ ದೇಶಗಳ ಪ್ರವಾಸ ಮಾಡಿದ್ದಾರೆ. ೨೦೧೧ರಲ್ಲಿ ಸಿಂಗಾಪುರದಲ್ಲಿ ನಡೆದ 'ಸಿಂಗಾರ ಉತ್ಸವ'ದಲ್ಲಿ ಕವನ ವಾಚನ ಮಾಡಿದ್ದಾರೆ. ಬಳ್ಳಾರಿಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ, ಮಂಗಳೂರಿನ ಕೊಂಕಣಿ ಅಕಾಡೆಮಿಯ ಸಹಯೋಗದ 'ಕೊಂಕಣಿ ಕನ್ನಡ ಸಾಹಿತ್ಯ ಸಂಸ್ಕೃತಿಕ ಸಂಭ್ರಮ' ಕಾರ್ಯಕ್ರಮದಲ್ಲಿ ಭಾಗವಹಿಸಿ ಕವನ ವಾಚನ ಮಾಡಿದ್ದಾರೆ. ದ.ರಾ. ಬೇಂದ್ರೆ ಹಾಗೂ ಸೂರಂ. ಎಕ್ಕುಂಡಿ ಇವರ ಮೇಲೆ ಪ್ರಭಾವಾ ಬೀರಿದ ಕವಿಗಳು. ಇವರು ಹಲವು ಕವಿ ಗೋಷ್ಠಿ, ಉತ್ಸವಗಳಲ್ಲಿ ನಿರೂಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಉತ್ತಮ ಸಾಮಾಜಿಕ ಕಾರ್ಯಕರ್ತರು ಹಾಗೂ ಸಂಘಟಕರು. ಇವರ ಹಲವಾರು ಕವನಗಳಿಗೆ ವಿವಿಧ ಸಂಸ್ಥೆಗಳಿಂದ ಬಹುಮಾನ ಲಭಿಸಿದೆ.

ಪ್ರಕಟಿತ ಕೃತಿಗಳು:
ಕವನ ಸಂ: ಭಾವಬಿಂದು. **ಪ್ರವಾಸ ಕಥನ:** ಚಾಂದ್ ಚೆಲುವೆ.

ಲಭಿಸಿರುವ ಪ್ರಶಸ್ತಿಗಳು:
೧. ೨೦೦೪ – ಶಿಕ್ಷಣ ಇಲಾಖೆಯಿಂದ 'ಜಿಲ್ಲಾ ಉತ್ತಮ ಶಿಕ್ಷಕ' ಪ್ರಶಸ್ತಿ.
೨. ೨೦೦೮ – ಕೆ.ಆರ್. ನಗರದಲ್ಲಿ 'ಬೇಂದ್ರೇ ಸಾಹಿತ್ಯ ಪುರಸ್ಕಾರ –೨೦೦೮'
೩. ೨೦೦೮ – ಬೆಂಗಳೂರಿನ ಅತ್ತಿಮಬ್ಬೆ ಪ್ರತಿಷ್ಠಾನದ ಪ್ರಥಮ ಬಹುಮಾನ ಲಭಿಸಿದೆ.
೪. ೨೦೧೦ – ಮಂಡ್ಯದಲ್ಲಿ ನಡೆದ ಕವನಸ್ಪರ್ಧೆಯಲ್ಲಿ 'ಕಾವ್ಯಶ್ರೀ ಪ್ರಶಸ್ತಿ'.
೫. ಬಳ್ಳಾರಿ ಲಯನ್ಸ್ ಕ್ಲಬ್ ಮಹಿಳಾ ವಿಭಾಗದಿಂದ ಪುರಸ್ಕಾರ.
೬. ಬಳ್ಳಾರಿ ಭರಣಿ ಸಾಂಸ್ಕೃತಿಕ ವೇದಿಕೆ ಡಾ|| ಎಚ್. ನರಸಿಂಹಯ್ಯ ಪ್ರಶಸ್ತಿ.

ವ್ಯಕ್ತಿ ಪರಿಚಯ

ಗೋಕುಲನಾಥ ಕೆ

೧.	ಹೆಸರು	:	ಗೋಕುಲನಾಥ ಕೆ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಮೈಸೂರು, ೧೦-೧-೧೯೪೯
೪.	ಜಿಲ್ಲೆ - ರಾಜ್ಯ	:	ಮೈಸೂರು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಪಿಹೆಚ್.ಡಿ.
೬.	ವೃತ್ತಿ	:	ಕನ್ನಡ ಪ್ರಾಧ್ಯಪಕ ಹಾಗೂ ಪ್ರಿನ್ಸಿಪಾಲ್
೭.	ಕೌಟುಂಬಿಕ	:	ಪತ್ನಿ; ಜಯಲಕ್ಷ್ಮಿ ಡಿ. ಪುತ್ರಿ; ಸಿಂಧು ಶ್ರೀ ಜಿ.
೮.	ಸದ್ಯದ ವಿಳಾಸ	:	೧೦೩೦, ಕೃಷ್ಣ ಧಾಮ , ೨೪ನೇ ಮುಖ್ಯ ರಸ್ತೆ, ಎಚ್.ಎಸ್.ಆರ್. ಬಡಾವಣೆ, ಸೆಕ್ಟರ್-೧- ಬೆಂಗಳೂರು-೫೬೦೧೦೨
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦-೨೨೫೮೦೦೭೧, ೯೪೪೮೪೫೭೨೦೦.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಹುಟ್ಟಿದ್ದು ಮೈಸೂರಿನಲ್ಲಿ. ಇವರು ಡಾ|| ಕೆ. ಎಂ. ಕೃಷ್ಣರಾವ ಮತ್ತು ಶ್ರೀಮತಿ ಕೆ. ಮಂಜುಳ ದಂಪತಿಗಳ ಪುತ್ರ. ೧೯೭೧ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಮಾಡಿ ೧೯೭೭ರಲ್ಲಿ ವಿಜಯದಾಸರು: ಜೀವನ ಮತ್ತು ಕೃತಿಗಳ ಕುರಿತು ಸಂಶೋಧನಾತ್ಮಕ ಪ್ರಬಂಧ ರಚಿಸಿ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ೧೯೭೧ರಲ್ಲಿ ಬೆಂಗಳೂರು ಎ.ಪಿ.ಎಸ್. ಕಾಲೇಜಿನ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ರೀಡರಾಗಿ, ಪ್ರಾಧ್ಯಾಪಕರಾಗಿ ೧೯೯೫ರಲ್ಲಿ ಪ್ರಾಂಶುಪಾಲಕರಾದರು. ನಿವೃತ್ತರಾದ ಮೇಲೆ ಗೌ. ಸಂದರ್ಶಕ ಪ್ರಾಧ್ಯಾಪಕರಾಗಿ ಬೆಂಗಳೂರು ಜೈನ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಾ ಬೆಂಗಳೂರಿನಲ್ಲೇ ನೆಲಸಿದ್ದಾರೆ. ಇವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಪರೀಕ್ಷಾ ಸಮಿತಿ, ಟ್ಯಾಬುಲೇಟರ್ ಪರೀಕ್ಷಾ ಸ್ಕ್ವಾಡ್ ಸದಸ್ಯರಾಗಿ ಸೇವೆ ಸಲ್ಲಿಸಿದ ಆಡಳಿತಾತ್ಮಕ ಅನುಭವವಿದೆ. ೨೦೦೩ರಲ್ಲಿ ಮೂರು ತಿಂಗಳು ನ್ಯಾಕ್ ಸಂಸ್ಥೆಗೆ ೫೦೦ ಪುಟಗಳ ಅಧ್ಯಯನ ವರದಿ ತವಾರಿಸಿದ ಹಾಗೂ ಕಾಲೇಜುಗಳಿಗೆ ಬಿ+ ಮಾನ್ಯತೆ ತಂದುಕೊಟ್ಟ ಯಶಸ್ಸು ಇವರದು. ಇವರು ರಾಜ್ಯ, ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳನ್ನು ಏರ್ಪಡಿಸಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳಾಗಿದ್ದಾರೆ. ದಾಸಸಾಹಿತ್ಯದ ಬಗ್ಗೆ ವಿಶೇಷ ಒಲವು, ಹತ್ತು–ಹದಿನೈದು ಗ್ರಂಥಗಳನ್ನು ರಚಿಸಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯ ಅಕೆಡೆಮಿಕ್ ಕೌನ್ಸಿಲ್, ಸ್ಥಳೀಯ ಪರಿಶೀಲನಾ ಸಮಿತಿ, ಸಿಂಡಿಕೇಟ್ ಮಾಜಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪದವಿ ಪರೀಕ್ಷಾ ಮಂಡಲಿ. ಪಿಹೆಚ್.ಡಿ. ಪರೀಕ್ಷಾ ಸಮಿತಿ ಅಧ್ಯಕ್ಷರು. ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು. ಹಂಪೆ ವಿಶ್ವವಿದ್ಯಾಲಯ ಪಿಹೆಚ್.ಡಿ. ಮೌಲ್ಯಮಾಪಕರು. ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಆಜೀವ ಸದಸ್ಯರು. ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಗಳು. ಡಾ|| ಪು.ತಿ.ನ. ಕುರಿತ ವಿಚಾರ ಸಂಕಿರಣ ಏರ್ಪಡಿಸಿದ್ದಾರೆ. ಕನ್ನಡ, ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳ ಕುರಿತು ವಿಶ್ವವಿದ್ಯಾಲಯ ಮಟ್ಟದ ಭಾಷಾ ಕಮ್ಮಟ ನಡೆಸಿದ್ದಾರೆ. ಇವರ ಸಂದರ್ಶನ ಬೆಂಗಳೂರು ದೂರ ದರ್ಶನದ ಚಂದನದ ಬೆಳಗು ಕಾರ್ಯಕ್ರಮದಲ್ಲಿ ಪ್ರಸಾರವಾಗಿದೆ. ಕಾಲೇಜಿನ ಪ್ರವೇಶ ಪ್ರಕ್ರಿಯೆಯಲ್ಲಿ ಹಿಂದುಳಿದ ಹಾಗೂ ಬಡವರಿಗೆ ವಿಶೇಷ ಅನುಕೂಲ ಕಲ್ಪಿಸಿದ್ದಾರೆ. ಮೀಸಲಾತಿ, ಅಂಧ, ಹಾಗೂ ಅಂಗಹೀನರಿಗೆ ಶುಲ್ಕ ವಿನಾಯಿತಿ ನೀಡಿದ್ದಾರೆ.

ಪ್ರಕಟಿತ ಕೃತಿಗಳು:

ದಾಸ ಸಾಹಿತ್ಯ – ಶ್ರೀ ವಿಜಯ ದಾಸರು, ಹರಿದಾಸ ನಿಂದಾ ಸ್ತುತಿ, ವಿ.ದಾ. ಉಗಾಭೋಗಗಳು, ಶ್ರೀ ವ್ಯಾಸರಾಯರು.

ಕಾವ್ಯ – ರುದ್ರ ಭಟ್ಟ, ಪ್ರಾಚೀನ ಕಾವ್ಯಧಾರೆ.

ಇತರೆ – ಉಡುಪಿ ಶ್ರೀ ಕೃಷ್ಣ ಮಂಜರಿ ವಿಚಾರ ವಾಹಿನಿ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೩ – ಗುರುಗೋವಿಂದ ವಿಠಲ ಪ್ರಶಸ್ತಿ.

೨. ೨೦೦೮ – ತಿರುಮಲೆ ತಿರುಪತಿ ದೇವಸ್ಥಾನದ ದಾಸ ಸಾಹಿತ್ಯ ಪ್ರಾವಿಣ್ಯ ಸನ್ಮಾನ.

ವ್ಯಕ್ತಿ ಪರಿಚಯ

ಗೋವಿಂದಯ್ಯ. ಟಿ.

೧. ಹೆಸರು	:	ಟಿ. ಗೋವಿಂದಯ್ಯ
೨. ಕಾವ್ಯನಾಮ	:	'ಶಾಂತ ಪ್ರಿಯ'
೩. ಹುಟ್ಟಿದ ಸ್ಥಳ ದಿನಾಂಕ	:	ಬಡೇನಹಳ್ಳಿ (ಶಿರಾ ತಾ.), ೧೧–೦೩–೧೯೪೧.
೪. ಜಿಲ್ಲೆ – ರಾಜ್ಯ	:	ತುಮಕೂರು, ಕರ್ನಾಟಕ.
೫. ವಿದ್ಯಾಭ್ಯಾಸ	:	ಎಂ.ಎ., ಬಿ.ಇಡಿ.
೬. ವೃತ್ತಿ	:	ನಿವೃತ್ತ ಉಪನ್ಯಾಸಕ
೭. ಕೌಟುಂಬಿಕ	:	ಪತ್ನಿ; ಗಂಗಮ್ಮ (ದ್ವಿತೀಯ ಪತ್ನಿ). ಪುತ್ರರು; ಬಿ.ಜಿ. ಕೃಷ್ಣ ಕುಮಾರ, ಬಿ.ಜಿ. ಅಶೋಕಕುಮಾರ
೮. ಸದ್ಯದ ವಿಳಾಸ	:	'ಶ್ರೀ ಕೃಷ್ಣ ಕೃಪ' ಜ್ಯೋತಿ ನಗರ, ಶಿರಾ ತಾ. ತುಮಕೂರು ಜಿಲ್ಲೆ
೯. ಖಾಯಂ ವಿಳಾಸ	:	ಬಡೇನಹಳ್ಳಿ, ಬರಗೂರ್ ಅಂಚೆ, ಶಿರಾ ತಾ. ತುಮಕೂರು ಜಿಲ್ಲೆ.
೧೦. ದೂರವಾಣಿ ಸಂಖ್ಯೆ	:	೯೮೮೦೩೪೪೫೮೪
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ತುಮಕೂರು ಜಿಲ್ಲೆ ಶಿರಾ ತಾಲೂಕು. ಬಡೇನಹಳ್ಳಿಯಲ್ಲಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ ಕೂಲಿಮಠದಲ್ಲಿ ಆಯಿತು. ಮಾಧ್ಯಮಿಕ ಬರಗೂರು ಹಾಗೂ ಪ್ರೌಢ ಶಿಕ್ಷಣ ಶಿರಾದಲ್ಲಾಯಿತು. ಪಿ.ಯು.ಸಿ. ಹಾಗೂ ಬಿ.ಎ. ತುಮಕೂರು. ಎರಡು ವರ್ಷ ಹಂಗಾಮಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ನಂತರ ಹೊಂಗೇ ಲಕ್ಷ್ಮೀ ಕ್ಷೇತ್ರ ಪ್ರೌಢಶಾಲೆಯಲ್ಲಿ ಖಾಯಂ ಆಗಿ, ೧೯೬೭ರಲ್ಲಿ ಸಹ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ೧೯೬೯ರಲ್ಲಿ ಬಿ.ಇಡಿ. ತರಬೇತಿ ಬೆಂಗಳೂರಿನಲ್ಲಿ ಪಡೆದರು. ಖಾಸಗಿಯಾಗಿ ಧಾರವಾಡ ವಿಶ್ವವಿದ್ಯಾಲಯಯಿಂದ ರಾಜ್ಯಶಾಸ್ತ್ರ ಎಂ.ಎ. ಪದವಿಗಳಿಸಿದರು. ೧೯೮೭ರಲ್ಲಿ ರಾಜ್ಯಾಶಾಸ್ತ್ರ ಉಪನ್ಯಾಸಕರಾಗಿ ಬಡ್ತಿ ಪದೆದರು. ೧೯೯೯ರಲ್ಲಿ ನಿವೃತ್ತರಾದರು. ಶಾಲಾ-ಕಾಲೇಜು ದಿನಗಳಲ್ಲೇ ಸಾಹಿತ್ಯದ ಒಲವಿದ್ದ ಇವರು ಸರ್ವಜ್ಞ, ಬಸವಣ್ಣನವರ ವಚನಗಳನ್ನು ಅಭ್ಯಾಸ ಮಾಡಿದರು. ಬೇಂದ್ರೆ, ಕುವೆಂಪು ಕವನಗಳು ಅಚ್ಚುಮೆಚ್ಚು. ರಾಮಾಯಣ, ಮಹಾಭಾರತ ಕಥೆಗಳ ಬಗ್ಗೆ ಆಸಕ್ತರು. ಕೃಷಿ ಚಟುವಟಿಕೆಯ ಹವ್ಯಾಸ. ಗ್ರಾಮದಲ್ಲಿ ಸಾಮಾಜಿಕ ಸಂಘಟಕರು. ಪೌರಾಣಿಕ ನಾಟಕ, ಯಕ್ಷಗಾನಗಳಲ್ಲಿ ಪಾತ್ರಾಭಿನಯ. ಕಾಲೇಜಿನಲ್ಲಿ ಓದುವಾಗ ಜಿ.ಎಸ್. ಸಿದ್ದಲಿಂಗಯ್ಯ, ದೊಡ್ಡ ಬೀರಯ್ಯ, ಜಿ.ಎಸ್. ಸಣ್ಣ ಗುಡ್ಡಯ್ಯ ಹಾಗೂ ಆಂಗ್ಲ ಭಾಷಾ ಪ್ರೋ. ಬಿ.ಸಿ ವೆಸ್ಲಿ ಇವರ ಮೇಲೆ ವಿಶೇಷ ಪ್ರಭಾವ ಬೀರಿದರು. ಅಭ್ಯಾಸ ಮಾಡಿದ ರನ್ನನ ಗದಾಯುದ್ಧ ಹಾಗೂ ರಾಮಾಶ್ವಮೇಧ ಗ್ರಂಥಗಳು ಇವರ ಸಾಹಿತ್ಯ ರಚನೆಗೆ ಸ್ಫೂರ್ತಿ ನೀಡಿದವು. ರಾಮಾಶ್ವಮೇಧ ಹಾಗೂ ಉತ್ತರ ರಾಮಚರಿತೆ ಸನ್ನಿವೇಶಗಳು ಇವರು 'ಸೀತಾ ಪರಿತ್ಯಾಗ' ನಾಟಕ ರಚನೆಗೆ ಪ್ರೇರಣೆ ನೀಡಿದವು. ಇವರ 'ಬಾಳಿನ ಚಿತ್ರಗಳು' ಕವನ ಸಂಕಲನಕ್ಕೆ ಸಾ.ಶಿ. ಮರುಳಯ್ಯನವರು ಮುನ್ನುಡಿ ಬರೆದಿದ್ದಾರೆ. ಇವರು ಗೆಳೆಯ ಪಿ. ನಿಜಲಿಂಗಪ್ಪನವರೊಡಗೂಡಿ 'ಅಖಿಲ ಕರ್ನಾಟಕ ಕನ್ನಡ ಕವಿ ಬಳಗ' ಸಂಸ್ಥೆ ರಚಿಸಿದರು. ಇದರ ಮೂಲಕ ಎರಡು ಕವನ ಸಂಕಲನ ಸಂಪಾದಿಸಿದರು. ಕನ್ನಡ ಸಾಹಿತ್ಯ ಪರಿಷತ್‌ನ ಅಜೀವ ಸದಸ್ಯರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನ ನಿರ್ದೇಶಕರಾಗಿಯೂ ಸೇವೆಸಲ್ಲಿಸಿದ್ದಾರೆ. ಶಿರಾ ತಾಲೂಕು ಕವಿಗೋಷ್ಠಿಗಳಲ್ಲಿ ಭಾಗವಹಿಸುತ್ತಾರೆ. ಕಾವ್ಯ ವಾಚನ ಮಾಡುತ್ತಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಬಾಳಿನ ಚಿತ್ರಗಳು, **ನಾಟಕ** – ಸೀತಾ ಪರಿತ್ಯಾಗ.
ಸಂಪಾದನೆ – ನೋವು ನಲಿವು, ಬಣ್ಣದ ಗೆರೆ.

ಲಭಿಸಿರುವ ಪ್ರಶಸ್ತಿಗಳು:
೧. ೧೯೮೩ – ಸರ್ಕಾರಿ ನೌಕರರ ಕ್ರೀಡಾಕೂಟ ಈಜುವ ಸ್ಪರ್ಧೆಯಲ್ಲಿ – ಪ್ರಶಸ್ತಿ
೨. ೨೦೦೯ – ತುಮಕೂರುನಲ್ಲಿ ಜಿಲ್ಲಾ ಕಲಾಮೇಳದಲ್ಲಿ – ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ|| ಚಂದ್ರಮತಿ. ಕೆ.ಎಸ್.

೧.	ಹೆಸರು	:	ಕೆ.ಎಸ್. ಚಂದ್ರಮತಿ.
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಕಂತನಹಳ್ಳಿ, ೦೬–೦೮ ೧೯೫೪.
೪.	ಜಿಲ್ಲೆ – ರಾಜ್ಯ	:	ಶಿವಮೊಗ್ಗ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎ.ಎ., ಪಿಹೆಚ್.ಡಿ.
೬.	ವೃತ್ತಿ	:	ಗೃಹಿಣಿ
೭.	ಕೌಟುಂಬಿಕ	:	ಪತಿ; ಡಾ|| ರಾಮಕೃಷ್ಣ ಜೋಷಿ. ಪುತ್ರಿ; ಅಲಕಾ ಕೆ
೮.	ಸದ್ಯದ ವಿಳಾಸ	:	೫೫೧, ೨೪ನೇ ತಿರುವು, ಹೆಬ್ಬಾಳ ೩ನೇ ಹಂತ, ಮೈಸೂರು – ೫೭೦೦೧೭
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೨೩೦೧೯೮೩
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಶಿವಮೊಗ್ಗ ಜಿಲ್ಲಾ ಸೊರಬ ತಾಲೂಕು ಕಂತನಹಳ್ಳಿಯಲ್ಲಿ ಜನಿಸಿದರು. ಇವರು ಶ್ರೀಪತಿ ಹೆಗಡೆ ಹಾಗೂ ಶ್ರೀಮತಿ ಲಕ್ಷ್ಮಮ್ಮ ದಂಪತಿಗಳ ಪುತ್ರಿ. ಇವರು ಕಂತನಹಳ್ಳಿ, ಸೊರಬ ಹಾಗೂ ಶಿವಮೊಗ್ಗಗಳಲ್ಲಿ ಪ್ರಾಥಮಿಕ ಶಿಕ್ಷಣ ಇತ್ಯಾದಿ ಮಾಡಿದರು. ೧೯೭೨ರಲ್ಲಿ ಎಸ್.ಎಸ್.ಎಲ್.ಸಿ. ಮಾಡಿದರು. ೧೯೭೭ರಲ್ಲಿ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಪದವಿ ಪೂರ್ವ ಹಾಗೂ ಪದವಿ ಬಿ.ಎ. ಪಡೆದರು. ೧೯೭೯ರಲ್ಲಿ ಮೈಸೂರು ವಿಶ್ವವಿದ್ಯಾಲಯ ಕನ್ನಡ ಎಂ.ಎ. ಪದವಿ ಪಡೆದರು. ೧೯೮೬-೧೯೯೧ ಯು.ಜಿ.ಸಿ ಸಂಶೋಧಕಿಯಾಗಿ ತಿರುಮಲಾರ್ಯ – ಒಂದು ಅಧ್ಯಯನದ ಕುರಿತು ಬರೆದ ಸಂಶೋಧನಾತ್ಮಕ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯಯ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಶಾಲ ದಿನಗಳಿಂದಲೇ ಸಾಹಿತ್ಯಾಸಕ್ತರು. ಶಿವರಾಮ ಕಾರಂತ, ದ.ರಾ. ಬೇಂದ್ರೆ, ವೈದೇಹಿ ಮುಂತಾದವರ ಸಾಹಿತ್ಯದಿಂದ ಪ್ರಭಾವಿತರು. ಇವರ ಪ್ರಥಮ ಕವನ 'ಶಿರಸಿಯ ಸಮಾಚಾರ'ಪತ್ರಿಕೆಯಲ್ಲಿ ಪ್ರಕಟವಾಯಿತು. ೧೯೯೩ ರಿಂದ ೧೯೯೮ ರವರಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕಿಯಾಗಿ ಸೇವೆ ಸಲ್ಲಿಸಿದರು. ೨೦೦೪ ರವರಗೆ ಮುಂದುವರೆಯಿತು. ನಂತರ ಮೈಸೂರಿನ ಲಕ್ಷ್ಮೀ ಹಯಗ್ರೀವ ಕಾಲೇಜಿನಲ್ಲಿ ಹಾಗೂ ಮೈಸೂರು ವಿಶ್ವವಿದ್ಯಾಲಯ ಮಹಿಳಾ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಕೆ. ಇವರು ಗ್ರಂಥಲೋಕ, ಪುಸ್ತಕ ಪುರವಣಿ, ಪ್ರಜಾವಾಣಿ, ನಮ್ಮ ಮಾನಸ, ತಿಂಗಳು, ಹೊಸತು ಹಾಗೂ ಮಹಿಳಾ ಅಧ್ಯಯನ ಮುಂತಾದ ಪತ್ರಿಕೆಗಳಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಬಿಜಾಪುರದ ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯಯ ಮಹಿಳಾ ಸಾಂಸ್ಕೃತಿಕ ಕೋಶದ ಸಂಪಾದಕತ್ವದಲ್ಲಿ ನಿರತರಾಗಿದ್ದಾರೆ. ಆಕಾಶವಾಣಿಯಲ್ಲಿ ಇವರ ಚಿಂತನ, ಭಾಷಣಗಳು ಪ್ರಸಾರವಾಗಿವೆ. ಇವರು ಮೈಸೂರು, ತುಮಕೂರು, ಮಂಗಳೂರು, ಹಾಸನ, ಕೊಪ್ಪಳಗಳಲ್ಲಿ ನಡೆದ ಸಮ್ಮೇಳನಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಮಹಿಳಾ ಚಿಂತನ ಕುರಿತ ಹತ್ತಾರು ಭಾಷಣ ಮಾಡಿದ್ದಾರೆ. ಹಂಪಿ, ಬಿಜಾಪುರ ಇತ್ಯಾದಿ ಕಡೆಗಳಲ್ಲಿ ನಡೆದ ಕಮ್ಮಟಗಳಲ್ಲಿ ಭಾಗವಹಿಸಿದ್ದಾರೆ. ಇವರು ಅಂಕಣ ಬರೆಹಗಾರರು. ಇವರು ಕವನ, ಲೇಖನ, ಜನಪದ ಕುರಿತು ಬರೆದಿರುವುದಲ್ಲದೆ ಅನುವಾದ, ಸಂಪಾದನೆಯನ್ನೂ ಮಾಡಿದ್ದಾರೆ. ಇವರು ಕರ್ನಾಟಕ ಲೇಖಕಿಯರ ಸಂಘದ ಸದಸ್ಯೆಯಾಗಿದ್ದಾರೆ.

ಪ್ರಕಟಿತ ಕೃತಿಗಳು:
ವಿಮರ್ಶೆ – ಮಾನಸಿ ಮಾನಸ, ಚಿಪ್ಪೊಡೆದ ಮೌನ.
ಜನಪದ – ಹೆಣ್ಣಲ್ಲ ನಮಗೆ ರವಿಚಿನ್ನ.
ಅಂಕಣ ಬರೆಹ– ನಾರೀ ಮಿಡಿತ, ಅಂತರಂಗದ ಅನಾವರಣ, ನಾರೀ ಭಾವ.
ಲೇಕನ ಸಂ – ಶಬ್ದದೊಳಗಿನ ನಿಶ್ಶಬ್ದ. **ಸಂಪಾದಿತ** – ಜಯ ಲಕ್ಷ್ಮೀದೇವಿ.
ಅನುವಾದ – ನೆರಳು ಬೆಳಕಿನ ಚಿತ್ರಗಳು.

ಲಭಿಸಿರುವ ಪ್ರಶಸ್ತಿಗಳು:
೧. ಮಾನಸಿ-ಮಾನಸ ಕೃತಿಗೆ ಕ.ಸಾ.ಪ.ದ ಲಲಿತಮ್ಮ ಗುರು ಸಿದ್ದಪ್ಪ ಪ್ರಶಸ್ತಿ.
೨. ಗುಡಿಬಂಡೆ ಪೂರ್ಣಿಮಾ ಕವನ ಪ್ರಶಸ್ತಿ. ೩. ಸಿಂಧೂರ ಪ್ರಶಸ್ತಿ.

ವ್ಯಕ್ತಿ ಪರಿಚಯ

ಚಂದ್ರಶೇಕರಯ್ಯ. ಬಿ.ಎಂ.

೧.	ಹೆಸರು	:	ಬಿ.ಎಂ. ಚಂದ್ರಶೇಕರಯ್ಯ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಕೆಂಚಮಲ್ಲನಹಳ್ಳಿ, ೦೨-೦೨-೧೯೩೯.
೪.	ಜಿಲ್ಲೆ - ರಾಜ್ಯ	:	ಕೂಡ್ಲಗಿ ತಾಲೂಕು, ಬಳ್ಳಾರಿ ಜಿಲ್ಲೆ. ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ.
೬.	ವೃತ್ತಿ	:	ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯಲ್ಲಿ ವಿವಿಧ ಹುದ್ದೆಗಳು.
೭.	ಕೌಟುಂಬಿಕ	:	ಪತ್ನಿ; ಬಿ.ಎಂ. ಮಂಜುಳಾ. ಪುತ್ರರು; ಬಿ.ಎಂ. ಗಿರೀಶ, ಬಿ.ಎಂ. ಸತೀಶ. ಪುತ್ರಿ; ಬಿ.ಎಂ. ಸುನೀತ
೮.	ಸದ್ಯದ ವಿಳಾಸ	:	ಹೇಮಕೂಟ, ನಂ. ೨೮೦, ೩ನೇ ಎ ಮುಖ್ಯರಸ್ತೆ, ೮ನೇ ಬ್ಲಾಕ್, ಕೋರಮಂಗಲ, ಬೆಂಗಳೂರು ೫೬೦೦೯೫
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦-೨೫೭೧೦೧೬೨
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲೂಕು ಕೆಂಚಮಲ್ಲನ ಹಳ್ಳಿಯಲ್ಲಿ ಜನಿಸಿದರು. ಇವರು ಶ್ರೀ ಬಿ.ಎಂ. ಗುರು ಸಿದ್ದಯ್ಯ ಮತ್ತು ಶ್ರೀಮತಿ ಸಾಕಮ್ಮ ದಂಪತಿಗಳ ಪುತ್ರ. ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ. ಮಾಧ್ಯಮಿಕ ಕಾನಾಮಡುಗು. ಪ್ರೌಢ ೧೯೫೭ರಲ್ಲಿ ಜಗಳೂರಿನಲ್ಲಾಯಿತು. ಕಾಲೇಜು ಚಿತ್ರದುರ್ಗದಲ್ಲಿ. ೧೯೬೦ ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ೧೯೬೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸಾಮಾಜಿಕ ಮಾನವ ಶಾಸ್ತ್ರದಲ್ಲಿ ಎಂ.ಎ. ಪದವಿ. ೧೯೬೦ರಲ್ಲಿ 'ತಾಯಿ ನಾಡು' ದೈನಿಕದಲ್ಲಿ ಉಪಸಂಪಾದಕರಾಗಿ ಒಂದು ವರ್ಷ ಸೇವೆ. ೧೯೬೩-೬೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷ ಸಂಶೋಧನಾ ಸಹಾಯಕರಾಗಿ ಸೇವೆ. ನಂತರ ಎರಡು ವರ್ಷ ಮರಿಯಮ್ಮನ ಹಳ್ಳಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದರು. ೧೯೬೬ ರಿಂದ ರಾಜ್ಯ ವಾರ್ತೆ ಮತ್ತು ಪ್ರಚಾರ ಇಲಾಖೆಯಲ್ಲಿ ವಿವಿಧ ಹುದ್ದೆಗಳ. ೩೧ ವರ್ಷ ಸೇವೆ ಸಲ್ಲಿಸಿ ಬೇರೆ ಬೇರೆ ಊರುಗಳಲ್ಲಿ ಕಾರ್ಯ ನಿರ್ವನಿರ್ವಹಿಸಿ ಉಪನಿರ್ದೇಶಕರಾಗಿ ಬಡ್ತಿ ಪಡೆದು ೧೯೯೭ರಲ್ಲಿ ನಿವೃತ್ತಿ. ೧೯೭೮-೭೧ರಲ್ಲಿ ಬಳ್ಳಾರಿಯಲ್ಲಿದ್ದಾಗ 'ಬಳ್ಳಾರಿ ಜಿಲ್ಲಾಭಿವೃದ್ಧಿ ವಾರ್ತಾ' ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಇದನ್ನೇ ಗುಲ್ಬರ್ಗದಲ್ಲಿಯೂ ಪ್ರಾರಂಭಿಸಿದರು. ೫ ವರ್ಷ ಕೇಂದ್ರ ವಾರ್ತಾ ಇಲಾಖೆಯಲ್ಲಿ ಪ್ರತಿನಿಯೋಜನೆಯ ಮೇಲೆ ಪಿ.ಐ.ಬಿ.ಯಲ್ಲಿ ಕಾರ್ಯನಿರ್ವಹಿಸಿದರು. ೧೯೮೦ ರಿಂದ ೧೯೯೪ ರವರೆಗೂ ಇಲಾಖೆಯ ಪತ್ರಿಕೆಗಳಿಂದ 'ಜನಪದ' ಹಾಗೂ 'ಮಾರ್ಚ್ ಆಫ್ ಕರ್ನಾಟಕ'ದ ಉಪ ಹಾಗೂ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದರು. ಇವರ ಚಿಂತನ ಹಾಗೂ ಲೇಖನಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ. ಇವರ ಪ್ರಥಮ ಕವಿತೆಯೊಂದು ೧೯೫೭ರಲ್ಲಿ 'ವಿಕಟ ವಿನೋದಿನಿ'ಯಲ್ಲಿ ಪ್ರಕಟವಾಯಿತು. ನಂತರ ಇವರು ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಸುಧಾ, ಕರ್ಮವೀರ, ತರಂಗ, ಕಸ್ತೂರಿ, ಮಯೂರ, ಡೆಕ್ಕನ್ ಹೆರಾಲ್ಡ್, ಟೈಂಸ್ ಆಫ್ ಇಂಡಿಯಾ, ಹೆರಿಟೇಜ್ ಆಫ್ ಕರ್ನಾಟಕ ಮುಂತಾದ ಪತ್ರಿಕೆಗಳಿಗೂ ಬರೆಯತೊಡಗಿದರು. ಇವರು, ಕಥೆ, ಕವನ, ಹರಟೆ, ಚಲನ ಚಿತ್ರಗಳ ಬಗ್ಗೆ ಅಲ್ಲದೆ ಅನುವ್ಹಾದವನ್ನೂ ಮಾಡುತ್ತಾರೆ. ಇವರ ೧೦-೧೨ ಕೃತಿಗಳು ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು:
ವ್ಯಕ್ತಿ ಚಿತ್ರಗಳು – ಚಿರ ಸ್ಮರಣೀಯರು.
ಜೀವನ ಚರಿತ್ರೆ – ನೇತಾಜಿ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್.
ಕಲೆ – ಕರ್ನಾಟಕದ ಕರಕುಶಲ ಕಲೆಗಳು.
ಸ್ಥಳ ಇತಿಹಾಸ – ಕೂಡ್ಲಗಿ ತಾ. ದರ್ಶನ.
ಅನುವಾದ – ಆಯಾರಾಮ್ – ಗಯಾರಾಮ್, ನಮ್ಮೆಲ್ಲರ ಬಾಪು ಗಾಂಧೀಜಿ, ಮದನ ಮೋಹನ ಮಾಳವೀಯ.
ಸಂಸ್ಕೃತಿ – ಕರ್ನಾಟಕದ ಸಾಂಸ್ಕೃತಿ ಇತಿಹಾಸ ಪರಂಪರೆ.

ಲಭಿಸಿರುವ ಪ್ರಶಸ್ತಿಗಳು:
೧. ೨೦೦೮ 'ನೇತಾಜಿ ಸುಭಾಷ್ ಚಂದ್ರ ಬೋಸ್' ಕೃತಿಗೆ ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ॥ ಚೈತ್ರಾ. ಕೆ.ಎಸ್.

೧. ಹೆಸರು : ಡಾ॥ ಕೆ.ಎಸ್ ಚೈತ್ರಾ

೨. ಕಾವ್ಯನಾಮ : ಇರುವುದಿಲ್ಲ.

೩. ಹುಟ್ಟಿದ ಸ್ಥಳ ದಿನಾಂಕ : ಶಿರಸಿ, ೨೭-೦೬-೧೯೭೪.

೪. ಜಿಲ್ಲೆ - ರಾಜ್ಯ : ಕಾರವಾರ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿಡಿ.ಎಸ್., ಡಿ.ಡಿ.ಎ., (ಯು.ಎಸ್.ಎ.)

೬. ವೃತ್ತಿ : ದಂತ ವೈದ್ಯೆ.

೭. ಕೌಟುಂಬಿಕ : ಪತಿ; ಶ್ರೀ ಸಂತೋಷ್ ಸಿದ್ದೇಶ್ವರ್.
ಪುತ್ರಿಯರು; ಮಹತಿ, ಮಧುಮಿತಾ.

೮. ಸದ್ಯದ ವಿಳಾಸ : 'ಅನುಗ್ರಹ' ಜಿ-೧೯೫, ಸಹಕಾರನಗರ
ಬೆಂಗಳೂರು-೫೬೦೦೯೨.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೦-೨೩೩೩೭೪೦೦, ೯೮೪೫೨೨೯೫೪೨

೧೧. ಹಸ್ತಾಕ್ಷರ (ಸಹಿ) : ಕೆ. ಎಸ್ ಚೈತ್ರಾ

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಸಿರ್ಸಿಯಲ್ಲಿ ಜನಿಸಿದರು. ಇವರು ಶಿವಮೊಗ್ಗದ ಪ್ರಖ್ಯಾತ ಮಾನಸಿಕ ವೈದ್ಯ, ವೈದ್ಯ ಸಾಹಿತಿ ಡಾ॥ ಕೆ.ಆರ್. ಶ್ರೀಧರ್ ಮತ್ತು ಲೇಖಕಿ ಸಮಾಜ ಸೇವಕಿ ಶ್ರೀಮತಿ ವಿಜಯಾ ಶ್ರೀಧರ್ ದಂಪತಿಗಳ ಮಗಳು. ಪ್ರಾಥಮಿಕ ಶಿಕ್ಷಣ ಶಿವಮೊಗ್ಗೆಯ ಮೇರಿ ಇಮಾಕ್ಯುಲೇಟ್ ಗರ್ಲ್ಸ್ ಸ್ಕೂಲಿನಲ್ಲಿ ಪಡೆದರು. ಕಾಲೇಜು ವಿದ್ಯಾಭ್ಯಾಸ ಡಿ.ವಿ.ಎಸ್. ಜೂನಿಯರ್ ಕಾಲೇಜು ಶಿವಮೊಗ್ಗ ಮಣಿಪಾಲ ಕಾಲೇಜ್ ಆಫ್ ಡೆಂಟಲ್ ಸರ್ಜರಿಯಲ್ಲಿ ದಂತ ವೈದ್ಯಕೀಯ ಶಿಕ್ಷಣ ಪಡೆದಿದ್ದಾರೆ. ಸ್ವಂತ ಕ್ಲಿನಿಕ್‌ನಲ್ಲಿ ದಂತವೈದ್ಯೆಯಾಗಿ ಸೇವೆಸಲ್ಲಿಸುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳು. ಇವರು ಶಾಲಾದಿನಗಳಿಂದಲೇ ಸಾಹಿತ್ಯಾಸಕ್ತರಾಗಿ ಎಂಟನೇ ವಯಸ್ಸಿನಿಂದಲೇ ಮಕ್ಕಳ ಕಥೆ, ಹನಿಗವನಗಳನ್ನು ರಚಿಸುವುದರ ಮೂಲಕ ಸಾಹಿತ್ಯ ರಂಗಕ್ಕೆ ಪಾದಾರ್ಪಣೆ ಮಾಡಿದರು. ಕಾರಂತ, ಬೇಂದ್ರೆ, ಕುವೆಂಪು, ಪು.ತಿ.ನ., ಮಾಸ್ತಿ, ಭೈರಪ್ಪ, ತ್ರಿವೇಣಿ, ಅಡಿಗರು ಇವರ ಸಾಹಿತ್ಯದಿಂದ ಪ್ರಭಾವಿತರಾದರು. ಇವರ ಸಣ್ಣ ಕಥೆ, ಮಕ್ಕಳ ಕಥೆ, ಕವನಗಳು, ನಗೆಹನಿ, ಪ್ರವಾಸ ಲೇಖನಗಳು ನಾಡಿನ ಪ್ರಸಿದ್ಧ ದಿನ, ವಾರ, ಮಾಸ ಪತ್ರಿಕೆಗಳಾದ ಕನ್ನಡಪ್ರಭ, ಪ್ರಜಾವಾಣಿ, ವಿಜಯ ಕರ್ನಾಟಕ, ಕರ್ಮವೀರ, ತರಂಗ, ಸುಧಾ, ತುಷಾರ, ಮಯೂರ ಇತ್ಯಾದಿಗಳಲ್ಲಿ ಪ್ರಕಟವಾಗುತ್ತವೆ. ಶಿವಮೊಗ್ಗದಿಂದ ಪ್ರಕಟವಾಗುವ ನಾವಿಕ ಪತ್ರಿಕೆಯಲ್ಲಿ ಇವರ ಅಮೆರಿಕಾ ಪತ್ರ ಹಾಗೂ ಮಥನ ಅಂಕಣಗಳು ಪ್ರಕಟವಾಗುತ್ತವೆ. ಇವರ ನೂರಕ್ಕೂ ಹೆಚ್ಚು ಆರೋಗ್ಯ ಲೇಖನಗಳು ಪ್ರಜಾವಾಣಿ, ವಿಜಯ ಕರ್ನಾಟಕ, ಕರ್ಮವೀರ, ತರಂಗ, ಸುಧಾ, ಓ ಮನಸೇ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ದೂರದರ್ಶನದಲ್ಲಿ ವಾರ್ತಾ ವಾಚಕಿಯಾಗಿ ಐದು ವರ್ಷಗಳು ಸೇವೆ ಸಲ್ಲಿಸಿದ್ದಾರೆ. ದೂರದರ್ಶನದ ಬೆಳಗು ಹಾಗೂ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳ ನಿರೂಪಕಿಯಾಗಿ ಪ್ರಸ್ತುತ ಕಾರ್ಯನಿರ್ವಹಣೆ. ಉತ್ತಮ ಭರತ ನಾಟ್ಯ ಕಲಾವಿದೆ. ಭರತನಾಟ್ಯ ಪರೀಕ್ಷೆಗಳನ್ನು ಪ್ರಥಮ ದರ್ಜೆಯಲ್ಲಿ ಮಾಡಿದ್ದಾರೆ. ಇಕ್ಕೇ-ರಿಯಲ್ಲಿ ನಡೆದ ರಾಷ್ಟ್ರೀಯ ಸಂಗೀತ ಮತ್ತು ನೃತ್ಯ ಮಹೋತ್ಸವದಲ್ಲಿ ಪಾಲ್ಗೊಂಡಿದ್ದಾರೆ. ಕೆಲವು ಸಂಸ್ಥೆಗಳ ಟ್ರಸ್ಟಿಯಾಗಿದ್ದರೆ.

ಪ್ರಕಟಿತ ಕೃತಿಗಳು:
ಹಾಸ್ಯ ಸಂ. – ಆರೋಗ್ಯದ ನಗುವಿಗಾಗಿ, ಕುಶಲವೇ ಕ್ಷೇಮವೇ.
ಇತರರೊಂದಿಗೆ – ಪರಿಪೂರ್ಣ ವ್ಯಕ್ತಿತ್ವ. **ಇತರೆ** – ಯೋಗಕ್ಷೇಮ.

ಲಭಿಸಿರುವ ಪ್ರಶಸ್ತಿಗಳು:
೧. ಮಣಿಪಾಲದಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗ ಅಂತರರಾಷ್ಟ್ರೀಯ ಅತ್ಯುತ್ತಮ ಪ್ರಶಸ್ತಿ.
೨. ೨೦೦೪ – ಕಲ್ಬುರ್ಗಿಯ ಯುವ ಬರೆಹಗಾರರಿಂದ ಪ್ರಶಸ್ತಿ.
೩. ೨೦೦೮ – ಪ್ರಕಟಿತ ಕಥೆಗಾಗಿ ಅತ್ಯುತ್ತಮ ಕಥಾರಂಗಂ ಪ್ರಶಸ್ತಿ.

ವ್ಯಕ್ತಿ ಪರಿಚಯ

ಜಗದೀಶ. ಟಿ.ಎಂ.

೧. ಹೆಸರು : ಟಿ.ಎಂ. ಜಗದೀಶ

೨. ಕಾವ್ಯನಾಮ : 'ಧ್ರುವ', 'ಸುಮಲತ'. 'ಮಜನು'.

೩. ಹುಟ್ಟಿದ ಸ್ಥಳ ದಿನಾಂಕ : ಕುಪ್ಪಳ್ಳಿ, ಶಿರಸಿ ತಾ. ೧೬-೦೮-೧೯೬೨.

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ.

೬. ವೃತ್ತಿ : ಕೃಷಿ.

೭. ಕೌಟುಂಬಿಕ : ಪತ್ನಿ; ಮಾಲತಿ ಜಗದೀಶ್, ಪುತ್ರ; ಧ್ರುವ.

೮. ಸದ್ಯದ ವಿಳಾಸ : 'ಶ್ರೀ ರಾಜ ರಾಜೇಶ್ವರಿ ನಿಲಯ ಕುಪ್ಪಳ್ಳಿ ಅಂಚೆ, ಬಂಖನಾಳ-೫೮೧೩೫೮. ಶಿರಸಿ ತಾಲೂಕು, ಉತ್ತರ ಕನ್ನಡ ಜಿಲ್ಲೆ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೮೪-೨೬೮೯೩೬

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕು ಕುಪ್ಪಳ್ಳಿಯಲ್ಲಿ ಜನಿಸಿದರು. ಶ್ರೀ ತೆಂಕೋಡು ಮನೆ ಮಹಾಬಲಗಿರಿಯಪ್ಪ ಮತ್ತು ಶ್ರೀಮತಿ ಫಣಿಯಮ್ಮ ದಂಪತಿಗಳ ಪುತ್ರ. ತಂದೆ ಪ್ರಸಿದ್ಧ ಯಕ್ಷಗಾನ ಕಲಾವಿದರು. ಇವರು ಜನಪ್ರಿಯ ಸಾಹಿತಿ ಶ್ರೀ ಟಿ.ಎಂ. ಸುಬ್ಬರಾಯರ ತಮ್ಮ. ಇವರ ಪ್ರಾಥಮಿಕ ಶಿಕ್ಷಣ ಸರ್ಕಾರಿ ಪ್ರಾಥಮಿಕ ಶಾಲೆ, ಬೀಳೂರುವಿನಲ್ಲೂ ಪ್ರೌಢ ಶಿಕ್ಷಣ ಬಿಸಿಲುಕೊಪ್ಪದಲ್ಲೂ ಆಗಿದೆ. ಸಾಹಿತ್ಯ ಪ್ರಿಯರಾದ ಇವರು ಶಾಲಾದಿನಗಳಲ್ಲಿ ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ರಸಪ್ರಶ್ನೆಗಳಲ್ಲಿ ಹಾಗೂ ನಾಟಕಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಿದ್ದಾರೆ. ಅಂಚೆ ಚೀಟಿ ಸಂಗ್ರಹ, ನಾಣ್ಯ ಸಂಗ್ರಹ, ಪತ್ರಿಕಾ ಸುದ್ದಿ ಸಂಗ್ರಹ ಇತ್ಯಾದಿ ಹವ್ಯಾಸ. ಕ್ರಿಕೆಟ್ ಆಟಗಾರರು, ಚೆಸ್ಸು, ಕೆರಂಗಳಲ್ಲೂ ಆಸಕ್ತಿ. ವೃತ್ತಿಯಿಂದ ಕೃಷಿಕ. ಯಕ್ಷಗಾನ ತಾಳ ಮದ್ದಲೆಯಲ್ಲಿ ಅರ್ಥಗಾರಿಕೆ ಮಾಡುತ್ತಾರೆ. ೧೯೮೧ರಲ್ಲಿ ತರಂಗ ಆರಂಭವಾದಾಗ ಕೆಲವು ಕಾಲ ಉಪಸಂಪಾದಕರಾಗಿ ಕಾರ್ಯನಿರ್ವಹಣೆ. ೧೯೮೩ರಲ್ಲಿ ಶಿರಸಿಯ ಉಷಾವಾಣಿ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಕೆ. ಸಾಹಿತ್ಯ ಸಮಾರಂಭಗಳ ನಿರೂಪಕರಾಗಿ ಸೇವೆ. ಟಿ.ಎಂ. ಸುಬ್ಬರಾಯ, ಟಿ. ಎಂ. ರಮೇಶ್, ಎಸ್.ಎಲ್. ಭೈರಪ್ಪ, ಕೆ.ಟಿ. ಗಟ್ಟಿ, ಎಂ. ವ್ಯಾಸ, ನಾಗತಿಹಳ್ಳಿ, ಈಶ್ವರಚಂದ್ರ, ಶೇಷನಾರಾಯಣ ಮುಂತಾದ ಸಾಹಿತಿಗಳ ಕೃತಿಗಳಿಂದ ಪ್ರಭಾವಿತರು. ೧೯೮೨ರಲ್ಲಿ ಸಂಯುಕ್ತ ಕರ್ನಾಟಕದಲ್ಲಿ ಇವರ ಪ್ರಥಮ ಕಥೆ ಪ್ರಕಟವಾಯಿತು. ನಾಡಿನ ವಿವಿಧ ಪತ್ರಿಕೆಗಳಲ್ಲಿ ಇವರ ಐವತ್ತಕ್ಕೂ ಹೆಚ್ಚು ಕಥೆಗಳು, ಹಾಸ್ಯ ಲೇಖನಗಳು ಪ್ರಕಟವಾಗಿವೆ. ೨೫ಕ್ಕೂ ಹೆಚ್ಚು ಹಾಸ್ಯ ಬರೆಹಗಳು ಪ್ರಕಟವಾಗಿವೆ. ೫೦ಕ್ಕೂ ಹೆಚ್ಚು ಕವನಗಳು ಹಾಗೂ ಹನಿಗವನಗಳು ಪ್ರಕಟವಾಗಿವೆ. ಲೇಖನಗಳು, ಎಂಟು ಕಾದಂಬರಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸ್ಥಳೀಯ ಪತ್ರಿಕೆಗಳಲ್ಲಿ ಇವರ ಅಂಕಣ ಬರೆಹಗಳು ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು:
ಕಥಾ ಸಂ. – ಗ್ರಾಸ.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೨ – ರಾಷ್ಟ್ರೋತ್ಥಾನ ಕಥಾ ಸ್ಪರ್ಧೆಯಲ್ಲಿ ೩ನೇ ಬಹುಮಾನ.
೨. ೧೯೯೩ – ಮುಂಬಯಿ ಅಕ್ಷಯ ಪತ್ರಿಕೆಯ ದ್ವಿತೀಯ ಬಹುಮಾನ.
೩. ೧೯೯೧ – ಎಸ್.ಎಫ್.ಐ. ಕವನ ವಾಚನ ಸ್ಪರ್ಧೆಯ ಬಹುಮಾನ.
೪. ೧೯೯೨ – ಮುಂಬಯಿ ಮೋಗವೀರ ಪತ್ರಿಕೆಯ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.
೫. ೧೯೯೨ – ದಿ ಚಂದ್ರ ಮೊಗೇರ ಕವನ ಸ್ಪರ್ಧೆಯಲ್ಲಿ ಬಹುಮಾನ.
೬. ೨೦೧೦ – ಮೋಗವೀರ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ.

ವ್ಯಕ್ತಿ ಪರಿಚಯ

ಜಗನ್ನಾಥ ಹೇಮಾದ್ರಿ

೧.	ಹೆಸರು	:	ಶ್ರೀ ಜಗನ್ನಾಥ ಹೇಮಾದ್ರಿ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಬೆಂಗಳಿ, ಶಿರಸಿ ತಾಲೂಕು, ೦೫-೦೮-೧೯೪೯
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ (ಕನ್ನಡ), ಬಿ.ಲಿಬ್ (ಕನ್ನಡ), ಶಾಸನಶಾಸ್ತ್ರ (ಪ್ರೌಢ)
೬.	ವೃತ್ತಿ	:	ನಿವೃತ್ತಿ
೭.	ಕೌಟುಂಬಿಕ	:	ಪತ್ನಿ; ಸುಧಾ, ಮಕ್ಕಳು ಇಲ್ಲ.
೮.	ಸದ್ಯದ ವಿಳಾಸ	:	ನಂ ೨೩, ಸುಪ್ರಜ , ೨ನೇ ಮುಖ್ಯರಸ್ತೆ, ಸಿದ್ಧಿ ವಿನಾಯಕ ಲೇಔಟ್, ವಿರೂಪಾಕ್ಷ ಪುರ, ವಿದ್ಯಾರಣ್ಯಪುರ, ಬೆಂಗಳೂರು - ೫೬೦೦೯೭
೯.	ಖಾಯಂ ವಿಳಾಸ	:	ಬೆಂಗಳಿ, ಓಣಿ ಕೇರಿ-ಅಂಚೆ, ಶಿರಸಿ ತಾಲೂಕು, ಉ.ಕ.ಜಿಲ್ಲೆ ೫೮೧೩೧೮
೧೦.	ದೂರವಾಣಿ ಸಂಖ್ಯೆ	:	೦೮೦ - ೨೩೬೪೬೦೭೩, ೯೯೭೨೯೧೫೯೭೩
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕು ಬೆಂಗಳಿಯಲ್ಲಿ ಜನಿಸಿದರು. ಪ್ರಥಾಮಿಕ ಶಿಕ್ಷಣ ಹುಟ್ಟೂರಿನ ಬಳಿಯ ಓಣಿಕೇರಿಯಲ್ಲಾಯಿತು. ಬನವಾಸಿ ಜಯಂತಿ ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣ. ಬಿ.ಎ. ಇಂಗ್ಲೀಷ್ ಪದವೀಧರ, ೧೯೭೩ರಲ್ಲಿ ಶಿರಸಿಯ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ. ಕರ್ನಾಟಕದ ವಿಶ್ವವಿದ್ಯಾಲಯ ಧಾರವಾಢದಲ್ಲಿ ಜಾನಪದ ವಿಶೇಷ ಅಧ್ಯಯನವಾಗಿ ಸ್ನಾತಕೋತ್ತರ ಪದವಿ. ೧೯೭೬ರಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನೌಕರರಾಗಿ ಸೇವಾ ಪ್ರಾರಂಭ. ೨೦೦೮ರಲ್ಲಿ ಪ್ರಧಾನ ವ್ಯಸ್ಥಾಪಕರಾಗಿ ನಿವೃತ್ತಿ. ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯದ ಬಗ್ಗೆ ಆಸಕ್ತಿ. ಇವರು ರಚಿಸಿದ ಪ್ರಥಮ ಕೃತಿ 'ಕನ್ನಡ ಸಾಹಿತ್ಯ ಪರಿಷತ್ತು' ೧೯೯೮ರಲ್ಲಿ ಪ್ರಕಟವಾಗಿ ೨೦೦೬ರಲ್ಲಿ ಮರು ಮುದ್ರಣವಾಗಿದೆ. ಇವರು ಹಿಂದಿಯನ್ನೂ ಬಲ್ಲರು. ಹಿಂದಿಯಿಂದ ಕನ್ನಡಕ್ಕೆ ಅನುವಾದ ಮಾಡುತ್ತಾರೆ. ಇವರ ಹಲವಾರು ಬರೆಹಗಳು ಆಕಾಶವಾಣಿ ಚಿಂತನ ಕಾರ್ಯಕ್ರಮದಲ್ಲಿ ಪ್ರಸಾರವಾಗಿದೆ. ಬೆಂಗಳೂರು ದೂರದರ್ಶನಕ್ಕಾಗಿ 'ಕನ್ನಡ–ಕನ್ನಡಿ' ಕನ್ನಡ ಬಾರದವರಿಗಾಗಿ 'ಮಾತನಾಡುವ ಕನ್ನಡ' ಕಾರ್ಯಕ್ರಮಕ್ಕಾಗಿ ೧೩ ಕಂತುಗಳ ಸಾಹಿತ್ಯ ರಚಿಸಿಕೊಟ್ಟಿದ್ದಾರೆ. ೧೯೮೧ರಲ್ಲಿ ಕಾರವಾರದಲ್ಲಿ ಜರುಗಿದ ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಉತ್ತರ ಕನ್ನಡದಲ್ಲಿ ಜನಪದ ಕಲೆಗಳು' ವಿಷಯದ ಪ್ರಬಂಧ ಮಂಡಿಸಿದ್ದಾರೆ. ೧೯೮೯ರಲ್ಲಿ ದಾಂಡೇಲಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಏರ್ಪಡಿಸಿದ ಜಾನಪದ ಸಮ್ಮೇಳನದಲ್ಲಿ 'ಉತ್ತರ ಕನ್ನಡ ಜಿಲ್ಲಾ ಬುಡಕಟ್ಟು ಜನಾಂಗ – ಹಲಸರು' ಕುರಿತಾದ ಪ್ರಬಂಧ ಮಂಡಿಸುದ್ದಾರೆ. ೧೯೯೬ರಲ್ಲಿ ನಡೆದ ಚಿತ್ರದುರ್ಗದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಜನಪದ ಕಲಾ ಪ್ರಕಾರದಲ್ಲಿ ಸಂಸ್ಕೃತಿ' ಕುರಿತ ಪ್ರಬಂಧ ಮಂಡಿಸಿದ್ದಾರೆ. ೨೫ ಕ್ಕೂ ಹೆಚ್ಚು ಸ್ಮರಣ ಸಂಚಿಕೆಗಳಿಗಾಗಿ ಸಂದರ್ಭಗಳಿಗೆ ತಕ್ಕ ಲೇಖನಗಳನ್ನು ಬರೆದಿದ್ದಾರೆ. ಹಲವಾರು ಕವಿ ಗೋಷ್ಠಿಗಳಲ್ಲಿ ಕವನ ವಾಚಿಸಿದ್ದಾರೆ. ಕೆಲವು ಸೇವಾಸಂಸ್ಥೆಗಳಲ್ಲಿ ಭಾಗವಹಿಸಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದಾರೆ. ಇವರು ಇಂಗ್ಲೀಷ್‌ನಿಂದಲೂ ಕನ್ನಡಕ್ಕೆ ಅನುವಾದ ಮಾಡಬಲ್ಲರು.

ಪ್ರಕಟಿತ ಕೃತಿಗಳು:

ಇತರೆ – ಕನ್ನಡ ಸಾಹಿತ್ಯ ಪರಿಷತ್ತು.

ಹಿಂದಿಯಿಂದ ಕನ್ನಡಕ್ಕೆ ಅನುವಾದ – ರಾಧಾ ಸ್ವಾಮಿಮತ.

ವ್ಯಕ್ತಿ ಪರಿಚಯ

ಡಾ|| ಜಯಂತಿ ಮನೋಹರ್

೧. ಹೆಸರು : ಡಾ|| ಜಯಂತಿ ಮನೋಹರ್

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ನಂಜನಗೂಡು, ೦೨-೧೦-೧೯೫೧

೪. ಜಿಲ್ಲೆ - ರಾಜ್ಯ : ಮೈಸೂರು, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ. ಸಂಸ್ಕೃತ, ಎಂ.ಎ. ಕನ್ನಡ, ಪಿಹೆಚ್.ಡಿ.

೬. ವೃತ್ತಿ : ನಿವೃತ್ತ ಭಾರತೀಯ ಸ್ಟೇಟ್ ಬ್ಯಾಂಕ್ ಉದ್ಯೋಗಿ.

೭. ಕೌಟುಂಬಿಕ : ಪತಿ; ವಿ.ಎಸ್. ಮನೋಹರ.

೮. ಸದ್ಯದ ವಿಳಾಸ : ನಂ. ೧೧೯, ಸುರಭಿ, ೧ನೇ ಕ್ರಾಸ್, ಸಂಜಯ ನಗರ, ಬೆಂಗಳೂರು ೫೬೦೦೯೪

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೯೮೦೦೪೭೦೮೮, ೯೮೪೫೧೪೭೦೮೮.

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ನಂಜನಗೂಡಿನಲ್ಲಿ ಜನಿಸಿದರು. ನಂಜನಗೂಡು ಪ್ರಸಿದ್ಧ ಪವಿತ್ರ ತೀರ್ಥಕ್ಷೇತ್ರ. ಇವರು ಶ್ರೀ ಎಮ್. ನಾಗರಾಜ್ ಮತ್ತು ಶ್ರೀಮತಿ ಆರ್. ಅಮೃತಾಬಾಯಿ ದಂಪತಿಗಳ ಮಗಳು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಕುಟುಂಬದಿಂದ ಬಂದವರು. ಗಾಂಧೀ ಮೌಲ್ಯಗಳ, ಭಾರತೀಯ ಪರಂಪರೆಯ ಸಾಂಸ್ಕೃತಿಕ ಮೌಲಗಳ ಪ್ರಭಾವಿತರು. ೧೯೭೪ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಸಂಸ್ಕೃತ ಹಾಗೂ ೧೯೯೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿಗಳನ್ನು ಗಳಿಸಿದ್ದಾರೆ. ಋಗ್ವೇದ ಸಂಕೇತಾರ್ಥಗಳು ಒಂದು ಅಧ್ಯಯನ ಕುರಿತಾದ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ಪದವಿ ಗಳಿಸಿದ್ದಾರೆ. ವಿಜಯ ಕರ್ನಾಟಕ, ಪ್ರಜಾವಾಣಿ, ಸುಧಾ, ಕರ್ಮವೀರ, ತರಂಗ ಹಾಗೂ ಡೆಕ್ಕನ್ ಹೆರಾಲ್ಡ್ ಮುಂತಾದ ಪತ್ರಿಕೆಗಳು, ನಿಯತಕಾಲಿಕೆಗಳಲ್ಲಿ ಇವರ ಬರೆಹಗಳು ಪ್ರಕಟವಾಗಿವೆ. ಅಂಕಣ-ಕಾರರಾಗಿದ್ದಾರೆ. ರಾವಣನ ಪುನರ್ಜನ್ಮದ ಕಣಸು ಕಾದಂಬರಿ ಸುಧಾ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಗಿದೆ. ಋಗ್ವೇದದ ಬಗ್ಗೆ ವಿಶೇಷ ಒಲವು. ಕೆಲವು ಕೃತಿಗಳನ್ನು ಅನುವಾದ ಮಾಡಿದ್ದಾರೆ. ಇಂಗ್ಲೀಷ್ ಹಾಗೂ ಕನ್ನಡದಲ್ಲಿ ವೇದಮಂತ್ರಗಳ ಸಾಂಕೇತಿಕ ಅಂತರಾರ್ಥದ ಬಗ್ಗೆ ಕೃತಿ ರಚಿಸಿದ್ದಾರೆ. ಇವರ ಭಾರತೀಯ ಚಿಂತನೆಯಲ್ಲಿ ಮನೋ ವೈಜ್ಞಾನಿಕ ತತ್ವಗಳು ಕೃತಿಗೆ ಜಸ್ಟೀಸ್ ಡಾ||ರಾಮ ಜೋಯಿಸ್ ಮುನ್ನುಡಿ ಬರೆದಿದ್ದಾರೆ. ವಾಲ್ಮೀಕಿ ರಾಮಯಣದೊಂದಿಗೆ ಥಾಯಲ್ಯಾಂಡ್, ಕಾಂಬೋಡಿಯಾ, ಬಾಲಿ ಹಾಗೂ ವಿವಿಧ ಕನ್ನಡ ರಾಮಯಣಗಳ ತೌಲನಿಕ ಅಧ್ಯಯನ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಕುರಿತು ದೃಶ್ಯ, ಶ್ರವ್ಯ ಉಪನ್ಯಾಸ, ವೇದ ಉಪನಿಷತ್, ಭಗವದ್ಗೀತೆ, ರಾಮಾಯಣ ಮಹಾಭಾರತ ಪುರಾಣಗಳ ಮೂಲಕ ಭಾರತೀಯ ಸಾಂಸ್ಕೃತಿಯ ಪರಂಪರೆಯ ಕುರಿತೂ ದೇಶ-ವಿದೇಶಗಳಲ್ಲಿ ಉಪನ್ಯಾಸ ಮಾಡಿದ್ದಾರೆ. ಜರ್ಮನಿ ಹಾಗೂ ಆಸ್ಟ್ರೇಲಿಯಾದಲ್ಲಿ ಕನ್ನಡ ಭಾಷಾ ಬೊಧನೆ, ಶಿಕ್ಷಕರ ತರಬೇತಿಗಳನ್ನು ನಡೆಸಿದ್ದಾರೆ. ಇಂಗ್ಲೆಂಡ್, ಜಪಾನ, ಬಾಲಿ ಮುಂತಾದ ಕಡೆ ನಡೆದ ಅಂತರ ರಾಷ್ಟ್ರೀಯ ಸಮ್ಮೇಳನಗಳಲ್ಲಿ ವಿದ್ವತ್ ಪ್ರಬಂಧಗಳನ್ನು ಮಂಡಿಸಿದ್ದಾರೆ. ಭಾರತೀಯ ಸ್ಟೇಟ್ ಬ್ಯಾಂಕ್ ನಿವೃತ್ತ ನೌಕರರು. ಇವರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹಾಗೂ ವಿದೇಶಗಳಲ್ಲಿ ಕೈ ಗೊಂಡಿರುವ ಪ್ರವಾಸ ಕಥನ ಕರ್ಮವೀರ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟವಾಗಿದೆ. ಸಾಗರದಾಚೆ ಇವರು ಕೈಗೊಂಡಿರುವ ಸಂಸ್ಕೃತ ಹಾಗೂ ಕನ್ನಡ ಪರ ಕಾರ್ಯಕ್ರಮಗಳು ಪ್ರಸಿದ್ಧಿಗಳಿಸಿವೆ. ಇವರ ಪತಿ ಶ್ರೀ ಬಿ.ಎಸ್. ಮನೋಹರ್ ನಿರ್ಮಿಸಿ, ನಿರ್ದೇಶಿಸಿರುವ ಶೈಕ್ಷಣಿಕ, ಸಾಮಾಜಿಕ ನಾಡು ನುಡಿ ಕುರಿತಾದ ಮೌಲ್ಯಯುತ ಸಾಕ್ಷ್ಯಾಚಿತ್ರಗಳಲ್ಲಿ ಇವರು ಹೊಯಕಯ್ ಆಗಿ ದುಡಿದಿದ್ದಾರೆ.

ಪ್ರಕಟಿತ ಕೃತಿಗಳು;

ನಾಟಕ - ರಾವಣಾಸುರನ ಕಣಸು. **ಕಾದಂಬರಿ** - ರಾವಣನ ಪುನರ್ಜನ್ಮದ ಕಣಸು.

ಇತರೆ - ಸಂಸ್ಕೃತ ಭಾಷಾ ಬೋಧನೆಗೆ ಕೈಪಿಡಿ, ಭಾರತೀಯ ಚಿಂತನೆಯಲ್ಲಿ ಮನೋವೈಜ್ಞಾನಿಕ ತತ್ವಗಳು. **ಅನುವಾದ** - ಋಗ್ವೇದದ ಪರಿಚಯ, ಅಗ್ನಿಮಂತ್ರಗಳು.

ಲಭಿಸಿರುವ ಪ್ರಶಸ್ತಿಗಳು:

೧. ಶ್ರೀ ಅರಬಿಂದೋ ಕಪಾಲಿ ಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆ - ಪ್ರಶಸ್ತಿ.

೨. ೨೦೦೮ - ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ. ೩. ವೀನವೀ ಪ್ರಕಾಶನ ಪ್ರಶಸ್ತಿ.

ವ್ಯಕ್ತಿ ಪರಿಚಯ

ಜಯವಂತ ಕಾಡದೇವರ

೧.	ಹೆಸರು	:	ಜಯವಂತ ಗಿರಿಮಲ್ಲಯ್ಯ ಕಾಡದೇವರ
೨.	ಕಾವ್ಯನಾಮ	:	ಜಯವಂತ ಕಾಡದೇವರ
೩.	ಹುಟ್ಟಿದ ಸ್ಥಳ ದಿನಾಂಕ	:	ಜಮಖಂಡಿ, ೦೨-೦೫-೧೯೪೪.
೪.	ಜಿಲ್ಲೆ - ರಾಜ್ಯ	:	ಬಾಗಲಕೋಟೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ. (ಇತಿಹಾಸ), ಡಿಪ್ಲೊಮಾ ಇನ್ ಎಪಿಗ್ರಾಫ್.
೬.	ವೃತ್ತಿ	:	ಉಪನ್ಯಾಸಕ.
೭.	ಕೌಟುಂಬಿಕ	:	ಪತ್ನಿ; ಶಾರದ. ಪುತ್ರರು; ವಿಶ್ವಜ, ವಿನಯ್.
೮.	ಸದ್ಯದ ವಿಳಾಸ	:	ಜಯವಂತ ಕಾಡದೇವರ, ಮಕ್ಕಳ ಸಂಗಮ, ಬನ ಹಟ್ಟಿ, ಜಮಖಂಡಿ ತಾ., ಬಾಗಲಕೋಟೆ - ೫೮೭೩೧೧
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೫೩-೨೩೦೬೫೮, ೯೪೪೯೧೮೧೭೧೧.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬಾಗಲಕೋಟೆ ಜಿಲ್ಲೆ ಜಮಖಂಡಿಯಲ್ಲಿ ಜನಿಸಿದರು. ಇತಿಹಾಸ ಸ್ನಾತಕೋತ್ತರ ಪದವೀಧರರು. ಎಪಿಗ್ರಫಿ ಡಿಪ್ಲೊಮಾ ಮಾಡಿದ್ದಾರೆ. ಎಸ್.ಆರ್.ಎ. ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರು. ಪ್ರವೃತ್ತಿಯಿಂದ ಸಾಹಿತಿಗಳು. ಕ್ರೀಡಾ ಲೇಖನಗಳನ್ನು ಬರೆಯುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ. ಪ್ರಪಂಚ, ಸುಧಾ, ಕೇಸರಿ ಗರ್ಜನೆ, ಸಂಯುಕ್ತ ಕರ್ನಾಟಕ, ಪ್ರಜವಾಣಿ, ಉದಯವಾಣಿ, ತರಂಗ, ಕನ್ನಡಮ್ಮ ಹಾಗೂ ಕುರುಕ್ಷೇತ್ರ ಇತ್ಯಾದಿ ಪತ್ರಿಕೆಗಳಲ್ಲಿ ಕ್ರಿಕೆಟ್, ಟೆನಿಸ್, ಹಾಕಿ, ಫುಟ್‌ಬಾಲ್, ಟೆಬಲ ಟೆನಿಸ್, ವಾಲೀಬಾಲ್, ಅಥ್ಲೆಟ್ಸ್ ಹಾಗೂ ಈಜು ಮುಂತಾದ ಕ್ರೀಡೇಗಳ ಕುರಿತು ಹಲವಾರು ಲೇಖನಗಳು ಪ್ರಕಟವಾಗಿವೆ. ಇವರಿಗೆ ಮಕ್ಕಳ ಸಾಹಿತ್ಯದ ಬಗ್ಗೆ ಹೆಚ್ಚಿನ ಒಲವು. ೧೨ಕ್ಕೂ ಹೆಚ್ಚು ಶಿಶು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಐದಾರು ಪ್ರೌಢ ಸಾಹಿತ್ಯದ ಗ್ರಂಥಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಹಲವಾರು ಸಣ್ಣ ಕಥೆಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆಕಾಶವಾಣಿ ಧಾರವಾಡದಿಂದ ಇವರ ಚಿಂತನಗಳು, ಭಾಷಣಗಳು ಹಾಗೂ ಲಘು ಹರಟೆಗಳು ಪ್ರಸಾರವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಶತಮಾನದ ಮಕ್ಕಳು ಸಾಹಿತ್ಯ ಗ್ರಂಥದಲ್ಲಿ ಇವರೆರಡು ಕಥೆಗಳು ಸೇರಿವೆ. ಮಹಾರಾಷ್ಟ್ರದ ೭ನೇ ವರ್ಗದ ಪಠ್ಯ ಪುಸ್ತಕದಲ್ಲಿ ಇವರ ಬರೆಹವಿದೆ. ಕರ್ನಾಟಕ ರಾಜ್ಯ ಪಠ್ಯ ಪುಸ್ತಕ ಕನ್ನಡ ದ್ವಿತೀಯ ಭಾಷೆ ೫ನೇ ವರ್ಗದ ಪಠ್ಯದಲ್ಲಿ ಇವರ ಕವನ ಸೇರಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಮಕ್ಕಳ ಪುಸ್ತಕದಲ್ಲಿಯೂ ಇವರ ಕಥೆ ಇದೆ. ಇವರ ಪ್ರತಿಭೆಯನ್ನು ಗುರುತಿಸಿ ಹತ್ತಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ, ಸನ್ಮಾನಿಸಿ ಪ್ರಶಸ್ತಿಗಳನ್ನಿತ್ತಿವೆ.

ಪ್ರಕಟಿತ ಕೃತಿಗಳು:
ಮಕ್ಕಳ ಸಾಹಿತ್ಯ – ಗಾಳಿ ಮತ್ತು ಕೋಳಿ, ಮಾತಾಡುವ ಗಿಳಿ, ಹಾಡೋಣು ಬಾ ಕುಣಿಯೋಣು ಬಾ, ಓದು ಮಗ ಓದು, ದೇಶ ಕಟ್ಟೋಣ ಬನ್ನಿ, ಡಾ|| ಬಿ.ಆರ್. ಅಂಬೇಡ್ಕರ್. ಸಲೀಂ ಚಾಚಾ ಇತ್ಯಾದಿ.
ಪ್ರೌಢ ಸಾಹಿತ್ಯ – ವೀರ ರಾಣಿ ಬೆಳವಡಿ ಮಲ್ಲಮ್ಮ, ನವಭಾರತ ನಿರ್ಮಾಪಕ ರಾಜಾರಾಂ ಮೋಹನ ರಾಯ್, ಕಲಕಂಬ ಮಾಸ್ತರ ಇತ್ಯಾದಿ.

ಲಭಿಸಿರುವ ಪ್ರಶಸ್ತಿಗಳು:
೧. ಪ್ರಯಾಗದಲ್ಲಿ ಜರುಗಿದ ಹಿಂದಿ ಸಮ್ಮೇಳನದಲ್ಲಿ ಪ್ರಶಸ್ತಿ.
೨. ಬೆಂಗಳೂರಿನ ರಾಘವೇಂದ್ರ ಕಲಾ ಬಳಗದ ಮಕ್ಕಳ ಒಡನಾಡಿ ಪ್ರಶಸ್ತಿ.
೩. ಬೆಳಗಾವಿ ಕಾರಂಜಿ ಮಠದ ಡೆಪ್ಯೂಟಿ ಚೆನ್ನ ಬಸಪ್ಪ ಪ್ರಶಸ್ತಿ.
೪. ಧಾರವಾಡದ ಚಿಲಿಪಿಲಿ ಪ್ರಕಾಶನದ ಶಿಕ್ಷಣ ಸಿರಿ ಪ್ರಶಸ್ತಿ.
೫. ನಾಲತ್ವಾಡದ ಹಿರೇಮಠ ಪ್ರತಿಷ್ಠಾನದವರ ಮಕ್ಕಳ ರತ್ನ ಪ್ರಶಸ್ತಿ.
೬. ಚಿಕ್ಕೋಡಿ ಉ.ಕ. ಮಕ್ಕಳ ಸಾಹಿತ್ಯ ಪ್ರತಿಷ್ಠಾನದ ಚಿನ್ನರ ಶ್ರೀ ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ|| ಜೈರಾಮ್. ಎಂ. ಭಟ್ಟ

೧. ಹೆಸರು : ಡಾ|| ಜೈರಾಮ್. ಎಂ. ಭಟ್ಟ

೨. ಕಾವ್ಯನಾಮ : ಇರುವುದಿಲ್ಲ.

೩. ಹುಟ್ಟಿದ ಸ್ಥಳ ದಿನಾಂಕ : ವಾಗಳ್ಳಿ, ಯಲ್ಲಾಪುರ. ೨೨–೧೧–೧೯೬೭

೪. ಜಿಲ್ಲೆ – ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಟಿಸಿ.ಹೆ.ಚ್., ಹಿಂದಿ ಪ್ರವೀಣ, ಎಂ.ಎ., ಎನ್.ಡಿ., ಪಿ.ಜಿ.ಡಿ.ಪಿ.ಎಂ. ಆಂಡ್ ಐ.ಆರ್., ಎಂ.ಎಚ್.ಆರ್.ಎಂ. (ಹೆಚ್ ಆರ್)

೬. ವೃತ್ತಿ : ಶಿಕ್ಷಕ

೭. ಕೌಟುಂಬಿಕ : ಪತ್ನಿ; ಲತಾ. ಪುತ್ರ; ಬಿ.ಜೆ. ಭಾರ್ಗವ. ಪುತ್ರಿ; ಬಿ.ಜೆ. ಅಮೃತ.

೮. ಸದ್ಯದ ವಿಳಾಸ : ಕೆ.ಪಿ.ಸಿ. ಮಾದರಿ ಶಾಲೆ, ಅಂಬಿಕಾ ನಗರ, ಹಳಿಯಾಳ (ಉ.ಕ.)–೫೮೧೩೬೩.

೯. ಖಾಯಂ ವಿಳಾಸ : ಭಾರ್ಗವ ಬಾರೆ ತಾ. ಯಲ್ಲಪುರ (ಉ.ಕ).

೧೦. ದೂರವಾಣಿ ಸಂಖ್ಯೆ : ೯೪೪೮೯೩೪೧೦೧

೧೧. ಹಸ್ತಾಕ್ಷರ (ಸಹಿ) :



ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲೂಕು ವಾಗಳ್ಳಿಯಲ್ಲಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಮಳವಳ್ಳಿಯಲ್ಲಾಯಿತು. ಪ್ರೌಢ ಶಿಕ್ಷಣ ಯಲ್ಲಾಪುರದಲ್ಲಾಯಿತು. ಸರ್ಕಾರಿ ಟಿ.ಸಿ.ಹೆಚ್. ಕಾಲೇಜ್ ನಾಗಮಂಗಲದಲ್ಲಿ ಟಿ.ಸಿ.ಹೆಚ್. ಶಿಕ್ಷಣ ಪಡೆದರು.ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಮದ್ರಾಸ್‌ನಿಂದ ಹಿಂದೀ ಪ್ರವೀಣ ಮಾಡಿದರು. ಮಾನಸ ಗಂಗೋತ್ರಿ ಮೈಸೂರಿನಲ್ಲಿ ಎಂ.ಎ. ಪದವಿ ಗಳಿಸಿದರು. ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯ ಚಿದಂಬರಂನಿಂದ ಪಿ.ಜಿ.ಡಿಪ್ಲೊಮಾ ಮಾಡಿದರು. ಅಲ್ಲೇ ಎಂ.ಹೆಚ್.ಆರ್.ಎಮ್ ಕೋರ್ಸ್ ಮಾಡಿದರು. ದೆಹಲಿಯ ನೇಚರೋಪತಿ ಪರಿಷತ್ತಿನಲ್ಲಿ ಎನ್.ಡಿ. ಕೋರ್ಸ್ ಮಾಡಿದರು. ೧೯೭೨ರಿಂದ ಇವರ ವೃತ್ತಿ ಜೀವನ ಆರಂಭವಾಯಿತು. ಸದ್ಯ ಇವರು ಹಳಿಯಾಳ ತಾಲೂಕು ಅಂಬಿಕಾ ನಗರದ ಹೆಚ್.ಪಿ.ಎಸ್. ಮಾದರಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಲಾದಿನಗಳಿಂದಲೇ ಇವರ ಸಾಹಿತ್ಯ ಚಟುವಟಿಕೆಗಳು ಪ್ರಾರಂಭವಾದವು. ನಾಟಕ ರಚಿಸಿ ನಟಿಸಿ, ನಿರ್ದೇಶನವನ್ನೂ ಮಾಡುತ್ತಾರೆ. ಭಾಷಾಣವನ್ನು ಮಾಡುತ್ತಾರೆ, ಕಾರ್ಯಕ್ರಮ ನಿರೂಪಣೆ ಮಾಡುತ್ತಾರೆ. ಕ್ರಿಕೆಟ್ ಹಾಗೂ ಸಂಗೀತ ಕೇಳುವ ಹವ್ಯಾಸ. ಜೋಕುಮಾರಸ್ವಾಮಿ ಕಲಾ ಬಳಗದ ಅಧ್ಯಕ್ಷರು. ಬ್ರಾಹ್ಮಣ ಸೇವಾ ಸಮಾಜ ಅಂಬಿಕಾ ನಗರ ಉಪಾಧ್ಯಕ್ಷರು. ಇವರು ರಚಿಸಿದ ಹಲವು ರೇಡಿಯೋ ನಾಟಕಗಳು ಧಾರವಾಡ ಆಕಾಶವಾಣಿಯಿಂದ ಪ್ರಸಾರವಾಗಿದೆ. ೨೦೦೪-೦೫ರಲ್ಲಿ ಇವರು ಮಕ್ಕಳ ನಾಟಕ ರಚನಾ ಸ್ಪರ್ಧೆಯಲ್ಲಿ ತಾಲೂಕು ಮಟ್ಟದಲ್ಲಿ ಪ್ರಥಮ ಬಹುಮಾನ ಗಳಿಸಿದರು.

ಪ್ರಕಟಿತ ಕೃತಿಗಳು:
ಮಕ್ಕಳ ನಾಟಕ ಸಂ. – ಗೊಂಚಲ ಮಕ್ಕಳ ಕಿರು ನಾಟಕ

ಲಭಿಸಿರುವ ಪ್ರಶಸ್ತಿಗಳು:

೧. ಚಿತ್ರದುರ್ಗ ಮುರಘಾ ರಾಜೇಂದ್ರ ಮಠದಿಂದ ಪ್ರಶಸ್ತಿ.
೨. ೨೦೦೫ – ಸಂಕಲ್ಪ ಸೇವಾಸಮಿತಿಯಲ್ಲಿ ಸನ್ಮಾನ.
೩. ೨೦೦೬ – ೦೭ ಶಿಕ್ಷಣ ಇಲಾಖೆಯ ಆಶು ಭಾಷಣ ಸ್ಪರ್ಧೆಯಲ್ಲಿ ಬಹುಮಾನ.
೪. ೨೦೦೭ – ರಾಜೀವ್ ಗಾಂಧಿ ಏಕತಾ ಪ್ರಶಸ್ತಿ.
೫. ೨೦೦೭ – ಹಳಿಯಾಳ ತಾಲೂಕು ಅತ್ಯುತ್ತಮ ಶಿಕ್ಷಕ ಪ್ರಶಸ್ತಿ.
೬. ೨೦೦೮ – ಬೆಂಗಳೂರು ಅಖಿಲ ಹವ್ಯಕ ಮಹಾ ಸಭೆಯಲ್ಲಿ ಸನ್ಮಾನ.
೭. ಬೆಂಗಳೂರಿನ ಕರ್ನಾಟಕ ಸಹೃದಯ ಸೇವಾ ಪ್ರತಿಷ್ಠಾನದಿಂದ ಪ್ರಶಸ್ತಿ.
೮. ಬೆಂಗಳೂರು ಕ.ರಾ. ಕಲಾವಿದರ ಕಲ್ಯಾಣ ವೇದಿಕೆ ಶಿವರಾಮ ಕಾರಂತರ ಸದ್ಭಾವನಾ ಪ್ರಶಸ್ತಿ.
೯. ೨೦೧೦ – ಬೀಳಗಿಯಲ್ಲಿ ಬಸವಶ್ರೀ ಪ್ರಶಸ್ತಿ.
೧೦ ೨೦೧೦ – ಶಿರಸಿ ವಿದ್ಯಾಧಿರಾಜ ಕಲಾಕ್ಷೇತ್ರದಲ್ಲಿ ಶಿಕ್ಷಕ ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ|| ಜೋಡಟ್ಟಿ. ಟಿ. ಆರ್.

೧. ಹೆಸರು : ಡಾ|| ತವನಪ್ಪ ರಾಯಪ್ಪ ಜೋಡಟ್ಟಿ

೨. ಕಾವ್ಯನಾಮ : ತಾರಾಸುತ

೩. ಹುಟ್ಟಿದ ಸ್ಥಳ ದಿನಾಂಕ : ಶಿವಾಪುರ, ೦೧-೧೬-೧೯೪೯.

೪. ಜಿಲ್ಲೆ - ರಾಜ್ಯ : ಬೆಳಗಾವಿ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಎಂ.ಎಡ್., ಪಿಹೆಚ್.ಡಿ.

೬. ವೃತ್ತಿ : ಅಧ್ಯಾಪಕ (ನಿವೃತ್ತ)

೭. ಕೌಟುಂಬಿಕ : ವಿವಾಹಿತ, ಪತ್ನಿ; ಗೃಹಿಣಿ. ಪುತ್ರ; ಶ್ರೀನಿವಾಸ.
ಪುತ್ರಿಯರು; ಪದ್ಮಾವತಿ, ಸುಚೇತ್ರ.

೮. ಸದ್ಯದ ವಿಳಾಸ : ನಂ. ೧೮೦೮, ೪೬ ಎ, ಮುಖ್ಯರಸ್ತೆ.
ಬನಸಿರಿನಗರ, ಸತ್ತೂರ, ಧಾರವಾಡ-೫೮೦೦೦೯.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೪೪೪೯೧೫೨೩೨

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕು ಶಿವಾಪುರ (ಕಡಬಿ)ಯಲ್ಲಿ ಜನಿಸಿದರು. ಇವರು ಶ್ರೀಮತಿ ತಾರವ್ವ ಇವರ ಪುತ್ರ. ಇವರು ಪ್ರಾಥಮಿಕ ಶಿಕ್ಷಣವನ್ನು ಗೋಕಾಕ, ಗೊರಗುದ್ದಿ, ಶಿವಾಪುರಗಳಲ್ಲಿ, ಪ್ರೌಢ ಶಿಕ್ಷಣವನ್ನು ಬೆಲ್ಲದ ಬಾಗೇವಾಡಿಯಲ್ಲಿ, ಪದವಿಯನ್ನು ಧಾರವಾಡ, ಬಾಹ್ಯವಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಹಿಂದಿ ಎಂ.ಎ. ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯಯ ಬಿ.ಎಡ್. ಮಾಡಿದ್ದಾರೆ. ಕೊಲ್ಲಾಪುರ ಶಿವಾಜಿ ವಿಶ್ವವಿದ್ಯಾಲಯಯಲ್ಲಿ ಎಂ.ಎಡ್. ಮಾಡಿದ್ದಾರೆ. ಜೈನ ಧರ್ಮ ಮತ್ತು ಸಾಹಿತ್ಯಕ್ಕೆ ಆಚಾರ್ಯ ಶ್ರೀ ವಿದ್ಯಾನಂದರ ಕೊಡುಗೆ ಕುರಿತ ಮಹಾಪ್ರಬಂಧಕ್ಕೆ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ೧೯೬೭ರಲ್ಲಿ ತೆರದಾಳದ ಶ್ರೀ ಜಿನ ಸೇನಾಚಾರ್ಯ ಗುರುಕುಲ ವಿದ್ಯಾಲಯದಲ್ಲಿ ಸಹಾಯಕ ಶಿಕ್ಷಕರಾಗಿ ವೃತ್ತಿ ಜೀವನ ಆರಂಭ ೧೯೭೧ರಲ್ಲಿ ಎಸ್.ಎಮ್. ಪ್ರೌಢಶಾಲೆಯಲ್ಲಿ ಹಿಂದಿ ಅಧ್ಯಾಪಕರಾದರು. ೧೯೭೩ರಲ್ಲಿ ನಸಲಾಪುರ ಹೆಣ್ಣು ಮಕ್ಕಳ ಸರಕಾರಿ ಶಾಲೆಯಲ್ಲಿ ಶಿಕ್ಷಕರಾದರು. ೧೯೯೧ರಲ್ಲಿ ಮಡಕೇರಿಯ ಜವಾಹರ ನವೋದಯ ವಿದ್ಯಾಲಯದಲ್ಲಿ ಸ್ನಾತಕೋತ್ತರ ಹಿಂದೀ ಅಧ್ಯಾಪಕರಾದರು. ನಂತರ ಅದೇ ಸಂಸ್ಥೆ ಧಾರವಾಡಕ್ಕೆ ಬಂದು ೨೦೦೯ರಲ್ಲಿ ನಿವೃತ್ತರಾದರು. ಇವರಿಗೆ ಮರಾಠಿ, ಹಿಂದೀ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿಯೂ ಪ್ರಾವಿಣ್ಯತೆ ಇದೆ. ಇವರು, ಲೇಖನ, ಕವನ, ನಾಟಕಗಳನ್ನು ರಚಿಸಿದ್ದಾರೆ. ಹಿಂದಿಯಿಂದ ಮರಾಠಿಯಿಂದ ಅನುವಾದ ಮಾಡಿದ್ದಾರೆ. ಹಲವು ಕೃತಿಗಳನ್ನು ಸಂಪಾದಿಸಿದ್ದಾರೆ. ಇವರು ಕರ್ಮವೀರ ಭಾವೂರಾವ್ ಪಾಟಿಲ್ ಜನ್ಮ ಶತಮಾನೋತ್ಸವ; ಭಗವಾನ ಬಾಹುಬಲಿ ಮಸ್ತಕಾಭಿಷೇಕೋತ್ಸವ ಹಾಗೂ ಅಖಿಲ ಭಾರತ ಜೈನ ವಿದ್ವತ್ ಸಮ್ಮೇಳನಗಳ ವಿಚಾರ ಸಂಕೀರ್ಣಗಳಲ್ಲಿ, ಧಾರವಾಡದಲ್ಲಿ ನಡೆದ ಭಗವಾನ್ ಬಾಹುಬಲಿ ಮಸ್ತಕಾಭಿಷೇಕ, ಮಡಕೇರಿಯ ದಸರಾ, ಹುಬ್ಬಳ್ಳಿಯ ಅಖಿಲ ಕರ್ನಾಟಕ ಜೈನ ಸಾಹಿತ್ಯ ಸಮ್ಮೇಳನ ಮೊದಲಾದ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಇವರ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ ಮುಂತಾದ ಸಂಸ್ಥೆಗಳ ಸದಸ್ಯರಾಗಿದ್ದಾರೆ. ಇವರು ಡಾ. ಎಸ್.ಪಿ. ಪಾಟೀಲ ಅವರೊಂದಿಗೆ ಕೂಡಿ ಅನುವಾದ ಹಾಗೂ ಸಂಪಾದಕ ಮಂಡಳಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ

ಪ್ರಕಟಿತ ಕೃತಿಗಳು:

ಕವನ ಸಂ. – ಭಕ್ತಿ ಭಾವ, ಪುಟಾಣಿ ಅಮ್ಮ. **ನಾಟಕ** – ನಾಟಕತ್ರಯ.
ಹಿಂದಿಯಿಂದ – ವೀರರಾಣಿ, ಸ್ವತಂತ್ರತೆ ಮತ್ತು ಸಮಾಜ. ಭಗವಾನ್ ಮಹಾವೀರ ಜೀವನ ದರ್ಶನ ಇತ್ಯಾದಿ. . **ಮರಾಠಿಯಿಂದ** – ಸದಾಚಾರ ಸುಧೆ. **ಕನ್ನಡದಿಂದ ಹಿಂದಿಗೆ** – ಅತ್ತಿಮಬ್ಬೆ.
ಸಂಪಾದನೆ – ತೀರ್ಥವಂದನೆ, ಧವಲತ್ರಯ ಗ್ರಂಥ ಪ್ರವೇಶ, ವೀರಮಾರ್ತಂಡ ಚಾವುಂಡರಾಯ.
ಬ್ರಾಹ್ಮೀ ವಿಶ್ವದ ಮೂಲ ಸಂಪಾದನೆ; ಜೈನ ಕ್ಷೇತ್ರಗಳ ಐತಿಹ್ಯ.

ಲಭಿಸಿರುವ ಪ್ರಶಸ್ತಿಗಳು:

೧. ರಾಯಬಾಗ ತಾಲೂಕು ಮಟ್ಟದ ಆದರ್ಶ ಶಿಕ್ಷಕ 'ಚಿಣ್ಣಶ್ರೀ'.
೨. ಚಿಕ್ಕೋಡಿಯ ಕರ್ನಾಟಕ ಚಿಣ್ಣರ ಸಾಹಿತ್ಯ ಪ್ರತಿಷ್ಠಾನದ ಪ್ರಶಸ್ತಿ.
೩. ೨೦೦೩ – ಕ.ಸಾ.ಪ. ಬೆಂಗಳೂರು ಪಿ.ಶಾಂತಿಲಾಲ ಪ್ರಶಸ್ತಿ.
೪. ಸಾಂಗಲಿ ದಕ್ಷಿಣ ಭಾರತ ಜೈನ ಸಭಾ ಆಚಾರ್ಯ ಬಾಹುಬಲಿ ಕನ್ನಡ ಸಾಹಿತ್ಯ ಪುರಸ್ಕಾರ.

ವ್ಯಕ್ತಿ ಪರಿಚಯ

ತಲವಾರ. ಅ.ಸಾ.

೧.	ಹೆಸರು	:	ಅಣ್ಣಾಸಾಹೇಬ ಸಾವಂತಪ್ಪ ತಲವಾರ
೨.	ಕಾವ್ಯನಾಮ	:	ಅಸಾತ, ಶಾಂತಪ್ರಿಯಾ.
೩.	ಹುಟ್ಟಿದ ಸ್ಥಳ ದಿನಾಂಕ	:	ಐನಾಪುರ, ೩-೧೧-೧೯೩೧
೪.	ಜಿಲ್ಲೆ - ರಾಜ್ಯ	:	ಬೆಳಗಾವ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಪಿ.ಜಿ.ಡಿ.ಹೆಚ್.ಆರ್.
೬.	ವೃತ್ತಿ	:	ನಿವೃತ್ತ ಪೋಸ್ಟ್ ಮಾಸ್ಟರ್.
೭.	ಕೌಟುಂಬಿಕ	:	ಪತ್ನಿ; ಶಾಂತ. ನಾಲ್ಕು ಹೆಣ್ಣು ಮಕ್ಕಳು. ಒಬ್ಬ ಪುತ್ರ.
೮.	ಸದ್ಯದ ವಿಳಾಸ	:	ಅ.ಸಾ.ತಲವಾರ, ನಿವೃತ್ತ ಪೋ.ಮಾ. ಗೋಕಾಕ-೫೮೧೩೦೭
೯.	ಖಾಯಂ ವಿಳಾಸ	:	ಸಂಕಲ್ಪ, ಸಿ.ಎಸ್.ನಂ.೧೭೨/ತ. ವಿದ್ಯಾನಗರ, ಗೋಕಾಕ-೫೮೧೩೦೭
೧೦.	ದೂರವಾಣಿ ಸಂಖ್ಯೆ	:	೦೮೩೩೨-೨೨೯೯೬೪, ೨೨೬೦೦೫.
೧೧.	ಹಸ್ತಾಕ್ಷರ (ಸಹಿ)	:	ಅ.ಸಾ.ತಲವಾರ.

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆ ಅಥಣಿ ತಾಲೂಕು ಐನಾಪುರದಲ್ಲಿ ಜನಿಸಿದರು. ಪ್ರಾಥಿಮಿಕ ಮಾಧ್ಯಮಿಕ ಶಿಕ್ಷಣ ಹುಟ್ಟೂರಲ್ಲೇ. ಬಡ ಕುಟಂಬದಿಂದ ಬಂದವರು. ತಾಯಿಯೇ ಶಿಕ್ಷಕಿ ವಿದ್ಯಾಭ್ಯಾಸಕ್ಕೆ ತಾಯಿಯೇ ತಳಹದಿ. ಆಟಗಳಲ್ಲಿ ಮುಂದೆ. ಸ್ಪರ್ಧೆಗಳಲ್ಲಿ ಭಾಗವಹಿಸಿ ಪಾರಿತೋಷಕಗಳನ್ನು ಗಳಿಸಿದ್ದಾರೆ. ಲಿಂಗರಾಜ ಕಾಲೇಜಿನಲ್ಲಿ ಓದುವಾಗ ಕಬಡಿ ಟೀಮಿನ ಕ್ಯಾಪ್ಟನ್. ಕರ್ನಾಟಕ ವಿಶ್ವವಿದ್ಯಾಲಯಯಿಂದ ಅಂತರ ರಾಷ್ಟ್ರೀಯ ವಿಶ್ವಾವಿದ್ಯಾಲಯಗಳ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು. ಅಂಚೆ ಇಲಾಖೆಯಲ್ಲಿ ಗುಮಾಸ್ತರಾಗಿ ವೃತ್ತಿ ಜೀವನ ಪ್ರಾರಂಭ. ಇವರು ನಾಟಕಗಳಲ್ಲಿಯೂ ಪಾತ್ರವಹಿಸುತ್ತಿದ್ದರು. ಮೊದಲು ಇವರು ಮುಂಬಯಿ ಸಚಿವಾಲಯದಲ್ಲಿ ಹಿರಿಯ ಸಹಾಯಕರಾಗಿ ಕೆಲಸಕ್ಕೆ ಸೇರಿದರು. ಆದಾಯ ಸಾಲದೆ ಮುಂಬಯಿ ಜೀವನ ಕಷ್ಟವಾಯಿತು. ನೌಕರಿ ಬಿಟ್ಟು ಬಂದರು. ೧೯೬೦ರಲ್ಲಿ ಅಂಚೆ ಇಲಾಖೆ ಸೇರಿದರು. ೧೯೬೨-೬೩ರಲ್ಲಿ ಕರ್ನಾಟಕ ಅಂಚೆ ವೃತ್ತದಿಂದ ಅಖಿಲ ಭಾರತ ಕಬಡಿ ಆಟಕ್ಕೆ ಆಯ್ಕೆಯಾದರು. ೧೯೭೪ರಲ್ಲಿ ಬಡ್ತಿ ಸಿಕ್ಕಿತು. ೧೯೮೫ರಲ್ಲಿ ಬಡ್ತಿ ಸುಮಾರು ೩೦ ವರ್ಷ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದರು. ೧೮ ಊರುಗಳಿಗೆ ವರ್ಗಾವಣೆ. ಹೋದ ಕಡೆಯಲ್ಲೆಲ್ಲಾ ಸಂಘ ಸ್ಥಾಪನೆ. ಈ ಮಧ್ಯೆ ಬಿಡುವು ಮಾಡಿ-ಕೊಂಡು ಕಥೆ, ಕವನ, ಪ್ರಬಂಧ, ಕಾದಂಬರಿ ರಚಿಸುತ್ತಿದ್ದರು. ಇವರ ಬರೆಹಗಳು ಉತ್ಥಾನ, ಗೋಕುಲ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ೧೯೮೨ರಲ್ಲಿ ಇವರ ಕಾದಂಬರಿ 'ಆಶಾ' ಕೃತಿಯನ್ನು ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಶಂಬಾಜೋಶಿ ಬಿಡುಗಡೆ ಮಾಡಿದರು. ಎರಡನೆಯ ಕಾದಂಬರಿ ೧೯೯೪ರಲ್ಲಿ 'ಕಲಿತವರು' ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ವೃಷಭೇಂದ್ರ ಸ್ವಾಮಿ ಬಿಡುಗಡೆ ಮಾಡಿದರು. ಮೂರನೆಯ ಕಾದಂಬರಿ ಕಾವಿ ಖಾದಿ ಖಾಕಿ ೨೦೦೯ರಲ್ಲಿ ೭೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾಯಿತು. ಇವರ ಬರೆಹಗಳು ಉತ್ಥಾನ, ಗೋಕುಲ ಮುಂಬೈ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು:

ಕಾದಂಬರಿಗಳು – ಆಶಾ, ಕಲಿತವರು, ಕಾವಿ ಖಾದಿ ಖಾಕಿ.

ಲಭಿಸಿರುವ ಪ್ರಶಸ್ತಿಗಳು:

೧. ಮಹಾರಾಷ್ಟ್ರ ರಾಜ್ಯದವರು ಕೋಳಿವಾಡ ಸಮಾಜದ ಉತ್ಕೃಷ್ಟ ಸೇವಕ ಪ್ರಶಸ್ತಿ ನೀಡೀದ್ದಾರೆ.

ವ್ಯಕ್ತಿ ಪರಿಚಯ

ಪ್ರೊ. ತಿಮ್ಮಣ್ಣ ಮಾಧವ ಪಂಡಿತ

೧.	ಹೆಸರು	:	ಪ್ರೊ. ತಿಮ್ಮಣ್ಣ ಮಾಧವ ಪಂಡಿತ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಬಾಡ. ಅಘನಾಶಿನಿ, ೦೧-೦೩-೧೯೪೦.
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ. (ಆನರ್ಸ್), ಎಂ.ಕಾಂ.
೬.	ವೃತ್ತಿ	:	ವಿಶ್ರಾಂತ ಪ್ರಾಧ್ಯಾಪಕ.
೭.	ಕೌಟುಂಬಿಕ	:	ಪತ್ನಿ; ಸೌ. ಪ್ರೇಮ. ಇಬ್ಬರು ಪುತ್ರಿಯರು. ಇಬ್ಬರು ಪುತ್ರರು.
೮.	ಸದ್ಯದ ವಿಳಾಸ	:	ಪ್ರೊ. ಟಿ.ಎಂ. ಪಂಡಿತ, ಅಘನಾಶಿನಿ ೫೮೧೩೫೧, ತಾ. ಕುಮಟಾ, ಜಿ. ಉ.ಕ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೮೬ ೨೬೧೬೬೬, ೯೩೪೧೧೭೭೮೯೯
೧೧.	ಹಸ್ತಾಕ್ಷರ (ಸಹಿ)	:	ತಿ/ಮಾ/ಪಂಡಿತ

ಸಾಹಿತ್ಯ ಪರಿಚಯ

ಇವರು ಉ.ಕ.ಜಿಲ್ಲೆ, ಕುಮಟಾ ತಾಲೂಕಿನ ಅಘನಾಶಿನಿ ಗ್ರಾಮದಲ್ಲಿ ಜನಿಸಿದರು. ಹವ್ಯಕ ಪಂಡಿತರ ಮನೆತನದಿಂದ ಬಂದವರು. ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ. ಮಾಧ್ಯಮಿಕ ಗೋಕರ್ಣದ ಭದ್ರಕಾಳಿ ಹೈಸ್ಕೂಲ್. ೧೯೬೨ರಲ್ಲಿ ಕೆನರಾ ಕಾಲೇಜ್ ಕುಮಟಾದಲ್ಲಿ ಬಿ.ಎ. ದ್ವಿತೀಯಾ ದರ್ಜೆಯಲ್ಲಿ ಉತ್ತೀರ್ಣರಾದರು. ೧೯೬೩ರಲ್ಲಿ ಹುಬ್ಬಳಿಯ ಶ್ರೀ ಜಗದ್ಗುರು ಗಂಗಾಧರ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಬಿ.ಕಾಂ. ಪದವೀಧರರಾದರು. ೧೯೬೭ರಲ್ಲಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯಯ ಬ್ಯಾಂಕಿಂಗ್ ವಿಷಯದಲ್ಲಿ ಎಂ.ಕಾಂ. ಪದವಿಗಳಿಸಿದರು. ೧೯೬೭ರಲ್ಲಿ ಕುಮುಟಾದ ಡಾ|| ಎ.ವಿ ಬಾಳಿಗ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿದರು. ೧೯೯೮ರಲ್ಲಿ ಪ್ರಧ್ಯಾಪಕರಾಗಿ ನಿವೃತ್ತರಾದರು. ನಂತರ ಸಾಹಿತ್ಯ ಚಟುವಟಿಕೆಗಳಲ್ಲಿ ನಿರತರಾದರು. ಇವರ ಕೃಷಿ, ವಾಣಿಜ್ಯ, ಬ್ಯಾಂಕಿಂಗ್, ಫಲಪುಷ್ಪಗಳಲ್ಲದೆ ಜಾನಪದ, ಅಧ್ಯಾತ್ಮಿಕ, ಪೌರಾಣಿಕ, ಮನೋವೈಜ್ಞಾನಿಕ ಹಗೂ ಮಾನಸಿಕ ವಿಷಯಗಳಿಗೆ ಸಂಬಂಧಿಸಿದ ಸುಮಾರು ಆರುನೂರಕ್ಕೂ ಹೆಚ್ಚು ಲೇಖನಗಳು ನಾಡಿನ ಪ್ರಸಿದ್ಧ ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ಹೊಸದಿಗಂತ, ಉದಯವಾಣಿ, ತರಂಗ, ಕರ್ಮವೀರ, ಸುಧಾ, ಕಸ್ತೂರಿ, ಉತ್ಥಾನ, ಕನ್ನಡ ಅಂತರಂಗ, ಮಂಜುವಾಣಿ, ಆರೋಗ್ಯ ಭಾಗ್ಯ, ಮಾನವಿಕ ಕರ್ನಾಟಕ, ಪ್ರಬುದ್ಧ ಕರ್ನಾಟಕ, ಜೀವನಾಡಿ, ವಿವೇಕ ಸಂಪದ, ಧರ್ಮ ಭಾರತಿ, ಸಾಧನ ಸೌರಭ, ಜೀವೋತ್ತಮ, ನವ ಚಿಂತನ, ಹವ್ಯಕ, ಸ್ವರ್ಣವಲ್ಲಿ ಪ್ರಭಾ, ತರಳು ಬಾಳು, ಸಿದ್ದಗಂಗಾ, ವಿವೇಕ ಪ್ರಭ, ವಿವೇಕ ಹಂಸ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವರ ಹಲವು ಗ್ರಂಥಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದೆ. ಹಲವು ಗ್ರಂಥಗಳು ಬಿ.ಕಾಂ. ತರಗತಿಗೆ ಪಠ್ಯ ಪುಸ್ತಕಗಳಾಗಿವೆ. ಇವರ ಹಲವು ಭಾಷಣಗಳು ಆಕಾಶವಾಣಿ ಧಾರವಾಡದಿಂದ ಪ್ರಸಾರವಾಗಿವೆ. ಹಲವು ಸ್ಮರಣ ಸಂಚಿಕೆಗಳಲ್ಲಿಯೂ ಲೇಖನ ಪ್ರಕಟವಾಗಿವೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದಲ್ಲೂ ಮುಕ್ತ ವಿಶ್ವವಿದ್ಯಾಲಯದ ಮುಕ್ತ ಅಧ್ಯಯನದಲ್ಲಿಯೂ ಲೇಖನಗಳು ಪ್ರಕಟಗಿವೆ ಕರ್ನಾಟಕ ವಿಶ್ವವಿದ್ಯಾಲಯಯ ವಾಣಿಜ್ಯ ವಿಭಾಗದ ಪರೀಕ್ಷೆಗೆ ಸಂಬಂಧಿಸಿದ ಹಲವು ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಇವರು ವಾಣಿಜ್ಯ ವಿಭಾಗದ ಫ್ಯಾಕಲ್ಟಿ ಮೆಂಬರ್ ಹಾಗೂ ಬೋರ್ಡ್ ಆಫ್ ಸ್ಟಡೀಸ್ ಮೆಂಬರರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಪ್ರಕಟಿತ ಕೃತಿಗಳು:

ಶೈಕ್ಷಣಿಕ – ಭಾರತದಲ್ಲಿ ಬ್ಯಾಂಕಿಂಗ್ ಕಾನೂನು ಮತ್ತು ಆಚರಣೆ.

ಇತರರೊಂದಿಗೆ – ಕಾರ್ಯ ನಿರ್ವಹಣ ಶಾಸ್ತ್ರ.

ಕರ್ನಾಟಕ ವಿಶ್ವವಿದ್ಯಾಲಯ ಉಪನ್ಯಾಸ ಮಾಲೆಯಲ್ಲಿ ಪ್ರಕಟ – ಪೇಟೆ ಮತ್ತು ಜಾಹೀರಾತುಗಳು, ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು, ನಮ್ಮ ಅರಣ್ಯಗಳು.

ವ್ಯಕ್ತಿ ಪರಿಚಯ

ತಿಮ್ಮಪ್ಪ ಹೆಚ್.ಎಮ್.

೧. ಹೆಸರು : ತಿಮ್ಮಪ್ಪ ಹೆಚ್.ಎಮ್. ಕಲಸಿ.

೨. ಕಾವ್ಯನಾಮ : ಇರುವುದಿಲ್ಲ.

೩. ಹುಟ್ಟಿದ ಸ್ಥಳ ದಿನಾಂಕ : ಕಲಸಿ, ಸಾಗರ ತಾ. ೮-೧೧-೧೯೩೯.

೪. ಜಿಲ್ಲೆ - ರಾಜ್ಯ : ಶಿವಮೊಗ್ಗ, ಕರ್ನಾಟಕ.

೫. ವಿದ್ಯಾಭ್ಯಾಸ : ಕನ್ನಡ ಪಂಡಿತ್, ಹಿಂದಿ ರತ್ನ, ಬಿ.ಇ.ಡಿ.

೬. ವೃತ್ತಿ : ಶಿಕ್ಷಕ.

೭. ಕೌಟುಂಬಿಕ : ಪತ್ನಿ; ಸುಶೀಲ. ಪುತ್ರರು; ಸುಧೀರ ಟಿ. ಹೆಗಡೆ, ಕಿರಣ ಟಿ. ಹೆಗಡೆ.

೮. ಸದ್ಯದ ವಿಳಾಸ : ಹವ್ಯಕಶ್ರೀ ೧/೧೦೭ ಅಗ್ರಹಾರ, ಸಾಗರ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೧೮೩-೨೨೮೯೬೭

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಕಲಸಿಯಲ್ಲಿ ಜನಿಸಿದರು. ಇವರು ಶ್ರೀ ಹೆಗಡೆ ಮರಿಯಪ್ಪ ಮತ್ತು ಶ್ರೀಮತಿ ದೇವತಮ್ಮ ದಂಪತಿಗಳ ಪುತ್ರ. ಪ್ರಾಥಮಿಕ ಶಿಕ್ಷಣ ಹುಟ್ಟೂರಿನಲ್ಲೇ. ಮುಂದೆ ಓದಲಿಕ್ಕೆ ಅನುಕೂಲವಿರಲಿಲ್ಲ ಕುಟುಂಬದ ಆರ್ಥಿಕ ಸ್ಥಿತಿಯೂ ಸಾಮಾನ್ಯ. ಊರಿಗೆ ಸಮೀಪವಿದ್ದ ಅಂಗನಹಳ್ಳಿ ವೇದ ಪಾಠಶಾಲೆಗೆ ಸೇರಿದರು. ವಿದ್ಯಾರ್ಥಿಗಳಿಲ್ಲದೆ ಅದನ್ನೂ ಮುಚ್ಚಿದಾಗ ಇವರು ಊರಿಗೆ ಬಂದರು. ತೋಟದ ಕೆಲಸದಲ್ಲಿ ನಿರತರಾದರು. ಸಂಜೆಯ ವೇಳೆ ತಂದೆಯೆದುರು ಕುಳಿತು ಗದುಗಿನ ಭಾರತ, ಭಗವದ್ಗೀತೆಗಳ ಪಠಣ. ಇದರಿಂದ ಬಾಲ್ಯದಿಂದಲೇ ಸಾಹಿತ್ಯದಲ್ಲಿ ಆಸಕ್ತಿವುಂಟಾಯಿತು. ಶಿವಮೊಗ್ಗದಲ್ಲಿ ಅಂಗಡಿಯಿಟ್ಟಿದ್ದ ಅಣ್ಣನ ಮನೆಗೆ ಬಂದು ಒಂದೆರೆಡೆ ವರ್ಷ ಇದ್ದರು. ಕವಿತೆ, ನಾಟಕಗಳನ್ನು ರಚಿಸಿದರು. ಅದನ್ನು ಗಜಾನನ ಕಲಾ ಸಂಘ ಪ್ರದರ್ಶಿಸಿತು. ಇದಕ್ಕೆ ಬಿ.ಹೆಚ್. ಶ್ರೀಧರ ಮುನ್ನುಡಿ ಬರೆದರು. ಇವರಿಗೆ ಓದು ಮುಂದುವರೆಸುವ ತುಡಿತ. ಅಣ್ಣ ಪ್ರೌಢಶಾಲೆಯ ಶಿಕ್ಷಕರಾಗಿ ಬಂಗಾರು ಪೇಟೆಗೆ ವರ್ಗವಾಯಿತು. ಇವರು ಅಣ್ಣನ ಮನೆಗೆ ಬಂದರು. ಖಾಸಗಿಯಾಗಿ ಕುಳಿತು ಎಸ್.ಎಸ್.ಎಲ್.ಸಿ. ಮಾಡಿದರು. ಕನ್ನಡ ಪಂಡಿತ ಪರೀಕ್ಷೆ ಹಾಗೂ ಹಿಂದಿ ರತ್ನ ಮಾಡಿಕೊಂಡರು. ೩೦ನೇ ವಯಸ್ಸಿಗೆ ಸಾಗರದ ಮುನ್ಸಿಪಲ್ ಹೈಸ್ಕೂಲಿನಲ್ಲಿ ಕನ್ನಡ, ಹಿಂದಿ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ಬಿ.ಎಡ್. ಮಾಡಿಕೊಂಡರು. ಶಿರವಂತೆ ಪ್ರೌಢಶಾಲೆಗೆ ವರ್ಗವಾಯಿತು. ಅಲ್ಲಿಯೇ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದರು. ಮಹಾಬಲೇಶ್ವರ ಭಟ್ಟರು ನಡೆಸುತ್ತಿದ್ದ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಕವಿ ಸಮ್ಮೇಳನಗಳಲ್ಲಿ ಕವನ ವಾಚನ ಮಾಡಿದರು. ಅ.ನ.ಕೃ., ವೀ.ಸಿ., ಎಂ.ಪಿ.ಎಲ್. ಶಾಸ್ತ್ರಿ, ಅಡಿಗರು, ಲಕ್ಷ್ಮೀನಾರಾಯಣ ಭಟ್ಟ ಮುಂತಾದವರ ಒಡನಾಟ ಲಭಿಸಿತು. ಮಲೆನಾಡು ಗಮಕ ಕಲಾಸಂಘ ಸಾಗರದ ಸ್ಥಾಪನ ಕಾರ್ಯದರ್ಶಿ. ಸಾಗರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿಯೂ ಇದ್ದರು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಹವ್ಯಕ ಮಹಾಸಭೆ ಮುಂತಾದ ಸಂಸ್ಥೆಗಳ ಆಜೀವ ಸದಸ್ಯರು. ಇವರ ಲೇಖನಗಳು ಹಲವು ಅಭಿನಂದನಾ ಗ್ರಂಥಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ, ಪ್ರಜಾವಾಣಿ, ಉದಯವಾಣಿ, ತಾಯಿನಾಡು, ಶ್ರೀಧರ ಸಂದೇಶ, ಕಲಾ ದರ್ಶನ, ಗ್ರಾಮ ವಿಕಾಸ, ಸಾಗರ ಸಂದೇಶ, ಸಾಧನ ಪತ್ರಿಕೆ, ಹವ್ಯಕ ಮುಂತದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು:
ವೈಚಾರಿಕ – ವೈದಿಕ ಸಂಸ್ಕಾರ ಸಾರ ಸಂಗ್ರಹ.
ಸಂಶೋಧನಾ – ಹವ್ಯಕ ಇತಿಹಾಸ.
ಕಾವ್ಯ – ಚಿನ್ನದ ಚೆಂಡು, ನೀತಿ ಶತಕಂ.

ಲಭಿಸಿರುವ ಪ್ರಶಸ್ತಿಗಳು:
೧. ೧೯೯೯ – ಶಂಕರ ಭಟ್ಟರ ಕಾವ್ಯ ಪ್ರಶಸ್ತಿ.
೨. ೧೯೯೯ – ಸಾಗರ ಹವ್ಯಕ ಬಳಗ ಸನ್ಮಾನ.
೩. ೨೦೦೩ – ಅಖಿಲ ಭಾರತ ಹವ್ಯಕ ಮಹಾಸಭೆ ವಜ್ರ ಮಹೋತ್ಸವ ಸನ್ಮಾನ.

ವ್ಯಕ್ತಿ ಪರಿಚಯ

ತಿಮ್ಮಯ್ಯ ಹೆಚ್.

೧.	ಹೆಸರು	:	ತಿಮ್ಮಯ್ಯ ಹೆಚ್.
೨.	ಕಾವ್ಯನಾಮ	:	ನಾಗೇನಹಳ್ಳಿ ತಿಮ್ಮಯ್ಯ
೩.	ಹುಟ್ಟಿದ ಸ್ಥಳ ದಿನಾಂಕ	:	೮-೩-೧೯೫೪
೪.	ಜಿಲ್ಲೆ - ರಾಜ್ಯ	:	ಚಿಕ್ಕಮಗಳೂರು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಬಿ.ಇಡಿ.
೬.	ವೃತ್ತಿ	:	ಪ್ರೌಢಶಾಲಾ ಕನ್ನಡ ಪ್ರಾಧ್ಯಾಪಕ
೭.	ಕೌಟುಂಬಿಕ	:	ಪತ್ನಿ; ಎಸ್.ಬಿ. ಮಂಜುಳ. ಪುತ್ರ; ಯೋಗಿಶ್. ಪುತ್ರಿಯರು; ಶಿಶಕಲಾ, ಚಂದ್ರಕಲಾ.
೮.	ಸದ್ಯದ ವಿಳಾಸ	:	ತಿಮ್ಮಯ್ಯ ಹೆಚ್. S/o ಹಾಲಪ್ಪ, ನಾಗೇನಹಳ್ಳಿ, ಅಮೃತಾಪುಅರ ಅಂಚೆ, ತರಿಕರೆ ತಾ. ಚಿಕ್ಕಮಗಳೂರು.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೦೦೮೨೪೯೪೫೬
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಚಿಕ್ಕಮಗಳೂರಿನಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಕಿರಿಯ ಪ್ರಾಥಮಿಕ ಶಾಲೆ ನಾಗೇನಹಳ್ಳಿ. ಮಾಧ್ಯಮಿಕ ಶಿಕ್ಷಣ ಹಿರಿಯ ಪ್ರಾಥಮಿಕ ಶಾಲೆ, ಅಮೃತಾಪುರ. ಪ್ರೌಢ ಶಿಕ್ಷಣ ಅಮೃತೇಶ್ವರ ಪ್ರೌಢಶಾಲೆ ನೇರಲ ಕೆರೆ. ಪದವಿ ಪೂರ್ವ ಶಿಕ್ಷಣ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ತರೀಕೆರೆ. ಪದವಿ ಶಿಕ್ಷಣ ಸಹ್ಯಾದ್ರಿ ಕಾಲೇಜು ಶಿವಮೊಗ್ಗ. ಸ್ನಾತಕೋತ್ತರ ಪದವಿ ಮಾನಸ ಗಂಗೋತ್ರಿ ಮೈಸೂರು. ಶಿಕ್ಷಣ ಪದವಿ ರಾಷ್ಟ್ರೀಯ ಶಿಕ್ಷಣ ಮಹಾವಿದ್ಯಾಲಯ ಶಿವಮೊಗ್ಗ. ೧೯೮೪ರಲ್ಲಿ ವೃತ್ತಿ ಜೀವನ ಆರಂಭ. ೧೯೮೯-೯೦ ಪ್ರೌಢಶಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೧೯೯೪ರಲ್ಲಿ ಬಡ್ತಿ ಪಡೆದರು. ೧೯೯೭-೯೮ರಲ್ಲಿ ಜ್ಞಾನ ವಿಕಾಸನ ಸಾವಯುವ ಕೃಷಿ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಹಾಗೂ ಸಾವಯುವ ಕೃಷಿ ಘಟಕ ಸ್ಥಾಪನೆ, ರೈತರಿಗೆ ಸಾವಯುವ ಕೃಷಿ ಬಗ್ಗೆ ಮಾಹಿತಿ ನೀಡಿದ್ದು. ೨೦೦೨-೦೯ರವರಗೆ ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕದ ಅಧ್ಯಕ್ಷರಾಗಿ ಹಾಗೂ ಹಾಲಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ೨೦೦೬ರಲ್ಲಿ ಜಿಲ್ಲಾ ಕಾವ್ಯ ಕಮ್ಮಟವನ್ನು ಅಮೃತಾಪುರದಲ್ಲಿ ಯಶಸ್ವಿಯಾಗಿ ನಡೆಸಿದರು. ಇದೇ ಸಾಲಿನ ಅಂದರೆ ೨೦೧೦ ಜೂನ್ ತಿಂಗಳಲ್ಲಿ ಕೃಷಿ ಕಾರ್ಯಾಗಾರ ನಡೆಸಿದರು. ಫೆಬ್ರವರಿ ೨೦೧೦ ಮಾಧ್ಯಮಿಕ ಶಾಲ ಶಿಕ್ಷಕರಿಗೆ ಕನ್ನಡ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ತರೀಕೆರೆಯಲ್ಲಿ ಜರುಗಿದ ತಾಲೂಕು ಮಟ್ಟದ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇವರ ಕವಿಗಳ ವಿಮರ್ಶೆ, ಕವನ, ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ತರೀಕೆರಿಯಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಇವರ ಪ್ರಥಮ ಕವನ ಸಂಕಲನ ಬಿಡುಗಡೆಯಾಗಿದೆ.

ಪ್ರಕಟಿತ ಕೃತಿಗಳು:
ಕವನ ಸಂ. – ಸ್ಪರ್ಶ.

ಲಭಿಸಿರುವ ಪ್ರಶಸ್ತಿಗಳು:

೧. ಕನ್ನಡ ಶ್ರೀ ಪ್ರಶಸ್ತಿ.
೨. ಉತ್ತಮ ಕಾವ್ಯ ಕಮ್ಮಟ ನಿರ್ವಹಣ ಪ್ರಶಸ್ತಿ
೩. ಉತ್ತಮ ಸಂಪನ್ಮೂಲ ವ್ಯಕ್ತಿಯಾಗಿ ಪುರಸ್ಕಾರ.
೪. ಉತ್ತಮ ಸಾವಯುವ ಕೃಷಿ ಪುರಸ್ಕಾರ.

ವ್ಯಕ್ತಿ ಪರಿಚಯ

ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟ

೧. ಹೆಸರು	:	ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟ
೨. ಕಾವ್ಯನಾಮ	:	ಇರುವುದಿಲ್ಲ.
೩. ಹುಟ್ಟಿದ ಸ್ಥಳ ದಿನಾಂಕ	:	ತೆಕ್ಕೆಕೆರೆ ಕಾಸರಗೋಡು, ೧೦-೧೨-೧೯೪೬
೪. ಜಿಲ್ಲೆ - ರಾಜ್ಯ	:	ಕಾಸರಗೋಡು ಜಿಲ್ಲೆ - ಕೇರಳ
೫. ವಿದ್ಯಾಭ್ಯಾಸ	:	ಕನ್ನಡ ಎಂ.ಎ.
೬. ವೃತ್ತಿ	:	ದೂರವಾಣಿ ತಾಂತ್ರಿಕ ಸಹಾಯಕ, ನಿವೃತ್ತರು (ಬಿ.ಎಸ್.ಎನ್.ಎಲ್.)
೭. ಕೌಟುಂಬಿಕ	:	ಪತ್ನಿ; ಸೌ ಸರಸ್ವತಿ. ಪುತ್ರ; ಟಿ.ಎಸ್. ಶ್ಯಾಮ ಪ್ರಸಾದ್. ಪುತ್ರಿಯರು; ಟಿ.ಎಸ್. ಅನ್ನಪೂರ್ಣ, ಟಿ.ಎಸ್. ಉಷಾಕಿರಣ.
೮. ಸದ್ಯದ ವಿಳಾಸ	:	ನಂ. ೩೮೬, ಶ್ರೀ ಗುರು ಕೃಪಾ , ೧೪ 'ಇ' ಅಡ್ಡರಸ್ತೆ, ವಿವೇಕಾನಂದ ಮಾರ್ಗ, ಸಾರಕ್ಕಿ ಗೇಟ್, ಜೆ.ಪಿ.ನಗರ ೧ನೇ ಹಂತ, ಬೆಂಗಳೂರು - ೫೬೦೦೭೮
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೮೦ - ೨೨೪೪೭೬೬೬, ೯೪೪೮೮೧೫೧೦೫
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಕಾಸರಗೋಡು ತಾಲೂಕು ಕಾರಡ್ಕ ಗ್ರಾಮದ ತೆಕ್ಕೆಕೆರೆಯಲ್ಲಿ ಜನಿಸಿದರು. ಇವರು ಕಡೆಂಗೋಡ್ಲು ಮೂಲದ ತೆಕ್ಕೆಕೆರೆ ಶಂಭು ಭಟ್ಟ ಮತ್ತು ಶ್ರೀಮತಿ ಗೌರಮ್ಮ ದಂಪತಿಗಳ ಪುತ್ರ. ಪ್ರಾಥಮಿಕ ವಿದ್ಯಾಭ್ಯಾಸ ಏತಡ್ಕ. ಪ್ರೌಢ ಕಾಸರಗೋಡು ತಾಲೂಕು ಅಗಲ್ಪಾಡಿ. ೧೯೬೪ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಸ್ನಾತಕೋತ್ತರ ಪದವೀಧರರಾದರು. ೧೯೬೧ರಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಮಿತಿಯ ರಾಷ್ಟ್ರ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೯೮ರಲ್ಲಿ ಭಾರತೀಯ ವಿದ್ಯಾಭವನ ಮುಂಬಯಿಯಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡಿದರು. ೧೯೬೫ರಲ್ಲಿ ಭಾರತೀಯ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ನೌಕರರಾಗಿ ವೃತ್ತಿಜೀವನ ಆರಂಭಿಸಿದರು. ತಂತ್ರಜ್ಞರಾದ ಇವರು ನಂತರ ತಾಂತ್ರಿಕ ಮೇಲ್ವಿಚಾರಕರಾಗಿ, ಹಿರಿಯ ತಾಂತ್ರಿಕ ಸಹಾಯಕರಾಗಿ ಹಲವಾರು ಊರುಗಳಲ್ಲಿ ಸೇವೆ ಸಲ್ಲಿಸಿ ೨೦೦೬ರಲ್ಲಿ ನಿವೃತ್ತರಾದರು. ಇವರಿಗೆ ಶಾಲಾ ದಿನಗಳಿಂದಲೇ ಸಾಹಿತ್ಯಾಭಿರುಚಿ. ಕುಮಾರವ್ಯಾಸ ಭಾರತ, ತೊರವೆ ರಾಮಾಯಣ, ಜೈಮಿನಿ ಭಾರತಗಳ ಅಧ್ಯಯನ, ಅ.ನ.ಕೃ., ತ.ರಾ.ಸು., ಕಾರಂತ, ಗೋಕಾಕ್ ಮುಂತಾದವರ ಕಾದಂಬರಿಗಳನ್ನೂ ಓದುತ್ತಿದ್ದರು. ಅಂತರ್ಶಾಲೆ ಅಂತರ್ಜಿಲ್ಲೆಗಳಲ್ಲಿ ನಡೆಯುತ್ತಿದ್ದ ಭಾಷಣ, ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ನರಸಿಂಹಸ್ವಾಮಿ, ಕುವೆಂಪು ಮುಂತಾದ ಕವಿಗಳ ಪ್ರಭಾವದಿಂದ ಕವನ ರಚಿಸುತ್ತಿದ್ದರು. ೧೯೬೦-೬೨ರವರಗೆ ಚಿತ್ರದುರ್ಗದಲ್ಲಿ ಕನ್ನಡ ಶಿಕ್ಷಕರಾಗಿ ಒಂದು ವರ್ಷ ಸಂಸ್ಕೃತ ಅಧ್ಯಾಪಕರಾಗಿ ಸೇವೆಸಲ್ಲಿಸಿದರು. ಹರಿದಾಸರಾಗಿ ಹರಿಕಥೆ ಮಾಡಿದರು. ನಾಟಕ ರಚಿಸಿ ನಟರಾಗಿ ನಾಟಕ ಮಾಡಿದರು. ಇವರ ಕವನ, ಲೇಖನಗಳು ಗೋಕುಲ, ಮಲ್ಲಿಗೆ, ಯುಗ ಪುರುಷ, ಸುದ್ದಿ ಬಿಡುಗಡೆ, ಹೊಸದಿಗಂತ, ವಿಕ್ರಮ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವಿಶೇಷ ಸಂಚಿಕೆ, ಸ್ಮರಣ ಸಂಚಿಕೆಗಳಲ್ಲೂ ಪ್ರಕಟವಾಗಿವೆ. ಗಮಕ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ದೂರವಾಣಿ ತಾಂತ್ರಿಕ ನೌಕರರಾಗಿದ್ದರು. ರಾಜ್ಯ, ಹೊರರಾಜ್ಯಗಳಲ್ಲಿ ಗಮಕ ವಾಚನ ಮಾಡಿದ್ದಾರೆ. ಗಮಕ ಸಮ್ಮೇಳನಗಳನ್ನು ನಡೆಸಿದ್ದಾರೆ. ಗಮಕ ತರಗತಿಗಳನ್ನು ನಡೆಸಿದ್ದಾರೆ. ಗಮಕ ಕಲಾ ರಾಜ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಹಲವಾರು ಕಡೆ ಇವರನ್ನು ಗೌರವಿಸಿ ಸನ್ಮಾನಿಸಿದ್ದಾರೆ.

ಪ್ರಕಟಿತ ಕೃತಿಗಳು:

ಕವನ. ಸಂ. –ಸಂಗಮ, ಶ್ರೀಗಂಧ, ಸಮಾಗಮ.

ಕಥಾ ಸಂ. – ನೇಮಿಚಂದ್ರನ ಕಥೆಗಳು.

ಕೀರ್ತನೆ – ಶ್ರೀ ರಾಘವೇಶ್ವರ ಕೀರ್ತನ ಶತಕ.

ಲಭಿಸಿರುವ ಪ್ರಶಸ್ತಿಗಳು:

೧. ಬೆಳ್ತಂಗಡಿಯಲ್ಲಿ ಶ್ರೀ ರಾಘವೇಶ್ವರ ಭಾರತಿಸ್ವಾಮಿಗಳವರಿಂದ ಉಂಡೆಮನ ಪ್ರಶಸ್ತಿ.

೨. ಕಾಸರಗೋಡಿನಲ್ಲಿ ಅಗ್ನಿ ಸೇವಾ ಟ್ರಸ್ಟ್ ಬೆಂಗಳೂರು ಇವರಿಂದ 'ಮಹಾ ಕವಿ ಪರಮದೇವ'ಪ್ರಶಸ್ತಿ.

ವ್ಯಕ್ತಿ ಪರಿಚಯ



ದರ್ಭೆ ಶಂಕರ ಭಟ್ಟ

೧. ಹೆಸರು	:	ದರ್ಭೆ ಶಂಕರ ಭಟ್ಟ
೨. ಕಾವ್ಯನಾಮ	:	'ಶಂಕರ'
೩. ಹುಟ್ಟಿದ ಸ್ಥಳ ದಿನಾಂಕ	:	ಇರ್ದೆ ಗ್ರಾಮ. ದರ್ಭೆ, ೦೪–೧೦–೧೯೩೧.
೪. ಜಿಲ್ಲೆ – ರಾಜ್ಯ	:	ದಕ್ಷಿಣ ಕನ್ನಡ, ಕರ್ನಾಟಕ.
೫. ವಿದ್ಯಾಭ್ಯಾಸ	:	ಸಾಹಿತ್ಯ ಶಿರೋಮಣಿ, ಕನ್ನಡ ವಿದ್ವಾನ್, ಹಿಂದಿ. ರಾ. ಭಾ.
೬. ವೃತ್ತಿ	:	ಕೃಷಿ
೭. ಕೌಟುಂಬಿಕ	:	ಪತ್ನಿ; ಸರಸ್ವತಿ. ಪುತ್ರಿ; ರಾಜಲಕ್ಷ್ಮೀ. ಪುತ್ರರು; ಶಂಭು, ರಾಮಕೃಷ್ಣ.
೮. ಸದ್ಯದ ವಿಳಾಸ	:	ನಂ. ೧೫, ದರ್ಭೆ ಶಂಕರ ಭಟ್ಟ, ದೇವಮಣಿ ಅಂಚೆ, ಬೆಟ್ಟಂಪಾಡಿ. ೫೭೪೨೫೮ ಪುತ್ತೂರು. ದ.ಕ.
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೮೨೫೧–೨೦೮೨೧೫
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ದ.ಕ. ಜಿಲ್ಲೆ ಪುತ್ತೂರು ತಾಲೂಕು ಇರ್ದೆ ಗ್ರಾಮದ ದರ್ಭೆಯಲ್ಲಿ ಹುಟ್ಟಿದರು. ಇವರು ಶ್ರೀ ಶಂಭುಭಟ್ಟರು ಹಾಗೂ ಲಕ್ಷ್ಮೀಅಮ್ಮ ದಂಪತಿಗಳ ಪುತ್ರ. ತಂದೆ ಪ್ರಸಿದ್ಧ ವೈದಿಕ ವಿದ್ವಾಂಸರು. ೧೯೩೮ರಲ್ಲಿ ಕುಂಞಾಮೂಲೆ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣವಾಯಿತು. ಪೆರಡಾಲದಲ್ಲಿ ಪ್ರೌಢ ಶಿಕ್ಷಣವಾಯಿತು. ತಂದೆಯವರಲ್ಲಿ ನಾಲ್ಕು ವರ್ಷ ವೇದೋಪನಿಷತ್ತುಗಳನ್ನು ಅಭ್ಯಾಸ ಮಾಡಿದರು. ಮದ್ರಾಸು ವಿಶ್ವವಿದ್ಯಾಲಯಯಿಂದ 'ಸಂಸ್ಕೃತ ಸಾಹಿತ್ಯ ಶಿರೋಮಣಿ' ಪದವಿಯನ್ನು ಗಳಿಸಿದರು. ಕನ್ನಡ ವಿದ್ವಾನ್ ಮಾಡಿದರು ಹಾಗೇ ಹಿಂದೀ, ಇಂಗ್ಲೀಷ್ ಭಾಷೆಗಳಲ್ಲೂ ಪಾಂಡಿತ್ಯಗಳಿಸಿದರು. ಇವರು ವಿದ್ಯಾರ್ಥಿ ದೆಸೆಯಲ್ಲೇ ಸಣ್ಣಕಥೆ, ಕವನ, ವಿಮರ್ಶೆ, ಗೀತಾ ವ್ಯಾಖ್ಯಾನ ಮಾಡ ತೊಡಗಿದರು. ಅಂತರ ಶಾಲಾ ಭಾಷಣಗಳಲ್ಲಿ ಭಾಗವಹಿಸುತ್ತಿದ್ದರು. ವಿದ್ಯಾರ್ಥಿ ನಾಯಕರಾಗಿ, ಕಾರ್ಯದರ್ಶಿಯಾಗಿ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಡಿ.ವಿ.ಜಿ., ದ.ರಾ.ಬೇಂದ್ರೆ, ಮಾಸ್ತಿ, ತಿ.ನಂ.ಶ್ರೀ. ಮುಂತಾದ ಸಾಹಿತಿಗಳಿಂದ ಪ್ರಭಾವಿತರಾಗಿ ಶಾಲಾಪತ್ರಿಕೆ 'ಗಾಯಿತ್ರಿ'ಗಾಗಿ ಲೇಖನಗಳನ್ನು ಬರೆಯುತ್ತಿದ್ದರು. ಇವರ ಹಲವು ಕವಿತೆಗಳು ವಿವಿಧ ಸಂಕಲನಗಳಲ್ಲಿ ಸೇರಿವೆ. ೧೯೭೭ರಲ್ಲಿ ಇವರ 'ಕುಂಕುಮ' ಕವನ ಸಂಕಲನ ಬಿಡುಗಡೆಯಾಯಿತು. ಇದಕ್ಕೆ ದ.ರಾ. ಬೇಂದ್ರೆ ಮುನ್ನುಡಿ ಬರೆದಿದ್ದಾರೆ. ಕೈಯ್ಯಾರ ಕಿಞ್ಞಣ್ಣರೈ ಬಿಡುಗಡೆ ಮಾಡಿದ್ದಾರೆ. ಇವರು ಶಾಲೆಯ ಹಸ್ತಪ್ರತಿ ಪತ್ರಿಕೆಯ ಸಂಪಾದಕರಾಗಿದ್ದರು. ಇವರಿಗೆ ಕೃಷಿ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ. ಕೃಷಿಯೇ ಕುಟುಂಬಕ್ಕೆ ಆಧಾರ. ೧೯೬೦ ರಿಂದ ಬೆಟ್ಟಂಪಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ೧೭ ವರ್ಷ ದುಡಿದು ಪ್ರಶಸ್ತಿಗಳಿಸಿದ್ದಾರೆ. ಒಳ್ಳೆಯ ಸಮಾಜ ಸಂಘಟಕರು. ಗ್ರಾಮದ ಜನತೆಯ ಉಪಯೋಗಕ್ಕಾಗಿ ಸಮಾಜ ಮಂದಿರ, ಪ್ರೌಢಶಾಲೆ, ಸಹಕಾರ ಸಂಘ ಹಾಗೂ ಅಂಚೆ ಕಛೇರಿಗಳ ಸ್ಥಾಪನೆಗೆ ಕಾರಣವಾಗಿದ್ದಾರೆ. ಶ್ರೀ ಮಹಾಲಿಂಗೇಶ್ವರ ದೇವರ ಕಟ್ಟೆಯ ಮುಂಭಾಗ, ಕಟೀಲು ದುರ್ಗಾಪರಮೇಶ್ವರೀ ದೇವಿ ಕಟ್ಟೆಗಳ ಬಳಿ ಪರಿಸರ ಶುಚಿತ್ವಕ್ಕೆ ಹೆಚ್ಚಿನ ಗಮನ ಕೊಟ್ಟಿದ್ದಾರೆ. ೧೯೯೭ರ ರೆಫರೆನ್ಸ್ ಏಷ್ಯಾ ೧೧ರ ಪುಟ ೩೬ರಲ್ಲಿ ೧೯೯೯ ರ ಇಂಡೋ ಅಮೆರಿಕನ್ 'ಹೂ ಈಸ್ ಹೂ' ಸಂಪುಟ ಎರಡರ ೮೮ರಲ್ಲಿ ಹಾಗೂ ೭-೩-೯೯ ರಲ್ಲಿ 'ಯು ನೈಟ ದ ರೈಟರ್ಸ್ ಎಸೋಸಿಸಿಯೇಷನ್ಸ್ ಚೆನ್ನೈ ಇವರಿಂದ ಯು.ಡಬ್ಲ್ಯು.ಯು. ಎವಾರ್ಡ ಪ್ರಶಸ್ತಿಗಳಿಸಿದ್ದಾರೆ. ಇವುಗಳಷ್ಟೇ ಅಲ್ಲದೆ ಐವರಿಗೆ ಸ್ಥಳೀಯ ವಿದ್ಯಾಸಂಸ್ಥೆಗಳು, ಸೇವಾ ಸಹಕಾರ ಸಂಘಗಳು, ಬ್ಯಾಂಕುಗಳು, ಪರಮ ಪೂಜ್ಯ ಗೋಕರ್ಣ ಮಂಡಾಲಾಧೀಶ ಗುರುಗಳು ಗೌರವ ಸನ್ಮಾನ ನೀಡೀದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಕುಂಕುಮ

ಲಭಿಸಿರುವ ಪ್ರಶಸ್ತಿಗಳು:

೧. ಫ್ರೆಂಡ್‌ಶಿಪ್ ಫೋರ್ಮ್ ಆಫ್ ಇಂಡಿಯಾ ನವದೆಹಲಿ ಭಾರತ ಎಕ್ಸಲೆಂಟ್ ಎವಾರ್ಡ.
೨. ಇಂಟರ್ ನ್ಯಾಷನಲ್ ಬೆಂಜಮಿನ್ ಪಬ್ಲಿಷಿಂಗ್ ಹೌಸ್ ದೆಹಲಿ ಪ್ರಶಸ್ತಿ.

ವ್ಯಕ್ತಿ ಪರಿಚಯ

ದುಂಡ್ಯಪ್ಪ. ಹಿ.ಗೂ.

೧. ಹೆಸರು : ಹಿ.ಗೂ. ದುಂಡ್ಯಪ್ಪ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಕ : ಹರಿಹರ. ೧೦-೧೧-೧೯೪೯.

೪. ಜಿಲ್ಲೆ - ರಾಜ್ಯ : ದಾವಣಗೆರೆ, ಕರ್ನಾಟಕ.

೫. ವಿದ್ಯಾಭ್ಯಾಸ : ಪಿ.ಯು.ಸಿ., ಐ.ಎಂ.ಎಂ.

೬. ವೃತ್ತಿ : ತಿಳಿಸಿಲ್ಲ

೭. ಕೌಟುಂಬಿಕ : ಪತ್ನಿ; ಗಿರಿಜಮ್ಮ. ಪುತ್ರಿಯರು; ವೀಣಾ, ಶುಭಃ

೮. ಸದ್ಯದ ವಿಳಾಸ ಸೇತುವೆ : ಹಿ.ಗೂ. ದುಂಡ್ಯಪ್ಪ, ಸುಳ್ಯವು, ಜೋಡು ಹತ್ತಿರ. ಶಿವಮೊಗ್ಗ ರಸ್ತೆ - ಹರಿಹರ

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ತಿಳಿಸಿಲ್ಲ

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ದಾವಣಗೆರೆ ಜಿಲ್ಲೆ ಹರಿಹರದಲ್ಲಿ ಜನಿಸಿದರು. ಇವರು ಶ್ರೀ ಗುಂಡಾಭಕ್ತರ ಮತ್ತು ಶ್ರೀಮತಿ ಬಸಮ್ಮ ದಂಪತಿಗಳ ಪುತ್ರ. ಇವರು ಪಿ.ಯು.ಸಿ ಮಾಡಿ, ಐ.ಎಂ.ಎಂ. ಮಾಡಿದ್ದಾರೆ. ಸೋನಾಲ್ಕರ್ ಕಂಪನಿ ಡ್ರಾಯಿಂಗ್ ವಿಭಾಗದಲ್ಲಿ ನೌಕರಿ ಮಾಡುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳು. ಶಾಲದಿನಗಳಿಂದಲೇ ಸಾಹಿತ್ಯಾಸಕ್ತರು. ಆಗಿನಿಂದಲೇ ಬರೆಯ ತೊಡಗಿದರು. ಇವರ ಕವನ, ಲೇಖನ ಇತ್ಯಾದಿ ಬರೆಹಗಳು ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರಿಗೆ ಇತಿಹಾಸ ಶೋಧ ಮಾಡುವ ಬಗ್ಗೆ ಒಲವು. ಶಿಲ್ಪಕಲೆ, ಶಿಲಾಶಾಸನ, ಚಿತ್ರಕಲೆಗಳ ಅಧ್ಯಯನದಲ್ಲಿಯೂ ಆಸಕ್ತಿ. ಯೋಗ ಹವ್ಯಾಸ. ಸುಮಾರು ಮೂವತ್ತಕ್ಕೂ ಹೆಚ್ಚು ವರ್ಷಗಳಿಂದ ಜನತೆಗೆ ಉಚಿತವಾಗಿ 'ಸರ್ಪ ಹುಣ್ಣಿ'ಗೆ ಚಿಕಿತ್ಸೆ ನೀಡುತ್ತಾ ಬಂದಿದ್ದಾರೆ. ಸಮಾಜ ಸೇವಕರು. ಅನೇಕ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಆಕಾಶವಾಣಿ ಭದ್ರಾವತಿಯಲ್ಲಿ ಇವರ ಸಂದರ್ಶನ ಪ್ರಸಾರವಾಗಿದೆ ಇವರು ಅಭಿನವ ಪುಣ್ಯಕ್ಷೇತ್ರ, ಬಿದರ ಹಳ್ಳಿ ಚರಿತ್ರೆ, ಸಂಕ್ಷಿಪ್ತ ೬೬ ಹಳ್ಳಿಯ ಒಡತಿ ಊರಮ್ಮನ ಚರಿತೆ ಹಾಗೂ ಭಕ್ತಿ ಗೀತೆಗಳು, ಮಕ್ಕಳ ಲಾಲಿ ಗೀತೆಗಳು, ಕುರುವತ್ತಿ ಬಸವೇಶ್ವರನ ವಚನಗಳು ಇತ್ಯಾದಿ ವಿಷಯಗಳ ಬಗ್ಗೆಯೂ ಕೃತಿ ರಚಿಸಿದ್ದಾರೆ. ಚಿತ್ರದುರ್ಗಾ ಜಿಲ್ಲಾ ಕುಂಬಾರ ಸಮ್ಮೇಳನದ 'ಕುಂಭ ಕಲೆ'ಸ್ಮರಣ ಸಂಚಿಕೆಯ ಸಂಪಾದಕರಾಗಿದ್ದರು. ಶರಣ ಸಂಗಮದ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ 'ಶರಣ ಮಂದಾರ'ದ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ, ಬೆಂಗಳೂರು ಜಾನಪದ ಪರಿಷತ್ತಿನ, ಬೆಂಗಳೂರು ಇತಿಹಾಸ ಅಕಾಡೆಮಿಯ ಆಜೀವ ಸದಸ್ಯರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಹರಿಹರ ತಾಲೂಕು ಘಟಕದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಪ್ರಕಟಿತ ಕೃತಿಗಳು:

ಕಾವ್ಯ – ಕುಂಬಾರನ ಹಾಡುಗಳು, ಒಲವಿನ ಶಾಯಿರಿಗಳು, ಕರುಳ ಕುಡಿ.

ಜಾನಪದ – ೬೬ ಹಳ್ಳಿಯ ಒಡತಿ ಊರಮ್ಮನ ಚರಿತೆ.

ಲಭಿಸಿರುವ ಪ್ರಶಸ್ತಿಗಳು:

೧. ನಾಡ ಬಂಡ್‌ಪಾವಲಿ ಗರಡಿ ಮನೆ ಹರಿಹರ ಚಿತ್ರಕಲೆಗಾಗಿ ಸನ್ಮಾನ.
೨. ಕುಂಬಾರ ಸಂಘ ಹಾಲಿವಾಣದವರು ಪುಸ್ತಕ ಪ್ರಕಟಣೆಗೆ ಸನ್ಮಾನ.
೩. ಗ್ರಾಮದೇವತೆ ಜಾತ್ರ ಮಹೋತ್ಸವ ಸಮಿತಿ ಹರಿಹರದವರ ಸನ್ಮಾನ.
೪. ಜಿಲ್ಲಾ ಮಟ್ಟದ ಕುಂಬಾರ ಸಮ್ಮೇಳನದಲ್ಲಿ ಸನ್ಮಾನ.
೫. ೨೦೦೦ – ಹರಿಹರದ ಕನ್ನಡ ರಾಜ್ಯೋತ್ಸವ ಸಮಿತಿಯಿಂದ ಸನ್ಮಾನ.
೬. ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ವೇದಿಕೆ ಹರಿಹರ ಇವರಿಂದ ಸನ್ಮಾನ.

ವ್ಯಕ್ತಿ ಪರಿಚಯ

ದೊರೆಸ್ವಾಮಿ. ಎಚ್.ಆರ್.

೧. ಹೆಸರು	:	ಎಚ್.ಆರ್. ದೊರೆಸ್ವಾಮಿ
೨. ಕಾವ್ಯನಾಮ	:	ಹೊರೆಯಾಲ ದೊರೆಸ್ವಾಮಿ
೩. ಹುಟ್ಟಿದ ಸ್ಥಳ ದಿನಾಂಕ	:	ಹೊರೆಯಾಲ ದೊರೆಸ್ವಾಮಿ. ೫೮ ವರ್ಷ
೪. ಜಿಲ್ಲೆ – ರಾಜ್ಯ	:	ಚಾಮರಾಜನಗರ, ಕರ್ನಾಟಕ.
೫. ವಿದ್ಯಾಭ್ಯಾಸ	:	ಕನ್ನಡ ಎಂ.ಎ., ಪಿ.ಜಿ.ಡಿ.ಪಿ ಇನ್ ಇಂಗ್ಲೀಷ್.
೬. ವೃತ್ತಿ	:	ಮೈಸೂರು ವಿಶ್ವವಿದ್ಯಾಲಯಯಲ್ಲಿ ಸಹಾಯಕ ಸಂಶೋಧಕ. ನಿವೃತ್ತ ಹವ್ಯಾಸಿ ಪತ್ರಕರ್ತ.
೭. ಕೌಟುಂಬಿಕ	:	ಪತ್ನಿ; ಪಿ.ಆರ್. ಭಾರತಿ. (ಮ); ಎಚ್.ಡಿ. ಪೃಥ್ವಿ
೮. ಸದ್ಯದ ವಿಳಾಸ	:	ನಂ. ೭, ೭ನೇ ಮೈನ್ (ಉತ್ತರ) ೯ನೇ ಕ್ರಾಸ್, ವಿವೇಕಾನಂದನಗರ, ಮೈಸೂರು ೫೭೦೦೨೩
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೮೨೧–೨೫೬೦೪೦೮
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಚಾಮರಾಜನಗರ ಜಿಲ್ಲೆ ಇಲವಾಲ ಹೊಬಳಿ ಹೊರೆಯಾಲದಲ್ಲಿ ಜನಿಸಿದರು. ಇವರು ತಂದೆಯ ಊರು ಮೈಸೂರು ಜಿಲ್ಲೆ ಇಲವಾಲ ಹೊಬಳಿ ಹುಯಿಲಾಳು. ಕನ್ನಡ ಸ್ನಾತಕೋತ್ತರ ಪದವೀಧರರು. ಇಂಗ್ಲೀಷ್ ಪಿ.ಜಿ.ಡಿಪ್ಲೊಮಾ ಮಾಡಿದ್ದಾರೆ. ಸಂಸ್ಕೃತ ಕಾವ್ಯ ಮಾಡಿದ್ದಾರೆ. ನಾಟಕ ಡಿಪ್ಲೊಮಾ ಕೋರ್ಸ್ ಮುಗಿಸಿದ್ದಾರೆ. ೧೯೭೦-೮೦ರವರಗೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳು ಆದರೆ ಬೇಸಾಯದಲ್ಲಿ ಇವರಿಗೆ ವಿಶೇಷ ಆಸಕ್ತಿ. ಪತ್ರಕರ್ತ, ಪ್ರಕಾಶಕ ಹಾಗೂ ವ್ಯಾಪಾರಿಗಳು. ವಿದ್ಯಾರ್ಥಿ ದೆಸೆಯಿಂದಲೇ ಬರೆಯ ತೊಡಗಿದರು. ಇವರು ಕವನ, ಕಥೆ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ ಹಾಗೂ ಜಾನಪದ ಇತ್ಯಾದಿ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಇವರು ಅನುವಾದ ಕೂಡ ಮಾಡುತ್ತಾರೆ. ಇವರು ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಸದಸ್ಯರು. ಇವರು ೫ ಕವನ ಸಂಕಲನ, ೩ ಕಾದಂಬರಿ, ೧ ಕಥಾಸಂಕಲನ, ೧೦ ನಾಟಕಗಳು, ೧ ಮಕ್ಕಳ ನಾಟಕ, ೨ ಮಕ್ಕಳ ಸಾಹಿತ್ಯ ಮತ್ತು ೫ ಜಾನಪದ, ೨ ಇತರ ಹಾಗೂ ಕಾವ್ಯಾಲಯ ಪ್ರಕಾಶನ ಸಂಸ್ಥೆಯನ್ನು ಕುರಿತ ಒಂದು ಕೃತಿ ಒಟ್ಟು ಮೂವತ್ತಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ. ೧೯೭೪ರಲ್ಲಿ 'ನಾಲಿಗೆ ಅಕ್ಸರನ ಒದುಗವ್ವ'ವೆಂಬ ಗುಂಡ್ಲುಪೇಟೆ ತಾಲೂಕಿನ ಜನಪದ ಕಥನ ಕವನಗಳ ಸಂಕಲನ ಪ್ರಕಟಿಸಿದ್ದಾರೆ. 'ಕಾಗಿನೆಲೆ'ಹಳ್ಳಿಯ ಅಧ್ಯಯನ ಕುರಿತದ್ದು.

ಪ್ರಕಟಿತ ಕೃತಿಗಳು:
ಕವನ ಸಂ. – ಅರ್ನೆಸ್ಟ್. ಬಾ ಚೇತನವೆ ಬಾ, ಏಕಾಂಗಿ ನಾಗವ್ವ.
ಕಥಾ ಸಂ. – ಜಾತ್ರೆ ಮತ್ತು ಮಾದನಾಯಕನ ಗಂಡು.
ಕಾದಂಬರಿ – ಕೂಳೆ, ಹುಡುಕಾಡಿ ಬಂದ ಹೊನ್ನಿನ ಬದುಕು, ಬದುಲು.
ನಾಟಕ – ಇದೆಮ್ಮಾ, ಗೆಜ್ಜಲಟ್ಟಿ, ದಾರಿ ಬದಲಿಸಿದಾಗ, ಸಿದ್ದೂರ, ಅಪರಿಚಿತ, ಆಗಂತುಕರು, ಬಂದ್, ಬಾಂಬ್.
ಮಕ್ಕಳ ನಾಟಕ – ಒಂದೂರಿನಲ್ಲಿ ಒಬ್ಬ ರಾಜು, ನಾಗನ ಕಥೆ, ಹೈಕಳು.
ಮಕ್ಕಳ ಸಾಹಿತ್ಯ – ಕೇಳು ಒಂದು ಕಥೆಯ, ಮಕ್ಕಳ ಬಳಗ.
ಜಾನಪದ – ಶಿಶು ಪ್ರಾಸಗಳು. ವಿಶ್ಲೇಷಣೆ, ಗುಂಡ್ಲು ಪೇಟೆ ಮತ್ತು ಇತರ ಕಥೆಗಳು, ಮಿಡಜಂ ಭಟ್ಟ ಮತ್ತು ಇತರ ಕಥೆಗಳು.
ಇತರೆ – ಹರಕೆ, ಕಾಗಿನೆಲೆ – ಹಳ್ಳಿಯ ಅಧ್ಯಯನ.
ಅನುವಾದ – ಚೀನಿ ಜನತೆಯ ಪದ್ಯಗಳು.

ಲಭಿಸಿರುವ ಪ್ರಶಸ್ತಿಗಳು:
೧. 'ಹೈಕಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕಾರ.

ವ್ಯಕ್ತಿ ಪರಿಚಯ

ಡಾ॥ ನಂದೀಶ್ವರ. ಎನ್.

೧. ಹೆಸರು : ಡಾ॥ ಎನ್. ನಂದೀಶ್ವರ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಕಸಾಪುರ, ೧೨-೪-೧೯೬೭.

೪. ಜಿಲ್ಲೆ - ರಾಜ್ಯ : ತುಮಕೂರು, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಪಿಹೆಚ್.ಡಿ.

೬. ವೃತ್ತಿ : ಪ್ರಾಂಶುಪಾಲರು.

೭. ಕೌಟುಂಬಿಕ : ಪತ್ನಿ; ರೇಣುಕಾದೇವಿ. ಪುತ್ರ; ಪುರುಷೋತ್ತಮ್ ಎಂ.

೮. ಸದ್ಯದ ವಿಳಾಸ : ಡಾ॥ಎನ್. ನಂದೀಶ್ವರ, ಕೇರ್ ಆಫ್ ಸಂಗಪ್ಪ ಕಸಾಪುರ ರೆಡ್ಡಿಹಳ್ಳಿ ಅಂಚೆ, ಮಧುಗಿರಿ ತಾ. ತುಮಕೂರು-೫೭೨೧೩೩

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೯೬೪೨೦೭೧೨೩

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ತುಮಕೂರು ಜಿಲ್ಲೆ ಮಧುಗಿರಿ ತಾಲೂಕು ಕಸಾಪುರದಲ್ಲಿ ಜನಿಸಿದರು. ಹುಟ್ಟೂರಲ್ಲೇ ಪ್ರಾಥಮಿಕ ಶಿಕ್ಷಣ. ಮಿಡಿಗೆರೆ ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಪ್ರೌಢ ಶಾಲೆ, ಪದವಿಪೂರ್ವ ಶಿಕ್ಷಣ ಮುಗಿಸಿದರು. ಮಧುಗಿರಿಯ ವಿಶ್ವವಿದ್ಯಾಲಯ ವೆಂಕಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಹಾಗೂ ನಾಗಮಂಗಲದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಯನ ಮಾಡಿ ೧೯೮೪ರಲ್ಲಿ ಬಿ.ಎ. ಪದವಿ ಪಡೆದರು. ಇತಿಹಾಸದಲ್ಲಿ ಸ್ನಾತಕೋತ್ತರ ಪದವೀಧರರಾದರು, ಮೈಸೂರು ವಿಶ್ವವಿದ್ಯಾಲಯ ಪ್ರಥಮ ದರ್ಜೆ ಮೈಸೂರು ವಿಶ್ವವಿದ್ಯಾಲಯದಲ್ಲೇ ಶಾಸನ ಶಾಸ್ತ್ರದಲ್ಲಿ ಡಿಪ್ಲೊಮಾ ಹಾಗೂ ಗಾಂಧೀ ಅಧ್ಯಯನದಲ್ಲಿ ಡಿಪ್ಲೊಮಾ ಮಾಡಿದರು. ಮಧ್ಯ ಕಾಲೀನ ಕರ್ನಾಟಕದಲ್ಲಿ ಆಹಾರ ಮತ್ತು ಪಾನೀಯಗಳು ಕುರಿತ ಮಹಾ ಪ್ರಬಂಧ ರಚಿಸಿ ಮೈಸೂರು ವಿಶ್ವವಿದ್ಯಾಲಯದಿಂದಲೇ ಪಿಹೆಚ್.ಡಿ. ಪದವಿ ಪಡೆದರು. ಸದ್ಯ ಶಿರಾ ತಾಲೂಕು ಕಳ್ಳಂಬೆಳ್ಳ ಎಸ್.ಎಮ್.ಆರ್. ಪಿ.ಯು. ಕಾಲೇಜಿನಲ್ಲಿ ಪ್ರಾಂಶುಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದಕ್ಕೂ ಮೊದಲು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಐದು ವರ್ಷಗಳ ಬೋಧನ ಅನುಭವ ಹಾಗೂ ಹದಿನೇಳು ವರ್ಷ ಪದವಿಪೂರ್ವ ಕಾಲೇಜಿನಲ್ಲಿ ಬೋಧಕರಾಗಿದ್ದರು. ಇವರಿಗೆ ಆಡಳಿತ ನಿರ್ವಹಣಾ ಅನುಭವವೂ ಇದೆ. ಇವರು ಕರ್ನಾಟಕ ಇತಿಹಾಸ ಅಕಾಡೇಮಿ ಹಾಗೂ ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ಗಳ ವಾರ್ಷಿಕ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾರೆ. ಪ್ರಾಚ್ಯ ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ ನಡೆಸುವ ಜಿಲ್ಲಾ ಸಮ್ಮೇಳನಗಳಲ್ಲಿ ಹಾಗೂ ಹಂಪಿ ಉತ್ಸವಗಳಲ್ಲಿ ಭಾಗವಹಿಸಿ ಇಪ್ಪತ್ತಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇವರು ಎಂ.ಎ. ಓದುವಾಗ ಇತಿಹಾಸ ಸಂಘದ ಪ್ರತಿನಿಧಿಯಾಗಿ ಸಂಘದ ಮೂಲಕ ಪ್ರಕಟವಾಗುತ್ತಿದ್ದ ಇತಿಹಾಸ ಸಂಚಿಕೆಯಲ್ಲಿ ಇವರು ಹಲವಾರು ಲೇಖನಗಳನ್ನು ಬರೆದರು. ಇವರಿಗೆ ಡಾ॥ ಎಂ.ವಿ. ಶ್ರೀನಿವಾಸ್ ಅವರ ಒಡನಾಟವಿದ್ದು ಬರವಣಿಗೆಗೆ ಪ್ರೇರಣೇಯಾಯಿತು. ಮೈಸೂರು ವಿಶ್ವವಿದ್ಯಾಲಯ ಗ್ರಂಥಾಲಯ ಅಧ್ಯಯನಕ್ಕೆ ಅನುಕೂಲವಾಯಿತು. ಶಿರಾ ತಾಲೂಕಿನ ಇತಿಹಾಸ, ಶಾಸನಗಳ ಅಧ್ಯಯನ ಮಾಡಿದರು. ರಾಜ್ಯ, ಅಂತರ ರಾಷ್ಟ್ರೀಯ ಮಟ್ಟದ ಉಪನ್ಯಾಸ ಗೋಷ್ಠಿಗಳಲ್ಲಿ ಭಾಗವಹಿಸಿ ಸಂಶೋಧನ ಪ್ರಬಂಧಗಳನ್ನು ಮಂಡಿಸಿದರು. ತುಮಕೂರು ಜಿಲ್ಲೆಯ ನರಸಿಂಹ ಸ್ವಾಮಿ ದೇವಸ್ಥಾನಗಳು, ಸಾದರು, ಮಧ್ಯಕಾಲೀನ ಕರ್ನಾಟಕದಲ್ಲಿ ಆಹಾರ ಪಾನೀಯ ಪಿಹೆಚ್.ಡಿ. ಪ್ರಬಂಧ ಹಾಗೂ ಇತರ ಸಂಶೋಧನಾ ಲೇಖನಗಳ ಮುದ್ರಣ ಕಾರ್ಯ ನಡೆದಿವೆ.

ಪ್ರಕಟಿತ ಕೃತಿಗಳು:

ಇತಿಹಾಸ – ಶಿರಾ ತಾಲೂಕು ದರ್ಶನ, ಶಿರಾ ತಾಲೂಕಿನ ಸ್ಮಾರಕಗಳು ಹಾಗೂ ಶಾಸನಗಳು.

ಲಭಿಸಿರುವ ಪ್ರಶಸ್ತಿಗಳು:

೧. ಶಿರಾ ಸೀಮೆ ವೇದಿಕೆಯ ಸನ್ಮಾನ.

೨. ಹಲವಾರು ಸಂಘ ಸಂಸ್ಥೆಗಳ ಸನ್ಮಾನ.

ವ್ಯಕ್ತಿ ಪರಿಚಯ

ನಯನಾ ಹೆಗಡೆ ಬನಗೆರೆ

೧.	ಹೆಸರು	:	ನಯನಾ ಹೆಗಡೆ ಬನಗೆರೆ
೨.	ಕಾವ್ಯನಾಮ	:	ಕನ್ನಿಕಾ
೩.	ಹುಟ್ಟಿದ ಸ್ಥಳ ದಿನಾಂಕ	:	ಶಿರಸಿ, ೧೭-೦೮-೧೯೮೮.
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ವಾಣಿಜ್ಯ ಪದವೀಧರೆ.
೬.	ವೃತ್ತಿ	:	ಇಲ್ಲ
೭.	ಕೌಟುಂಬಿಕ	:	ಇಲ್ಲ
೮.	ಸದ್ಯದ ವಿಳಾಸ	:	ನಯನಾ ಹೆಗಡೆ ಬನಗೆರೆ, ಅಂಚೆ, ಮೆಣಸಿ, ಶಿರಸಿ, ಉತ್ತರ ಕನ್ನಡ. - ೫೮೧೩೩೬
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೭೮೩-೭೪೬೮೩೩, ೯೪೮೧೮೬೭೦೦೬, ೭೨೫೯೭೧೫೯೭೩
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬನಗೆರೆಯಲ್ಲಿ ಜನಿಸಿದರು. ಇವರು ಶ್ರೀ ನರಸಿಂಹ ಸುಬ್ರಾಯ ಹೆಗಡೆ ಮತ್ತು ಶ್ರೀಮತಿ ನರಸಿಂಹ ಹೆಗಡೆ ದಂಪತಿಗಳ ಪುತ್ರಿ. ತಂದೆ ವೃತ್ತಿಯಿಂದ ಕೃಷಿಕರು. ತಂದೆ-ತಾಯಿಗಳು ಈಕೆಗಿಟ್ಟ ಹೆಸರು ಕನ್ನಿಕಾ. ಈಕೆಯ ಕಿರಿಯ ಪ್ರಾಥಮಿಕ ಶಿಕ್ಷಣ ಶಾಲೆ ಕಂಬೇಗದ್ದೆ ಹಾಗೂ ಹಿರಿಯ ಪ್ರಥಾಮಿಕ ಶಾಲೆ ನರಸನಗದ್ದೆ. ಪ್ರೌಢ ಶಿಕ್ಷಣ ಎಮ್.ಇ.ಎಸ್. ಆಂಗ್ಲ ಮಾಧ್ಯಮ ಶಾಲೆ ಶಿರಸಿ. ಪದವಿ ಪೂರ್ವವೂ ಅದೇ ಎಮ್.ಇ.ಎಸ್. ಕಾಲೇಜಿನಲ್ಲಿ. ವಾಣಿಜ್ಯ ಪದವಿ ಜೆ.ಎಸ್.ಎಸ್. ಕಾಲೇಜು ಧಾರವಾಡ. ಮೂಡಬಿದ್ರೆಯಲ್ಲಿ ಆಳ್ವಾಸ್ ಕಾಲೇಜಿನಲ್ಲಿ ಎಂ.ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿನಿ. ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ 'ಸ್ಕೌಟ್ ಕ್ಯಾಂಪ್'ನಲ್ಲಿ ಭಾಗವಹಿಸಿ ಚಿನ್ನದ ಪದಕಗಳಿಸಿದ್ದಾರೆ. ಹನ್ನೊಂದನೇ ವಯಸ್ಸಿನಲ್ಲಿರುವಾಗ ಮಕ್ಕಳಿಂದ ಮಕ್ಕಳಿಗಾಗಿ ಪ್ರಕಟವಾಗುತ್ತಿದ್ದ ಬಾಲ ಸರಸ್ವತಿ ಪ್ರಕಾಶನದ ಅರಳು ಪ್ರತಿಭೆಗಾಗಿ ಆರಂಭವಾದ ಬರವಣಿಗೆಯ ಪ್ರವೃತ್ತಿ ಬೆಳೆಯಲವಕಾಶವಾಯಿತು. ನೃತ್ಯ, ಸಂಗೀತ, ಹಾಗೂ ಕರಕುಶಲ ಕಲೆಗಳಲ್ಲಿ ವಿಶೇಷ ಆಸಕ್ತಿ. ಕ್ರಮೇಣ ಕವನ, ಚುಟುಕ ಹಾಗೂ ಸಣ್ಣಕಥೆಗಳನ್ನು ಬರೆಯ ತೊಡಗಿದರು. ಅಜ್ಜ-ಅಜ್ಜಿಯರ ಸಾವು ಇವರ ಮೇಲೆ ಪ್ರಭಾವ ಬೀರಿತು. ತಂದೆ-ತಾಯಿಯರ ಪ್ರೀತಿಯ ಆಳದ ಅರಿವಾಯಿತು. ಅಕ್ಕನ ಮನಸ್ಸು ಮಮಕಾರದ ಅರ್ಥವನ್ನು ಕಲಿಸಿತು. ತಾರುಣ್ಯಕ್ಕೆ ಅಡಿ ಇಟ್ಟ ಈಕೆಗೆ ಪ್ರಕೃತಿಯಲ್ಲಿನ ವಿಸ್ಮಯಗಳು ಕಾಡತೊಡಗಿದವು. ಮನಸ್ಸಿನ ಮೇಲೆ ಪರಿಣಾಮವಾಗಿ ಅಧಿಕ ದುಃಖ ಅಧಿಕ ಸಂತೋಷವಾದಾಗ ಹೊಸ ಹೊಸ ಭಾವಗಳನ್ನು ಹುಟ್ಟುಹಾಕುವ ಪ್ರಜ್ಞೆ ಪ್ರತಿಭೆಯ ರೂಪದಲ್ಲಿ ಹೊರ ಹೊಮ್ಮಿತು. ಈ ಪ್ರತಿಭೆಗೆ ಜೀವ ತುಂಬುವವಳೆ ಕವಯತ್ರಿ. ಕವಯತ್ರಿಯ ಕರ್ಮವೇ ಕಾವ್ಯ. ಅದು ಈಕೆಯಲ್ಲಿ ರೂಪಗೊಂಡಿತು. ಪ್ರತಿಭೆಯೆಂದರೆ ಹೃದಯದ ಕಣ್ಣು. ಲೋಕದ ವಸ್ತು ಕವಯತ್ರಿಯ ಕಣ್ಣಿಗೆ ವಿಶೇಷವಾಗಿ ಕಾಣುತ್ತದೆ. ರಮಣೀಯವಾಗಿ ಕಾಣುತ್ತದೆ. ಕಾವ್ಯ ಹುಟ್ಟುವುದೇ ಹಾಗೆ. 'ಪ್ರಜ್ಞಾ ನವನವೋಲ್ಲೇಖ ಶಾಲಿನೀ ಪ್ರತಿಭಾ' ಹೊಸ ಹೊಸ ಭಾವಗಳನ್ನು ಕಾಣುವ ಕಟ್ಟುವ ಪ್ರಜ್ಞೆಯೇ ಪ್ರತಿಭೆ. ಅದು ಕವಿ ವಾಣಿಯಾಗಿ ಅಭಿವ್ಯಕ್ತಿಗೊಳ್ಳುವುದೇ ಕವಿತೆ. ಈಕೆಯ ಕವಿತೆಗಳನ್ನು ಓದಿದ ಡಾ|| ಜಿ.ಎಮ್. ಹೆಗಡೆ 'ಅವನಿ ರಸಿಕರ ರಂಗ'ಕ್ಕೆ ಪರಿಚಯಿಸಿದರು. ಪ್ರಥಮ ಸಂಕಲನ ಕಾವ್ಯ ಕನ್ನಿಕಾ ಅವತರಿಸಿದಳು.

ಪ್ರಕಟಿತ ಕೃತಿಗಳು:
ಕವನ ಸಂ. – ಕಾವ್ಯ ಕನ್ನಿಕಾ.

ವ್ಯಕ್ತಿ ಪರಿಚಯ

ನರಸಪ್ಪ. ಕೆ.

೧.	ಹೆಸರು	: ಕೆ. ನರಸಪ್ಪ
೨.	ಕಾವ್ಯನಾಮ	: 'ಕರಿದಾಸರಹಳ್ಳಿ ನರಸಪ್ಪ'
೩.	ಹುಟ್ಟಿದ ಸ್ಥಳ ದಿನಾಂಕ	: ಕರಿದಾಸರಹಳ್ಳಿ, ೦೧-೦೬-೧೯೬೮.
೪.	ಜಿಲ್ಲೆ - ರಾಜ್ಯ	: ತುಮಕೂರು, ಕರ್ನಾಟಕ.
೫.	ವಿದ್ಯಾಭ್ಯಾಸ	: ದ್ವಿತೀಯ ಪಿ.ಯು.ಸಿ.
೬.	ವೃತ್ತಿ	: ಮುದ್ರಣಾಲಯದ ಮಾಲೀಕರು.
೭.	ಕೌಟುಂಬಿಕ	: ಪತ್ನಿ; ರತ್ನಮ್ಮ. ಇಬ್ಬರು ಪುತ್ರಿಯರು, ಇಬ್ಬರು ಪುತ್ರರು.
೮.	ಸದ್ಯದ ವಿಳಾಸ	: ಕೆ ನರಸಪ್ಪ, ಬರಗೂರು, ಸಿರಾ ತಾಲೂಕು - ೫೭೨೧೧೩
೯.	ಖಾಯಂ ವಿಳಾಸ	: ನಂ. ೩೯೮, 'ಅನುಭವ ಮಂಟಪ', ಶ್ರೀ ಲಕ್ಷ್ಮೀನರಸಿಂಹ ನಿಲಯ, ಬರಗೂರು ಸಿರಾ ತಾ. ತುಮಕೂರು.
೧೦.	ದೂರವಾಣಿ ಸಂಖ್ಯೆ	: ೭೭೬೦೬೨೯೯೧೬
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ತುಮಕೂರು ಜಿಲ್ಲೆ ಕರಿದಾಸರಹಳ್ಳಿಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಹುಟ್ಟೂರಿನಲ್ಲೇ. ಮಾಧ್ಯಮಿಕ ಶಿರಾ. ಪದವಿ ಪೂರ್ವ ತುಮಕೂರು. ಉದ್ಯೋಗದ ಅಲೆದಾಟವಿಲ್ಲ. ೧೯೮೯ರಲ್ಲಿ ಬರಗೂರುನಲ್ಲಿ ಸ್ವಯಂ ಉದ್ಯೋಗ ಯೋಜನಯಡಿ ಸಾಲ ಪಡೆದು ರವಿ ಮುದ್ರಣಾಲಯ ಪ್ರಾರಂಭಿಸಿದರು. ೨೦೦೪ರಲ್ಲಿ ರವಿ ಕಂಪ್ಯೂಟರ್ ತರಬೇತಿ ಕೇಂದ್ರ ಪ್ರಾರಂಭಿಸಿದರು. ಶಾಲಾದಿನಗಳಲ್ಲಿಯೇ ಸಾಹಿತ್ಯ ರಚನೆಯಲ್ಲಿ ಆಸಕ್ತಿ ಯುಂಟಾಯಿತು. ಕಥೆ, ಕವನ, ಕಾದಂಬರಿ ರಚಿಸತೊಡಗಿದರು. ನಾಟಕ ರಚಿಸಿದರು. ಸಮಾಜ ಸೇವಕರಾದ ಇವರು ಗ್ರಾಮೀಣ ಬಡ ಜನತೆಯ ಅನುಕೂಲಕ್ಕಾಗಿ ೨೦೦೭ರಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಶೈಕ್ಷಣಿಕ ಸಮಾಜ ಸೇವಾ ಚಾರಿಟಬಲ್ ಟ್ರಸ್ಟ್ ಸ್ಥಾಪಿಸಿದರು. ಸ್ಥಾಪಕ ಅಧ್ಯಕ್ಷರಾದರು. ಕಣ್ಣಿನ ಆರೋಗ್ಯ ತಪಸಣಾ ಶಿಬಿರ ನಡೆಸಿದರು. ತಾಲೂಕು, ಜಿಲ್ಲಾ ಹಾಗೂ ವಿಭಾಗ ಮಟ್ಟದ ಕವಿಗೋಷ್ಠಿಗಳಲ್ಲಿ ಭಾಗವಹಿಸುತ್ತಾರೆ. ಪ್ರೊಫೆಸರ್ ಬರಗೂರ್, ಡಾ|| ಸಿದ್ದಲಿಂಗಯ್ಯ, ಡಾ|| ಎಲ್. ಹನುಮತಯ್ಯ, ಡಾ|| ಚಿಕ್ಕಣ್ಣ ಎಣ್ಣೆಕಟ್ಟೆ, ದಲಿತ ಕವಿ ಕೆ.ಬಿ. ಸಿದ್ದಯ್ಯ, ದೊಡ್ಡ ಬಾಣಗೆರೆ ಮಾರಣ್ಣ, ಡಾ|| ಡಿ.ವಿ. ಚಂದ್ರಪ್ಪ ಮುಂತಾದ ಸಾಹಿತಿಗಳು ಇವರ ಮೇಲೆ ಪ್ರಭಾವ ಬೀರಿದ್ದಾರೆ. ಇವರ ಬರೆಹಗಳು ಪ್ರಜಾ ಜಗತಿ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕಳೆದ ಒಂದು ದಶಕದಿಂದ ಇವರು ಸಾಹಿತ್ಯ ಸೇವೆಯಲ್ಲಿ ತೊಡಗಿ ಹಲವಾರು ಸಭೆ ಸಮಾರಂಭಗಳಲ್ಲಿಯೂ ಭಾಗವಹಿಸಿದ್ದಾರೆ. ಇವರು ೨೦೦೦ ದಿಂದ ೨೦೦೫ ರವರಗೆ ಶಿರಾ ತಾಲೂಕು ಪಂಚಾಯಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಶಿರಾ ತಾಲೂಕು ಹುಲಿಕುಂಟೆ ಹೊಬಳಿ ಘಟಕದ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇವರದೇ ಆದ ಉದಯ ಪ್ರಕಶಾನವಿದೆ.

ಪ್ರಕಟಿತ ಕೃತಿಗಳು:
ಕಾದಂಬರಿ – ದಲಿತ, ನೋವುಂಡವರು. **ಕವನ ಸಂ.** – ಮೌನ ಮಾತಾಡಿದಾಗ.
ನಾಟಕ – ಗೌರಿ ಅರ್ಥಾತ್ ಒಂದಾದ ಹೃದಯಗಳು.

ಲಭಿಸಿರುವ ಪ್ರಶಸ್ತಿಗಳು:
೧. ಶಿರಾದ ಕರ್ನಾಟಕ ಜನಜಾಗೃತಿ ಕಲಾ ತಂಡದ ಸನ್ಮಾನ.
೨. ಶ್ರೀ ಬಾಪೂಜಿ ಯುವಕ ಸಂಘದ ಸನ್ಮಾನ.
೩. ಶಿರಾ ಗಡಿನಾಡ ಜಾನಪದ ಸಂಪರ್ಕ ಕೇಂದ್ರದ ಸನ್ಮಾನ.
೪. ಜ್ಞಾನಗಂಗಾ ಪ್ರಕಶಾನ ದೊಡ್ಡ ಬಾಣಗೆರೆ ಸನ್ಮಾನ.
೫. ಸಿರಿ ಸಂಪನ್ನ ಸಮಾನ ಮನಸ್ಕರ ವೇದಿಕೆ ಶಿರಾ ಸನ್ಮಾನ.

ವ್ಯಕ್ತಿ ಪರಿಚಯ

ನವೀನ ಭಟ್ಟ

೧. ಹೆಸರು : ನವೀನ ಭಟ್ಟ

೨. ಕಾವ್ಯನಾಮ : 'ಗಂಗೋತ್ರಿ'

೩. ಹುಟ್ಟಿದ ಸ್ಥಳ ದಿನಾಂಕ : ಶೇವಕಾರ, ಅಂಕೋಲಾ ತಾ. ೧೫-೭-೧೯೮೭.

೪. ಜಿಲ್ಲೆ - ರಾಜ್ಯ : ಉತ್ತರಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎ., ಸ್ನಾತಕೋತ್ತರ (ನಡೆಯುತ್ತಿದೆ)

೬. ವೃತ್ತಿ : ವಿದ್ಯಾರ್ಥಿ

೭. ಕೌಟುಂಬಿಕ : ಅವಿವಾಹಿತ

೮. ಸದ್ಯದ ವಿಳಾಸ : ರಾಜೀವಗಾಂಧಿ ಕ್ಯಾಂಪಸ್, ಮೆಣಸೆ ಅಂಚೆ,
ಶೃಂಗೇರಿ, ಚಿಕ್ಕಮಗಳೂರು.

೯. ಖಾಯಂ ವಿಳಾಸ : 'ಗಂಗೋತ್ರಿ', ಶೇವಕಾರ, ಗುಳ್ಳಾಪುರ ಅಂಚೆ,
ಯಲ್ಲಾಪುರ, ಉ.ಕ.

೧೦. ದೂರವಾಣಿ ಸಂಖ್ಯೆ : ೯೧೬೪೫೨೯೯೦೫, ೯೪೮೦೨೬೨೦೦೫

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲೂಕು ಶೇವಕಾರ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣದಿಂದ ಪದವಿ ಪೂರ್ವದವರಗೆ ಅದೇ ಊರು. ಶಾಲಾ ದಿನಗಳಲ್ಲಿಯೇ ಸಾಹಿತ್ಯ ಬಗ್ಗೆ ಒಲವು. ಕಥೆ ಕಾದಂಬರಿ ಅಧ್ಯಯನ. ಪ್ರೇರಣೆಯಿಂದ ಕಾವ್ಯ ರಚನೆ. ಚಿತ್ರ ಕಲೆ ಹವ್ಯಾಸ. ಇವರು ಓದಿದ್ದೆಲ್ಲ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲೇ. ನಂತರದ ಓದು ಲಕ್ಷ್ಮೀನರಸಿಂಹ ಸಂಸ್ಕೃತ ಶಿಕ್ಷಣ ಸಂಸ್ಥೆ, ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ಶೃಂಗೇರಿ. ಅಡಿಗರು, ಕುವೆಂಪು ಹಾಗೂ ಬೇಂದ್ರೆಯವರಿಂದ ಪ್ರಭಾವಿತರಾದರು. ಜಿಡ್ಡು ಕೃಷ್ಣಮೂರ್ತಿ ಮತ್ತು ಓಶೋ ರಜನೀಶರ ಬರೆಹಗಳಿಂದಲೂ ಸ್ಫೂರ್ತಿ ಪಡೆದರು. ಇವರನ್ನು ಬರೆಯಲು ಪ್ರಚೋದಿಸಿದ ಮತ್ತೊಂದು ಕೃತಿ 'ಯಯಾತಿ' ಇವರ ಬರೆಹಗಳು ಧ್ಯೇಯ ನಿಷ್ಠ ಪತ್ರಕರ್ತ, ಲೋಕಧ್ವನಿ, ಕರಾವಳಿ, ಮುಂಜಾವು, ಕರ್ಮವೀರ, ಮಂಗಳ, ಸಂಯುಕ್ತ ಕರ್ನಾಟಕ, ಮಯೂರ, ಸುಧಾ, ತರಂಗಗಳಲ್ಲಿ ಪ್ರಕಟವಾಗುತ್ತಿವೆ. ಇವರ ಮೊದಲ ಕವನ ಪ್ರಕಟವಾದದ್ದು ವಿಕ್ರಮ ಪತ್ರಿಕೆಯಲ್ಲಿ. ಮಿತ್ರರ ಜೊತೆಗೂಡಿ ಚೈತ್ರ ರಶ್ಮಿ ಸಂಘ ಪ್ರಾರಂಭಿಸಿ ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮ-ಗಳನ್ನು ಮಾಡುತ್ತಿರುತ್ತಾರೆ. ಇವರು ೨೦೦೯ರಲ್ಲಿ ಕುಪಳ್ಳಿಯಲ್ಲಿ ನಡೆದ ಕುವೆಂಪು ಕಾವ್ಯೋತ್ಸವದಲ್ಲಿ ನಡೆದ ಕಾವ್ಯ ಕಮ್ಮಟ, ೨೦೧೦ರಲ್ಲಿ ಕುಮಟಾದಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅದೇ ಸಾಲಿನಲ್ಲಿ ಸಾಗರ ತಾಲೂಕಿನ ಉಪ್ಪಳ್ಳಿಯಲ್ಲಿ ಮಂಥನ ಬಳಗ ಆಯೋಜಿಸಿದ್ದ ಮೂರು ದಿನಗಳ ಕಮ್ಮಟದಲ್ಲಿ ಹಾಗೂ ಮಡಕೇರಿಯ ಕುಶಾಲ ನಗರದಲ್ಲಿ ಐದು ದಿನಗಳ ಕಾಲ ನಡೆದ ಯುವ ವಿಜ್ಞಾನ ಬರೆಹಗಾರರ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ.'ಅಕ್ಕ'ದಿಂದ ಪ್ರಕಟವಾದ ಇಪ್ಪತ್ತು ವಿವಿಧ ಕಥೆಗಾರರ ಕಥಾಸಂಕಲನದಲ್ಲಿ ಇವರದೂ ಕಥೆ ಸೇರಿದೆ.

ಪ್ರಕಟಿತ ಕೃತಿಗಳು

ಕವನ ಸಂ. – ಅಂಟಿಕೊಳ್ಳದ ಚಿತ್ರಗಳು.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೯ – ವಿಕ್ರಮ ಪತ್ರಿಕೆಯ ಕಥಾ ಸ್ಪರ್ಧೆಯಲ್ಲಿ ಬಹುಮಾನ.

೨. ೨೦೧೦ – ಅಕ್ಕ ಸಂಸ್ಥೆಯ ೬ನೇ ವಿಶ್ವ ಕನ್ನಡ ಸಮ್ಮೇಳನದ ಕಥಾ ಸ್ಪರ್ಧೆಯಲ್ಲಿ ಬಹುಮಾನ.

೩. ೨೦೧೦ – ರಲ್ಲಿ ಅಂಕೋಲದಲ್ಲಿ ಹವ್ಯಕ ಸಮಾವೇಶದಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ

ನಾಗಭೂಷಣ್. ನಂ.

೧. ಹೆಸರು : ನಂ. ನಾಗಭೂಷಣ್.

೨. ಕಾವ್ಯನಾಮ : ಇರುವುದಿಲ್ಲ.

೩. ಹುಟ್ಟಿದ ಸ್ಥಳ ದಿನಾಂಕ : ಬೆಂಗಳೂರು, ೧೯-೦೨-೧೯೩೯.

೪. ಜಿಲ್ಲೆ - ರಾಜ್ಯ : ಬೆಂಗಳೂರು, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎಸ್.ಸಿ.

೬. ವೃತ್ತಿ : ವಿಮಾನ ಕಾರ್ಖಾನೆ ನಿವೃತ್ತ ನೌಕರರು

೭. ಕೌಟುಂಬಿಕ : ಪತ್ನಿ; ಶ್ರೀಮತಿ ಬಿ.ಕೆ ನಾರಯಣಮ್ಮ. ಇಬ್ಬರು ಪುತ್ರಿಯರು. ಒಬ್ಬ ಪುತ್ರ.

೮. ಸದ್ಯದ ವಿಳಾಸ : ೫೩೧, ೪ನೇ ಅಡ್ಡರಸ್ತೆ, ೯ನೇ ಮುಖ್ಯರಸ್ತೆ, ಹೆಚ್.ಎ.ಎಲ್. ೨ನೇ ಹಂತ. ಇಂದಿರಾನಗರ, ಬೆಂಗಳೂರು-೫೬೦೦೦೮

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೦-೫೨೯೩೬೬೪

೧೧. ಹಸ್ತಾಕ್ಷರ (ಸಹಿ) : ನಂ. ನಾಗಭೂಷಣ್.

ಸಾಹಿತ್ಯ ಪರಿಚಯ

ಇವರು ಬೆಂಗಳೂರಿನಲ್ಲಿ ಜನಿಸಿದರು. ಇವರು ಶ್ರೀ ಪಿ. ನಂಜುಂಡಪ್ಪ ಶ್ರೀಮತಿ ಲಕ್ಷಮ್ಮ ದಂಪತಿಗಳ ಪುತ್ರ. ತಂದೆ ವಿಮಾನ ಕಾರ್ಖಾನೆ ನೌಕರರು. ಕಾರ್ಖಾನೆ ನಿವಾಸದಲ್ಲಿ ಬಾಲ್ಯ. ಅಲ್ಲೇ ಪ್ರಾಥಮಿಕ ಶಿಕ್ಷಣ. ಬೆಂಗಳೂರು ನ್ಯಾಷನಲ್ ಕಾಲೇಜಿನಲ್ಲಿ ಮುಂದಿನ ವಿದ್ಯಾಭ್ಯಾಸ. ಶಿಸ್ತಿನ ವಾತವರಣದಲ್ಲಿ ಶಿಕ್ಷಣ. ಶಾಲಾ ದಿನಗಳಲ್ಲಿಯೇ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳ ಆರಂಭ. ವ್ಯಕಿತ್ವ ವಿಕಾಸಕ್ಕೆ ಪೂರಕ. ಕಾಲೇಜು ದಿನಗಳಿಂದಲೇ ಕವನ ರಚನೆ. ಸೆಂಟ್ರೆಲ್ ಕಾಲೇಜಿನಲ್ಲಿ ಮುಂದಿನ ಓದು. ಪ್ರಾಧ್ಯಾಪಕ ಎಂ.ವಿ.ಸೀತಾರಾಮಯ್ಯ, ಜಿ.ಪಿ. ರಾಜರತ್ನಂ ಸಂಪರ್ಕ ಕಾವ್ಯರಚನೆಗೆ ಮಾರ್ಗದರ್ಶನ. ೧೯೬೧ರಲ್ಲಿ ವಿಜ್ಞಾನ ಪದವೀಧರ. ವಿವಿಧ ಸಂಸ್ಥೆಗಳಲ್ಲಿ ತಾತ್ಕಾಲಿಕ ಸೇವೆ. ೧೯೬೪ರಲ್ಲಿ ವಿಮಾನ ಕಾರ್ಖಾನೆಯಲ್ಲಿ ನೌಕರರಾಗಿ ವೃತ್ತಿ ಜೀವನ ಆರಂಭ. ಅನ್ಯ ಭಾಷಿಗರ ಪ್ರಾಬಲ್ಯವನ್ನು ತಡೆಯಲು 'ಕನ್ನಡ ಸೇವಾ ಸಮಾಜ' ಸಂಸ್ಥೆಯ ಸ್ಥಾಪನೆ. ಕುವೆಂಪು, ಕೆ.ಎಸ್. ನರಸಿಂಹಸ್ವಾಮಿಯವರ ಕಾವ್ಯ ಪ್ರೇಮಿ. ಉತ್ತಮ ಸಮಾಜ ಸಂಘಟಕರು. ಹಾಗೂ ಸಮಾಜ ಸೇವಾ ಕರ್ತರು. ಇವರು ಕವಿತೆ ಲೇಖನಗಳು ಮುಖ್ಯವಾಗಿ ಸಂದರ್ಶನಗಳು ಗೋಕುಲ, ಪ್ರಜಾಮತ, ಸುಧಾ, ಗೆಳತಿ ವಾರಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸ್ಥಳ ಪರಿಚಯದ ಬಗ್ಗೆಯೂ ಇವರು ಲೇಖನಗಳನ್ನು ಬರೆದಿದ್ದಾರೆ. ಕನ್ನಡ ಸಂಘದಲ್ಲಿ ಪುಸ್ತಕ ಬಂಢಾರ ಪ್ರರಂಭಿಸಿದರು. ೨೬ ವರ್ಷಗಳ ಕಾಲ ಇವರು ಸತತವಾಗಿ ಕನ್ನಡೇತರರಿಗೆ ಕನ್ನಡ ಕಲಿಸಿದ್ದಾರೆ. ೧೯೯೦ರಿಂದ ೧೨ ವರ್ಷಗಳ ಕಾಲ 'ಬಲಿಜವಾಣಿ' ಪತ್ರಿಕೆಯ ಗೌರವ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು. ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಇವರ ಬರೆಹಗಳು ಪ್ರಸರವಾಗಿವೆ. ೧೯೬೦ ರಿಂದ ೮೫ರವರಗೆ ವಿಮಾನಪುರದ ಕನ್ನಡ ಸಂಘದ ಸ್ಥಾಪಕರಾಗಿ, ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಹಾಗೂ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕನ್ನಡ ಚಳವಳಿ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ೧೯೭೦ರಲ್ಲಿ ವಿಮಾನ ಕಾರ್ಖಾನೆಯಲ್ಲಿ ಲಲಿತ ಕಲಾ ಸಂಘ ಸ್ಥಾಪಿಸಿ ಹವ್ಯಾಸಿ ಕಲಾವಿದರನ್ನು ಪ್ರೋತ್ಸಾಹಿಸಿದ್ದಾರೆ. ಹಲವಾರು ಸ್ಮರಣ ಸಂಚಿಕೆಗಳ ಸಂಪಾದಕರಾಗಿದ್ದಾರೆ. ಹೊಂಬೇಗೌಡ ನಗರದ ಶ್ರೀ ರಾಮ ಸೇವಾ ಮಂಡಲಿಯಲ್ಲಿ ೧೮ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ವರ್ತೂರು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ. ಯೋಗಿನಾರೇಯಣ ಯತೀಂದ್ರರ ಸಂಸ್ಥೆಯ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. –ವಿಮಾನ ಯಾನ, ನೌಕಾಯಾನ.

ಲಭಿಸಿರುವ ಪ್ರಶಸ್ತಿಗಳು:
೧. ಜ್ಞಾನಮಂದಾರ ಅಕಾಡೆಮಿಯ ಸಮಾಜ ರತ್ನ ಪ್ರಶಸ್ತಿ. ೨. ಕನ್ನಡ ಗೆಳೆಯರ ಬಳಗದ ಕುವೆಂಪು ಕವಿರತ್ನ ಪ್ರಶಸ್ತಿ. ೩. ಉಡುಪಿಯ ೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಶ್ರೀ ಪ್ರಶಸ್ತಿ. ೪. ಬೆಂಗಳೂರಿನ ಹೈದರಾಬಾದ್ ಕರ್ನಾಟಕ ನಾಗರಿಕ ವೇದಿಕೆ ನೃಪತುಂಗ ಪ್ರಶಸ್ತಿ. ೫. ಸಂಗೀತ ಸಾಂಸ್ಕೃತಿಕ ಸಂಸ್ಥೆಯ ಜ್ಞಾನ ಸರೋವರ ಪ್ರಶಸ್ತಿ.

ವ್ಯಕ್ತಿ ಪರಿಚಯ

ನಾಗರಾಜ ಬಣಕಾರ

೧.	ಹೆಸರು	:	ನಾಗರಾಜ ಬಣಕಾರ್.
೨.	ಕಾವ್ಯನಾಮ	:	ಸುನಾಬಿ, ಆದಿಶೇಷ.
೩.	ಹುಟ್ಟಿದ ಸ್ಥಳ ದಿನಾಂಕ	:	ಕೊಟ್ಟೂರು. ೧-೧-೧೯೮೪
೪.	ಜಿಲ್ಲೆ – ರಾಜ್ಯ	:	ಬಳ್ಳಾರಿ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ., ಬಿ.ಇಡಿ., (ಎಂ.ಎ. ಅರ್ಥ ಶಾಸ್ತ್ರ)
೬.	ವೃತ್ತಿ	:	ವಿದ್ಯಾಭ್ಯಾಸ ಜೊತೆಗೆ 'ಸಂಕಲ್ಪ ಮಾಸ' ಪತ್ರಿಕೆಯ ವರದಿಗಾರ.
೭.	ಕೌಟುಂಬಿಕ	:	ಅವಿವಾಹಿತ
೮.	ಸದ್ಯದ ವಿಳಾಸ	:	ನಾಗರಾಜ ಬಣಕಾರ್, S/o, ತಿಪ್ಪೇಸ್ವಾಮಿ ಬಣಕಾರ್, ಅಕ್ಕಮಹಾದೇವಿ ಗುಡಿ ಹತ್ತಿರ, ಕೊಟ್ಟೂರು ಅಂಚೆ, ಕೂಡ್ಲಗಿ ತಾ., ಬಳ್ಳಾರಿ-೫೮೩೧೩೪
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೪೪-೯೯೮೦೫೮೦
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣದಿಂದ ಬಿ.ಇಡಿ. ವರಗೆ ಕೊಟ್ಟೂರಿನಲ್ಲೇ ವ್ಯಾಸಂಗ ಮಾಡಿದ್ದಾರೆ. ಬೆಂಗಳೂರು ಮುಕ್ತ ವಿಶ್ವವಿದ್ಯಾಲಯದಿಂದ ಅರ್ಥ ಶಾಸ್ತ್ರದಲ್ಲಿ ಎಂ.ಎ. ಪದವಿಗಳಿಸಿದ್ದಾರೆ. ಇವರು ಶ್ರೀ ಬಣಕಾರ್ ತಿಪ್ಪೇಸ್ವಾಮಿ ಮತ್ತು ಶ್ರೀಮತಿ ಸೌಭಾಗ್ಯ ದಂಪತಿಗಳ ಮಗ. ಇವರು ಸದ್ಯ ಕೊಟ್ಟೂರಿನ ಭಾಗೀರಥಿ ಟಿ. ಮರುಳು ಸಿದ್ದನಗೌಡ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರಾಗಿದ್ದಾರೆ. ಕೆ.ಎಸ್. ನರಸಿಂಹ ಸ್ವಾಮಿ, ಲಂಕೇಶ್, ಸಿದ್ದಲಿಂಗ ಪಟ್ಟಣ ಶೆಟ್ಟಿ ಇವರ ಕವನಗಳಿಂದ ಪ್ರಭಾವಿತರಾಗಿ ಕವನ ಮತ್ತು ಕಥೆ ಬರೆಯುವ ಆಸಕ್ತಿವುಂಟಾಯಿತು. ಇವರ ಅಜ್ಜ ಬಣಕಾರ್ ಕೊಟ್ರ ಬಸಪ್ಪನವರ ಸಾಹಿತ್ಯ ಪ್ರಭಾವವೂ ಇವರ ಮೇಲಾಗಿದೆ. ಪ್ರಾಥಮಿಕ ಶಾಲೆಯಿಂದಲೇ ಇವರು ಕವನ ರಚನೆಗೆ ತೊಡಗಿದರು. ಗೋವ ದರ್ಪಣ, ಮೊಗವೀರ ಪತ್ರಿಕೆಗಳಲ್ಲಿ ಕವನಗಳು ಪ್ರಕಟವಾಗಿವೆ. ನಂತರ ಇವರ ಬರೆಹಗಳು ಈಗ ಪ್ರಮುಖ ಪತ್ರಿಕೆಗಳಾದ ಕರ್ಮವೀರ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಮಯೂರ, ಓ ಮನಸೇ, ಅಡ್ವೈಸರ್‌ಗಳಲ್ಲಿ ಕವನ ಸಚಿತ್ರ ಪ್ರವಾಸ ಲೇಖನಗಳು ಪ್ರಕಟವಾಗುತ್ತವೆ. ಇವರು ದಸರಾ ಕವಿ ಕಾವ್ಯ ಮೇಳ ಚಿತ್ರದುರ್ಗ, ಯುವ ಬರೆಹಗಾರರ ಶಿಬಿರ ವಿಶ್ವವಿದ್ಯಾಲಯ ಹಂಪಿ, ರಾಜ್ಯ ಮಟ್ಟದ ಕಥಾ ಕಮ್ಮಟ ಅನ್ನಪೂರ್ಣ ಪ್ರಕಾಶನ ಸಿರಿಗೇರಿ ಬಳ್ಳಾರಿ, ರಾಷ್ಟ್ರ ಕವಿ ಕುವೆಂಪು ಜನ್ಮ ದಿನಾಚರಣೆಯ ಪ್ರಯುಕ್ತ ಹೊಸಪೇಟೆಯಲ್ಲಿ ನಡೆದ ಕವಿಗೋಷ್ಠಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕೊಡಗಿನಲ್ಲಿ ನಡೆದ ೨೫ನೆಯ ಜನಪ್ರಿಯ ಉದಯೋನ್ಮುಖ ವಿಜ್ಞಾನ ಲೇಖಕ ಶಿಬಿರ, ಮೈಸೂರಿನಲ್ಲಿ ಸಾಹಿತ್ಯ ಅಕಾಡೆಮಿ ನಡೆಸಿದ ಯುವ ಕವಿಗಳ ಕಾವ್ಯರಚನಾ ಕಮ್ಮಟ, ಗದಗಿನಲ್ಲಿ ಬಾಲ ವಿಕಾಸ ಅಕಾಡೆಮಿ ನಡೆಸಿದ ಮಕ್ಕಳಿಗೆ ಕಥೆ ಹೇಳುವ ಶಿಬಿರ ಮುಂತಾದ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಕವಿಗೋಷ್ಠಿಗಳಲ್ಲಿ ಕಾವ್ಯವಾಚನ ಮಾಡಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಕನಸು ಕರಗುವ ಸಮಯ.

ಲಭಿಸಿರುವ ಪ್ರಶಸ್ತಿಗಳು:
೧. ವಿಶಾಲ ಪ್ರಕಾಶನ ಕೊಪ್ಪಳ ಚುಟುಕ ಕವಿಶ್ರೇಷ್ಠ ಪ್ರಶಸ್ತಿ.
೨. ಮುದ್ದೇ ಬಿಹಾಳ್ ಶ್ರೀ ಗೌರಿ ಪ್ರಕಾಶನದ ಸಾಹಿತ್ಯ ಸ್ಪರ್ಧೆ ಬಹುಮಾನ.
೩. ೨೦೦೬ – ಸಿಹಿ ಪ್ರಕಾಶನ ದಾವಣಗೆರೆ ಕವನ ಸ್ಪರ್ಧೆ ಬಹುಮಾನ.
೪. ೨೦೧೦ – ಕಲಾಕುಂಚ ಸಂಸ್ಥೆ ದಾವಣಗೆರೆ ಕಾವ್ಯ ಸ್ಪರ್ಧೆ ಬಹುಮಾನ.
೫. ೨೦೦೩ – ಸೌಮ್ಯ ಫೌಂಡೇಶನ್ ಕನ್ನಡ ಪ್ರಭ ಸಾಹಿತ್ಯ ಸ್ಪರ್ಧೆ ಬಹುಮಾನ.
೬. ೨೦೧೦ – ಚಿತ್ರದುರ್ಗ ಜಿಲ್ಲಾ ಯುಗಾದಿ ಕವಿಗೋಷ್ಠಿ ಬಹುಮಾನ.

ವ್ಯಕ್ತಿ ಪರಿಚಯ

ನಾರಾಯಣ. ಪಿ.ಎಸ್.

೧. ಹೆಸರು	:	ಪಿ.ಎಸ್. ನಾರಾಯಣ
೨. ಕಾವ್ಯನಾಮ	:	ಇರುವುದಿಲ್ಲ
೩. ಹುಟ್ಟಿದ ಸ್ಥಳ ದಿನಾಂಕ	:	ಕ್ಯೊಲ, ೦೩–೧೧–೧೯೯೭೦.
೪. ಜಿಲ್ಲೆ – ರಾಜ್ಯ	:	ದಕ್ಷಿಣ ಕನ್ನಡ, ಕರ್ನಾಟಕ.
೫. ವಿದ್ಯಾಭ್ಯಾಸ	:	ಪಿ.ಯು.ಸಿ., ಟಿ.ಸಿ.ಹೆಚ್.
೬. ವೃತ್ತಿ	:	ಸಹ ಶಿಕ್ಷಕ
೭. ಕೌಟುಂಬಿಕ	:	ಪತ್ನಿ; ಮಮತ. ಪುತ್ರರು; ಬಾಲ ಸುಬ್ರಹ್ಮಣ್ಯ, ಶಶಾಂಕ.
೮. ಸದ್ಯದ ವಿಳಾಸ	:	ಸಹಶಿಕ್ಷಕ, ಸ.ಕಿ.ಪ್ರಾ.ಶಾಲೆ. ಕುಂಡಾಜೆ. ಅಂಚೆ ರಾಮಕುಂಜ, ಪುತ್ತೂರು ತಾ. ದ.ಕ. ೫೭೪೨೪೧
೯. ಖಾಯಂ ವಿಳಾಸ	:	ಕ್ಯೊಲ ತೋಟ, ಅಂಚೆ; ಕೆ.ಸಿ ಫಾರ್ಮ್, ಪುತ್ತೂರು ತಾ. ದ.ಕ ೫೭೪೨೪೧
೧೦. ದೂರವಾಣಿ ಸಂಖ್ಯೆ	:	೦೮೨೫೧–೨೫೮೨೮೭, ೯೮೮೦೪೭೮೧೮೭, ೯೪೪೯೦೪೯೫೮೭
೧೧. ಹಸ್ತಾಕ್ಷರ (ಸಹಿ)	:	P.S Narayana

ಸಾಹಿತ್ಯ ಪರಿಚಯ

ಇವರು ದಕ್ಷಿಣ ಕನ್ನಡ ಕ್ಯೊಲದಲ್ಲಿ ಜನಿಸಿದರು. ಪಿ.ಯು.ಸಿ. ಓದಿ. ಟಿ.ಸಿ.ಹೆಚ್. ಮಾಡಿ ಪ್ರಾಥಮಿಕ ಶಾಲೆ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯದಲ್ಲಿ ಆಸಕ್ತಿ. ಶಾಲಾ ದಿನಗಳಲ್ಲಿಯೇ ಕವನ ರಚಿಸ ತೊಡಗಿದರು. ಭಕ್ತಿ ಗೀತೆಗಳನ್ನು ಬರೆಯ ತೊಡಗಿದರು. ನಂತರ ಇವರ ಕವನಗಳು ವಾರ್ತಾ ಭಾರತಿ, ಹೊಸದಿಗಂತ ಪತ್ರಿಕೆಗಳ ಮಕ್ಕಳ ಪುಟಗಳಲ್ಲಿ ಪ್ರಕಟವಾದವು. ಪುತ್ತೂರಿನ 'ಸುದ್ದಿ ಬಿಡುಗಡೆ' ದಿನಪತ್ರಿಕೆಯಲ್ಲಿನ 'ಹನಿ ಮಿನಿ' ಅಂಕಣದಲ್ಲಿ ಇವರ ಅನೇಕ ಹನಿಗವನಗಳು ಪ್ರಕಟವಾಗಿವೆ. ದೀಪಾವಳಿ ವಿಶೇಷಾಂಕ ಜಾತ್ರ ವಿಶೇಷಾಂಕಗಳಲ್ಲಿ ಇವರ ಕವನಗಳು ಪ್ರಕಟವಾಗಿವೆ. ಹಾಗೂ ಹೊಸ ದಿಗಂತ ವಿಶೇಷಾಂಕ, ಯುಗಪುರುಷ ಮಾಸ ಪತ್ರಿಕೆ ದಸರಾ ವಿಶೇಷಾಂಕಗಳಲ್ಲಿಯೂ ಇವರ ಬರೆಹಗಳು ಪ್ರಕಟವಾಗಿವೆ. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮಂಗಳೂರು ಇವರು ಪ್ರಕಟಿಸುವ ಶೈಕ್ಷಣಿಕ ಸ್ಪಂದನ - 'ಮಂಗಳ'ದಲ್ಲಿಯೂ ಇವರ ಕವನಗಳು ಪ್ರಕಟವಾಗುತ್ತಿವೆ. ವಿಜಯ ಕರ್ನಾಟಕ ದಿನಪತ್ರಿಕೆಯ ಹನಿ ಕಣಜ ವಿಭಾಗದಲ್ಲಿ ಇವರ ಹನಿಗವನಗಳು, ಫಟಾಫಟ್ ಪ್ರಶ್ನೆಗಳು ಪ್ರಕಟವಾಗುತ್ತವೆ. ಆಕಾಶವಾಣಿ ಮಂಗಳೂರು ಯುವವಾಣಿ ವಿಭಾಗದ ಕವಿತೆಗಳ ಕಣಜ ಕಾರ್ಯಕ್ರಮದಲ್ಲಿಯೂ ಇವರ ಕವಿತೆಗಳು ಪ್ರಕಟವಾಗುತ್ತವೆ. ಆಕಾಶವಾಣಿ ಮಡಕೇರಿಯಲ್ಲಿ ಇವರ ಸಂದರ್ಶನ ಮತ್ತು ಹನಿಗವನ ವಾಚನ, ಕಾರ್ಯಕ್ರಮ ಪ್ರಸಾರವಾಗಿವೆ. ಹಾಗೂ 'ಯುವ ಸಾಹಿತ್ಯ ರಂಗ' ಕಾರ್ಯಕ್ರಮದಲ್ಲಿಯೂ ಇವರ ಕವನ, ಲೇಖನ ಪ್ರಸಾರವಾಗುತ್ತಿವೆ. ಸುದ್ದಿ ಬಿಡುಗಡೆ ಪತ್ರಿಕೆಯಲ್ಲಿ ಪ್ರತಿಭಾರಂಗ ವಿಭಾಗದಲ್ಲಿ ಇವರ ಹನಿಮಿನಿ ಕಾವ್ಯ, ಪರಿಚಯ ಲೇಖನ ಹಾಗೂ ಕವನಗಳು ಪ್ರಸಾರವಾಗಿವೆ. ೨೦೦೮ರಲ್ಲಿ ಪುತ್ತೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರ ಮೊದಲ ಕವನ ಸಂಕಲನ ಬಿಡುಗಡೆಯಾಯಿತು. ೨೦೦೮ ಕ್ಯೊಲ - ಆತೂರು ಶ್ರೀ ಸದಾಶಿವ ದೇವಾಲಯದ ಬ್ರಹ್ಮ ಕಲಶೋತ್ಸವ ಸಂದರ್ಭದಲ್ಲಿ ಇವರ ಭಕ್ತಿ ಗೀತೆಗಳ ಸಂಕಲನ ಬಿಡುಗಡೆಯಾಗಿರುತ್ತದೆ.

ಪ್ರಕಟಿತ ಕೃತಿಗಳು:
ಕವನ ಸಂ. - ಪ್ರೇರಣೆ. ಭಕ್ತಿ ಗೀತೆಗಳ ಸಂ. - ಕಾರಣಿಕ

ಲಭಿಸಿರುವ ಪ್ರಶಸ್ತಿಗಳು:

೧. ೨೦೦೮ - 'ಹನಿಮಿನಿ - ಕಾವ್ಯ' ಕೃತಿಗೆ ತಾಲೂಕು ಮಟ್ಟದ ಬಹುಮಾನ.
೨. ಆಕಾಶವಾಣಿ ಮಂಗಳೂರು ವಾರದ ಪತ್ರ ಆಯ್ಕೆ - ಪುರಸ್ಕಾರ.

ವ್ಯಕ್ತಿ ಪರಿಚಯ



ನಾರಾಯಣ ಪರಮೇಶ್ವರ ಭಟ್ಟ

೧.	ಹೆಸರು	:	ನಾರಾಯಣ ಪರಮೇಶ್ವರ ಭಟ್ಟ
೨.	ಕಾವ್ಯನಾಮ	:	ರಂಜನ್ ಭಟ್ಟ – ನಾರಂಗಿ ಭಟ್ಟ.
೩.	ಹುಟ್ಟಿದ ಸ್ಥಳ ದಿನಾಂಕ	:	ಶಿರಾಲಿ, ೯–೩–೧೯೩೨
೪.	ಜಿಲ್ಲೆ – ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ. (ಮುಂಬೈ), ಎಂ.ಎ. (ಯು.ಎಸ್.ಎ), ಐ.ಆರ್.ಎಸ್.
೬.	ವೃತ್ತಿ	:	ತೆರಿಗೆ ಇಲಾಖೆ, ನಿವೃತ್ತ ಪ್ರಧಾನ ಆಯುಕ್ತರು
೭.	ಕೌಟುಂಬಿಕ	:	ಪತ್ನಿ : ಯಶೋದಾ ಭಟ್ಟ, ಮಕ್ಕಳು : ಒಬ್ಬ ಮಗ
೮.	ಸಧ್ಯದ ವಿಳಾಸ	:	೨೧೨, 'ಅವನಿ' ೭ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ ನಾರಾಯಣಪುರ, ಧಾರವಾಡ ೫೮೦ ೦೦೮
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೬–೨೪೭೨೧೩೧
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಶಿರಾಲಿಯಲ್ಲಿ ಜನಿಸಿದರು. ಎಂ.ಎ. ಅರ್ಥ ಶಾಸ್ತ್ರವನ್ನು ಮುಂಬಯಿ ವಿಶ್ವವಿದ್ಯಾಲಯದಿಂದ ಪಡೆದರು. ಎಂ.ಎ. ಸಾರ್ವಜನಿಕ ಆಡಳಿತ ಪದವಿಯನ್ನು ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಿಂದ ಬರ್ಕಲಿ–ಅಮೆರಿಕಾ ೧೯೬೪ರಲ್ಲಿ ಪಡೆದರು. ಅಲ್ಲಿಂದಲೇ ೧೯೮೦ರಲ್ಲಿ ಅಂತರ ರಾಷ್ಟ್ರೀಯ ತೆರಿಗೆ ವಿಷಯದಲ್ಲಿ ಡಿಪ್ಲೊಮಾ ಪಡೆದರು. ೧೯೫೭ರಲ್ಲಿ ಆದಾಯ ತೆರಿಗೆ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭ. ೧೯೯೦ರಲ್ಲಿ ಪ್ರಧಾನ ಆಯುಕ್ತರಾಗಿ ೧೯೯೨ರಲ್ಲಿ ನಿವೃತ್ತಿ. ಸೇವಾ ಅವಧಿಯಲ್ಲಿ ಭಾರತ ಸರ್ಕಾರದ ಆರ್ಥಿಕ ವ್ಯವಹಾರ ಖಾತೆಯಲ್ಲಿ ನಿರ್ದೇಶಕರಾಗಿ ಹಾಗೂ ಮಹಾ ನಿರ್ದೇಶಕರಾಗಿಯೂ ಕೆಲವು ಕಾಲ ಕಾರ್ಯನಿರ್ವಹಿಸಿದ್ದಾರೆ. ವಿದ್ಯಾರ್ಥಿ ಜೀವನದಿಂದಲೇ ಸಾಹಿತ್ಯದಲ್ಲಿ ಆಸಕ್ತಿ. ಹೊರನಾಡಿನಲ್ಲಿ ಕನ್ನಡದ ಕಂಪನ್ನು ಹರಡಲು ಕಾರಣರಾದ ಇವರು ೧೯೫೧ರಲ್ಲಿ ಮುಂಬಯಿಯಲ್ಲಿ ಕಾಲೇಜು ಓದುವಾಗಲೇ ಕರ್ನಾಟಕ ಸಂಘ ಹುಟ್ಟು ಹಾಕಿದರು. ಪದವೀಧರರಾದರು. ವಿಕ್ಟೋರಿಯ ಜ್ಯುಬಿಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಕರ್ನಾಟಕ ಸಂಘ ಹುಟ್ಟು ಹಾಕಿದರು. ೧೯೫೭–೫೮ ರಲ್ಲಿ ನಾಗಪುರ ಕರ್ನಾಟ ಸಂಘದ ಉಪಾಧ್ಯಕ್ಷರಾಗಿದ್ದರು. ೧೯೬೫ರಲ್ಲಿ ಸೂರತ್ ಕರ್ನಾಟ ಸಂಘದ ಮುಖ್ಯಸ್ಥರಾಗಿದ್ದರು. ಇಂದೂರಿನ ಕನ್ನಡ ಸಂಘದ ಅಧ್ಯಕ್ಷರಾಗಿದ್ದರು. ದಿಲ್ಲಿಯಲ್ಲಿಯೂ ಅಧ್ಯಕ್ಷರಾಗಿದ್ದರು. ೨೦೦೦ ದಿಂದ ಧಾರವಾಡದಲ್ಲಿ ಅವನಿ ಎಂಬ ಸಾಹಿತ್ಯಕ–ಸಾಂಸ್ಕೃತಿಕ ಸಂಘಟನೆಯನ್ನು ಸ್ಥಾಪಿಸಿ ಹತ್ತು ವರ್ಷಗಳಿಂದ ಸಮಾರಂಭಗಳನ್ನು ಏರ್ಪಡಿಸಿಕೊಂಡು ಬಂದಿದ್ದಾರೆ. ಅವನಿ ಮಾಸ ಪತ್ರಿಕೆ ನಡೆಸುತ್ತಿದ್ದಾರೆ. 'ಅವನಿ ರಸಿಕ ರಂಗ ಪ್ರಕಾಶನ' ೨೦೦೫ರಲ್ಲಿ ಪ್ರಾರಂಭಿಸಿ ೨೫ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಇದೇ ವೇದಿಕೆಯಿಂದ ರೂ ೫೦೦೦ಗಳ ಸಾಹಿತ್ಯ ಪ್ರಶಸ್ತಿಯನ್ನೂ 'ದೇವಾಂಗನ ಶಾಸ್ತ್ರಿ ಸ್ಮಾರಕ'ದಡಿ ಚೊಚ್ಚಲ ಕಥಾ ಸಂಕಲನಕ್ಕೆ ಕೊಡುತ್ತಿದ್ದಾರೆ. ಧಾರವಾಡದಲ್ಲಿ ಮೂರು ಉಚಿತ ಗ್ರಂಥಾಲಯಗಳನ್ನು ಸ್ಥಾಪಿಸಿದ್ದಾರೆ. ಕಳೆದ ಏಳು ವರ್ಷಗಳಿಂದ ಪತ್ರಕರ್ತ ಜಿ.ಆರ್. ಪಾಂಡೇಶ್ವರ ಅವರ ಹೆಸರಿನಲ್ಲಿ 'ಶ್ರೇಷ್ಠ ಪತ್ರಕರ್ತ ಪ್ರಶಸ್ತಿ'ಯನ್ನು ಕೊಡುತ್ತಿದ್ದಾರೆ. ಇವರು ಮಾಡಿದ ಅಮೇರಿಕಾದ ಪ್ರವಾಸವನ್ನು ಪ್ರವಾಸ ಕಥನವಾಗಿ ಗ್ರಂಥ ರಚಿಸಿದ್ದಾರೆ.

ಪ್ರಕಟಿತ ಕೃತಿಗಳು:
ಕಥಾ ಸಂ. – ದಕ್ಷಿಣ ಧ್ರುವ ನಕ್ಕಾಗ, ಅಲ್ಲಿಯ ಇಲ್ಲಿಯ ಕಥೆಗಳು. **ಕವನ ಸಂ.** – ಹೆಮ್ಮರಗಳು ತಲೆ ಎತ್ತಿವೆ. **ಪ್ರವಾಸ ಕಥನ** – ಕುಬೇರ ರಾಜ್ಯದ ಚಿತ್ರ ವಿಚಿತ್ರ.

ಲಭಿಸಿರುವ ಪ್ರಶಸ್ತಿಗಳು:
೧. ೧೯೮೫ – ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
೨. ೧೯೫೩ – ಮುಂಬಯಿ ವಿಶ್ವವಿದ್ಯಾಲಯದಿಂದ ಎಂ.ಎ.ಗಾಗಿ ಬಹುಮಾನಗಳು.
೩. ಸರ್. ಲಾರೆನ್ಸ್ ಜೊನಸನ್ಸ್ ಶಿಷ್ಯ ವೇತನ.
೪. ೧೯೬೩ – ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಫೆಲೋಶಿಪ್.
೫. ೧೯೭೯–೮೦ ಯು.ಎನ್.ಓ. ಶಿಷ್ಯ ವೇತನ.

ವ್ಯಕ್ತಿ ಪರಿಚಯ

ನಿರ್ಮಲಾ ವಿ. ಭಟ್.೧೪೨

೧.	ಹೆಸರು	:	ನಿರ್ಮಲಾ ವಿಷ್ಣು ಭಟ್ ಶಿವಮೊಗ್ಗ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಸಿರಸಿ ೨೯-೧೧-೧೯೫೩
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಡಿ.ಎಂ.ಆರ್., ಡಿ.ಪಿ.ಜಿ.
೬.	ವೃತ್ತಿ	:	ವಿಶೇಷ ಶಿಕ್ಷಣ ತಜ್ಞೆ-ನಿವೃತ್ತ.
೭.	ಕೌಟುಂಬಿಕ	:	ಡಾ॥ ವಿದ್ವಾನ್ ವಿ.ಎನ್. ಭಟ್
೮.	ಸದ್ಯದ ವಿಳಾಸ	:	ಜ್ಞಾನದೀಪ, ಸಹ್ಯಾದ್ರಿ ನಗರ, ವಿನೋಬ ನಗರ ಬಡಾವಣೆ, ಶಿವಮೊಗ್ಗ ೫೭೭೨೦೪
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೧೮೨-೨೪೮೦೨೦, ೯೪೪೮೬೮೩೦೧೪
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಶಿರಸಿಯಲ್ಲಿ ಜನಿಸಿದರು. ಶ್ರೀ ವಿಶ್ವನಾಥ ರಾಮ ಕೃಷ್ಣ ಹೆಗಡೆ ಹಾಗೂ ಶ್ರೀಮತಿ ಗಿರಿಜಾ ವಿಶ್ವನಾಥ ಹೆಗಡೆ ದಂಪತಿಗಳ ಪುತ್ರಿ. ಹುಟ್ಟೂರಲ್ಲೇ ಪ್ರಾಥಮಿಕ ವಿದ್ಯಾಭ್ಯಾಸ. ಹೊನ್ನಾವರದಲ್ಲಿ ಹೈಸ್ಕೂಲು ಹಾಗೂ ಕಾಲೇಜ್ ವಿದ್ಯಾಭ್ಯಾಸ ಮಾಡಿದ್ದಾರೆ. ೧೯೭೨ರಲ್ಲಿ ಬಿ.ಎ. ಪದವೀಧರರಾದರು. ೧೯೭೪ರಲ್ಲಿ ವಿದ್ವಾನ್ ವಿ.ಎನ್. ಭಟ್ಟರೊಂದಿಗೆ ವಿವಾಹವಾಯಿತು. ಚಿಕ್ಕಂದಿನಲ್ಲೇ ಕಥೆ ಕಾದಂಬರಿ ಓದುವ ಅಭ್ಯಾಸವಾಯಿತು. ೧೯೮೧ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಮಾಡಿಕೊಂಡರು. ಬಾಲ್ಯದಿಂದಲೂ ಇವರು ಶ್ರೀ ಸತ್ಯಸಾಯಿಬಾಬ ಭಕ್ತರು. ಸಮಾಜ ಸೇವೆಯಲ್ಲಿ ಆಸಕ್ತಿ ಬೆಳೆಸಿಕೊಂಡರು. ೧೯೮೫ರಲ್ಲಿ ಇವರು ಶಿವಮೊಗ್ಗದ ಬುದ್ಧಿಮಾಂದ್ಯ ಮಕ್ಕಳ ಶಾಲೆಯಲ್ಲಿ ಶಿಕ್ಷಕಿಯಾಗಿ ವೃತ್ತಿ ಜೀವನ ಆರಂಭಿಸಿದರು. ಬುದ್ಧಿಮಾಂದ್ಯತೆಯ ಬಗ್ಗೆ ಹೆಚ್ಚಿನ ವಿಷಯ ತಿಳಿಯುವ ಆಸಕ್ತಿವುಂಟಾಯಿತು. ಹೈದರಾಬಾದಿನಲ್ಲಿರುವ ಡಿ.ಎಮ್.ಆರ್.ಡಿ. ಡಿಪ್ಲೋಮಾ ಪರೀಕ್ಷೆ ತೆಗೆದುಕೊಂಡು ಅದರಲ್ಲಿ ಉತ್ತೀರ್ಣರಾದರು. ಇದೇ ವಿಷಯದಲ್ಲಿಯೇ ವಿಶೇಷ ಅಧ್ಯಯನ ನಡೆಸಿ ೧೯೯೧ರಲ್ಲಿ 'ಬುದ್ಧಿಮಾಂದ್ಯ ಮಗು' ಎನ್ನುವ ಪುಸ್ತಕವನ್ನು ರಚಿಸಿ ಪ್ರಕಟಿಸಿದರು. ಬುದ್ಧಿ ಮಾಂದ್ಯ ಮಕ್ಕಳ ಪೋಷಕರು, ಪಾಲಕರಿಗೆ, ಮನೆಯಲ್ಲಿಯೇ ನೀಡುವ ಪ್ರಥಮಿಕ ಶಿಕ್ಷಣ, ತರಬೇತಿಗಳನ್ನು ನೀಡುವ ಈ ಕೃತಿ ತುಂಬ ಪ್ರಯೋಜನಕಾರಿಯಾಗಿದೆ. ೧೯೯೩ರಲ್ಲಿ 'ಬುದ್ಧಿಮಾಂದ್ಯ ಹಾಗೂ ವಿಶೇಷ ಶಿಕ್ಷಣ' ಎಂಬ ಎರಡನೆಯ ಪುಸ್ತಕವನ್ನು ಪ್ರಕಟಿಸಿದರು. ಈ ಪುಸ್ತಕವನ್ನು ಶಾಲೆಯಲ್ಲಿ ಬು.ಮಾ. ಮಕ್ಕಳಿಗೆ ಶಿಕ್ಷಣ ತರಬೇತಿಯನ್ನು ಹೇಗೆ ಕೊಡಲಾಗುವುದೆಂಬ ಇತ್ಯಾದಿ ವಿಷಯುವನ್ನು ಒಳಗೊಂಡಿದೆ. ಈ ಪುಸ್ತಕಕ್ಕೆ ಪ್ರಶಸ್ತಿಗಳೂ ಸಿಕ್ಕಿವೆ. ಇವರ ಹಲವಾರು ಲೇಖನಗಳು, ದಿನ, ವಾರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಆಕಾಶವಾಣಿ ಭದ್ರಾವತಿಯಿಂದ ಇವರ ಭಾಷಣಗಳೂ ಪ್ರಸಾರವಾಗುತ್ತಿರುತ್ತವೆ. ೨೦೦೬ರಲ್ಲಿ ಇವರು ನಿವೃತ್ತರಾದರು. ಶಿವಮೊಗ್ಗದ ಮಾನಸ ಆಧಾರದಲ್ಲಿ ಕೆಲವು ಕಾಲ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ೨೦೦೫ರಲ್ಲಿ ಕುವೆಂಪು ವಿಶ್ವವಿದ್ಯಾಲಯಯಿಂದ ಪಿ.ಜಿ. ಡಿಪ್ಲೊಮಾ ಇನ್ ಮೆಂಟಲ್ ರಿಟಾರ್ಡೇಷನ್ ಪದವಿ ಪಡೆದಿದ್ದಾರೆ. ಈಗ ಹಲವು ಸಂಸ್ಥೆಗಳ ಸೇವಾಕಾರ್ಯದಲ್ಲಿ ತೊಡಗಿದ್ದಾರೆ.

ಪ್ರಕಟಿತ ಕೃತಿಗಳು:
ವೈದ್ಯಕೀಯ – ಬುದ್ಧಿ ಮಾಂದ್ಯ ಮಕ್ಕಳು.

ಲಭಿಸಿರುವ ಪ್ರಶಸ್ತಿಗಳು:
೧. ಧಾರವಾಡ –ಉತ್ತರ ಕರ್ನಾಟಕ ಲೇಖಕಿಯರ ಸಂಘದಿಂದ ಶ್ರೀಮತಿ ಲಲಿತಾಂಬ ವೃಷಭೇಂದ್ರ ಸ್ವಾಮಿ ದತ್ತಿ ನಿಧಿ ಪ್ರಶಸ್ತಿ.
೨. ಸರ್ಕಾರದ ಅಂಗವಿಕಲರ ಹಾಗೂ ಹಿ. ನಾಗರಿಕರ ಇಲಾಖೆಯಿಂದ – ರಾಜ್ಯ ಪ್ರಶಸ್ತಿ.
೩. ಶಿವಮೊಗ್ಗ ರೋಟರಿ ಸಂಸ್ಥೆಯಿಂದ ಉತ್ತಮ ಶಿಕ್ಷಕಿ ಪ್ರಶಸ್ತಿ.

ವ್ಯಕ್ತಿ ಪರಿಚಯ

ಪದ್ಮಾ ಗುರುರಾಜ್

೧.	ಹೆಸರು	:	ಪದ್ಮಾ ಗುರುರಾಜ್
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಕೋಲಾರ, ೧೨-೯-೧೯೪೨
೪.	ಜಿಲ್ಲೆ - ರಾಜ್ಯ	:	ಕೋಲಾರ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ., ಎಂ.ಎ. (ಕನ್ನಡ).
೬.	ವೃತ್ತಿ	:	ಲೇಖಕರು.
೭.	ಕೌಟುಂಬಿಕ	:	ಪತಿ; ಬಿ. ಗುರುರಾಜ್. ಪುತ್ರಿ; .ಜಿ. ಶ್ರೀಲತಾ. ಪುತ್ರ; ಜಿ. ಶ್ರೀಕಾಂತ್
೮.	ಸದ್ಯದ ವಿಳಾಸ	:	ನಂ. ೨೮೬, ೨೬ನೇ ಕ್ರಾಸ್, ಬನಶಂಕರಿ ೨ನೇ ಹಂತ, ಬೆಂಗಳೂರು.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦-೨೬೭೧೮೬೧೪, ೯೨೪೧೭೧೭೦೯೯.
೧೧.	ಹಸ್ತಾಕ್ಷರ (ಸಹಿ)	:	ಪದ್ಮಾ ಗುರುರಾಜ್

ಸಾಹಿತ್ಯ ಪರಿಚಯ

ಇವರು ಕೋಲಾರ ಜಿಲ್ಲೆ ಕೋಲಾರದಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ಪದವೀಧರರು. ಬಾಲ್ಯದಿಂದಲೂ ಇವರು ಸಾಹಿತ್ಯದ ಬಗ್ಗೆ ಆಸಕ್ತಿ ಉಳ್ಳವರಾಗಿದ್ದು ಕಥೆ ಕಾದಂಬರಿಗಳನ್ನು ಓದುತ್ತಿದ್ದರು. ಅ.ನ.ಕೃ., ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳು ಅಚ್ಚುಮೆಚ್ಚು. ಎನ್. ನರಸಿಂಹನವರ ಪುರುಷೋತ್ತಮ ಸಾಹಸ, ರಾಮನಾಥನ ಸಾಹಸ ಪತ್ತೆದಾರಿ ಕಥೆಗಳನ್ನು ಓದುವುದರಲ್ಲಿ ಹೆಚ್ಚಿನ ಆಸಕ್ತಿ. ಆನಂತರ ತ್ರಿವೇಣಿ, ಎಂ. ಕೆ ಜಯಲಕ್ಷ್ಮಿ, ಆರ್ಯಾಂಬ ಪಟ್ಟಾಭಿ, ಅನುಪಮ ನಿರಂಜನ ಮುಂತಾದ ಹಿರಿಯ ಲೇಖಕಿಯರ ಕೃತಿಗಳು ಇವರು ಸಾಹಿತ್ಯ ರಚನೆಗೆ ಸ್ಫೂರ್ತಿ ನೀಡಿತು. ಕಾಲ ಕ್ರಮೇಣ ಅನೇಕ ಹಿರಿಯ ಲೇಖಕ-ಲೇಖಕಿಯರ ಪರಿಚಯಗಳೂ ಆಯಿತು. ಪ್ರಭಾವವೂ ಬೀರಿತು. ನಾನೇಕೆ ಬರೆಯಬಾರದು ಎನ್ನುವ ತುಡಿತ ಶುರುವಾದದ್ದೇ ೧೯೭೫ ರಿಂದ ಸಣ್ಣ ಕಥೆ, ಹಾಸ್ಯ ಲೇಖನಗಳನ್ನು ಬರೆಯ ತೊಡಗಿದರು. ಬರೆದ ಬರೆಹಗಳೆಲ್ಲ ಕೈಲಾಸ, ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗ ತೊಡಗಿತು. ಬರೆಯ ಬಲ್ಲೆನೆಂಬ ಆತ್ಮವಿಶ್ವಾಸ ಮೂಡಿಸಿತು. ನಂತರ ಸುಧಾ, ಮಯೂರ, ತರಂಗ, ಕನ್ನಡ ಪ್ರಭ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಪತ್ರಿಕೆಗಳಲ್ಲೂ ಕಥೆ, ಲೇಖನಗಳು ಪ್ರಕಟವಾದವು. ೧೯೮೦-೮೪ ರವರಗೆ ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಮುಂದೆ ಎರಡು ವರ್ಷ ಉಪಾಧ್ಯಕ್ಷೆಯಾಗಿದ್ದರು.'ಲೇಖಕಿ' ಪತ್ರಿಕೆಯ ಸಂಪಾದಕಿಯಾಗಿದ್ದರು. ಇವರದು ೫೭ ಕಾದಂಬರಿಗಳು, ೫ ಕಥಾಸಂಕಲನಗಳು ಪ್ರಕಟವಾಗಿವೆ. 'ಕುಸುಮಾಂಜಲಿ' ಲೇಖನ ಮಾಲಿಕೆಯನ್ನು ರಚಿಸಿದ್ದಾರೆ. ಪ್ರಕಾಶಕರ ವ್ಯವಹಾರಕ್ಕೆ ಬೇಸತ್ತು ೧೯೮೦ರಲ್ಲಿ ಸ್ವಂತ 'ಪ್ರಿಯಾ ಪ್ರಕಾಶನ' ಪ್ರಾರಂಭಿಸಿದರು. ಸುಮಾರು ೨೦ ಕೃತಿಗಳನ್ನು ಪ್ರಕಟಿಸಿದ್ದಾರೆ. ಹಲವಾರು ಸಂಘ ಸಂಸ್ಥೆಗಳ ಸಂವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು. ಆಸ್ಟ್ರೇಲಿಯಾ, ಸಿಂಗಾಪುರ ವಿದೇಶ ಪ್ರವಾಸ ಮಾಡಿದ್ದಾರೆ.

ಪ್ರಕಟಿತ ಕೃತಿಗಳು:
ಕಾದಂಬರಿ- ಧ್ರುವತಾರೆ, ಮೈತ್ರಿ, ಕಾಂಚನಗಂಗ. **ಕಥಾ ಸಂ.**- ದಾಹ, ಬೇಲಿ.
ಲೇ. ನ ಸಂ.- ಕುಸುಮಾಂಜಾಲಿ. **ಪ್ರವಾಸ ಕಥನ** - ಕಾಂಗರುಗಳ ನಾಡಿನಲ್ಲಿ.

ಲಭಿಸಿರುವ ಪ್ರಶಸ್ತಿಗಳು:
೧. ೧೯೭೫ - ಅಂತರ ರಾಷ್ಟ್ರೀಯ ಮಹಿಳಾ ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ
೨. ೨೦೦೮ - ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ.
೩. ೨೦೦೫ - ಕೆಂಪೇಗೌಡ ಪ್ರಶಸ್ತಿ.
೪. ರಾಜ್ಯೋತ್ಸವ ಪ್ರಶಸ್ತಿ.
೫. ದಶಮಾನೋತ್ಸವ ಪ್ರಶಸ್ತಿ.
೬. ಕರ್ನಾಟಕ ಲೇಖಕಿಯರ ಸಂಘದ ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ|| ಪವಿತ್ರ. ಕೆ.ಎಸ್.

೧.	ಹೆಸರು	:	ಡಾ|| ಕೆ.ಎಸ್. ಪವಿತ್ರ.
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಕ	:	ಶಿವಮೊಗ್ಗ, ೩೧-೧೦-೧೯೭೬.
೪.	ಜಿಲ್ಲೆ - ರಾಜ್ಯ	:	ಶಿವಮೊಗ್ಗ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಡಿ. (ಮನೋವೈದ್ಯಕೀಯ)
೬.	ವೃತ್ತಿ	:	ನರ ಮತ್ತು ಮಾನಸಿಕ ರೋಗ ತಜ್ಞರು
೭.	ಕೌಟುಂಬಿಕ	:	ಪತಿ; ಡಾ|| ಎ.ವಿ. ನಾಗರಾಜ್. ಪುತ್ರಿ; ಭೂಮಿ.
೮.	ಸದ್ಯದ ವಿಳಾಸ	:	ಶ್ರೀಧರ್ ನರ್ಸಿಂಗ್ ಹೋಂ, ರಾಜೇಂದ್ರನಗರ, ಶಿವಮೊಗ್ಗ-೫೭೭೨೦೧
೯.	ಖಾಯಂ ವಿಳಾಸ	:	ಶ್ರಿ ವಿಜಯ, ೬ನೇ ತಿರುವು, ರಾಜೇಂದ್ರನಗರ, ಶಿವಮೊಗ್ಗ-೫೭೭೨೦೧.
೧೦.	ದೂರವಾಣಿ ಸಂಖ್ಯೆ	:	೦೮೧೮೨-೨೬೦೨೮೦, ೯೮೪೫೨೨೯೪೯.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಶಿವಮೊಗ್ಗದಲ್ಲಿ ಜನಿಸಿದರು. ಇವರು ಖ್ಯಾತ ಮನೋವೈದ್ಯ ಡಾ|| ಕೆ.ಆರ್. ಶ್ರೀಧರ ಮತ್ತು ಲೇಖಕಿ ವಿಜಯಾ ಶ್ರೀಧರ ದಂಪತಿಗಳ ದ್ವಿತೀಯ ಪುತ್ರಿ. ಬಾಲ್ಯದಿಂದಲೇ ಬೌದ್ಧಿಕ, ಸಾಂಸ್ಕೃತಿಕ ವಾತವರಣದಲ್ಲಿ ಬೆಳೆದರು. ಮೈಸೂರಿನ ವೈದ್ಯಕೀಯ ಮಹಾವಿದ್ಯಲಯದಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದರು. ಬೆಂಗಳೂರಿನಲ್ಲಿ ಎಂ.ಡಿ. ಪದವಿಗಳಿಸಿದರು. ಶಾಲದಿನಗಳಿಂದಲೇ ಸಾಹಿತ್ಯಾಸಕ್ತಿ. ಕನ್ನಡ ಮತ್ತು ಆಂಗ್ಲ ಸಾಹಿತ್ಯದ ಬಗ್ಗೆಯೂ ಒಲವು. ವಿಜ್ಞಾನ ಮತ್ತು ಕಲೆಯ ಬಗ್ಗೆ ಆಸಕ್ತಿ. ಶೈಕ್ಷಣಿಕ ಅಭ್ಯಾಸದ ಜತೆ, ಜತೆಗೇ ಭರತ ನಾಟ್ಯ ಕಲಿಕೆ. ಕರ್ನಾಟಕ ಸಂಗೀತಗಳಲ್ಲೂ ತರಬೇತಿ ಪಡೆದರು. ಇವರ ಪ್ರಥಮ ಆಯ್ಕೆ ಭರತನಾಟ್ಯ. ಡಾ|| ವಸುಂಧರ ದೊರೈಸ್ವಾಮಿ ಅವರಲ್ಲಿ ೨೦ ವರ್ಷಗಳ ತರಬೇತಿ ಪಡೆದಿದ್ದಾರೆ. ಮೊದಲಿನಿಂದಲೂ ಸಂಶೋಧಕ ಸ್ವಭಾವದ ಇವರು ಮಹಿಳೆಯರ ಕಲೆ, ಸಾಹಿತ್ಯ, ಉದ್ಯೋಗ, ಸ್ವಾಸ್ತ್ಯಗಳ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಮಹಿಳೆಯರ ಮತ್ತು ಮಕ್ಕಳಿಗಾಗಿಯೇ ಇವರ ವಿಶೇಷ ಸೇವಾ ಘಟಕವನ್ನು ಶಿವಮೊಗ್ಗದಲ್ಲಿ ನಡೆಸಿದ್ದಾರೆ. ೧೯೮೯ರಲ್ಲಿ ಇವರು ಭರತನಾಟ್ಯ ರಂಗ ಪ್ರವೇಶಿಸಿದರು. ಭಾರತ ಹಾಗೂ ವಿದೇಶಗಳಲ್ಲಿಯೂ ಇವರ ನೃತ್ಯ ಕಾರ್ಯಕ್ರಮಗಳು ನಡೆದಿವೆ. ಇವರು ದೂರದರ್ಶನದ 'ಎ' ಗ್ರೇಡ್ ಕಲಾವಿದೆ. ೧೧ನೇ ವಯಸ್ಸಿಗೆ ಆದಿಚುಂಚನಗಿರಿಯಲ್ಲಿ ನಡೆದ ಮಕ್ಕಳ ಸಾಹಿತ್ಯ ಸಮ್ಮೇಳನದ ಉಪಾಧ್ಯಕ್ಷೆಯಾಗಿದ್ದರು. ಕನ್ನಡ ದಿನ, ವಾರ, ಮಾಸ ಪತ್ರಿಕೆಗಳಲ್ಲಿ ಇವರ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಲೇಖನಗಳು ಪ್ರಕಟವಾಗಿವೆ. ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ. ಆಕಾಶವಾಣಿಯ ಕಾರ್ಯಕ್ರಮ ಸಲಹಾ ಮಂಡಳಿಯ ಸದಸ್ಯೆ. ಬೆಂಗಳೂರು ದೂರದರ್ಶನದ ವಾರ್ತವಾಚಕಿ, ನಿರೂಪಕಿ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುತ್ತಾರೆ. ಸತತವಾಗಿ ಮೂರು ವರ್ಷಗಳಿಂದ ಬೆಂಗಳೂರು ದೂರದರ್ಶನದ 'ಹಲೋ ಗೆಳೆಯರೆ' ಮಾಲಿಕೆಯಲ್ಲಿ ಸಲಹಾ ಕಾರ್ಯಕ್ರಮ ನಿರ್ವಹಿಸಿದ್ದಾರೆ. ಇವರು ಬರೆದಿರುವ 'ಮಗು-ಮನಸ್ಸು' ಕೃತಿಗೆ ಹಲವಾರು ಬಹುಮಾನಗಳು ಬಂದಿವೆ. ವೈದ್ಯಕೀಯ ಸಂಶೋಧನೆಗೂ ಪ್ರಶಸ್ತಿಗಳು ಬಂದಿವೆ.

ಪ್ರಕಟಿತ ಕೃತಿಗಳು:

ವೈದ್ಯಕೀಯ ಸಾಹಿತ್ಯ - ಮಗು-ಮನಸ್ಸು, ಪರಿಪೂರ್ಣ ವಕ್ತಿತ್ವ, ನೀವು ನಿಮ್ಮ ಸಂಬಂಧಗಳು, ಓ ಸಖಿ ನೀನು ಸುಖಿಯೇ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೫ - 'ಮಗು-ಮನಸ್ಸು' ಕೃತಿಗೆ ಭಾರತೀಯ ಮನೋ ವೈದ್ಯಕೀಯ ಸಂಘ ದತ್ತಿ ನಿಧಿ ಪ್ರಶಸ್ತಿ

೨. ೨೦೦೮ - ಕ.ಸಾ.ಪ.ದ ದತ್ತಿ ನಿಧಿ ಅರಳು ಪ್ರಶಸ್ತಿ.

೩. ೨೦೦೬ - ಗುಲ್ಬರ್ಗಾದ ಯುವ ಬರೆಹಗಾರ ಸಾಹಿತ್ಯ ಬಳಗದ ಪ್ರಶಸ್ತಿ.

೨೦೦೯ - ಜಪಾನಿನ ಅಸೋಸಿಯೇಷನ್ ಆಫ್ ಸೈಕಿಯಾಟ್ರಿ ಮತ್ತು ನ್ಯೂರಾಲಾಜಿ ಪ್ರಶಸ್ತಿ.

೫. ಈಟಿವಿ ವಾಹಿನಿ ಪರಿಪೂರ್ಣ ಮಹಿಳೆ ಪ್ರಶಸ್ತಿ. ಇತ್ಯಾದಿ.

ವ್ಯಕ್ತಿ ಪರಿಚಯ

ಡಾ॥ ಪ್ರಕಾಶ್ ಹೆಚ್.ಎಸ್.ಎಂ.

೧.	ಹೆಸರು	:	ಡಾ॥ ಹೆಚ್.ಎಸ್.ಎಂ. ಪ್ರಕಾಶ್
೨.	ಕಾವ್ಯನಾಮ	:	ಇರುವುದಿಲ್ಲ.
೩.	ಹುಟ್ಟಿದ ಸ್ಥಳ ದಿನಾಂಕ	:	ಹೊನ್ನುಡಿಕೆ, ೦೧-೦೬-೧೯೫೫
೪.	ಜಿಲ್ಲೆ - ರಾಜ್ಯ	:	ತುಮಕೂರು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎಸ್‌ಸಿ. (ಭೂ ವಿಜ್ಞಾನ), ಪಿಹೆಚ್.ಡಿ. (ಭೂ ವಿಜ್ಞಾನ)
೬.	ವೃತ್ತಿ	:	ನಿರ್ದೇಶಕರು (ಭೂ ವಿಜ್ಞಾನ), ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣ
೭.	ಕೌಟುಂಬಿಕ	:	ಪತ್ನಿ; ಶ್ರೀಮತಿ ನಾಗಲಕ್ಷ್ಮಿ. ಒಬ್ಬ ಪುತ್ರಿ ಪುತ್ರ; ಉಜ್ವಲ್ ಚಂದ್ರ.
೮.	ಸದ್ಯದ ವಿಳಾಸ	:	ನಂ. ೯, ಸಿದ್ಧಿ, ೧ ನೇ ಅಡ್ಡರಸ್ತೆ, ೧ ನೇ ಹಂತ, ಟೀಚರ್ಸ್ ಕಾಲೋನಿ, ದಯಾನಂದ ಸಾಗರ್ ಕಾಲೇಜು ರಸ್ತೆ. ಬೆಂಗಳೂರು - ೫೬೦೦೭೮
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦-೨೬೬೬೩೩೬೬, ೦೯೮೪೫೭೬೬೬೩೬೬, ೦೯೧೨೧೬೬೩೬೬
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ತುಮಕೂರು ತಾಲೂಕು ಹೊನ್ನುಡಿಕೆಯಲ್ಲಿ ಜನಿಸಿದರು. ಹುಟ್ಟೂರಲ್ಲೇ ಪ್ರಥಾಮಿಕ ಶಿಕ್ಷಣ ಪಡೆದರು. ತುಮಕೂರಿನ ಹಳೆಯ ಬಾಲಕರ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಣವಾದರೆ ತುಮಕೂರಿನ ಸಿದ್ಧಗಂಗಾ ಪ್ರೌಢಶಲೆಯಲ್ಲಿ ಪ್ರೌಢಶಿಕ್ಷಣ, ಸರ್ಕಾರಿ ಕಾಲೇಜಿನಲ್ಲಿ ಪಿ.ಯು.ಸಿ., ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು. ನಂತರ ಬೆಂಗಳೂರಿನಲ್ಲಿ ೧೯೭೬ರಲ್ಲಿ ಭೂವಿಜ್ಞಾನದಲ್ಲಿ ಪ್ರಥಮ ರ್‍ಯಾಂಕ್ ಹಾಗೂ ಮೂರು ಚಿನ್ನದ ಪದಕಗಳೊಂದಿಗೆ ಎಂ.ಎಸ್‌ಸಿ. ಮಾಡಿದರು. ಬೆಂಗಳೂರು ವಿಶ್ವವಿದ್ಯಾಲಯಯಲ್ಲಿ ಕರ್ನಾಟಕದ ಚಿತ್ರದುರ್ಗದ ಗ್ರೀನ್ ಸ್ಟೋನ್ ಶಿಲಾರಾಶಿಗಳಲ್ಲಿನ ಚಿನ್ನದ ನಿಕ್ಷೇಪಗಳು ಕುರಿತಾದ ಸಂಶೋಧನಾ ಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ. ಶಾಲಾ ದಿನಗಳಲ್ಲೇ ಸಾಹಿತ್ಯದ ಬಗ್ಗೆ ಆಸಕ್ತಿ. ಪ್ರಮುಖ ಲೇಖಕರ ಗ್ರಂಥಗಳನ್ನು ಓದುವುದು ಪ್ರಬಂಧ ರಚಿಸುವುದು ಮಾಡುತ್ತಿದ್ದರು. ಓದಿನಲ್ಲಿ ಪ್ರಥಮ ಸ್ಥಾನದಲ್ಲಿ ಇರುತ್ತಿದ್ದ ಇವರು ಪಠ್ಯೇತರ ಚಟುವಟುಕೆಗಳಲ್ಲಿ ಹಿಂದೆ ಬಿದ್ದಿರಲಿಲ್ಲ. ಕ್ರೀಡೆ, ನಾಟಕ ಚಟುವಟಿಕೆಗಳೊಂದಿಗೆ ಸಾಂಘಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸುತ್ತಿದ್ದರು. ತ್ರಿವೇಣಿ, ವಾಣಿ, ತ.ರಾ.ಸು. ವಿ.ಎಂ., ಇನಾಂದಾರ್, ಬೇಂದ್ರೇ, ಮಾಸ್ತಿ ಕುವೆಂಪು ಹಾಗೂ ಅಡಿಗ ಮುಂತಾದ ಪ್ರಸಿದ್ಧ ಕವಿ ಸಾಹಿತಿಗಳ ಕೃತಿಗಳೆಲ್ಲ ಇವರ ಮೇಲೆ ಪ್ರಭಾವ ಬೀರಿದೆ. ೨೦೦೯ರಲ್ಲಿ ಇವರ ಪ್ರಥಮ ಕೃತಿ ಪ್ರಕಟವಾಯಿತು. ಇವರು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳ ಮೇಲೆ ಪ್ರಭುತ್ವ ಇರುವುದರಿಂದ ಅನುವಾದ ಕೂಡ ಮಾಡುತ್ತಾರೆ. ೧೯೭೬ರಲ್ಲಿ ಕೇಂದ್ರ ಲೋಕಾ ಸೇವಾ ಆಯೋಗದ ಭೂ ವಿಜ್ಞಾನಿಗಳ ಮೂಲಕ ಆಯ್ಕೆಯಾಗಿ ೧೯೭೮ರಲ್ಲಿ ಭೂಪಾಲ್‌ನಲ್ಲಿ ವೃತ್ತಿ ಆರಂಭ. ೧೯೯೧–೨೦೦೧ ಆಂಧ್ರ, ಕರ್ನಾಟಕಗಳಲ್ಲಿ ಖನಿಜ ನಿಕ್ಷೇಪಗಳ ಶೋಧ ಕಾರ್ಯ. ೨೦೦೯ ರಿಂದ ಶಿಲ್ಲಾಂಗ್‌ನಲ್ಲಿ ಪ್ರಾದೇಶಿಕ ಅಧಿಕಾರಿಗಳಾಗಿ ಕಾರ್ಯನಿರ್ವಹಣೆ. ಇವರ ೨೦ ವರದಿಗಳು, ೧೫ ವೈಜ್ಞಾನಿಕ ಲೇಖನಗಳು ಪ್ರಕಟವಾಗಿವೆ. ಹಲವಾರು ಸಂಗೋಷ್ಠಿಗಳ ಉಪನ್ಯಾಸಗಳ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜಕರು. ಇವರಿಗೆ ಟೀಚರ್ಸ್ ಕಾಲೋನಿ ನಿವಾಸಿಗಳ ಸಂಘ ಸ್ಥಾಪಕ ಕಾರ್ಯದರ್ಶಿಯಾಗಿ, ಶಿವಶಂಕರಿ ಸಾಂಸ್ಕೃತಿಕ ಸಭಾ ಸ್ಥಾಪಕ ಅಧ್ಯಕ್ಷರಾಗಿ, ಅಭ್ಯುದಯ ಸಂಘಟನೆಯ ಸದಸ್ಯರಾಗಿ, ಜಿಯಾಲಾಜಿಕಲ್ ಸೊಸೈಟಿ ಆಫ್ ಇಂಡಿಯಾ, ಮಿನರಲಾಜಿಕಲ್ ಸೊಸೈಟಿ ಆಫ್ ಇಂಡೀಯಾ ಹಾಗೂ ಗೊಂಡಾವಾನಾ ರಿಸರ್ಚ್ ಗ್ರೂಪ್ ಮುಂತಾದ ಸಂಸ್ಥೆಗಳ ನಿಕಟ ಸಂಪರ್ಕವಿದೆ.

ಪ್ರಕಟಿತ ಕೃತಿಗಳು:
ಅನು. ಕಾವ್ಯ – ಸಲಹುವ ಸಾಗರ.
ಅನು. ಕಥಾ. ಸಂ. – ಭೂಮಿಗೀತೆಗಳು, ಈ ಬೆಟ್ಟಗಳೇ ನಮ್ಮ ಮನೆಗಳು.
ಕನ್ನಡದಿಂದ ಅನು. – ಕಂಡೇರಿ ಕನ್ಸೆಷನ್, ಗಾಂಜಾಡಾಲಿ, ಬೆಂಗಳೂರು ೨೦೫೦, ಕೋಲಾರದ ಚಿನ್ನದ ಗಣಿಗಳು.

ಲಭಿಸಿರುವ ಪ್ರಶಸ್ತಿಗಳು:
೧. ಪ್ರಪಂಚ – ದಿ ವರ್ಲ್ಡ್ ಆಫ್ ಮ್ಯೂಸಿಕ್‌ನ ರಜತ ಮಹೋತ್ಸವದಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ



ಪ್ರಭಾಕರ ರಾವ್. ಹೆಚ್.ಎ.

೧. ಹೆಸರು : ಹೆಚ್.ಎ. ಪ್ರಭಾಕರ ರಾವ್

೨. ಕಾವ್ಯನಾಮ : ಇರುವುದಿಲ್ಲ.

೩. ಹುಟ್ಟಿದ ಸ್ಥಳ ದಿನಾಂಕ : ಹೊಸಬಾಳೆ, ೦೫-೧೧-೧೯೪೪.

೪. ಜಿಲ್ಲೆ - ರಾಜ್ಯ : ಶಿವಮೊಗ್ಗ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎಸ್ಸಿ. (ಕೃಷಿ)

೬. ವೃತ್ತಿ : ವ್ಯವಸಾಯ.

೭. ಕೌಟುಂಬಿಕ : ಪತ್ನಿ; ಶಾಂತ. ನಾಲ್ಕು ಪುತ್ರಿಯರು. ಒಬ್ಬ ಪುತ್ರ.

೮. ಸದ್ಯದ ವಿಳಾಸ : ಪ್ರಭಾಕರ ರಾವ್ ಹೆಚ್.ಎ., ವಾಸ ಮತ್ತು
ಅಂಚೆ ಹೊಸಬಾಳೆ, ಸೊರಬ ತಾ.,
ಶಿವಮೊಗ್ಗ ಜಿ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೧೮೪-೨೬೩೪೨೨, ೯೪೮೦೫೪೫೫೨೨

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕು ಹೊಸಬಾಳೆಯಲ್ಲಿ ಜನಿಸಿದರು. ಮೂಲ ಸೌಲಭ್ಯಗಳಲ್ಲಿದ ಕುಗ್ರಾಮ. ಇವರು ಶ್ರೀ ಅನಂತಪ್ಪ ಹೆಗಡೆ ಮತ್ತು ಶ್ರೀಮತಿ ಕೊಲ್ಲೂರಮ್ಮ ದಂಪತಿಗಳ ಪುತ್ರ. ತಂದೆಯನ್ನು ಕಳೆದುಕೊಂಡು. ತಾಯಿ ಅಜ್ಜ ಮಾವನ ಪೋಷಣೆಯಲ್ಲಿ ಬೆಳೆದರು. ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರಲ್ಲೇ. ಮಾಧ್ಯಮಿಕ ಮತ್ತು ಪ್ರೌಢ ಸೊರಬದಲ್ಲಾಯಿತು. ಕಾಲೇಜು ಬೆಂಗಳೂರು, ಮೈಸೂರು. ೧೯೬೭ರಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯಯದಲ್ಲಿ ಬಿ.ಎಸ್ಸಿ. ಪದವೀಧರರಾದರು. ಸಾಕಷ್ಟು ಜಮೀನು ಇದ್ದುದರಿಂದ ವೃತ್ತಿಯಿಂದ ಕೃಷಿಕರಾದರು. ವ್ಯವಸಾಯದಿಂದಲೇ ಜೀವನ ನಿರ್ವಹಣೆ. ೧೯೭೧ರಲ್ಲಿ ಶಾಂತರನ್ನು ವಿವಾಹವಾದರು. ಇವರು ೧೯೭೦ರಲ್ಲಿ ಸಾಗರ ಪ್ರಾಂತ ಅಡಿಕೆ ಬೆಳೆಗಾರರ ಸಂಘದ ವಿಶೇಷ ಅಹ್ವಾನಿತರಾಗಿ ಆ ಭಾಗದ ಅಡಿಕೆ ತೋಟಗಳ ಶೀತ ಬಾಧೆ ನಿವಾರಣೆಗಾಗಿ ಕೆಲಸ ಮಾಡಿದರು. ನಂತರ ಸಂಘದ ಉಪಾಧ್ಯಕ್ಷರಾದರು. ೧೯೭೦ರಲ್ಲಿ ಶಿವಮೊಗ್ಗ ಜಿಲ್ಲಾ ಪ್ರತಿನಿಧಿಯಾಗಿ ಸರ್ಕಾರ ಇವರನ್ನು ಜಪಾನದಲ್ಲಿ ನಡೆಯುತ್ತಿದ್ದ. ಪ್ರಪಂಚ ಪ್ರದರ್ಶನ ವೀಕ್ಷಿಸಲು ಕಳುಹಿಸಿತ್ತು. ಹೀಗೆ ಇವರು ಬೆಂಗಳೂರಿನಲ್ಲಿ ನಡೆದ ಆರೋಗ್ಯ ಇಲಾಖೆಯ ತರಬೇತಿ ಶಿಬಿರದಲ್ಲಿ, ೧೯೮೪ರಲ್ಲಿ ಶೃಂಗೇರಿಯಲ್ಲಿ ನಡೆದ ಕೃಷಿ ವಿಶ್ವವಿದ್ಯಾಲಯ ಅಡಿಕೆ ಸಮ್ಮೇಳನದಲ್ಲಿ ಹಾಗೂ ಇನ್ನೂ ಇಂತಹ ಹಲವಾರು ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ೧೯೬೭ರಲ್ಲಿ ಸಾಗರದಲ್ಲಿ ಸ್ಥಾಪನೆಯಾದ ತೋಟಗಾರರ ಕ್ರೆಡಿಟ್ ಕೊ ಆಪರೇಟಿವ್ ಸೊಸೈಟಿಯ ನಿರ್ದೇಶಕ ಹಾಗೂ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರು ಧಾರ್ಮಿಕ ಕ್ಷೇತ್ರದಲ್ಲಿಯೂ ಸಾಕಷ್ಟು ಕೆಲಸ ಮಾಡಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಜಪಾನ್ ಪ್ರವಾಸವನ್ನು ಬರೆದರು ಅದು 'ಹವ್ಯಕ' ಪತ್ರಿಕೆಯಲ್ಲಿ ಪ್ರಕಟವಾಯಿತು. ನಂತರ ಇವರು ಜೀವನವನ್ನೇ ಕುರಿತು ಬರೆದ ಕೃತಿ ಪ್ರಕಟವಾಯಿತು. ಇದಲ್ಲದೆ ಇವರು ಹೊಸಬಾಳೆ ಹೆಗಡೆ ಮನೆತನದ ೯ ತಲೆಮಾರುಗಳ ಕುರಿತ 'ವಂಶ ವೃಕ್ಷ'ರಚಿಸಿದ್ದಾರೆ. ದಿನಚರಿ ಬರೆಯುವುದು ಇವರ ಹವ್ಯಾಸ. ಉತ್ತಮ ಸಮಾಜ ಸೇವಾಕರ್ತರು. ತಾಲೂಕು ಕೃಷಿಕ ಸಮಾಜದ ನಿರ್ದೇಶಕರಾಗಿ, ಗ್ರಾಮದ ಶಾಲೆ, ಆಸ್ಪತ್ರೆ ಹಾಗೂ ದೇವಸ್ಥಾನ ಅಭಿವೃದ್ಧಿ ಸಮಿತಿಗಳಲ್ಲಿಯೂ ಭಾಗವಹಿಸಿದ್ದಾರೆ.

ಪ್ರಕಟಿತ ಕೃತಿಗಳು:

ಆತ್ಮ ಚರಿತ್ರೆ – ಜೀವನದ ಆರು ದಶಕಗಳ ಒಂದು ಮೆಲಕು.

ಪ್ರವಾಸ – ಕಡಲಾಚೆಯ ಅನುಭವಗಳು.

ಇತರೆ – ನಮ್ಮ ಮನೆತನದ ವಂಶವೃಕ್ಷ.

ಲಭಿಸಿರುವ ಪ್ರಶಸ್ತಿಗಳು:

೧. ೨೦೧೦ – ಬೆಂಗಳೂರಿನ ಶ್ರೀ ಅಖಿಲ ಭಾರತ ಹವ್ಯಕ ಮಹಾಸಭೆಯಿಂದ ಸನ್ಮಾನ.

ವ್ಯಕ್ತಿ ಪರಿಚಯ

ಡಾ॥ ಪ್ರಹ್ಲಾದ ಅಗಸನಕಟ್ಟೆ

೧.	ಹೆಸರು	:	ಡಾ॥ ಎಲ್.ಎಸ್. ಪ್ರಹ್ಲಾದ
೨.	ಕಾವ್ಯನಾಮ	:	ಡಾ॥ ಪ್ರಹ್ಲಾದ ಅಗಸನಕಟ್ಟೆ
೩.	ಹುಟ್ಟಿದ ಸ್ಥಳ ದಿನಾಂಕ	:	ಅಗಸನಕಟ್ಟೆ, ೩-೬-೧೯೫೬
೪.	ಜಿಲ್ಲೆ - ರಾಜ್ಯ	:	ದಾವಣಗೆರೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಕನ್ನಡ ಎಂ.ಎ., ಪಿಹೆಚ್.ಡಿ.
೬.	ವೃತ್ತಿ	:	ಸಾಮಾಜಿಕ ಕಾರ್ಯಕರ್ತರು. ಕಿಮ್ಸ್, ಹುಬ್ಬಳ್ಳಿ.
೭.	ಕೌಟುಂಬಿಕ	:	ಪತ್ನಿ; ಟಿ.ಸಿ. ವಿಜಯ ಕುಮಾರಿ. ಪುತ್ರ; ಹರ್ಷವರ್ಧನ್. ಪುತ್ರಿ; ಅಕ್ಷತಾ.
೮.	ಸದ್ಯದ ವಿಳಾಸ	:	ಡಾ॥ ಪ್ರಹ್ಲಾದ ಅಗಸನಕಟ್ಟೆ, ನಂ.-೬, ಬ್ಲಾಕ್ ನಂ.೨, ಕಿಮ್ಸ್ ಕ್ವಾಟರ್ಸ್, ಕಿಮ್ಸ್, ಹುಬ್ಬಳ್ಳಿ-೫೮೦೦೫೧
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೬-೨೩೭೫೭೦೨, ೯೪೪೮೮೬೦೭೬೮
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ದಾವಣಗೆರೆ ಜಿಲ್ಲೆ ಅಗಸನ ಕಟ್ಟೆಯಲ್ಲಿ ಜನಿಸಿದರು. ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೮೦ರಲ್ಲಿ ಮೈಸೂರಿ ವಿಶ್ವ ವಿದ್ಯಾನಿಲಯದಿಂದ ಕನ್ನಡ ಸ್ನಾತಕೋತ್ತರ ಪದವೀಧರರು. ೨೦೦೪ರಲ್ಲಿ ಕುವೆಂಪು ವಿಶ್ವ ವಿದ್ಯಾನಿಲಯದಿಂದ ದಲಿತ ಬಂಡಾಯ ಕಾವ್ಯದ ಮೇಲೆ ವಿಚಾರ ವಾದಗಳ ಪ್ರಭಾವ ಕುರಿತ ಸಂಸೋಧನಾತ್ಮಕ ಮಹಾ ಪ್ರಬಂಧಕ್ಕೆ ಪಿಹೆಚ್.ಡಿ. ಪದವಿಗಳಿಸಿದ್ದಾರೆ. ೧೯೮೦-೮೨ ರವರಗೆ ಕನ್ನಡ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ ಅನುಭವ. ೯೧೮೨-೮೪ ರವರಗೆ ಮುಂಜಾನೆ ಕನ್ನಡ ದಿನ ಪತ್ರಿಕೆಯಲ್ಲಿ ಉಪಸಂಪಾದಕರಾಗಿದ್ದರು. ೧೯೮೪-೮೫ ರವರಗೆ ಮುಂಗಾರು ಕನ್ನಡ ದಿನಪತ್ರಿಕೆಯಲ್ಲಿ ಉಪಸಂಪಾದಕರಾಗಿ ಕೆಲಸ ಮಾಡಿದರು. ಅಭಿಮಾನಿ ವಾರಪತ್ರಿಕೆಯಲ್ಲಿ ಕೆಲವು ಸಮಯ ವರದಿಗಾರರಾಗಿ ಕೆಲಸ ಮಾಡಿದರು, ನಂತರ ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಸೇರಿದರು. ೧೯೮೫ ರಿಂದ ಸಮಾಜ ಕಾರ್ಯಕರ್ತರಾಗಿ ೨೦೦೫ರಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳಾಗಿದ್ದಾರೆ. ಅನುಭವದಿಂದಾಗಿ ಇವರು ಸಹಜ ಪ್ರವೃತ್ತಿಯ ಸಾಹಿಗಳಾಗಿ ಸಾಹಿತ್ಯದ ನಾನಾ ಪ್ರಕಾರಗಳಾದ , ಕಾವ್ಯ, ಕಥೆ, ಕಾದಂಬರಿ, ವಿಮರ್ಶೆ ಇತ್ಯಾದಿಗಳ ಬಗ್ಗೆ ಹದಿನಾಲ್ಕು ಹದಿನೈದು ಕೃತಿಗಳನ್ನೂ ಒಂದು ಕೃತಿ 'ವೊನ್ಸ್ ಆಫ್ ಆನ್‌ಹಾರ್ಪನ್ ಹಾಟ್'ಅನ್ನು ಇಂಗ್ಲೀಷಿನಲ್ಲಿಯೂ ರಚಿಸಿದ್ದಾರೆ. ಇವರ ರಚಿಸಿದ ಕೃತಿಗಳಲ್ಲಿ ಹೆಚ್ಚಿನವು ಬಹುಮಾನಗಳಿಸಿವೆ.'ಸಂಕ್ರಮಣ' ಮಾಸ ಪತ್ರಿಕೆ ಏರ್ಪಡಿಸಿದ ವಾರ್ಷಿಕ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನಗಳಿಸಿದ್ದಾರೆ. ಧಾರವಾಡ ವಿಶ್ವ ವಿದ್ಯಾನಿಲಯ ಹಾಗೂ ಕುವೆಂಪು ವಿಶ್ವ ವಿದ್ಯಾನಿಲಯ ಪಿ.ಯು.ಸಿ ಪಠ್ಯಪುಸ್ತಕದಲ್ಲಿ ಇವರ ಕಥೆಗಳನ್ನು ಸೇರಿಸಿವೆ. ಮಂಗಳೂರು ಪಠ್ಯ ಪುಸ್ತಕದಲ್ಲಿ ಇವರ ಕಥೆ ಆಯ್ಕೆಯಾಗಿದೆ.

ಪ್ರಕಟಿತ ಕೃತಿಗಳು:
ಕಾವ್ಯ- ನನ್ನ ಧಣಿಗೆ ನನ್ನ ದನಿ, ಗಲ್ಲುಗಳಲ್ಲಿ ಗುಲಾಬಿ, ಸಂತೆ ಮುಗಿವ ಸಮಯ, ದೀಪವಾರಿದ ಮೇಲೆ. **ಕಥಾ ಸಂ.** – ಕಾಲ, ಸಾವಿನೊಳಗಿನ ಸಾವು, ದೇವರ ಸವಾಲ್, ಪ್ರಕ್ಷುಬ್ಧ ಅಲೆಗಳು. **ವಿಮರ್ಶೆ** – ಕುಡಿನೋಟ, ಅಂತಃಕರಣ, ಎದುರು-ಬದುರು, ಕುತೂಹಲ, ಕಳಕಳಿ, ಅಭಿಮತ, ವಾದಗಳ ಪ್ರಭಾವ. **ಕಾದಂಬರಿ** – ಬಂಧಿಖಾನೆ, ಅವಾಂತರ. **ಸಂಶೋಧನೆ** – ದಲಿತ ಬಂಡಾಯ ಕಾವ್ಯದ ಮೇಲೆ ವಿಚಾರ. **ಸಂಪಾದಿತ** – ಡಾ|| ಡಿ.ಎಸ್. ಕರ್ಕಿಯವರ ಗೇಯ ಗೀತಗಳು, ೨೦೦೮ರ ಕಥಾ ಸಂಕಲನ (ಸಾಹಿತ್ಯ ಅಕಾಡೆಮಿ).

ಲಭಿಸಿರುವ ಪ್ರಶಸ್ತಿಗಳು:
೧. ಕಾಲ ಕೃತಿಗೆ ಹಾವೇರಿಯ ಮಾಡಳ್ಳಿಕರ್ ಪ್ರಶಸ್ತಿ.
೨. ಪ್ರಕ್ಷುಬ್ಧ ಅಲೆಗಳು ಕೃತಿಗೆ ಚಡಗರ ಪ್ರಶಸ್ತಿ.
೩. ಸಾಹಿತ್ಯದ ಒಟ್ಟು ಸಾಧನೆಗೆ ವಾರಂಬಳ್ಳಿಯ ದಶಮಾನೋತ್ಸವ ಪ್ರಶಸ್ತಿ.
೪. ವೈ.ಕೆ ರಾಮಯ್ಯ ರಾಜ್ಯ ಮಟ್ಟದ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.
೫. ತಾಜಮಹಲ್ ಕಥೆಗೆ ವಿಜಯ ಕರ್ನಾಟಕ ಯುಗಾದಿ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.
೬. ಕನ್ನಡ ಪ್ರಭ ಸಂಕ್ರಾಂತಿ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.
೭. ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಎರಡು ಬಾರಿ ಬಹುಮಾನ.

ವ್ಯಕ್ತಿ ಪರಿಚಯ

ಪ್ರೊ. ಪಾಟೀಲ ಎಲ್.ವ್ಹಿ.

೧. ಹೆಸರು : ಲೋಕನಗೌಡ ವೆಂಕನಗೌಡ ಪಾಟೀಲ

೨. ಕಾವ್ಯನಾಮ : 'ಪಿ. ಲೋಕೇಶ'

೩. ಹುಟ್ಟಿದ ಸ್ಥಳ ದಿನಾಂಕ : ಜಕ್ಕಲಿ, ೧೦-೦೫-೧೯೪೮.

೪. ಜಿಲ್ಲೆ - ರಾಜ್ಯ : ಗದಗ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಎಂ.ಫಿಲ್.

೬. ವೃತ್ತಿ : ನಿವೃತ್ತ ಪ್ರಾಧ್ಯಾಪಕರು.

೭. ಕೌಟುಂಬಿಕ : ಪತ್ನಿ; ವಿದ್ಯಾವತಿ. ಪುತ್ರರು; ರಾಜಶೇಖರಗೌಡ ಪಾಟೀಲ, ಸೋಮಶೇಖರಗೌಡ ಪಾಟೀಲ.

೮. ಸದ್ಯದ ವಿಳಾಸ : 'ಸ್ನೇಹಜೀವಿ', ಹೌಸಿಂಗ್ ಕಾಲನಿ, ಹುಕ್ಕೇರಿ ರಸ್ತೆ, ಸಂಕೇಶ್ವರ-೫೯೧೩೧೩

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೮೮೬೯೭೭೪೦೮

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಗದಗ ಜಿಲ್ಲೆ ರೋಣ ತಾಲೂಕು ಜಕ್ಕಲಿ ಗ್ರಾಮದಲ್ಲಿ ಜನಿಸಿದರು. ಶ್ರೀ ವೆಂಕನಗೌಡ ಮತ್ತು ಶ್ರಿಮತಿ ಶಿವಗಂಗಮ್ಮ ದಂಪತಿಗಳ ಪುತ್ರ. ಪ್ರಾಥಮಿಕ ಶಿಕ್ಷಣ ಸ್ವಗ್ರಾಮ. ಮಾಧ್ಯಮಿಕ ಶಿಕ್ಷಣ ರೋಣ. ಪ್ರೌಢ ಜಕ್ಕಲಿಯಲ್ಲಿ ಪಡೆದರು. ಸ್ನಾತಕ ಶಿಕ್ಷಣ ಗದುಗಿನ ಜಗದ್ಗುರು ತೋಂಟದಾರ್ಯ ಕಾಲೇಜಿನಲ್ಲಿ. ಸ್ನಾತಕೋತ್ತರ ಶಿಕ್ಷಣ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಆಯಿತು ೧೯೭೩. ೧೯೮೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಅಧ್ಯಯನ ಮಾಡಿ ಎಂ.ಫಿಲ್. ಪದವಿ ಪಡೆದರು. ೧೯೭೩ರಲ್ಲಿ ಸಂಕೇಶ್ವರದ ದುರದುಂಡೇಶ್ವರವ ವಿದ್ಯಾಸಂವರ್ಧಕ ಸಂಘದ ಕಲಾ ಮತ್ತು ವಾಣಿಜ್ಯ ವಿಜ್ಞಾನ ಮಹಾವಿದ್ಯಾಲಯದಲ್ಲಿ ವೃತ್ತಿ ಜೀವನ ಆರಂಭಿಸಿ ೨೦೦೬ರಲ್ಲಿ ಕನ್ನಡ ಪ್ರಾಧ್ಯಪಕರಾಗಿ ಸೇವೆಯಿಂದ ನಿವೃತ್ತರಾಗಿ ಸಂಕೇಶ್ವರದಲ್ಲಿ ನೆಲಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳು ವಿದ್ಯಾರ್ಥಿ ದೆಸೆಯಿಂದಲೇ ಕವನ ರಚಿಸುವ ಸೃಜನ ಕ್ರಿಯೆ ಆರಂಭವಾಯಿತು. ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಭುಜೇಂದ್ರ ಮಹೇಶವಾಡಿ, ಚಿದಾನಂದ ಮೂರ್ತಿ ಹಾಗೂ ಎಂ. ಎಂ. ಕಲಬುರ್ಗಿ ಮುಂತಾದ ಸಾಹಿತಿಗಳ ಕೃತಿಗಳಿಂದ ಪ್ರೇರಣೆ ಪಡೆದರು. ಕವನದ ಜತೆ ಲೇಖನ ಬರೆಯಲು ಆರಂಭಿಸಿದರು. ೧೯೭೩ರಲ್ಲಿ ಇವರ ಪ್ರಥಮ ಕವನ ಸಂಕಲನ ಪ್ರಕಟವಾಯಿತು. ನಂತರ ಇವರು ವಿಮರ್ಶೆ, ಸಂಶೋಧನ ಲೇಖನಗಳನ್ನು ಬರೆಯ ತೊಡಗಿದರು. ಬೆಳ್ವಲ ನಾಡಿನ ಸಾಂಸ್ಕೃತಿಕ ಚರಿತ್ರೆ–ಒಂದು ಸಮೀಕ್ಷೆ, ಇವರ ಎಂ.ಫಿಲ್. ಪದವಿಯ ಪ್ರಬಂಧವಾಗಿದೆ. ಕ.ವಿಶ್ವವಿದ್ಯಾಲಯಯ ಪ್ರಥಮ ಬಿ.ಎ. ಪಠ್ಯ 'ಕಾವ್ಯ ಸಂಚಯ' ಕೃತಿಯ ಸಂಪಾದಕರು. 'ಲೋಕ ವಿದ್ಯಾ' ಪ್ರಕಾಶಕರಾಗಿ ೧೩ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಕರ್ನಾಟಕ ಭಾರತಿ' 'ಕಾಲಗತಿ' ಹಾಗೂ 'ಸಂಕ್ರಮಣ' ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. ಹುಕ್ಕೇರಿ ತಾಲೂಕು ಘಟಕದ ಕ.ಸಾ.ಪ. ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಸಮ್ಮೇಳನ ಜರುಗಿಸಿದ್ದಾರೆ. ಇವರ ಪ್ರತಿಭೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿವೆ.

ಪ್ರಕಟಿತ ಕೃತಿಗಳು:
ಕವನ ಸಂ. – ಗುಬ್ಬಕ್ಕ ಬಾಗಿಲ ತೆಗಿಯೆ. **ಲೇ. ನ ಸಂ.** – ಸಾಹಿತ್ಯ ಶೋಧನೆ, ಸಂಪದನ,
ಸಂಪಾದಿತ – ಅಮ್ಮಣಗಿ – ಒಂದು ಅಧ್ಯಯನ.

ಲಭಿಸಿರುವ ಪ್ರಶಸ್ತಿಗಳು:
೧. ಬೆಳಗಾವಿ ಜಿಲ್ಲಾ ಗಡಿನಾಡು ಉತ್ಸವದಲ್ಲಿ ಸನ್ಮಾನ.
೨. ಸಂಕೇಶ್ವರದಲ್ಲಿ ಸುವರ್ಣ ಕರ್ನಾಟಕೋತ್ಸವದಲ್ಲಿ ಸನ್ಮಾನ.
೩. ಹಾರೂಗೇರಿ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ.
೪. ಬೆಳಗಾವಿಯ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ



ಡಾ|| ಪಾಟೀಲ .ಶಿ.ಬಾ.

೧.	ಹೆಸರು	:	ಡಾ|| ಶಿವನಗೌಡ ಬಾಳಗೌಡ ಪಾಟೀಲ
೨.	ಕಾವ್ಯನಾಮ	:	ಇರುವುದಿಲ್ಲ.
೩.	ಹುಟ್ಟಿದ ಸ್ಥಳ ದಿನಾಂಕ	:	ಕೋಚರಿ, ಹುಕ್ಕೇರಿ ತಾ., ೦೫-೧೦-೧೯೩೯.
೪.	ಜಿಲ್ಲೆ - ರಾಜ್ಯ	:	ಬೆಳಗಾವಿ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಬಿ.ಇ.ಡಿ., ಪಿಹೆಚ್.ಡಿ.
೬.	ವೃತ್ತಿ	:	ನಿವೃತ್ತ ಪ್ರೌಢ ಶಾಲಾ ಸಹಶಿಕ್ಷಕ.
೭.	ಕೌಟುಂಬಿಕ	:	ಪತ್ನಿ; ಶಾಂತಾದೇವಿ. ಪುತ್ರರು, ಬಾಳಗೌಡ, ವಿಶ್ವನಾಥ.
೮.	ಸದ್ಯದ ವಿಳಾಸ	:	ಡಾ|| ಶಿ.ಬಾ. ಪಾಟೀಲ, 'ಬಸವಶ್ರೀ', ಬಸವನ ಬೀದಿ, ಸಂಕೇಶ್ವರ, ಹುಕ್ಕೇರಿ ತಾ. ಬೆಳಗಾವಿ-೫೯೧೩೧೩
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೩೩-೨೭೩೦೫೬, ೯೮೮೦೩೮೦೧೧೫.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕು ಕೋಚರಿ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ೭ನೇ ತರಗತಿವರಗೆ ಶಾಲೆಗೆ ಹೋದರು. ನಂತರ ಮನೆತನದ ಒಕ್ಕಲುತನದ ಕೆಲಸದಲ್ಲಿ ನಿರತರಾದರು. ನಂತರ ಬಾಹ್ಯವಾಗಿಯೇ ಎಂ.ಎ. ಮಾಡಿ. ಬಿಎಡ್. ಮಾಡಿ ೧೯೫೭ ರಿಂದ ೯೭ರವರಗೆ ಶಿಕ್ಷಕ ವೃತ್ತಿ ಮಾಡಿದರು. ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ ಕುರಿತಾದ ಮಹಾ ಪ್ರಬಂಧಕ್ಕೆ ಪಿಹೆಚ್.ಡಿ. ಪದವಿ ಪಡೆದರು. ೧೯೮೭ರಲ್ಲಿ ಭಾರತದಲ್ಲಿಯೇ ಪಿ.ಹೆಚ್.ಡಿ ಪಡೆದ ಪ್ರಥಮ, ಪ್ರಾಥಮಿಕ ಕನ್ನಡ ಶಿಕ್ಷಕರಾಗಿದ್ದಾರೆ. ಇವರಿಗೆ ಶಾಲೆಯೇ ಪ್ರಯೋಗ ಶಾಲೆಯಾಗಿತ್ತು. ವಿದ್ಯಾರ್ಥಿಗಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುತ್ತಿದ್ದರು. ಸ್ವಾವಲಂಬನ ಜೀವನವನ್ನು ಪ್ರೋತ್ಸಾಹಿಸುತ್ತಿದ್ದರು. ಜನಸಂಖ್ಯಾ ಸಮಸ್ಯೆ ನಿವಾರಣೆಯ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುತ್ತಿದ್ದರು. ಸಾಹಿತ್ಯ ಪ್ರವೃತ್ತಿಯ ಇವರು ಇನ್ನೂರಕ್ಕೂ ಹೆಚ್ಚು ಪ್ರಾಸಂಗಿಕ ಬಿಡಿ ಕವನಗಳನ್ನು, ವಿಡಂಬನಾತ್ಮಕ ಕಥೆ ಹಾಗೂ ಏಕಾಂಕ ನಾಟಕಗಳನ್ನು ರಚಿಸಿದ್ದಾರೆ. ಇವರು ಬೆಳಗಾವಿಯ 'ಹಸಿರು ಕ್ರಾಂತಿ'ಯ ದಿನಪತ್ರಿಕೆಯ ಅಂಕಣಕಾರರು. ಇವರು ಪ್ರಥಮ ಭಾಷೆ ಕನ್ನಡ ಎರಡನೇ ತರಗತಿಯ ಪಠ್ಯ ರಚನಾ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಮಾಜ ಪರಿಚಯ ಆರನೇ ತರಗತಿಯ ಪರೀಕ್ಷಣ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ದ್ವಿತೀಯ ಭಾಷೆ ಕನ್ನಡ ಮೂರರಿಂದ ಹತ್ತರವರಗೆ ಪಠ್ಯ ವಸ್ತು ರಚನಾ ಸಮಿತಿ ಸದಸ್ಯರು. ಕನ್ನಡೇತರ ದ್ವಿತೀಯ ಭಾಷೆ ಕನ್ನಡ ಆರನೇ ತರಗತಿಯ ರಚನಾ ಸಮಿತಿಯ ಅಧ್ಯಕ್ಷರಾಗಿಯಾ ಕೆಲಸ ಮಾಡಿದ್ದಾರೆ. ಎಂ.ಎಲ್.ಎ. ಕಮಿಟಿ ಸದಸ್ಯರು. ಸಂಪೂರ್ಣ ಸಾಕ್ಷರತಾ ಆಂದೋಲನ ಬೆಳಗಾವಿ ಜಿಲ್ಲೆ ಪಠ್ಯ ರಚನಾ ಸಮಿತಿಯ ಸದಸ್ಯರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ. ಪ್ರಥಮ ಭಾಷೆ ಕನ್ನಡ ಒಂಬತ್ತನೇ ತರಗತಿ ಪಠ್ಯ ರಚನಾ ಸಮಿತಿ ಸದಸ್ಯರು. ಇವರು ಶಾಸನ, ಕ್ಷೇತ್ರ ಪರಿಚಯ, ಇತಿಹಾಸ, ವಚನ ಸಾಹಿತ್ಯ ಮುಂತಾದ ವಿಷಯಗಳ ಕುರಿತಾದ ಗ್ರಂಥಗಳನ್ನು ರಚಿಸಿದ್ದಾರೆ. ಕ್ರಿ.ಶ. ೯೩೦ ರಿಂದ ಕ್ರಿ.ಶ. ೧೨೩೦ರ ಅವಧಿಯ ಬೆಳಗಾವಿ ಜಿಲ್ಲಾ ಇತಿಹಾಸ ಕುರಿತ ಪ್ರಬಂಧ ರಚಿಸಿದ್ದಾರೆ. ಭಾರತದಲ್ಲಿ ಶಾಲೆಗಳಲ್ಲಿ ಜನ ಸಂಖ್ಯಾ ಶಿಕ್ಷಣ ಕಲಿಸುವಿಕೆಯ ಕುರಿತೂ ಬರೆದಿದ್ದಾರೆ. ರಾಷ್ಟ್ರೀಯ ಭಾವೈಕ್ಯ ರಾಷ್ಟ್ರ ಮಟ್ಟದ ಪ್ರಬಂಧ ರಚಿಸಿದ್ದಾರೆ. ಡಿ.ಡಿ.೯ ಹಾಗೂ ಚಂದನ ದೂ.ದ.ದಲ್ಲಿ ಇವರ ಸಾಧನೆ ಪ್ರಸರವಾಗಿದೆ. ಹಲವಾರು ಸಂಘಗಳ ಅಧ್ಯಕ್ಷರಾಗಿದ್ದರು.

ಪ್ರಕಟಿತ ಕೃತಿಗಳು:

ಶಾಸನ – ರಟ್ಟರ ಕಾಲದ ಶಾಸನಗಳು. **ಇತಿಹಾಸ** – ಕರ್ನಾಟಕದ ಇತಿಹಾಸ ದರ್ಶನ, ನಾಣ್ಯಗಳ ಇತಿಹಾಸ. ಸಂಶೋಧನಾತ್ಮಕ ಲೇಖನಗಳು. **ವಚನ ಸಾಹಿತ್ಯ** – ದುಂಡೀಶನ ವಚನಗಳು, ಕೂಹುಂಡಿನಾಡು. **ಇತರೆ** – ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ. **ಸಂಪಾದನೆ** – ಇಷ್ಟ ಲಿಂಗಪೂಜೆ. ಪ್ರಾರ್ಥನೆ.

ಲಭಿಸಿರುವ ಪ್ರಶಸ್ತಿಗಳು:

೧. ೧೯೮೯ – ಎನ್.ಸಿ.ಇ.ಆರ್.ಟಿ. ದೆಹಲಿಯಿಂದ ಪ್ರಶಸ್ತಿ. ೨. ಏಕಲವ್ಯ ಪ್ರಶಸ್ತಿ.

೩. ೧೯೮೯ – ಉತ್ತಮ ಶಿಕ್ಷಕ ಪ್ರಶಸ್ತಿ. ೪. ೧೯೯೩ – ರಾಷ್ಟ್ರ ಪ್ರಶಸ್ತಿ.

೫. ೧೯೯೪ – ರಾಜ್ಯೋತ್ಸವ ಪ್ರಶಸ್ತಿ.

ವ್ಯಕ್ತಿ ಪರಿಚಯ

ಪ್ರಿಯದರ್ಶಿನಿ ಎಂ. ಭಟ್ಟ

೧. ಹೆಸರು : ಪ್ರಿಯದರ್ಶಿನಿ ಎಂ. ಭಟ್ಟ

೨. ಕಾವ್ಯನಾಮ : ಪ್ರಿಯ ಎಂ. ಕಲ್ಲಬ್ಬೆ

೩. ಹುಟ್ಟಿದ ಸ್ಥಳ ದಿನಾಂಕ : ಹಳವಳ್ಳಿ, ೧೭-೦೧-೭೬

೪. ಜಿಲ್ಲೆ – ರಾಜ್ಯ : ಉತ್ತರಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ. ಕನ್ನಡ.

೬. ವೃತ್ತಿ : ಜೀವ ವಿಮಾ ಪ್ರತಿನಿಧಿ

೭. ಕೌಟುಂಬಿಕ : ಪತಿ; ಮಹಾಬಲೇಶ್ವರ ಭಟ್ಟ.
ಪುತ್ರಿ; ಪೂರ್ವಿತಾ ಎಂ.

೮. ಸದ್ಯದ ವಿಳಾಸ : ಶ್ರೀಮತಿ ಪ್ರಿಯ ಎಂ. ಭಟ್ಟ, ಕಲ್ಲಬ್ಬೆ ಅಂಚೆ,
ಕುಮಟಾ ತಾ. ಉತ್ತರಕನ್ನಡ

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೮೬–೨೬೮೩೭೮, ೯೭೪೩೭೪೧೩೯೩

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಅಂಕೋಲ ತಾಲೂಕಿನ ಹಳವಳ್ಳ ಗ್ರಾಮದಲ್ಲಿ ಹುಟ್ಟಿದರು. ಇವರು ಶ್ರೀ ನರಸಿಂಹ ಭಟ್ಟ ಮತ್ತು ಶ್ರೀಮತಿ ಸರಸ್ವತಿ ದಂಪತಿಗಳ ಪುತ್ರಿ. ಕಲ್ಲೇಶ್ವರದ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಇವರ ವಿದ್ಯಾಭ್ಯಾಸ ಪ್ರಾರಂಭವಾಯಿತು. ಹಳವಳ್ಳಿಯ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರಕಾರಿ ಪ್ರೌಢಶಾಲೆ ಗುಳ್ಳಾಪುರ ಹಾಗೂ ವಾಯ್. ಟಿ.ಎಸ್.ಎಸ್. ಯಲ್ಲಾಪುರಗಳಲ್ಲಿ ಮಾಧ್ಯಮಿಕ ಶಿಕ್ಷಣ ಮಾಡಿದರು. ಶಾಲಾದಿನಗಳಲ್ಲೇ ಇವರಿಗೆ ಸಾಹಿತ್ಯಾಸಕ್ತಿ ಆರಂಭವಾಯಿತು. ಮನೆಯಲ್ಲಿ ಅಣ್ಣ ತರುತ್ತಿದ್ದ ಕಥೆ–ಕಾದಂಬರಿ ಹಾಗೂ ಪ್ರೌಢಶಾಲೆಯ ಕನ್ನಡ ಮೇಡಂ ಉಷಾ ನಾಯಕ್ ಅವರು ಕೊಡುತ್ತಿದ್ದ ಕನ್ನಡ ಸಾಹಿತ್ಯ ಗ್ರಂಥಗಳನ್ನು ಓದುತ್ತಿದ್ದರು. ಮಾಧ್ಯಮಿಕ ಶಿಕ್ಷಣದ ನಂತರ ಇವರು ಮನೆಯ ಚೌಕಟ್ಟಿನಲ್ಲಿ ಕುಳಿತು ಓದಿದ್ದೇ ಹೆಚ್ಚು. ಊರಿನ ಗ್ರಂಥಾಲಯ ಹಾಗೂ ಸ್ನೇಹಿತರಿಂದ ಓದಲು ತರುತ್ತಿದ್ದ ಪುಸ್ತಕಗಳೇ ಇವರ ಸಾಹಿತ್ಯ ರಚನೆಗೆ ಪ್ರೇರಣೆ ನೀಡಿತು. ಎಸ್.ಎಲ್. ಭೈರಪ್ಪ, ಕುವೆಂಪು, ಕಾರಂತರು, ಹಾ.ಮಾ. ನಾಯಕರು, ಬೇಂದ್ರೆ ಹಾಗೂ ಶಿವರುದ್ರಪ್ಪ ಮುಂತಾದ ಹಿರಿಯ ಸಾಹಿತಿಗಳು ಇವರ ಮೇಲೆ ಪ್ರಭಾವ ಬೀರಿದ್ದಾರೆ. ಯಂಡಮೂರಿ ವೀರೇಂದ್ರನಾಥ್ ಆಂಧ್ರ ಜನಪ್ರಿಯ ಸಾಹಿತಿಯ ಬರೆಹಗಳಿಂದಲೂ ಇವರು ಪ್ರಭಾವಿತರಾಗಿದ್ದಾರೆ. ಊರನ್ನು ಸುತ್ತುವರಿದಕಾಡು ಹಸಿರು ಪ್ರಕೃತಿ ಇವರ ಕವನ ರಚನೆಗೆ ರಸಾತ್ಮಕವಾದ ವಾಕ್ಯದ ಅಭಿವ್ಯಕ್ತಿಗೆ ಸ್ಫೂರ್ತಿ ನೀಡಿತು. ೧೯೯೭ರಲ್ಲಿ ಕಲ್ಲಬ್ಬೆ ಶ್ರೀ ಮಹಬಲೇಶ್ವರ ಭಟ್ಟರೊಂದಿಗೆ ವಿವಾಹವಾಯಿತು. ಕುಮಟದಲ್ಲಿ ಪಿ.ಯು.ಸಿ. ಮಾಡಿಕೊಂಡರು. ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಮಾಡಿ–ಕೊಂಡರು. ೨೦೦೮–೦೯ರ ಸಾಲಿನಲ್ಲಿ ಇವರ ಪ್ರಥಮ ಕವನ ಸಂಕಲನಕ್ಕೆ ಸರ್ಕಾರದ ಆರ್ಥಿಕ ಸಹಾಯ ದೊರೆಯಿತು. ತಾಲೂಕು ಸಾಹಿತ್ಯ ಪರಿಷತ್ತಿನಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳಲ್ಲಿ, ಕವಿಗೋಷ್ಠಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ೨೦೦೭ರಲ್ಲಿ ಕುಮಟಾದಲ್ಲಿ ನಡೆದ ಜಿಲ್ಲಾ ಮಹಿಳಾ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು. ೨೦೦೪ರಿಂದ ಭಾರತೀಯ ಜೀವ ವಿಮಾ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ– ಕವಿ (ಎಲ್ಲಾ ಕನ್ನಡ ಅಭಿಮಾನಿಗಳ ಅಂತರ ರಾಷ್ಟ್ರೀಯ ವೇದಿಕೆ)ಯ ಜಿಲ್ಲಾ ಸಂಚಾಲಕಿಯಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿದ್ದಾರೆ. ಇವರ ಬರೆಹಗಳು ತರಂಗ, ತುಷಾರ, ಸಕಾಲಿಕ, ವಿಕ್ರಮ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು:
ಕವನ ಸಂ. –ಜೀವನ್ಮುಖಿ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೫ – ಸಂಸ್ಕಾರ ಭಾರತಿ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ.

ವ್ಯಕ್ತಿ ಪರಿಚಯ

ಪುಟ್ಟಲಕ್ಷ್ಮೀ

೧.	ಹೆಸರು	:	ಪುಟ್ಟಲಕ್ಷ್ಮೀ
೨.	ಕಾವ್ಯನಾಮ	:	ನವಪುಲಕಾ (ಪುಟ್ಟಲಕ್ಷ್ಮೀ ಕಾಳೇಗೌಡ ದೊಡ್ಡಪಾಳ್ಯ)
೩.	ಹುಟ್ಟಿದ ಸ್ಥಳ ದಿನಾಂಕ	:	ಮೇಳಾಪುರ, ಶ್ರೀರಂಗಪಟ್ಟಣ ತಾ. ೩೦-೮-೬೮
೪.	ಜಿಲ್ಲೆ - ರಾಜ್ಯ	:	ಮಂಡ್ಯ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಪ್ರಥಮ ಬಿ.ಎ.
೬.	ವೃತ್ತಿ	:	ಸ್ಥಳೀಯ ಪತ್ರಿಕೆಗಳಲ್ಲಿ ವರದಿಗಾರ್ತಿ, ಬರಹಗಾರರು.
೭.	ಕೌಟುಂಬಿಕ	:	ಪತಿ ; ಕಾಳೇಗೌಡ. ಪುತ್ರಿ; ಕೆ. ವರ್ಷಾ. ಪುತ್ರ; ಕೆ. ಧೀರಜ್.
೮.	ಸದ್ಯದ ವಿಳಾಸ	:	ಪುಟ್ಟಲಕ್ಷ್ಮಿ ಕಾಳೇಗೌಡ C/o ಅನುಗ್ರಹ ನಿಲಯ, ಕ್ಯಾತುಂಗೆರೆ ಲೇಔಟ್, ಮಂಡ್ಯ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೯೬೪೦೫೫೫೯೨, ೯೯೪೫೦೩೨೭೬೨
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಮೇಳಾಪುರ ಎಂಬ ನಿಸರ್ಗ ಸುಂದರ ಪರಿಸರದಲ್ಲಿರುವ ಪುಟ್ಟಗ್ರಾಮದಲ್ಲಿ ಜನಿಸಿದರು. ಇವರು ಶ್ರೀ ಕುಳ್ಳೇಗೌಡ ಮತ್ತು ಶ್ರೀಮತಿ ಗೌರಮ್ಮ ದಂಪತಿಗಳ ಪುತ್ರಿ. ಅವಿಭಕ್ತ ಕುಟುಂಬದಿಂದ ಬಂದವರು. ಕೃಷಿ ಪ್ರಧಾನ ಕುಟುಂಬ. ವ್ಯವಸಾಯವೇ ಜೀವನೋಪಾಯ. ಹುಟ್ಟೂರಿನಲ್ಲಿಯೇ ಏಳನೇ ತರಗತಿಯವರಗೆ ವಿದ್ಯಾಭ್ಯಾಸ. ಮುಂದೆ ಹೆಣ್ಣು ಮಕ್ಕಳು ಶಾಲೆಗೆ ಹೋಗುವಂತಿರಲಿಲ್ಲ. ೧೯೬೩ರಲ್ಲಿ ಕಾಳೇಗೌಡರೊಂದಿಗೆ ಇವರ ವಿವಾಹವಾಯಿತು. ಪತಿ ಶಿಕ್ಷಕ ವೃತ್ತಿಯಲ್ಲಿದ್ದರು. ಕೆಲವು ಕಾಲ ಪತ್ರಿಕೆಗಳ ವರದಿಗಾರರಾಗಿ ಸೇವೆ ಸಲ್ಲಿಸಿದರು. ಕಂಪ್ಯೂಟರ್ ಕಲಿತರು. ಮನೆಯಲ್ಲೇ ಕುಳಿತು ಪತ್ರಿಕೆಗಳಿಗೆ ತಮ್ಮ ರಚನೆಗಳನ್ನು ಈಮೈಲ್ ಮಾಡ ತೊಡಗಿದರು. ಗೃಹಿಣಿಯಾಗಿ ಸಂಸಾರ ನಿಭಾಯಿಸುವ ವೃತ್ತಿಯೊಂದಿಗೆ ಸಾಹಿತ್ಯ ಪ್ರವೃತ್ತಿಯನ್ನು ಮರೆಯಲಿಲ್ಲ. ಪತಿಯ ಪ್ರೋತ್ಸಾಹದಿಂದ ಬಾಹ್ಯ ವಿದ್ಯಾರ್ಥಿಯಾಗಿ ಓದು ಮುಂದುವರೆಸಿದರು. ಪ್ರಜಾವಾಣಿ, ಪ್ರಿಯಾಂಕ, ಕೃಷಿ ಬೆಳಕು, ಆಂದೋಲನ, ಮೈಸೂರು ಚಿತ್ರ ಪತ್ರಿಕೆಗಳಲ್ಲಿ ಇವರ ಬರೆಹಗಳು ಪ್ರಕಟವಾಗುತ್ತಿರುತ್ತವೆ. ಸ್ಥಳೀಯ ಪತ್ರಿಕೆಗಳಾದ ಪೌರವಾಣಿ, ಕೊಳಲು, ಮಂಡ್ಯ ಸುದ್ದಿ, ಅಡ್ವೈಸರ್, ಸಂಕೀರ್ತನ, ಸುದ್ದಿಯ ಕೈಗನ್ನಡಿ ಮುಂತಾದ ಪತ್ರಿಕೆಗಳ ಅಂಕಣಕಾರರು. ಶ್ರೀರಂಗ ಪಟ್ಟಣದಲ್ಲಿ ಪ್ರಾರಂಭವಾದ 'ಸೂರ್ಯ ರಶ್ಮಿ' ಪಕ್ಷ ಪತ್ರಿಕೆಗೆ ಬರೆಯುವುದರ ಮುಖಾಂತರ ಇವರು ಸಾಹಿತ್ಯ ಜಗತ್ತಿಗೆ ಪಾದರ್ಪಣೆ ಮಾಡಿದರು. ಸುಮಾರು ಇನ್ನೂರಕ್ಕೂ ಹೆಚ್ಚು ಇವರ ಲೇಖನಗಳು ಪ್ರಕಟವಾಗಿವೆ. ಸಣ್ಣ ಕಥೆ, ಮಕ್ಕಳ ಕಥೆಗಳು ಪ್ರಕಟವಾಗಿವೆ. ಇವರ ಪ್ರಥಮ ಲೇಖನ ಸಂಕಲನ ೨೦೦೮ರಲ್ಲಿ ಪ್ರಕಟವಾಯಿತು. ಎರಡನೆಯದು ೨೦೦೯ರಲ್ಲಿ. ಮೂರನೆಯದು ಕಥಾ ಸಂಕಲನ ೨೦೧೦ರಲ್ಲಿ ಹೊರಬಂದಿದೆ. ತಮ್ಮ ಕೃತಿಗಳ ಪ್ರಕಟಣೆಗೆ ಪ್ರಕಾಶಕರು ಸಿಗದಿದ್ದಾಗ ಬೇಸತ್ತು ತಮ್ಮದೇ ಆದ 'ವರ್ಷಾಧೀರಜ್ ಪ್ರಕಾಶನ' ಪ್ರಾರಂಭಿಸಿದ್ದಾರೆ.

ಪ್ರಕಟಿತ ಕೃತಿಗಳು:
ಲೇ. ನ ಸಂ.– ನೆನಪು, ಗೊಂಚಲು.
ಕಥಾ ಸಂ.– ಮನಸು ಮನಸುಗಳ ನಡುವೆ.

ವ್ಯಕ್ತಿ ಪರಿಚಯ



ಬನವಾಸಿ ರಾಮ

೧.	ಹೆಸರು	:	ರಘುರಾಮ ಲಕ್ಷ್ಮೀನಾರಾಯಣ ಮಂಗಳೂರ್
೨.	ಕಾವ್ಯನಾಮ	:	ಬನವಾಸಿ ರಾಮ
೩.	ಹುಟ್ಟಿದ ಸ್ಥಳ ದಿನಾಂಕ	:	ಹೊಲನಗದ್ದೆ, ಕುಮಟ. ೧೪-೦೯-೧೯೪೪.
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎಸ್.ಸಿ. (ರಸಾಯನ ಶಾಸ್ತ್ರ).
೬.	ವೃತ್ತಿ	:	ಉಪನ್ಯಾಸಕ
೭.	ಕೌಟುಂಬಿಕ	:	ವಿವಾಹಿತ, ಇಬ್ಬರು ಹೆಣ್ಣು ಮಕ್ಕಳು.
೮.	ಸದ್ಯದ ವಿಳಾಸ	:	ನಂ. ೪೧೧, ೩ನೇ ಮುಖ್ಯರಸ್ತೆ, ೧೦ನೇ ಅಡ್ಡರಸ್ತೆ, ಟಿ.ಕೆ. ಬಡಾವಣೆ ಮೈಸೂರು - ೫೭೦೦೦೯
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೨೧-೨೫೪೬೭೨೨, ೯೪೪೮೦೬೩೪೯೦೨
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕು ಹೊಲನಗದ್ದೆಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಕನ್ನಡ ಪ್ರಾಥಮಿಕ ಶಾಲೆ ಹೊಲನಗದ್ದೆ ಹಾಗೂ ರಾಯಪ್ಪ ಹುಲಕಲ್ ಕನ್ನಡ ಪ್ರಾಥಮಿಕ ಶಾಲೆ ಶಿರಸಿಗಳಲ್ಲಾಯಿತು. ಪ್ರೌಢ ಶಿಕ್ಷಣ ಎಸ್.ವಿ. ಪ್ರೌಢ ಶಾಲೆ ಸಿದ್ದಾಪುರ ಮತ್ತು ಗಿಬ್ಸ್ ಪ್ರೌಢ ಶಾಲೆ ಕುಮಟದಲ್ಲಾಯಿತು. ಕಾಲೇಜು ಶಿಕ್ಷಣ ಕುಮಟದಾ ಕೆನರಾ ಕಾಲೇಜ್ ಬಿ.ಎಸ್.ಸಿ.ವರಗೆ. ಸ್ನಾತಕೋತ್ತರ ಶಿಕ್ಷಣ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ರಸಾಯನ ಶಾಸ್ತ್ರ ವಿಭಾಗದಲ್ಲಿ ಎಂ.ಎಸ್.ಸಿ. ಪದವಿ. ಮುಂಬಯಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿಯಲ್ಲಿ ಸ್ನಾತಕೋತ್ತರ ಸಂಶೋಧನೆ ಮಾಡಿದ್ದಾರೆ. ೧೯೬೮ ರಿಂದ ೧೯೭೫ ರವಗೆ ಜೆ.ಸಿ. ಕಾಲೇಜ್ ಅಂಕೋಲ, ಲಾಲ್ ಬಹುದೂರ್ ಕಾಲೇಜು ಸಾಗರ ಹಾಗೂ ಸರ್ಕಾರಿ ಫಾರ್ಮಿಸಿ ಕಾಲೇಜು ಬೆಂಗಳೂರುಗಳಲ್ಲಿ ಪದವಿ ತರಗತಿಗಳಿಗೆ ರಸಾಯನ ಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ೧೯೫೭ ರಿಂದ ೧೯೮೨ ವರಗೆ ಸ.ಪ.ಪೂ. ಕಾಲೇಜು ಗುಂಡ್ಲಪೇಟೆ, ಚಿಕ್ಕಬಳ್ಳಾಪುರ ಹಾಗೂ ಮಾರಿಕಾಂಬ ಪದವಿ ಪೂರ್ವ ಕಾಲೇಜು ಶಿರಸಿಯಲ್ಲಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪದವಿ ಪೂರ್ವ ನಿರ್ದೇಶನಾಲಯ ಬೆಂಗಳೂರಿನಲ್ಲಿ ೧೯೮೨ ರಿಂದ ೨೦೦೨ ರವರಗೆ ಸಹಾಯಕ ನಿರ್ದೇಶಕರಾಗಿ, ಕಲುಬುರ್ಗಿ, ಬೆಂಗಳೂರು, ತುಮಕೂರು ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ನಿರ್ದೇಶಕರಾಗಿ, ರಾಜ್ಯ ಸಂಪನ್ಮೂಲ ಕೇಂದ್ರ ಮೈಸೂರಿನಲ್ಲಿ, ಪ್ರಧಾನ ನಿರ್ದೇಶನಾಲಯದಲ್ಲಿ ಜಂಟಿ ನಿರ್ದೇಶಕರಾಗಿ, ವೃತ್ತಿ ಶಿಕ್ಷಣ ಇಲಾಖೆಯ ಪ್ರಭಾರೆ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿ ೨೦೦೨ರಲ್ಲಿ ನಿವೃತ್ತರಾಗಿ ಮೈಸೂರಿನಲ್ಲಿ ನೆಲಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿಗಳಾದ ಇವರ ಮೇಲೆ ಕುವೆಂಪು, ಅಂಬಿಕಾತನಯ ದತ್ತ, ಶಿವರಾಮ ಕಾರಂತರು ಪ್ರಭಾವ ಬೀರಿದರು. ಪರಿಣಾಮ ಕವನ ರಚಿಸತೊಡಗಿದರು.

ಪ್ರಕಟಿತ ಕೃತಿಗಳು:
ಕವನ ಸಂ. – ಹರೆಯದ ಹೊತ್ತಿಗೆ, ಬೇಯದಿ ಹಳೆ ಸೀತೆ.
ನಿಘಂಟು – ಇಂಗ್ಲೀಷ್ – ಕನ್ನಡ ರಸಾಯನ ಶಾಸ್ತ್ರ ನಿಘಂಟು

ಲಭಿಸಿರುವ ಪ್ರಶಸ್ತಿಗಳು:
೧. ೨೦೦೧–೦೨ – ನವದೆಹಲಿಯ ಇಂಡಿಯಾ ಇಂಟರ್ ನ್ಯಾಷನಲ್ ಫ್ರೆಂಡ್ ಶಿಪ್ ಸೊಸೈಟಿಯವರ ಇಂದಿರಾಗಾಂಧಿ ಪ್ರಿಯದರ್ಶಿನಿ ಪ್ರಶಸ್ತಿ.
೨. ೨೦೦೧–೦೨ – ಬೆಂಗಳೂರಿನ ಜ್ಞಾನಮಂದಾರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಕಾಡೆಮಿಯವರ ಸಮಾಜ ರತ್ನ'ಪ್ರಶಸ್ತಿ.

ವ್ಯಕ್ತಿ ಪರಿಚಯ



ಬಸವಂತಪ್ಪ ಬಾಳಪ್ಪ ಬಡಿಗೇರ

೧. ಹೆಸರು : ಬಸವಂತಪ್ಪ ಬಾಳಪ್ಪ ಬಡಿಗೇರ

೨. ಕಾವ್ಯನಾಮ : 'ಮಾತೃ ಪ್ರೇಮಿ'

೩. ಹುಟ್ಟಿದ ಸ್ಥಳ ದಿನಾಂಕ : ಬಸವನ ಕುಡಚಿ, ೦೧-೦೩-೧೯೪೨.

೪. ಜಿಲ್ಲೆ - ರಾಜ್ಯ : ಬೆಳಗಾವಿ, ಕರ್ನಾಟಕ.

೫. ವಿದ್ಯಾಭ್ಯಾಸ : ಕನ್ನಡ ಪಂಡಿತ, ಎಂ.ಎ., ಬಿ.ಎಡ್.

೬. ವೃತ್ತಿ : ನಿವೃತ್ತಿ, ಸಂಗೀತ, ಕಲೆ, ಸಾಹಿತ್ಯ.

೭. ಕೌಟುಂಬಿಕ : ಪತ್ನಿ; ಶಾಂತಮ್ಮ ಬಸವಂತ ಬಡಿಗೇರ.
ಪುತ್ರರು; ಕಾಳಿದಾಸ, ದೇವೇಂದ್ರ, ಅರವಿಂದ.

೮. ಸದ್ಯದ ವಿಳಾಸ : ಬ.ಬಾ. ಬಡಿಗೇರ, ೩, ಓಂಕಾರ ನಗರ,
ಶಿಂದೊಳ್ಳಿ - ಬೆಳಗಾವಿ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೧-೩೨೯೭೯೮೦, ೯೬೧೧೪೦೬೪೫೬.

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆ ಬಸವನ ಕುಡಚಿಯಲ್ಲಿ ಜನಿಸಿದರು. ೧೯೬೩ಯಿಂದ ೧೮ ವರ್ಷಗಳ ಕಾಲ ಪ್ರಾಥಮಿಕ ಶಿಕ್ಷಕರಾಗಿದ್ದರು. ೧೯೮೨ ರಿಂದ ೧೮ ವರ್ಷಗಳು ಪ್ರೌಢಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ೨೦೦೦ದಲ್ಲಿ ನಿವೃತ್ತರಾಗಿ ಬೆಳಗಾವಿಯಲ್ಲಿ ನೆಲಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಎಂ.ಎ. ಸ್ನಾತಕೋತ್ತರ ಪದವೀಧರರು. ಬಿ.ಎಡ್. ಮಾಡಿದ್ದಾರೆ. ಕನ್ನಡ ಪಂಡಿತರಾದ ಇವರು ವೃತ್ತಿಯಿಂದ ಶಿಕ್ಷಕರು ಹಾಗೂ ಪ್ರವೃತ್ತಿಯಿಂದ ಸಾಹಿತಿಗಳಾಗಿದ್ದಾರೆ. ಶಾಲಾ ದಿನಗಳಲ್ಲಿಯೇ ಇವರು ಸಾಹಿತ್ಯಾಸಕ್ತರಾದರು. ಕಥೆ, ಕವನ ಚುಟುಕ ಹಾಗೂ ಲೇಖನಗಳನ್ನು ಬರೆಯ ತೊಡಗಿದರು. ಇವರ ಬರೆಹಗಳು ದಿನ ಪತ್ರಿಕೆ, ವಾರ ಪತ್ರಿಕೆ, ಮಾಸ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು ಶೂನ್ಯ ಸಂಪಾದನೆಗಳಲ್ಲಿ ಅಕ್ಕ ಮಹಾದೇವಿ ಹಾಗೂ ಮುಕ್ತಾಯಕ್ಕರ ತೌಲನಿಕ ದೃಷ್ಟಿ ಬರೆದಿದ್ದಾರೆ. ನಾಕುತಂತಿಯಲ್ಲಿ ನಾಲ್ಕರ ವೈಶಿಷ್ಟ್ಯತೆ ಹಾಗೂ ಪ್ರೊ. ಎಸ್.ಎಸ್. ಭೂಸನೂರ ಮಠ ಇವರ ಕುರಿತು 'ಭವ್ಯ ಮಾನವ'ದ ಸಂಕ್ಷಿಪ್ತ ರೂಪ ರಚಿಸಿದ್ದಾರೆ. ಹಲವು ಮಿತ್ರರು ಸೇರಿ 'ರಾಮಾಶ್ವಮೇಧಂ' ಸಂಪಾದನೆ ಮಾಡಿದ್ದಾರೆ. ಮೈಸೂರಿನ ವಸಂತ ವಾರ್ಷಿಕ ಪತ್ರಿಕೆಯಲ್ಲಿ ಇವರ ವಿಕ್ರಮಾರ್ಜುನವಿಜಯ ಕಾವ್ಯಗಳ ಬಿಡಿ ಲೇಖನಗಳು ಪ್ರಕಟವಾಗಿವೆ. ೧೯೬೩ ಮತ್ತು ೧೯೭೦ರಲ್ಲಿ ಇವರು ಕ್ರಮವಾಗಿ ಸಾಂಬ್ರಾ ಮತ್ತು ಮುತಗ ಗ್ರಾಮಗಳಲ್ಲಿ ಕನ್ನಡ ಶಾಲೆಗಳ ಸ್ಥಾಪನೆ ಮಾಡಿದ್ದಾರೆ ೧೯೭೯ರಲ್ಲಿ ಮೈಸೂರಿನಿಂದ ಹಾಗೂ ೧೯೮೮ ರಿಂದ ೯೦ರ ಸಾಲಿನಲ್ಲಿ ಧಾರವಾಡ ಆಕಾಶವಾಣಿಯಿಂದ ಇವರ ಕಾವ್ಯವಾಚನ, ಚಿಂತನ ಹಾಗೂ ಭಾಷಣಗಳು ಪ್ರಸಾರವಾಗಿವೆ. ೧೯೯೦ರಿಂದೀಚೆಗೆ ಹಲವಾರು ಸಂಘ ಸಂಸ್ಥೆಗಳಿಗೆ ಇವರು ರೂ. ೨೨೦೦೦.೦೦ ಗಳಷ್ಟು ದೇಣಿಗೆ ನೀಡಿದ್ದಾರೆ. ಇವರು ಅನೇಕ ಕವಿ ಹಾಗೂ ವಿಚಾರ ಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಸದ್ಯ ಸ್ಥಳೀಯ 'ನಿರಂತರ ಸಾಂಸ್ಕೃತಿಕ ಸಂಘ'ದಲ್ಲಿ ಬಹುಮುಖ ಪಾತ್ರ ನಿರ್ವಹಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು:

ಕವನ ಸಂ. – ಶರಣು.

ಪ್ರಬಂಧ ಸಂ. – ಕನ್ನಡ ನಿಬಂಧ ಮಾಲೆ.

ಗೇಯ ಕವನ ಸಂ. – ನಾದ ತರಂಗ.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೩ – ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ.

ವ್ಯಕ್ತಿ ಪರಿಚಯ

ಬಸವರಾಜ್ ಕಾಕನೂರು. ಜಿ.ಬಿ.

೧.	ಹೆಸರು	: ಜಿ.ಬಿ.ಬಸವರಾಜ್ ಕಾಕನೂರು
೨.	ಕಾವ್ಯನಾಮ	: ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	: ಕಾಕನೂರು, ೦೮–೦೬–೧೯೫೨.
೪.	ಜಿಲ್ಲೆ – ರಾಜ್ಯ	: ದಾವಣಗೆರೆ, ಕರ್ನಾಟಕ.
೫.	ವಿದ್ಯಾಭ್ಯಾಸ	: ಸ್ನಾತಕೋತ್ತರ ಶಿಕ್ಷಣ.
೬.	ವೃತ್ತಿ	: ಪ್ರಥಮ ದರ್ಜೆ ಸಹಾಯಕ.
೭.	ಕೌಟುಂಬಿಕ	: ಪತ್ನಿ; ಶ್ರೀಮತಿ ಮರುಳಮ್ಮ. ಪುತ್ರರು; ಜಿ.ಬಿ. ಪ್ರವೀಣ್ ಕುಮಾರ, ಜಿ.ಬಿ.ಸುನಿಲ್. ಪುತ್ರಿ; ಜಿ. ಎಸ್ ಸುನೀತ (ಸಾಕು ಮಗಳು)
೮.	ಸದ್ಯದ ವಿಳಾಸ	: ಜಿ.ಬಿ.ಬಸವರಾಜ್ ಕಾಕನೂರು, ಪ್ರಥಮ ದರ್ಜೆ ಸಹಾಯಕ ಲೋಕಪಯೋಗಿ ಉಪವಿಭಾಗ, ಹರಿಹರ, ದಾವಣಗೆರೆ ಜಿಲ್ಲೆ.
೯.	ಖಾಯಂ ವಿಳಾಸ	: ಜಿ.ಬಿ.ಬಸವರಾಜ್ ಕಾಕನೂರು, ಕಾಕನೂರು, ಅಂಚೆ ಚೆನ್ನಗಿರಿ. ದಾವಣಗೆರೆ.
೧೦.	ದೂರವಾಣಿ ಸಂಖ್ಯೆ	: ೦೮೧೮೦–೨೫೬೬೯೬
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ದಾವಣಗೆರೆ ಜಿಲ್ಲೆ ಚೆನ್ನಗಿರಿ ತಾಲೂಕು ಕಾಕನೂರಿನಲ್ಲಿ ಹುಟ್ಟಿದರು. ಇವರು ಶ್ರೀ ಬಸಪ್ಪ ಮತ್ತು ಶ್ರೀಮತಿ ಓಂಕಾರಮ್ಮ ದಂಪತಿಗಳ ಪುತ್ರ. ಇವರು ಪ್ರಾಥಮಿಕ ಶಿಕ್ಷಣವನ್ನು ಕಾವಲಹಟ್ಟಿ ಸಂತೆಬೆನ್ನೂರುಗಳಲ್ಲಿ ಮಾಡಿದರು. ನಂತರ ಓದು ಹಾಗೂ ಪದವಿ ಪೂರ್ವ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಸಂಯುಕ್ತ ಪದವಿಪೂರ್ವ ಕಾಲೇಜು ಸಂತೆಬೆನ್ನೂರಿನಲ್ಲಿ ಮಾಡಿದರು. ತುಮಕೂರಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ಬಿ.ಎ. ಪಡೆದರು. ಸ್ನಾತಕೋತ್ತರ ಕೇಂದ್ರ ಭದ್ರ ಜಲಾಶಯ ಶಿವಗಂಗೋತ್ರಿಯಲ್ಲಿ ಕನ್ನಡ ವಿಷಯದ ಸ್ನಾತಕೋತ್ತರ ಶಿಕ್ಷಣ ಪಡೆದರು. ೧೯೮೪ರಲ್ಲಿ ಸಣ್ಣ ನೀರಾವರಿ ಇಲಾಖೆ ಚಿಕ್ಕ ನಾಯಕನ ಹಳ್ಳಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ವೃತ್ತಿ ಜೀವನ ಆರಂಭಿಸಿದರು. ನಂತರ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪವಿಭಾಗ ಹೊನ್ನಾಳಿ ಹಾಗೂ ತಾಲೂಕು ಪಂಚಾಯತ್ ಚನ್ನಗಿರಿಗಳಲ್ಲೂ ಸೇವೆ ಸಲ್ಲಿಸಿದರು. ನಂತರ ಲೋಕೋಪಯೋಗಿ ಉಪ ವಿಭಾಗ ಹರಿಹರದಲ್ಲಿ ಬಡ್ತಿ ಪಡೆದು ೨೦೦೨ರಲ್ಲಿ ನಿವೃತ್ತರಾದರು. ಶಾಲಾದಿನಗಳಿಂದಲೇ ಸಾಹಿತ್ಯದ ಬಗ್ಗೆ ಒಲವು. ಇವರಿಗೆ ಜನಪದ ಸಾಹಿತ್ಯ, ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯದಲ್ಲಿಯೂ ಆಸಕ್ತಿಯಿದೆ. ಇವರ ಮೇಲೆ ಕುವೆಂಪು, ಬೇಂದ್ರೆ, ಅಡಿಗರು, ಜಿ.ಎಸ್. ಶಿವರುದ್ರಪ್ಪ, ತಿ.ನಂ.ಶ್ರೀ, ಕೆ.ಎಸ್. ನರಸಿಂಹಸ್ವಾಮಿ, ಮಾಸ್ತಿ ಮುಂತಾದ ಸಾಹಿತಿಗಳ ಪ್ರಭಾವ ಬೀರಿದೆ. ಇವರು ತಾಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಕವಿಗೋಷ್ಠಿಗಳಲ್ಲಿ ಭಾಗವಹಿಸಿ ಕವನ ವಾಚನ ಮಾಡಿದ್ದಾರೆ. ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ಕಾಲೇಜುಗಳಲ್ಲಿ 'ಕನ್ನಡ ಕಾದಂಬರಿಗಳಲ್ಲಿ ವಸ್ತು ವಿಕಾಸ ಮತ್ತು ಅಭಿವ್ಯಕ್ತಿ ಕ್ರಮ', 'ಜನಪದ ಸಾಹಿತ್ಯದಲ್ಲಿ ಸ್ತ್ರೀ', 'ವಚನ ಸಾಹಿತ್ಯ ಮತ್ತು ವೈಚಾರಿಕತೆ'. 'ಬೇಂದ್ರೆಯುವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ', 'ಕುವೆಂಪು ರಾಮಾಯಣ ದರ್ಶನದಲ್ಲಿ ದರ್ಶನ ದೃಷ್ಟಿ', 'ಚನ್ನಗಿರಿ ತಾಲೂಕಿನ ಐತಿಹಾಸಿಕ ಹಿನ್ನಲೆ', 'ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯದಲ್ಲಿ ವೈಚಾರಿಕತೆ', 'ಸರ್ವಜ್ಞ ಮತ್ತು ಸಾಮಜಿಕ ಪ್ರಜ್ಞ', 'ಬೇಂದ್ರೆ ಬದುಕು ಬರಹ', 'ಮಾಸ್ತಿ ಒಂದು ನೆನಪು', 'ಕೆ.ಎಸ್.ಎನ್. ಅವರ ಮೈಸೂರು ಮಲ್ಲಿಗೆಯಲ್ಲಿ ಪ್ರೇಮೋತ್ಸವ', 'ಭಾರತೀ ಪುರ, ಸಂಸ್ಕಾರ ಕಾದಂಬರಿಗಳ ತೌಲನಿಕ ವಿಮರ್ಶೆ' ಮುಂತಾದ ಇನ್ನೂ ಹತ್ತಾರು ವಿಚಾರ ಪೂರಿತ ವಿಷಯಗಳ ಬಗ್ಗೆ ಉಪನ್ಯಾಸ ಮಾಡಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಕಾವ್ಯವಾದಳು ಹುಡುಗಿ.
ಸಂಪಾದಿತ – ಸೃಜನ

ವ್ಯಕ್ತಿ ಪರಿಚಯ

ಬಾಯರಿ. ಕೆ.ಎಸ್.

೧. ಹೆಸರು : ಕಸ್ತೂರಿ ಶಂಕರ ಬಾಯರಿ.

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಸಾಸ್ತಾನ. ೨೭-೪-೧೯೫೬

೪. ಜಿಲ್ಲೆ - ರಾಜ್ಯ : ಉಡುಪಿ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎ., ಎಲ್.ಎಲ್.ಬಿ.

೬. ವೃತ್ತಿ : ವಕೀಲರು

೭. ಕೌಟುಂಬಿಕ : ಅವಿವಾಹಿತರು

೮. ಸದ್ಯದ ವಿಳಾಸ : ಕಸ್ತೂರಿ ಶಂಕರ ಬಾಯರಿ, ಕಾತ್ಯಾಯನಿ,
ಚಾಲುಕ್ಯ ನಗರ ಬಾದಾಮಿ-೫೮೭೨೦೧

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೫೭-೨೨೦೪೫೭, ೯೪೮೦೨೫೭೦೧೩.

೧೧. ಹಸ್ತಾಕ್ಷರ (ಸಹಿ) : ಕೆ.ಎಸ್. ಬಾಯರಿ

ಸಾಹಿತ್ಯ ಪರಿಚಯ

ಇವರು ಉಡುಪಿಜಿಲ್ಲೆ ಸಾಸ್ತಾನದಲ್ಲಿ ಜನಿಸಿದರು. ಇವರು ಶ್ರೀ ಶಂಕರರಾವ್ ಮತ್ತು ಶ್ರೀಮತಿ ಕಾತ್ಯಾಯಿನಿ ದಂಪತಿಗಳ ಪುತ್ರಿ. ವೈದಿಕ ಮನೆತನದಿಂದ ಬಂದವರು. ತಾಯಿ ಉತ್ತಮ ಕವಯತ್ರಿ. ಇವರು ಪ್ರಾಥಮಿಕ ಶಿಕ್ಷಣವನ್ನು ಸಾಸ್ತಾನ ಮತ್ತು ಬಾದಾಮಿಯಲ್ಲಿ ಮಾಡಿದರು. ಹೈಸ್ಕೂಲ್ ಹಾಗೂ ಪಿ.ಯು.ಸಿ. ಬಾದಾಮಿಯಲ್ಲೇ ಮಾಡಿದರು. ಶ್ರೀ ಬಸವೇಶ್ವರ ಆರ್ಟ್ಸ್ ಕಾಲೇಜಿನಲ್ಲಿ ಆಂಗ್ಲ ಸಾಹಿತ್ಯದಲ್ಲಿ ೧೯೭೭ರಲ್ಲಿ ಬಿ.ಎ. ಪದವಿ ಪಡೆದರು. ಶ್ರೀ ಬಸವೇಶ್ವರ ಕಾನೂನು ಮಹಾವಿದ್ಯಾಲಯದಲ್ಲಿ ೧೯೮೪ರಲ್ಲಿ ಕಾನೂನು ಪದವೀಧರಾದರು. ಕಾಲೇಜಿನ ದಿನಗಳಿಂದಲೇ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿತು. ಕಥಾ ಸ್ಪರ್ಧೆ, ಕವನ ಸ್ಪರ್ಧೆಗಳಲ್ಲಿ ಭಾಗವಹಿಸಲು ಕಥೆ, ಕವನಗಳನ್ನು ರಚಿಸ ತೊಡಗಿದರು. ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಿದರು. ಹೀಗೆ ಇವರು ತಮ್ಮ ಕಾಲೇಜಿನ ದಿನಗಳಿಂದಲೇ ಸಾಹಿತ್ಯ ಕೃಷಿಗೆ ತೊಡಗಿದರು. ಖಾಸಗಿ ಸಂಸ್ಥೆಯೊಂದರಲ್ಲಿ ಮುಖ್ಯೋಪಧ್ಯಾಯಿನಿಯಾಗಿ ೨೬ ವರ್ಷಗಳ ಸೇವೆ ಸಲ್ಲಿಸಿದರು. ಇವರು ರಂಗಭೂಮಿ ಕಲಾವಿದರೂ ಹೌದು. ಜಿ.ಬಿ. ಜೋಷಿಯವರ ನಾಟಕಗಳಲ್ಲಿ ನಟಿಸಿದ್ದಾರೆ. ಸಿತಾರ ವಾದನ ನುಡಿಸುವ ಹವ್ಯಾಸ. ಇವರು ಹೆಚ್ಚಾಗಿ ಕಥೆ, ಕವನ ಬರೆದಿದ್ದಾರೆ. ಅನುವಾದ ಮಾಡುತ್ತಾರೆ. ಇವರ ಬರೆಹಗಳು ನಾಡಿನ ಪ್ರಸಿದ್ಧ ಪತ್ರಿಕೆಗಳಾದ ಉದಯವಾಣಿ, ಪ್ರಜಾವಾಣಿ, ವಿಜಯ ಕರ್ನಾಟಕ, ಮಯೂರ, ತುಷಾರ, ಸಂಚಯ, ಸಂಕ್ರಮಣಗಳಲ್ಲಿ ಪ್ರಕಟವಾಗುತ್ತವೆ. ಪ್ರಜಾವಾಣಿ, ವಿಜಯ ಕರ್ನಾಟಕ ದೀಪಾವಳಿ ಕಥಾಸ್ಪರ್ಧೆಗಳಲ್ಲಿ ಇವರ ಕಥೆಗಳು ಪ್ರಥಮ ಬಹುಮಾನ ಗಳಿಸಿವೆ. ಜಿಲ್ಲೆಯ ಎಲ್ಲ ಸಭೆ, ಸಮಾರಂಭಗಳಲ್ಲಿ, ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರಮುಖವಾಗಿ ಭಾಗವಹಿಸುತ್ತಾರೆ. ಆಕಾಶವಾಣಿಯಲ್ಲಿ ಇವರ ಕಥೆ, ಕವಿತೆ ಗಳು ಪ್ರಸಾರವಾಗುತ್ತವೆ. ದೂರದರ್ಶನ ಕಾರ್ಯಕ್ರಮಗಳಲ್ಲಿ ಇವರು ಕವಿತಾ ವಾಚನ ಮಾಡಿದ್ದಾರೆ. ಇವರು ಉಚಿತ ಕಾನೂನು ಸಲಹಾ ಮಂಡಳಿಯ ಸದಸ್ಯರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು. ಪ್ರತಿನಿಧಿಸುತ್ತಾರೆ.

ಪ್ರಕಟಿತ ಕೃತಿಗಳು:

ಕವನ ಸಂ. – ಕಾತ್ಯಾಯಿನಿ, ನದಿಯಾದವಳು, ಬೋರಂಗಿ. **ಕಥಾ ಸಂ.** – ಥೈರಾಯಿಡ್ ಮತ್ತು ಪಾಂಚಾಲಿ, ಹಲವು ಮಕ್ಕಳ ತಾಯಿ ಬೇರು, ಒಂದೇ ಕಾಂಡದ ಖುರ್ಚಿ, ಕಲ್ಲಾದಳು ಅಹಲ್ಯ, ದಿಂಡೀ. **ಪತ್ರ ಸಂ.** – ಗಾಳೀ ಪಟ. **ಅನುವಾದ** – ಖಲೀಲ್ ಗಿಬ್ರಾನನ ಪ್ರೇಮ ಪತ್ರಗಳು.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೩ – ವಿಜಯ ಕರ್ನಾಟಕ ಯುಗಾದಿ ಬಹುಮಾನ.
೨. ೨೦೦೫ – ಬೆಂಗಳೂರು ಅಖಿಲ ಭಾರತ ಲೇಖಕಿಯರ ಸಂಘ ಕಾವ್ಯ ಪ್ರಶಸ್ತಿ.
೩. ೨೦೦೩ – ಮುಂಬೈ ಕರ್ನಾಟಕ ಸಂಘ ಕಾವ್ಯ ಪ್ರಶಸ್ತಿ.
೪. ೨೦೦೬ – ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ ಬಹುಮಾನ.
೫. ೨೦೦೮ – ಸಂಚಯ ಕಾವ್ಯ ಪ್ರಶಸ್ತಿ.
೬. ೨೦೦೭ – ಹಾಸನ ಲೇಖಹಿಯರ ಸಂಘ ಕಾವ್ಯ ಪ್ರಶಸ್ತಿ.
೭. ೨೦೦೭ – ಸಂಕ್ರಮಣ ಕಥಾ ಪ್ರಶಸ್ತಿ.

ವ್ಯಕ್ತಿ ಪರಿಚಯ



ಬಾಲಸುಬ್ರಹ್ಮಣ್ಯ ಕೆ.ಯಂ.

೧.	ಹೆಸರು	: ಬಾಲಸುಬ್ರಹ್ಮಣ್ಯ ಕೆ.ಯಂ.
೨.	ಕಾವ್ಯನಾಮ	: ಬಾಲ ಮದ್ದೂರಕಾನನ
೩.	ಹುಟ್ಟಿದ ಸ್ಥಳ ದಿನಾಂಕ	: ಮದ್ದೂರಕಾನನ, ೨೩–೧೧–೧೯೫೧
೪.	ಜಿಲ್ಲೆ – ರಾಜ್ಯ	: ಕಾಸರಗೋಡು, ಕೇರಳ.
೫.	ವಿದ್ಯಾಭ್ಯಾಸ	: ಎಸ್.ಎಸ್.ಎಲ್.ಸಿ. ಕೆ.ಜಿ.ಟಿ.ಇ.
೬.	ವೃತ್ತಿ	: ನಿವೃತ್ತ ಅಧ್ಯಾಪಕ
೭.	ಕೌಟುಂಬಿಕ	: ಪತ್ನಿ; ಸಾವಿತ್ರಿ. ಪುತ್ರಿ; ದಿವ್ಯಶ್ರೀ.
೮.	ಸದ್ಯದ ವಿಳಾಸ	: 'ಮದ್ದುರ'ಮಧುರ ಕಾನನ ಬೇಳ. ಕುಂಬಳೆ (ದಾರಿ) ಕಾಸರಗೋಡು ೬೭೧೩೨೧
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೯೯೯೫೫೬೦೮೮೪೪
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ಕೇರಳ ರಾಜ್ಯ ಕಾಸರಗೋಡು ಜಿಲ್ಲೆ ಮದ್ದೂರ ಕಾನನದಲ್ಲಿ ಜನಿಸಿದರು. ಇವರು ಕೆ. ನಾರಯಣ ಭಟ್ಟ ಮತ್ತು ಪಾರ್ವತಿ ಅಮ್ಮ ದಂಪತಿಗಳ ಮಗ ೧೯೬೯ರಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿದರು. ಇವರು ೧೯೭೨ರಲ್ಲಿ ಕೇರಳ ಸರ್ಕಾರ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಕೆ.ಜಿ.ಟಿ.ಇ. ಮಾಡಿದರು. ೧೯೭೧ ರಲ್ಲಿ ಆಚಾರ್ಯ ಚಿತ್ರಕಲಾ ಭವನ, ಬೆಂಗಳೂರು ಇಲ್ಲಿ ಎಂ.ಟಿ.ಟಿ. ಆಚಾರ್ಯರ ಶಿಷ್ಯತ್ವದಲ್ಲಿ ವಾಣಿಜ್ಯ ಡಿಪ್ಲೊಮಾ ಮಾಡಿದರು. ೧೯೭೨ ರಲ್ಲಿ ಕಾಸರಗೋಡಿನ ಮ.ಸಂ.ಕಾ. ಹೈಸ್ಕೂಲು ನೀರ್ಚಾಲುವಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿ ೨೦೦೭ರಲ್ಲಿ ನಿವೃತ್ತರಾದರು. ವೃತ್ತಿಯಿಂದ ಕಲಾ ಶಿಕ್ಷಕರಾದುದರಿಂದ ಕಲಾ ಹಾಗೂ ಸಾಹಿತ್ಯ ತರಬೇತಿ ಶಿಬರಗಳ ಸಂಪನ್ಮೂಲ ವ್ಯಕ್ತಿಯಾಗಿ ಹಲವಾರು ಚಿತ್ರಕಲಾ ಪ್ರದರ್ಶನಗಳನ್ನು ನಡೆಸಿದರು. ಪ್ರವೃತ್ತಿಯಿಂದ ಸಾಹಿತಿಗಳಾಗಿ ಕಾಸರಗೋಡಿನ ಮಕ್ಕಳ ಸಾಹಿತ್ಯ ಸಂಗಮ ಘಟಕದ ಕಾರ್ಯದರ್ಶಿಯಾಗಿ ಸಾಹಿತ್ಯ ಚಟುವಟಿಕೆಗಳನ್ನು ನಿರ್ವಹಿಸಿದರು. ಬೆಂಗಳೂರಿನ ಆಚಾರ್ಯ ಚಿತ್ರಕಲಾ ಭವನದ ಆಜೀವ ಸದಸ್ಯರಾದರು. ಕಾಸರಗೋಡಿನ ಪಯಸ್ವಿನಿ ಕಲಾವಿದರು ಸಂಘದ ಸ್ಥಾಪಕ ಸದಸ್ಯರಾದರು. ಕಾರ್ಟೂನ್ ಸಂಸ್ಥೆಯ ಸ್ಥಾಪಕ ಅಧ್ಯಕ್ಷರು. ಮಕ್ಕಳ ಸಾಹಿತ್ಯ ಸಂಗಮದ ಜಿಲ್ಲಾ ಘಟಕ ಸ್ಥಾಪಿಸಲು ಅನೇಕ ಕಾರ್ಯಕ್ರಮಗಳನ್ನು ಸಂಘಟಿಸಿದರು. ಚಿತ್ರಕಲೆ, ಕಥೆ, ಕವನ ರಚನಾ ಶಿಬರ ಸಂಘಟಿಸಿ ಮಕ್ಕಳಿಗೆ ತರಬೇತಿ ನೀಡಿದರು. ಶಾಲಾ ಮಟ್ಟದ ಮಕ್ಕಳ ಸಾಹಿತ್ಯ ವೇದಿಕೆ ಸ್ಥಾಪಿಸಿದರು. ನೂರಕ್ಕಿಂತ ಹೆಚ್ಚು ಪುಸ್ತಕಗಳಿಗೆ ಮುಖಪುಟ ಹಾಗೂ ಒಳಗಡೆಯ ಸಂದರ್ಭ ಚಿತ್ರ ರಚಿಸಿದರು. ಕೇರಳ ರಾಜ್ಯದ ಸರ್ಕಾರಿ ಪಠ್ಯಪುಸ್ತಕ ಸಮಿತಿಯಲ್ಲಿ ೩೩ ವರ್ಷಗಳ ಕಾಲ ಕಲಾವಿದರಾಗಿ ಸೇವೆಸಲ್ಲಿಸಿದರು. ಇವರ ನೂರಾರು ಮಕ್ಕಳ, ಕಥೆ, ಕವನ, ವ್ಯಂಗ್ಯ ಚಿತ್ರಗಳು ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕಲಾ ಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಸಭೆ ಸಮಾರಂಭಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಸ್ಥಳೀಯ ಪತ್ರಿಕೆಗಳ ಅಂಕಣ ಬರೆಹಗಾರರು. ಕೆಲವು ಕವನ ಧ್ವನಿ ಸುರಳಿಗಳಲ್ಲಿ ಸೇರಿವೆ. ಸಾಹಿತ್ಯ ಅಕಾಡೆಮಿ ಸಂಕಲನದಲ್ಲಿಯೂ ಸೇರಿವೆ. ನಿವೃತ್ತಿ ನಂತರವೂ ಚಿತ್ರಕಲಾ ತರಬೇತಿ ನೀಡುತ್ತಿದ್ದಾರೆ.

ಪ್ರಕಟಿತ ಕೃತಿಗಳು:

ಶಿಶು ಕವನ ಸಂ. – ನಗು–ಮಗು, ಹಕ್ಕಿಯ ಹಾಡು, ಮದ್ದುರ ಪುಟಾಣಿ ಪುಟ್ಟಿ.

ಚಿತ್ರಕಲೆ – ಸುಲಭ ಚಿತ್ರ ಕಲೆ, ಮೋಜಿನ ಚಿತ್ರಕಲೆ.

ಅನುವಾದ – ಮದ್ದುರ ಗೀತಾಂಜಲಿ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೬ – ಪುಟಾಣಿ ಪುಟ್ಟಿ ಕೃತಿಗೆ ದ.ಕ. ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ಬಹುಮಾನ.

೨. ೨೦೦೬ – ನೀರ್ಚಾಲು ಮಹಾಜನ ಸಂಸ್ಕೃತ ಕಾಲೇಜ್ ವಾರ್ಷಿಕೋತ್ಸವದಲ್ಲಿ ಸನ್ಮಾನ.

೩. ೨೦೦೬ ದ.ಕ. ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ ವತಿಯಿಂದ 'ಮಕ್ಕಳ ದ್ವನಿ'ಬೈಂದೂರಿನಲ್ಲಿ ಸನ್ಮಾನ.

೪. ೨೦೦೬ ಕಾಸರಗೋಡಿನಲ್ಲಿ ಕರಾವಳಿ ಸಾಂಸ್ಕೃತಿಕ ಉತ್ಸವದಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ

ಭಟ್ಟ ಜಿ.ಎಸ್.

೧.	ಹೆಸರು	:	ಜಿ.ಎಸ್. ಭಟ್ಟ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಶಿರಸಿ ೦೬-೦೫-೧೯೪೩.
೪.	ಜಿಲ್ಲೆ - ರಾಜ್ಯ	:	ಉತ್ತರಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ.
೬.	ವೃತ್ತಿ	:	ವಿಶ್ರಾಂತ. ಮಾನವಿಕ ಸಂಪಾದಕ ಕರ್ನಾಟಕ ಕನ್ನಡ ವಿಶ್ವಕೋಶ, ಮೈಸೂರು ವಿಶ್ವವಿದ್ಯಾಲಯ
೭.	ಕೌಟುಂಬಿಕ	:	ಪತ್ನಿ; ತಿಲೊತ್ತಮ. ಪುತ್ರ; ರಾಜೀವ. ಪುತ್ರಿ; ನೀಲಾ
೮.	ಸದ್ಯದ ವಿಳಾಸ	:	೨೪, ಕುಮಾರ ಕೃಪ, ಕಾಮಾಕ್ಷಿ ಆಸ್ಪತ್ರೆ ಹಿಂದೆ, ಸರಸ್ವತಿಪುರ, ಮೈಸೂರು - ೫೭೦೦೦೯
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೨೧ - ೨೫೪೪೫೪೧
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಜನಿಸಿದ್ದು ಉ.ಕ. ಜಿಲ್ಲೆ ಶಿರಸಿಯಲ್ಲಿ. ಇವರು ಶ್ರೀ ಸುಬ್ರಾಯ ಪರಮೇಶ್ವರ ಭಟ್ಟ ಮತ್ತು ಶ್ರೀಮತಿ ಸರಸ್ವತಿ ದಂಪತಿಗಳ ಪುತ್ರ. ೧೯೬೬ರಲ್ಲಿ ಕರ್ನಾಟಕದ ವಿಶ್ವವಿದ್ಯಾಲಯ ಧಾರಾವಾಡದ ಇತಿಹಾಸ ಎಂ.ಎ. ಪದವೀಧರರು. ನಾಟಕ ಡಿಪ್ಲೊಮಾ ಮಾಡಿದ್ದಾರೆ ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ಭಾಷಾಂತರ ಡಿಪ್ಲೊಮಾ ಮಾಡಿದ್ದಾರೆ. ೧೯೬೪ರಲ್ಲಿ 'ಕಸ್ತೂರಿ' ಮಾಸಿಕದ ಉಪಸಂಪಾದಕರಾಗಿ ಸೇವೆ ಸಲ್ಲಿಸಿದರು. ೧೯೬೯ರಲ್ಲಿ 'ಕನ್ನಡ ವಿಶ್ವ ಕೋಶ'ದ ಸಂಪಾದಕರಾದರು. ೨೦೦೫ರಲ್ಲಿ ಕನ್ನಡ ವಿಷಯ ವಿಶ್ವಕೋಶ ಜಾನಪದ ಸಂಯೋಜಕ ಸಂಪಾದಕರಾಗಿದ್ದರು. ೨೦೦೧-೨೦೦೫ರಲ್ಲಿ ಮಾನವಿಕ ವಿಭಾಗ ಕುವೆಂಪು ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು ಕರ್ನಾಟಕ ವಿಷಯ ವಿಶ್ವ ಕೋಶದ ವಿಷಯ ಪರಿಷ್ಕರಣೆ ಗೌ. ಸಂಪಾದಕ-ರಾಗಿದ್ದರು. ೨೦೦೭ರಲ್ಲಿ ಮೈಸೂರು ವಿಶ್ವಾವಿದ್ಯಾಲಯದ ಜಾನಪದ ವಸ್ತು ಸಂಗ್ರಹಾಲಯದ ಗೌ. ಸಂಯೋಜಕರಾಗಿದ್ದರು. ೨೦೦೮ರಲ್ಲಿ ಮೈಸೂರಿನ ಮುಕ್ತ ಅಧ್ಯಯನ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಜೀವನ ಚರಿತ್ರೆ, ವ್ಯಕ್ತಿ ಚಿತ್ರ, ಜನಪದ ಸಾಹಿತ್ಯ ಹಾಗೂ ಯಕ್ಷಗಾನ ಕುರಿತು ಹತ್ತಾರು ಲೇಖನಗಳನ್ನು ಬರೆದಿದ್ದಾರೆ. ಇವರು ರಾಜ್ಯ, ರಾಷ್ಟ್ರಮಟ್ಟದ ವಿಚಾರ ಸಂಕೀರ್ಣಗಳಲ್ಲಿ ಪಾಲ್ಗೊಂಡಿದ್ದಾರೆ. ಚೇತನ ಸುವರ್ಣ ಕರ್ನಾಟಕ ಸಾಹಿತ್ಯ ಮಾಲೆ ಮತ್ತು ಆಧುನಿಕ ಬರೆಹಗಾರರ ಸಾಹಿತ್ಯ ಮಾಲೆ ಪ್ರಧಾನ ಸಂಪಾದಕರಾಗಿದ್ದಾರೆ. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಮುಕ್ತ ಅಧ್ಯಯನ'ದ ಸಂಪಾದಕರಾಗಿದ್ದಾರೆ. ಇವರು ೧೭ ಜೀವನ ಚರಿತ್ರೆ, ೧೬ ಜಾನಪದ, ೨ ಇತಿಹಾಸ, ೭ ಇತರೆ ಹಾಗು ೧೩ ಸಂಪಾದಿತ ಗ್ರಂಥಗಳ ಕರ್ತೃಗಳಾಗಿದ್ದಾರೆ. ಇವರು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ಮೈಸೂರು ದಸರಾ ಲಲಿತ ಕಲಾ ಉಪ ಸಮಿತಿ ಮುಂತಾದ ಸುಮಾರು ೨೫ ಸಂಘ ಸಂಸ್ಥೆಗಳ ಸದಸ್ಯರು. ಕಾರ್ಯದರ್ಶಿ, ಉಪಾಧ್ಯಕ್ಷರಾಗಿಯೂ, ಇನೋವೇಟಿವ್ ಸಂಸ್ಥೆಯ ಅಧ್ಯಕ್ಷರಾಗಿಯೂ ಕಾರ್ಯನಿರ್ವ-ಹಿಸಿದ್ದಾರೆ. ಇವರ ಅಭಿಮಾನಿಗಳು 'ಸಂಸ್ಕೃತಿ ಸಂಪನ್ನ' ಅಭಿನಂದನ ಗ್ರಂಥವನ್ನು ಅರ್ಪಿಸಿದ್ದಾರೆ. ೨೦೦೯ರಲ್ಲಿ ಎಫ್.ಪಿ.ಎ. ಅಧ್ಯಕ್ಷರಾಗಿಯೂ ದುಡಿದಿದ್ದಾರೆ.

ಪ್ರಕಟಿತ ಕೃತಿಗಳು:

ಜೀವನ ಚರಿತ್ರೆ – ದಿನಕರ ದೇಸಾಯಿ, ಲೋಕಮಾನ್ಯ ಆಲೂರು ವೆಂಕಟರಾಯರು, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಶಿವರಾಮ ಕಾರಂತ. **ಜಾನಪದ** – ಜನಪದ ಕಥಾ ಭಾರತಿ, ಹಲಸರ ಸಂಸ್ಕೃತಿ, ಪಡುವಲಪಾಯ ಯಕ್ಷಗಾನ, ಯಕ್ಷಗಾನ ಪರಿಶೀಲನ, ಕರಾವಳಿ ಯಕ್ಷಗಾನ. **ಇತಿಹಾಸ** – ನಾಗರಿಕತೆಯ ಇತಿಹಾಸ. **ಸಂಪಾದಿತ** – ಮಹಾಕಾವ್ಯ ಒಂದು ಅಧ್ಯಯನ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೫ – ರಾಣೆಬೆನ್ನೂರಿನಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯ ಸಮ್ಮೇಳನದಲ್ಲಿ ಸನ್ಮಾನ.
೨. ೨೦೦೭ – ಮೈಸೂರು ಉದಯಗಿರಿ ಕನ್ನಡದ ಸಂಘದಲ್ಲಿ ಸನ್ಮಾನ.
೩. ೨೦೦೮ – ಮೈಸೂರು ಜಿಲ್ಲಾ ಕ.ಸಾ.ಪ.ನಲ್ಲಿ ಸನ್ಮಾನ.
೪. ೨೦೦೯ – ಬಂಗಾರಮಕ್ಕಿ ಹೊನ್ನಾವರ ಉ.ಕ.ದ ಶ್ರೀ ವೀರಾಂಜನೇಯ ಯಕ್ಷಗಾನ ಮಿತ್ರಮಂಡಳಿ ಸನ್ಮಾನ.

ವ್ಯಕ್ತಿ ಪರಿಚಯ

ಡಾ|| ಭಟ್ಟನಡಗೋಡು.ಜಿ.ಎನ್.

೧. ಹೆಸರು	:	ಡಾ|| ಜಿ.ಎನ್. ಭಟ್ಟನಡಗೋಡು
೨. ಕಾವ್ಯನಾಮ	:	ಇರುವುದಿಲ್ಲ.
೩. ಹುಟ್ಟಿದ ಸ್ಥಳ ದಿನಾಂಕ	:	ನಡಗೋಡು, ೦೮-೦೪-೧೯೫೩.
೪. ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫. ವಿದ್ಯಾಭ್ಯಾಸ	:	ಎಂ.ಎ., ಪಿ.ಹೆಚ್.ಡಿ (ಸಂಸ್ಕೃತ).
೬. ವೃತ್ತಿ	:	ಅಸೋಸಿಯೇಟ್ ಪ್ರೊಫೆಸರ್.
೭. ಕೌಟುಂಬಿಕ	:	ಪತ್ನಿ; ವಿಜಯಾ. ಪುತ್ರಿ; ವಿಂದ್ಯಾ. ಪುತ್ರ; ವಿನಾಯಕ.
೮. ಸದ್ಯದ ವಿಳಾಸ	:	ಶ್ರೀ ಕೌಸ್ತುಭ ಆದರ್ಶ ನಗರ, ೩ನೇ ಅಡ್ಡರಸ್ತೆ, ಕಾಲೇಜು ರಸ್ತೆ, ಶಿರಸಿ (ಉ.ಕ.) ೫೮೧೪೦೨.
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೮೩೮೪-೨೩೭೫೩೭
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕು ನಡಗೋಡು ಗ್ರಮದಲ್ಲಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ನಡಗೋಡು ಮತ್ತು ಸಮೀಪದ ತಾರಗೋಡದಲ್ಲಿ ನಡೆಯಿತು. ಮೂರು ಮೈಲಿ ದೂರ ಇರುವ ಶ್ರಿ ಶಾರದಾಂಬೆ ಪ್ರೌಢಶಾಲೆಯಲ್ಲಿ ಹಾಗೂ ಬೈರುಂಬೆಗಳಲ್ಲಿ ಮಾಧ್ಯಮಿಕ ಶಿಕ್ಷಣ ನಡೆಯಿತು. ನಂತರ ನಾಲ್ಕು ವರ್ಷ ವೇದ-ಸಂಸ್ಕೃತ ಅಧ್ಯಯನ ಮಾಡಿದರು. ಶಿರಸಿಯ ಎಂ.ಎ. ಕಲಾ ಮತ್ತು ವಿಜ್ಞಾನ ಮಹಾ ವಿದ್ಯಾಲಯದಲ್ಲಿ ಬಿ.ಎ. ಪದವಿ ಪದೆದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಸ್ನಾತಕೋತ್ತರ ವಿಭಾಗದಲ್ಲಿ ಎಂ.ಎ. ಪದವಿ ಪಡೆದರು. ವಿದ್ಯಾಭ್ಯಾಸ ಮಾಡಿದ ಶಿರಸಿಯ ಎಂ.ಎಂ.ಕಲಾ ಮಹಾ ವಿದ್ಯಾಲಯದಲ್ಲಿಯೇ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿದರು. ಪ್ರಸ್ತುತ ಸಂಸ್ಕೃತ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಸ್ಕೃತ ವಿದ್ವಾಂಸ ಡಾ|| ದಯಾನಂದ ಶಾನಭಾಗರ ಮಾರ್ಗದರ್ಶನಲ್ಲಿ 'ದ ಸಂಸ್ಕೃತ ವರ್ಕ್ಸ್ ಆಫ್ ದೈವರಾತ - ಎ ಕ್ರಿಟಿಕಲ್ ಸ್ಟಡಿ' ಎಂಬ ಸಂಶೋಧನಾತ್ಮಕ ಪ್ರಬಂಧವನ್ನು ರಚಿಸಿ ಕರ್ನಾಟಕ ವಿಶ್ವವಿದ್ಯಾಲಯಯಿಂದ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಇವರು ಪ್ರವೃತ್ತಿಯಿಂದ ಸಾಹಿತಿಗಳು. ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯಾಸಕ್ತರಾಗಿದ್ದರು. ಇವರು ಕನ್ನಡ, ಸಂಸ್ಕೃತ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಬರೆಯಬಲ್ಲರು. ಧಾರ್ಮಿಕ ಸಾಹಿತ್ಯದ ಬಗ್ಗೆ ಹೆಚ್ಚಿನ ಒಲವು. ಇವರು ಹಲವಾರು ವಿದ್ವತ್ ಸಭೆಗಳಲ್ಲಿ ಭಾಗವಹಿಸಿದ್ದಾರೆ. ದತ್ತಿ ಉಪನ್ಯಾಸಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ ಹಲವಾರು ಸಂಶೋಧನಾತ್ಮಕ ಲೇಖನಗಳನ್ನು ವಿವಿಧ ವಿಷಯಗಳ ಕುರಿತು ಬರೆದಿದ್ದಾರೆ. ಗೋಕರ್ಣದ ಮಂತ್ರದ್ರಷ್ಟಾರ ದೈವರಾತ ಮಹರ್ಷಿಗಳ ಜೀವನ-ಕೃತಿಗಳನ್ನು ಕುರಿತು ಇಂಗ್ಲೀಷಿನಲ್ಲಿ ಗ್ರಂಥ ರಚಿಸಿದ್ದಾರೆ. ಅದನ್ನೇ ಕನ್ನಡದಲ್ಲೂ ವಿಸ್ತಾರವಾಗಿ ಗ್ರಂಥ ರಚಿಸಿದ್ದಾರೆ. ಮತ್ತೊಂದು ಪ್ರಕಟವಾದ ಸಂಶೋಧನ ಲೇಖನಗಳು, ದತ್ತಿ ಉಪನ್ಯಾಸಗಳನ್ನೆಲ್ಲಾ ಕೂಡಿಸಿ ಮಧ್ಯ ಶೃಂಗ ಗ್ರಂಥ ರಚಿಸಿದ್ದಾರೆ.

ಪ್ರಕಟಿತ ಕೃತಿಗಳು:
ಧಾರ್ಮಿಕ - ಬ್ರಹ್ಮರ್ಷಿ ದೈವರಾತರು.
ಲೇ. ನ ಸಂಕಲನ - ಮಧ್ಯ ಶೃಂಗ.

ಲಭಿಸಿರುವ ಪ್ರಶಸ್ತಿಗಳು:
೧. ಮೈಸೂರಿನ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥಾನದಿಂದ 'ಬ್ರಹ್ಮರ್ಷಿ ದೈವರಾತರು' ಗ್ರಂಥದ ಪುರಸ್ಕಾರ.

ವ್ಯಕ್ತಿ ಪರಿಚಯ

ಭಾಗ್ವತ್. ಆರ್.ವಿ.

೧.	ಹೆಸರು	:	ಶ್ರೀ ರಾಮಚಂದ್ರ ವೆಂಕಟ್ರಮಣ ಹೆಗಡೆ
೨.	ಕಾವ್ಯನಾಮ	:	ಆರ್.ವ್ಹಿ. ರಾಮಚಂದ್ರ.
೩.	ಹುಟ್ಟಿದ ಸ್ಥಳ ದಿನಾಂಕ	:	ಶಿರಸಿಮಕ್ಕಿ,೧೫-೦೯-೧೯೪೬.
೪.	ಜಿಲ್ಲೆ – ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ.
೬.	ವೃತ್ತಿ	:	ನಿವೃತ್ತ ಉಪನ್ಯಾಸಕ.
೭.	ಕೌಟುಂಬಿಕ	:	ಪತ್ನಿ; ಮಹಾದೇವಿ. ಪುತ್ರಿಯರು; ಛಾಯ, ಚಿತ್ರಾ.
೮.	ಸದ್ಯದ ವಿಳಾಸ	:	ಶ್ರೀ ಆರ್.ವಿ. ಹೆಗಡೆ, 'ನಿಸರ್ಗ'ಶಿರಸಮಕ್ಕಿ ಪೊಂಯಡ್ನಳ್ಳಿ, ತಾ. ಶಿರಸಿ ಜಿ. ಉ.ಕ. ಕರ್ನಾಟಕ ೫೮೧೩೪೦
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೮೪-೨೯೦೦೮೦
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉ.ಕ. ಜಿಲ್ಲೆ ಶಿರಸಿ ಸಮೀಪದ ಶಿರಸಿಮಕ್ಕಿಯಲ್ಲಿ ಜನಿಸಿದರು. ಶಿರಸಿ ಮಕ್ಕಿಯಡಳ್ಳಿಗಳ ಶಾಲಾ ಶಿಕ್ಷಣ. ಬಾಲ್ಯದಿಂದಲೇ ಚಂದಮಾಮ, ಕಸ್ತೂರಿ, ಮಲ್ಲಿಗೆ ಪತ್ರಿಕೆಗಳಿಂದ ಆಕರ್ಷಿತರಾಗಿ ತಾನೂ ಒಬ್ಬ ಲೇಖಕನಾಗುವ ಆಕಾಂಕ್ಷೆ. ಪ್ರೌಢ ಶಾಲೆಯಲ್ಲಿರುವಾಗ ಅ.ನ.ಕೃ., ಸಿದ್ದವನಹಳ್ಳಿ, ಶಿವರಾಮ ಕಾರಂತರು ಮೊದಲಾದ ಸಾಹಿತಿ ಕೃತಿಗಳನ್ನು ಓದುವ ಹವ್ಯಾಸ. ಗ್ರಥಾಲಯಗಳಿಗೂ ಓಡಾಟ. ೧೯೬೧ರಲ್ಲಿ ಇವರ ಮೊದಲ ಕವನ 'ಶಿರಸಿ ಸಮಚಾರ'ದಲ್ಲಿ ಪ್ರಕಟವಾಯಿತು. ಶ್ರೀ ಹೀಪನಹಳ್ಳಿ ಸೀತಾರಾಮ್ ಹೆಗಡೆಯವರ 'ಸಮಾಚಾರ' ಬರುತ್ತಿತ್ತು. ೧೯೬೪ರಲ್ಲಿ ಕಾಲೇಜು ಓದುವಾಗ ಬರೆಹಕ್ಕೆ ಸಾಕಾರ ಬಂತು. ಶಿರಸಿಯ ಸಹಚರ ಹಾಗೂ ದ.ಕ. ಮತ್ತು ಬೆಂಗಳೂರಿನ ನಿಯತಕಾಲಿಕೆಗಳು, ಪ್ರಜಾವಾಣಿ, ಕನ್ನಡ ಪ್ರಭ, ಜನ ಪ್ರಗತಿ, ಉತ್ಥಾನ, ಉದಯವಾಣಿಗಳಿಗೂ ಬರೆಯುತೊಡಗಿದರು. ೧೯೭೦ರಲ್ಲಿ ಎಂ.ಎ. ಮಾಡಿದರು. ಧಾರವಾಡ ಆಕಾಶವಾಣಿಯಲ್ಲಿಯೂ ಇವರ ಕವನ ಬಿತ್ತರವಾಯಿತು. ನಂತರ ಕೆಲಕಾಲ ಕೃಷಿಕರಾಗಿದ್ದರು. 'ಅಷ್ಟ ದಳ' ಪ್ರಕಾಶನ ಪ್ರಾರಂಭಿಸಿ ಲೇಖಕರ ಕಥಾ ಸಂಕಲನ ತಂದರು. ಲೇಖಕರು ವರದಿಗಾರರು ಆದರು. ಶ್ರೀ ಅಜ್ಜಿ ಬಾಳಾ ಅವರ ಸಹಾಯದಿಂದ ಸಿದ್ಧಾಪುರದಿಂದ ಶಿರಸಿಗೆ ಬಂದು ಪತ್ರಕರ್ತರಾಗಿದ್ದವರು ಸಂಪಾದಕರಾದರು. ಬರವಣಿಗೆ ನಿರಾತಂಕವಾಗಿ ಸಾಗಿತು. ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕದ ವರದಿಗಾರ ಮೋಹನ ಹೆಗಡೆಯವರ ಸಹಕಾರ ದೊರೆಯಿತು. ಯಾತ್ರಿಕ, ಕೆನರ್ರೈಟ್, ಕೊಡಗು ಹಾಗೂ ಸಮಾಚಾರ ಪತ್ರಿಕೆಗಳಲ್ಲಿ ಇವರ ಲೇಖನಗಳು ಸತತವಾಗಿ ಪ್ರಕಟವಾಗ ತೊಡಗಿತು. ಸಮನ್ವಯ ಹಾಗೂ ನಾಗರಿಕ ಪತ್ರಿಕೆಗಳಿಂದ ಇವರೊಬ್ಬ ಬಂಡಾಯ ವಿಮರ್ಶಕರಾದರು. ಉ.ಕ. ಜಿಲ್ಲಾ ಲೇಖಕ ಪ್ರಕಾಶಕ ಸಂಸ್ಥೆಯ ಸದಸ್ಯರಾದರು. ವಿದ್ಯಾರ್ಥಿಯಾಗಿದ್ದಾಗ ವಿದ್ಯಾರ್ಥಿಗಳನ್ನು ಪತ್ರಕರ್ತರನ್ನಾಗಿಸಲು ಕಾಲೇಜಿನಲ್ಲಿ ರಚನಾ ಸಾಂಸ್ಕೃತಿಕ ಸಂಸ್ಥೆ ಆರಂಭಿಸಿದರು. ಕೈ ಬರಹ ಪತ್ರಿಕೆ ತರುತ್ತಿದ್ದರು ಇದರಿಂದ ಹೊಸ ತಲೆಮಾರಿನ ಪತ್ರಕರ್ತರು ಬರುವಂತಾಯಿತು. ೧೯೮೪ರಲ್ಲಿ ಅನುದಾನ ಪಡೆದು 'ಸಹ್ಯಾದ್ರಿ ಪರಿಸರ ಪತ್ರ' ಪತ್ರಿಕೆ ತಂದರು. ಶಿರಸಿ ತಾ. ಪತ್ರಕರ್ತ ಸಂಘದ ಅಧ್ಯಕ್ಷರಾಗಿ, ತಾ.ಸಾ.ಪರಿಷತ್ತಿನ ಕಾರ್ಯದರ್ಶಿಯಾಗಿದ್ದರು. ಸ್ಥಾನೀಯ ಜಿಲ್ಲಾ ಪತ್ರಿಕೆಗಳ ಬೆಳವಣಿಗೆಗಾಗಿ ಶ್ರಮಿಸಿದರು. ೩೫ ವರುಷಗಳ ಹಿಂದೆ ಶುರುವಾದ ಬರವಣಿಗೆಯನ್ನು ಇವರು ಇಂದಿಗೂ ಬಿಟ್ಟಿಲ್ಲ. 'ಉತ್ತರ ಕನ್ನಡ ವಾರ್ತ ಪತ್ರ'ಕ್ಕೆ ಪ್ರತಿ ವಾರವೂ ಬರೆಯುತ್ತಿದ್ದಾರೆ.

ಪ್ರಕಟಿತ ಕೃತಿಗಳು:

ಪ್ರವಾಸ – ಮಾನಸ ಸರೋವರ ಯಾತ್ರೆ. **ಕಾನೂನು** – ಬುಡಕಟ್ಟು ಹಾಗೂ ಅರಣ್ಯ ವಾಸಿಗರ ಪಾರಂಪರಿಕ ಹಕ್ಕು. ಮಾನ್ಯತಾ ಕಾನೂನು – ೨೦೦೬ (ಸಹ ಲೇಖಕರೊಂದಿಗೆ)

ಲಭಿಸಿರುವ ಪ್ರಶಸ್ತಿಗಳು:

೧. ಆಕಾಶವಾಣಿ ಧಾರವಾಡದ ಕವನ ಸ್ಪರ್ಧೆ ವಿಶ್ವವಿದ್ಯಾಲಯ ಮಟ್ಟದಲ್ಲಿ ದ್ವಿತೀಯ ಬಹುಮಾನ.
೨. ತಾಲೂಕು ಪತ್ರಕರ್ತರ ಸಂಘದ ಸನ್ಮಾನ.
೩. ಜಿಲ್ಲಾ ಪತ್ರಿಕಾ ಮಂಡಳಿ ಸನ್ಮಾನ.

ವ್ಯಕ್ತಿ ಪರಿಚಯ

ಮಹಬಲೇಶ್ವರ ಹಗಡೆ

೧.	ಹೆಸರು	: ಮಹಬಲೇಶ್ವರ ಹಗಡೆ
೨.	ಕಾವ್ಯನಾಮ	: ಎಂ. ಎ. ಹೆಗಡೆ
೩.	ಹುಟ್ಟಿದ ಸ್ಥಳ ದಿನಾಂಕ	: ದಂಟಕಲ್, ೦೩-೦೭-೧೯೪೮.
೪.	ಜಿಲ್ಲೆ - ರಾಜ್ಯ	: ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	: ಎಂ.ಎ.
೬.	ವೃತ್ತಿ	: ಪ್ರಾಧ್ಯಾಪಕ
೭.	ಕೌಟುಂಬಿಕ	: ಪತ್ನಿ; ಸಾವಿತ್ರಿ, ಮಕ್ಕಳು ಬಕುಲಾ, ವಿನಾಯಕ.
೮.	ಸದ್ಯದ ವಿಳಾಸ	: ನಿನಾದ ಸಂಗೀತ ವಿದ್ಯಾಲಯ, ವರೆಘ ಕಾಂಪೌಂಡ, ಬನವಾಸಿ ರಸ್ತೆ. ಶಿರಸಿ (ಉ.ಕ.)
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೯೯೦೧೧೪೧೦೯೦, ೯೩೪೧೦೧೦೫೩೦
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕು ದಂಟಕಲ್ಲಿನಲ್ಲಿ ಜನಿಸಿದರು. ಪುಟ್ಟ ಹಳ್ಳಿಯ ರೈತ ಕುಟುಂಬದಿಂದ ಬಂದವರು. ಅಣ್ಣಪ್ಪ ಹೆಗಡೆ ಮತ್ತು ಶ್ರೀಮತಿ ಕಾಮಾಕ್ಷಿ ದಂಪತಿಗಳ ಪುತ್ರ. ಈಗ ಕುಟುಂಬ ಹೆಗ್ಗರಣಿಯ ಸಮೀಪ ಜೋಗಿಮನೆಯಲ್ಲಿ ನೆಲೆಸಿದೆ. ಇವರು ಪ್ರಾಥಮಿಕ ಶಿಕ್ಷಣವನ್ನು ಕರ್ಜಗಿ, ಕೋಡ್ಸರ ಹಾಗು ಕಿಬ್ಬಳ್ಳಿ ಶಾಲೆಗಳಲ್ಲಿ ಮಾಡಿದರು. ಮಾಧ್ಯಮಿಕ ಶಾಲೆ ಹೆಗ್ಗರಣಿಯ ಹೈಸ್ಕೂಲಿನಲ್ಲಿ ಮಾಡಿದರು. ಶಿರಸಿಯಲ್ಲಿ ಬಿ.ಎ. ಪದವೀಧರರಾದರು. ಅಲ್ಲಿ ಪ್ರೊ. ಬಿ.ಎಚ್. ಶ್ರೀಧರ ಮುಂತಾದ ಸಾಹಿತಿಗಳ ಸಂಪರ್ಕವುಂಟಾಯಿತು. ಕರ್ನಾಟಕ ವಿಶ್ವವಿದ್ಯಾಲಯಯಲ್ಲಿ ಸಂಸ್ಕೃತ ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದರು. ಡಾ॥ ಸಿ.ಡಿ. ದೇಶಮುಖ ಪ್ರಶಸ್ತಿಗಳಿಸಿದರು. ಇಲ್ಲಿ ಇವರಿಗೆ ಡಾ॥ ಕೆ. ಕೃಷ್ಣಮೂರ್ತಿಗಳು ಪ್ರಾಧ್ಯಾಪಕರಾಗಿದ್ದರು. ಇವರ ವೃತ್ತಿ ಜೀವನ ಹುಬ್ಬಳ್ಳಿಯ ಕಾಡ ಸಿದ್ಧೇಶ್ವರ ಕಲಾಮಹಾವಿದ್ಯಾಲಯದಲ್ಲಿ ಆರಂಭವಾಯಿತು. ೧೯೭೩ರಲ್ಲಿ ಸಿದ್ಧಾಪುರದ ಮಹತ್ಮಾ ಗಾಂಧೀ ಶತಾಬ್ದಿ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇರಿದರು. ೨೦೦೪ರಲ್ಲಿ ಪ್ರಾಂಶುಪಾಲಕ-ರಾದರು. ೨೦೦೬ರಲ್ಲಿ ನಿವೃತ್ತರಾದರು. ಶಿರಸಿಯಲ್ಲಿ ನೆಲೆಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಬಾಲ್ಯದಿಂದಲೇ ಯಕ್ಷಗಾನದಲ್ಲಿ ಆಸಕ್ತಿ. ನೃತ್ಯಾಭ್ಯಾಸ ಮಾಡಿ ಯಕ್ಷಗಾನ ತಾಳಾ ಮದ್ದಳೆಯ ಅರ್ಥಧಾರಿಯಾಗಿ ವೇಷಧಾರಿಯಾಗಿ ಪ್ರಸಿದ್ಧರು. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಯಕ್ಷಗಾನಕ್ಕೆ ಕುರಿತಾದ ನೂರಾರು ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ವಿಚಾರ ಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಸಂಭಾವನ ಗ್ರಂಥಗಳಿಗೆ ಲೇಖನಗಳನ್ನು ಬರೆದಿದ್ದಾರೆ. ಸಂಸ್ಕೃತ ಕವಿ-ಕಾವ್ಯ, ಕಾವ್ಯ ಮೀಮಾಂಸೆ, ತತ್ವ ಶಾಸ್ತ್ರಗಳಿಗೆ ಸಂಬಂಧಿಸಿದ ೯-೧೦ ಗ್ರಂಥಗಳು ಪ್ರಕಟವಾಗಿವೆ. ಅನುಸಂಧಾನ', 'ಸ್ವರ್ಣವಲ್ಲಿ ಪ್ರಭಾ', ಆಧ್ಯಾತ್ಮಿಕ ಪತ್ರಿಕೆಗಳ ಸಂಪಾದಕ ಮಂಡಳಿ, ಸಲಹಾ ಮಂಡಳಿಗಳ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅದ್ವೈತ ವೇದಾಂತ ಕುರಿತು ಹಲವಾರು ಪ್ರವಚನಗಳನ್ನು ನೀಡಿದ್ದಾರೆ. ಇವರ ಕೆಲವು ಗ್ರಂಥಗಳು ಪಠ್ಯಪುಸ್ತಕಗಳಾಗಿವೆ.

ಪ್ರಕಟಿತ ಕೃತಿಗಳು:

ತತ್ವಶಾಸ್ತ್ರ – ಬ್ರಹ್ಮ ಸೂತ್ರ ಚತುಃ ಸೂತ್ರೀ, ಭಾರತೀಯ ತತ್ವ ಶಾಸ್ತ್ರ ಪ್ರವೇಶ. (ಡಾ॥ ಪ್ರಭಾಕರ ಜೋಷಿ ಅವರೊಂದಿಗೆ).

ಕಾವ್ಯ ಮೀಮಾಂಸೆ – ಅಲಂಕಾರ ತತ್ವ.

ಯಕ್ಷಗಾನ – ಕೆರೆಮನೆ ಮಹಾಬಲ ಹೆಗಡೆ.

ಅನುವಾದ – ಶಬ್ದ ಮತ್ತು ಜಗತ್ತು. ಭಗವದ್ಭಕ್ತಿ ರಸಾಯನ, ಸಿದ್ಧಾಂತ ಬಿಂದು, ಅದ್ವೈತ ವೇದಾಂತ ಮತ್ತು ಆಧುನಿಕ ವಿಜ್ಞಾನ.

ವ್ಯಕ್ತಿ ಪರಿಚಯ

ಡಾ|| ಮಾಳಿ ವಿ.ಎಸ್.

೧. ಹೆಸರು : ಡಾ|| ವಿಠ್ಠಲ ಸದಾಶಿವ ಮಾಳಿ.

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಅಥಣಿ, ಜಂಬಗಿ ೦೧-೦೬-೧೯೬೨

೪. ಜಿಲ್ಲೆ - ರಾಜ್ಯ : ಬೆಳಗಾವಿ, ಕರ್ನಾಟಕ.

೫. ವಿದ್ಯಾಭ್ಯಾಸ : ಸ್ನಾತಕೋತ್ತರ.

೬. ವೃತ್ತಿ : ಪ್ರಾಧ್ಯಾಪಕ

೭. ಕೌಟುಂಬಿಕ : ಪತ್ನಿ; ಶೈಲಜಾ. ಪುತ್ರಿ; ಅಶ್ವಿನಿ.
ಪುತ್ರ; ರಾಜಶೇಖರ

೮. ಸದ್ಯದ ವಿಳಾಸ : ಡಾ|| ಮಾಳಿ ವಿ.ಎಸ್., 'ವಚನ', ವಿದ್ಯಾನಗರ,
ಹಾರೂಗೇರಿ, ಬೆಳಗಾವಿ-೫೯೧೨೨೦

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೩೧-೨೫೭೬೪೨, ೯೪೪೯೧೮೭೯೭೩

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆ ಅಥಣಿ ತಾಲೂಕು ಜಂಬಗಿ ಗ್ರಾಮದಲ್ಲಿ ಜನಿಸಿದರು. ಅಥಣಿ ಗಡಿ ಪ್ರದೇಶ. ಕನ್ನಡ–ಮರಾಠಿ ಭಾಷಾ ಮಾತಾಡುವ ಸಾಮರಸ್ಯ ಸಂಸ್ಕೃತಿಯ ಮಧ್ಯೆ ಬೆಳದವರು. ಮನೆಯಲ್ಲಿ ಕನ್ನಡ ಮಾತನಾಡಿದರೆ ಬೀದಿಯಲ್ಲಿ ಮರಾಠಿ ಮಾತಾಡಬೇಕು. ಆದರೂ ಪ್ರಾಥಮಿಕ ಶಿಕ್ಷಣ ಮಾತೃ ಭಾಷೆಯಲ್ಲೇ ಪಡೆದರು. ಸಮೀಪದ ಮದಲಾವಿಯಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಸಿ ಅಥಣಿಯ ಜೆ.ಎ. ಪದವಿ ಪೂರ್ವ ಕಾಲೇಜಿನಲ್ಲಿ ಎರಡು ವರ್ಷ ಓದಿದರು. ಶಾಲದಿನಗಳಿಂದಲೇ ಸಾಹಿತ್ಯದ ಬಗ್ಗೆ ಆಸಕ್ತಿ. ವಿಜ್ಞಾನದಿಂದ ಕಲಾ ವಿಭಾಗಕ್ಕೆ ಬಂದರು. ಎಸ್.ಎಸ್.ಎಂ.ಎಸ್. ಕಾಲೇಜಿನಲ್ಲಿ ಪದವಿಗೆ ಸೇರಿದರು. ಕನ್ನಡ ಸಾಹಿತ್ಯವನ್ನು ತೆಗೆದುಕೊಂಡು ೧೯೮೩ ರಲ್ಲಿ ಬಿ.ಎ. ಪ್ರಥಮ ವರ್ಗದಲ್ಲಿ ಪಾಸಾದರು. ಧಾರವಾಡದ ಕರ್ನಾಟಕ ವಿಶ್ವ ವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದರು. ಅತಿ ಹೆಚ್ಚಿನ ಅಂಕ ಗಳಿಸಿ ಪ್ರಶಸ್ತಿ ಗಳಿಸಿದರು. ಎರಡು ಸುವರ್ಣ ಪದಕ ಗಳಿಸಿದರು. ೧೯೮೫ರಲ್ಲಿ ಹಾರೋಗೇರಿ ವೃಷಭೇಂದ್ರ ಕಲಾ ವಾಣಿಜ್ಯ ಮಹಾ ವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿದರು. ೧೯೯೩ ರಲ್ಲಿ ಕನ್ನಡ ಸಾಹಿತ್ಯದಲ್ಲಿ ಕರ್ಣ ವಿಷಯದ ಮಹಾ ಪ್ರಬಂಧ ರಚಿಸಿ ಕರ್ನಾಟಕ ವಿಶ್ವ ವಿದ್ಯಾನಿಲಯದಿಂದ ಪಿಹೆಚ್.ಡಿ. ಪದವಿ ಗಳಿಸಿದರು. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಸೃಜಾಶೀಲ ಸೃಜನೇತರ ಎರಡೂ ಪ್ರಕಾರದ ಸಾಹಿತ್ಯ ರಚನೆಗೆ ತೊಡಗಿದರು. ಸಮಾಜ ಸೇವೆ ಹವ್ಯಾಸ. ಹಲವು ಸಾಮಾಜಿಕ ಸಂಘಟನೆಗಳಲ್ಲಿ ತೊಡಗಿದರು. ಪತ್ರಕರ್ತರಾದರು. ವಿದ್ಯಾ ಪೋಷಕ ಸಂಘಕ್ಕಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಅಖಿಲ ಭಾರತ ಪತ್ರಕರ್ತ ಸಂಘದ ಸದಸ್ಯರಾಗಿ, ಹಾರೋಗೇರಿಯ 'ರಂಗ ತರಂಗ ವೇದಿಕೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ರಾಜ್ಯ ಮಟ್ಟದ ಪೌರಾಣಿಕ ನಾಟಕೋತ್ಸವಕ್ಕಾಗಿ ಶ್ರಮಿಸಿದ್ದಾರೆ. ಹಾರೋಗೇರಿಯಲ್ಲಿ ಸಾಹಿತ್ಯ ಸಮ್ಮೇಳನ ಸಂಘಟಿಸಿದ್ದಾರೆ. ಇವರೀಗ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ನಿರ್ದೇಶಕರಾಗಿದ್ದರೆ. ಹಲವು ವಿಚಾರ ಸಂಕೀರ್ಣ, ಕಾರ್ಯಗಾರಗಳನ್ನು ನಡೆಸಿದ್ದಾರೆ. ಇವರು ೫ ವಿದ್ಯಾರ್ಥಿಗಳ ಎಂ.ಫಿಲ್. ಹಾಗೂ ನಾಲ್ವರು ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಹಲವು ಪ್ರಕಾಶನ, ಪತ್ರಿಕೆಗಳಿಗೆ ಸಲಹೆಗಾರರಾಗಿ, ಅಂಕಣಕಾರರಾಗಿ ಸಾವಿರಕ್ಕೂ ಹೆಚ್ಚು ಉಪನ್ಯಾಸ ನೀಡಿ ೫೦ಕ್ಕೂ ಹೆಚ್ಚು ವಿಚಾರ ಸಂಕೀರ್ಣಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಆಕಾಶವಾಣಿಯಲ್ಲಿ ಇವರ ಚಿಂತನಗಳು, ಭಾಷಣಗಳು ಪ್ರಸಾರವಾಗಿವೆ.

ಪ್ರಕಟಿತ ಕೃತಿಗಳು:

ಕೂಡಲ ಕಲ್ಪತರು, ವ್ಯಾಕರಣ ಪರಿಚಯ, ರಸಾಲ, ಸ್ಪಂದನ, ಮರಾಳ, ಅಮೃತದ ಬೆಳಸು, ಅರ್ಘ ಶೇಷ. ಸಂಪಾದಿತ – ಅರಳು, ಭೂಮಿ ವಿಸ್ತಾರ, ಐನಾಪುರ, ಐಸಿರಿ ಇತ್ಯಾದಿ.

ಲಭಿಸಿರುವ ಪ್ರಶಸ್ತಿಗಳು:

೧. ವಾಗ್ಭೂಷಣ. ೨. ಆಜೂರ ಪುಸ್ತಕ ಪ್ರತಿಷ್ಠಾನ ಪ್ರಶಸ್ತಿ.

೩. ಸಾಹಿತ್ಯ ರತ್ನ ಪ್ರಶಸ್ತಿ.

೪. ಆದರ್ಶ ಶಿಕ್ಷಕ ರೋಟರಿ ಪ್ರಶಸ್ತಿ. ೫. ಹಳಕಟ್ಟೀ ಪ್ರಶಸ್ತಿ

ವ್ಯಕ್ತಿ ಪರಿಚಯ



ಮೋಹನ ವೆರ್ಣೇಕರ್

೧.	ಹೆಸರು	:	ಮೋಹನ ವೆರ್ಣೇಕರ್
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಹೊಸಪಟ್ಟಣ, ೨೨-೬-೧೯೫೦
೪.	ಜಿಲ್ಲೆ - ರಾಜ್ಯ	:	ಉತ್ತರಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ.
೬.	ವೃತ್ತಿ	:	ನಿವೃತ್ತ ಅಭಿಲೇಖನಾಧಿಕಾರಿ, ಕರ್ನಾಟಕ ವಿಧಾನಸಭೆ ಸಚಿವಾಲಯ.
೭.	ಕೌಟುಂಬಿಕ	:	ವಿವಾಹಿತ, ಇಬ್ಬರು ಪುತ್ರರು, ಒಬ್ಬ ಪುತ್ರಿ.
೮.	ಸದ್ಯದ ವಿಳಾಸ	:	೧೧೩೮, ಮೊದಲನೇ ಮಹಡಿ, ೯ನೇ ಅಡ್ಡರಸ್ತೆ, ಅಶೋಕನಗರ, ಬನಶಂಕರಿ ೧ ನೇ ಹಂತ, ಬೆಂಗಳೂರು-೫೬೦೦೦೫೦
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦-೨೬೬೬೧೯೨೭೯, ೯೮೪೪೦೭೫೫೧೨.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಹೊಸಪಟ್ಟಣ ಗ್ರಾಮದಲ್ಲಿ ಜನಿಸಿದರು. ಇವರು ಶ್ರೀ ವಾಸುದೇವ್ ಶೇಟ್ ಮತ್ತು ಶ್ರೀಮತಿ ತುಳಸಿಬಾಯಿ ದಂಪತಿಗಳ ಪುತ್ರ. ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ. ನಂತರದ ವಿದ್ಯಾಭ್ಯಾಸ ವಿರಾಜಪೇಟೆ, ಶಾಲದಿನಗಳಲ್ಲಿಯೇ ಸಾಹಿತ್ಯದ ಒಲವು. ಕೊಡಗಿನ ಪತ್ರಿಕೆಗಳಲ್ಲಿ ಕಥೆ, ಲೇಖನ ಪ್ರಕಟ. ೧೯೭೮ರಿಂದ ಬೆಂಗಳೂರಿನ ವಾಸ್ತವ್ಯ. ಪಿ.ಯು.ಸಿ ಮತ್ತು ಬಿ.ಎ. ಮಾಡಿ ಬೆರಳಚ್ಚು ಮತ್ತು ಕನ್ನಡ ಶೀಘ್ರಲಿಪಿ ಶಿಕ್ಷಣ ಪಡೆದು ಕೇಂದ್ರ ಸರ್ಕಾರದ ಇಲಾಖೆಯಲ್ಲಿ ಕೆಲವು ಕಾಲ ಸೇವೆ ಸಲ್ಲಿಸಿ. ೧೯೮೩ರಲ್ಲಿ ಕರ್ನಾಟಕ ವಿಧಾನ ಮಂಡಲ ಅಧಿಕೃತ ವರದಿಗಾರರಾಗಿ ವೃತ್ತಿ ಜೀವನ ಆರಂಭಿಸಿದರು. ೨೦೦೭ರಲ್ಲಿ ಸ್ವಯಂ ನಿವೃತ್ತಿ ಪಡೆದು ಪೂರ್ಣ ಕಾಲವನ್ನು ಸಾಹಿತ್ಯ ರಚನೆಗೂ ಹಾಗೂ ಸಾಹಿತಿಗಳ ಚುಕ್ಕಿ ಚಿತ್ರ ರಚಿಸುವ ಸೇವೆಯಲ್ಲಿ ತೊಡಗಿದ್ದಾರೆ. ಕಾರಂತರು, ಮಾಸ್ತಿ, ಕುವೆಂಪು, ಭೈರಪ್ಪ ಮುಂತಾದ ಸಾಹಿತಿಗಳು ಇವರ ಮೇಲೆ ಪ್ರಭಾವ ಬೀರಿದ್ದಾರೆ. ಇವರು ಮಕ್ಕಳ ಸಾಹಿತ್ಯ, ನಾಟಕ, ಕಥೆ, ಕಾದಂಬರಿ ಇತ್ಯಾದಿ ವಿವಿಧ ಪ್ರಕಾರಗಳ ೪೧ ಕೃತಿಗಳು ಪ್ರಕಟವಾಗಿವೆ. ಪ್ರಮುಖ ಪತ್ರಿಕೆಗಳಲ್ಲಿ ಇವರ ಬರೆಹಗಳು ಪ್ರಕಟವಾಗಿವೆ. ಇವರಿಗೆ ಮನೋ ವಿಜ್ಞಾನ, ವ್ಯಕ್ತಿ ವಿಕಾಸ ಮತ್ತು ವೈದ್ಯ ಸಾಹಿತ್ಯ ರಚನೆಯಲ್ಲೂ ಆಸಕ್ತಿಯಿದೆ. ಮಹಾರಾಷ್ಟ್ರ ಕನ್ನಡ ಪಠ್ಯ ಪುಸ್ತಕದಲ್ಲಿ ಇವರ ನಾಟಕ ಸೇರಿದೆ. ಆಕಾಶವಾಣಿಯಲ್ಲಿ ಇವರ ರೂಪಕಗಳು ಪ್ರಸಾರವಾಗಿವೆ. ಇವರ ಕಥೆ, ಕವನ, ಲೇಖನ, ಪ್ರಬಂಧಗಳ ಪ್ರಕಟಿತ ಸಂಖ್ಯೆ ಸಾವಿರಕ್ಕೆ ಮೀರಿದೆ. ಚಿತ್ರಕಲೆ ಹವ್ಯಾಸ. ಮಾಸ್ತಿಯವರ ಪ್ರೇರಣೆ ಚುಕ್ಕಿ ಚಿತ್ರಗಳಲ್ಲಿ ಶತ ಸಾಹಿತ್ಯ ಪ್ರತಿಭೆ ಇವರದು. ಕನ್ನಡ ಪ್ರಮುಖ ಪತ್ರಿಕೆಗಳಲ್ಲೆಲ್ಲ ಈ ಸಾಹಿತಿಗಳ ಚುಕ್ಕಿ ಚಿತ್ರಗಳು ಪ್ರಕಟವಾಗಿವೆ. ನೂರಾರು ಪ್ರಶಸ್ತಿ, ಪುರಸ್ಕಾರಗಳನ್ನು ಗಳಿಸಿದ್ದಾರೆ. ೫೦ಕ್ಕೂ ಹೆಚ್ಚು ಸಭೆ–ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ. ಇವರು ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು ಹಾಗೂ ದೈವಜ್ಞ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ನಿರ್ದೇಶಕರು. ವ್ಯಕ್ತಿ ವಿಕಾಸ ಮಾಸ ಪತ್ರಿಕೆ ಹಾಗೂ ಕಾವ್ಯ ಸಿಂಧು ಪ್ರಕಾಶನಗಳ ಗೌ. ಸಲಹೆಗಾರರು. ಕನ್ನಡ ಮಾನಸಿಕ ಆರೋಗ್ಯ ಪ್ರತಿಷ್ಠಾನದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೂರ ದರ್ಶನದಲ್ಲಿ ಇವರ ಪರಿಚಯ ಪ್ರಸಾರವಾಗಿದೆ.

ಪ್ರಕಟಿತ ಕೃತಿಗಳು:

ಕಾದಂಬರಿ – ದಿಕ್ಕು, ಸ್ವರ್ಣ ಮಂದಿರ, ಪ್ರೀತಿ ಪ್ರೇಮಗಳ ನಡುವೆ, ಕಪ್ಪು ಬಾನಲ್ಲಿ ಚಂದಿರ.
ಕಥಾ ಸಂ. – ಪ್ರಶಸ್ತಿ, ವ್ಯಾಪ್ತಿ. **ಮಕ್ಕಳ ನಾಟಕ** – ನಮ್ಮ ಅಕ್ಕ, ಆದರ್ಶ ಗೆಳೆಯರು, ಬಹುಮಾನ
ಸಣ್ಣ ಹನಿ ಸಂ. – ಬನ್ನಿ ನಗೋಣ. **ಮಕ್ಕಳ ಕವನ ಸಂ.** – ಜಾಣಮರಿ.
ಮನೋವೈಜ್ಞಾನಿಕ – ಡಿಪ್ರೆಶನ್ ನಿವಾರಣೆಗೆ ೧೦೮ ಸಲಹೆಗಳು, ಗೀಳು ಮನೋರೋಗ.
ಇತರೆ – ಮನೋ ಖಿನ್ನತೆ ನಿರ್ಲಕ್ಷ್ಯ ಬೇಡ, ವ್ಯಕ್ತಿತ್ವ ವಿಕಾಸ ಮಾರ್ಗದರ್ಶಿ.
ಸಂಪಾದಿತ – ಶತಮಾನ, ಗುಚ್ಛ, ವರ್ಷ.ಎಸ್.ಡಿ., ಗಾವಂಕರ್ ಇತ್ಯಾದಿ.

ಲಭಿಸಿರುವ ಪ್ರಶಸ್ತಿಗಳು:

೧. ಗೊರೂರು ಸಹಿತ್ಯ ಪ್ರಶಸ್ತಿ. ೨. ಕನ್ನಡ ಸಿರಿ. ೩. ಬಸವನ ಗುಡಿರತ್ನ.
೪. ಡಾ॥ ರಾಜಕುಮಾರ್ ಸದ್ಭಾವನ ಪುರಸ್ಕಾರ. ೫. ದೈವಜ್ಞ ಭೂಷಣ.

ವ್ಯಕ್ತಿ ಪರಿಚಯ



ಮೋಹನ ಗ. ಹೆಗಡೆ

೧.	ಹೆಸರು	:	ಮೋಹನ ಗ. ಹೆಗಡೆ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ನೀಲೇಕಣಿ, ತಾಲೂಕು ಶಿರಸಿ. ೨-೩-೧೯೪೧.
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ. ಹಿಂದಿ ರಾಷ್ಟ್ರ ಭಾಷಾ ಪ್ರವೀಣ (ಮದ್ರಾಸ್)
೬.	ವೃತ್ತಿ	:	ಪ್ರೌಢ ಶಾಲಾ ಪ್ರಧ್ಯಾಪಕ ನಿವೃತ್ತ
೭.	ಕೌಟುಂಬಿಕ	:	ಪತ್ನಿ; ಇಂದಿರಾ. ಪುತ್ರಿ; ಚಿತ್ರಾಂಜಲಿ. ಪುತ್ರರು; ತೇಜಸ್ವಿ, ಆನಂದ.
೮.	ಸದ್ಯದ ವಿಳಾಸ	:	ಸಿರಿಗೌರಿ, ಅಣಲೆಕೊಪ್ಪ, ಸಾಗರ ಅಂಚೆ ಜಿಲ್ಲೆ ಶಿವಮೊಗ್ಗ
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೧೮೩-೨೨೯೬೭೭, ೯೪೮೦೫೦೮೧೭೩
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರಕನ್ನಡ ಜಿಲ್ಲೆ ಶಿರಸಿ ತಾಲೂಕು ನೀಲೇಕಣಿಯಲ್ಲಿ ಜನಿಸಿದರು. ಬಾಹ್ಯವಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಬಿ.ಎ. ಪದವಿ ಪಡೆದರು. ಬಿ.ಎಡ್. ಮಾಡಿ ಮೈಸೂರು ವಿಶ್ವವಿದ್ಯಾಲಯ ಎಂ.ಎ. ಮಾಡಿದರು. ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯಯಲ್ಲಿ ಡಿಪ್ಲೊಮಾ ಮಾಡಿದರು. ಇಂಡಾಲಾಜಿ ಮೈಸೂರು ವಿಶ್ವವಿದ್ಯಾಲಯ ಹಾಗೂ ಮದರಾಸಿನಲ್ಲಿ ಹಿಂದಿ ರಾಷ್ಟ್ರ ಭಾಷಾ ಪ್ರವೀಣ ಮಾಡಿದ್ದಾರೆ. ವೃತ್ತಿಯಿಂದ ಪ್ರೌಢ ಶಾಲಾ ಮುಖ್ಯಾಧ್ಯಪಕರಾಗಿ ನಿವೃತ್ತರಾದರು. ಪೃತ್ತಿಯಿಂದ ಸಾಹಿತಿಗಳಾದ ಇವರಿಗೆ ಮೊದಲಿನಿಂದಲೂ ಓದುವುದು ಬರೆಯುವುದು ಅಭ್ಯಾಸ ೧೯೬೨ರಲ್ಲಿ ಶಿರಸಿಯ ಸಾಪ್ತಾಹಿಕದಲ್ಲಿ ಇವರ ಮೊದಲ ಕವನ 'ಯುಗವಾಣಿ' ಪ್ರಕಟವಾಯಿತು. ನಂತರ ಇವರ ಬರೆಹಗಳು ನಾನಾ ಪತ್ರಿಕೆಗಳಲ್ಲಿ ಪ್ರಕಟವಾಗ ತೊಡಗಿತು. ೧೯೮೯ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ಆಜೀವ ಸದಸ್ಯರಾದರು. ಇತಿಹಾಸ ಕಲೆ, ಶಿಲ್ಪಿಗಳ ಕುರಿತಾದ ಇವರ ಲೇಖನಗಳು ವಾರ್ಷಿಕ ಸಮ್ಮೇಳನಗಳಲ್ಲಿ ಪ್ರಕಟವಾಗುವ ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಇವರಿಗೆ ವಿವಿಧ ಅಂಚೆ ಚೀಟಿಗಳ, ನಾಣ್ಯಗಳ ಹಾಗೂ ಬಹು ಭಾಷಾ ಗ್ರಂಥಗಳ ಸಂಗ್ರಹ ಮಾಡುವ ಹವ್ಯಾಸವಿದೆ. ೧೮೪೨ ರಿಂದ ೨೦೦೯ ರವರೆಗಿನ ಸುಮಾರು ೩೫೦೦ ಪತ್ರಿಕೆಗಳನ್ನು ಸಂಗ್ರಹಿಸಿದ್ದಾರೆ. ಇದನ್ನು ಹಲವಾರು ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರದರ್ಶಿಸಿಯೂ ಇದ್ದಾರೆ. ಡಾ|| ಸೂರ್ಯನಾಥ ಕಾಮತ್‌ರ ಸಂಪಾದಕತ್ವದ ಕರ್ನಾಟಕ ಗೆಜೆಟಿಯರ್ ಇಂಗ್ಲೀಷ್ ಹಾಗೂ ಕನ್ನಡ ಸಂಪುಟಗಳಲ್ಲಿ ಇವರ ೧೮೪೩-೧೯೭೨ರವರಗಿನ ಕನ್ನಡ ಪತ್ರಿಕಾ ಕಿರು ಮಾಹಿತಿ ಪಟ್ಟಿ ಪ್ರಕಟವಾಗಿದೆ. 'ಕನ್ನಡ ಪತ್ರಿಕ ಇತಿಹಾಸ'ದ ೧ನೇ ಸಂಪುಟದಲ್ಲಿ ಉ.ಕ. ಶಿವಮೊಗ್ಗ ಜಿಲ್ಲೆಗಳ ಪತ್ರಿಕೆಗಳ ಕುರಿತಾದ ಲೇಖನವಿದೆ. ಮುಂಬೈ 'ತಾಯಿ ನುಡಿ'ಮದರಾಸಿನ 'ಲಹರಿ'ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಇವರ ಬರೆಹಗಳು ಕಸ್ತೂರಿ, ತರಂಗ, ಸುಧಾ, ಉದಯವಾಣಿಗಳಲ್ಲಿಯೂ ಪ್ರಕಟವಗಿವೆ. ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯ ಪತ್ರಿಕೆಗಳಲ್ಲೂ ಇವರ ಪ್ರಬಂಧಗಳು ಪ್ರಕಟವಾಗಿವೆ. ಅನೇಕ ಸಂಸ್ಮರಣ ಗ್ರಂಥಗಳಲ್ಲಿ, ಸಾಗರ ಗ್ರಾಮ ವಿಕಾಸ, ಮಲೆನಾಡು ಮಲ್ಲಿಗೆ, ಸಹಚರ, ಕುಂದ ಪ್ರಭ, ಕನ್ನಡ ನುಡಿಗಳಲ್ಲಿ ಇವರ ಅಂಕಣ ಬರೆಹಗಳು ಪ್ರಕಟವಾಗಿವೆ. ಇವರು ಪ್ರವಾಸ ಪ್ರಿಯರು ೨೦೦೪ರಲ್ಲಿ ಸಾಗರದಲ್ಲಿ ಅಂಚೆ ಚೀಟಿ ಹಾಗೂ ನಾಣ್ಯ ಸಂಗ್ರಹ ಸಂಘದ ಸ್ಥಾಪನಾಧ್ಯಕ್ಷರು.

ಪ್ರಕಟಿತ ಕೃತಿಗಳು:

ಇತಿಹಾಸ – ಕೆಳದಿಯ ಕಥೆಗಳು. **ಪ್ರವಾಸ** – ಸಾಗರದಿಂದ ಕೇದಾರ, ಕಾರುಗಳ ನಾಡಿನಲ್ಲಿ ದೇವಾಲಯಗಳ ನಾಡು. **ಇತರೆ** – ಪತ್ರಿಕಾ ರಂಗದಲ್ಲಿ ಹವ್ಯಕರು.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೨ – ಶಿವಮೊಗ್ಗ ಜಿಲ್ಲಾ ಮಟ್ಟದ ಕ್ವಿಜ್ ಪ್ರಶಸ್ತಿ.

೨. ೨೦೦೪ – ಅಖಿಲ ಹವ್ಯಕ ಮಹಾಸಭೆ ಬೆಂಗಳೂರು – ಸನ್ಮಾನ

೩. ೨೦೦೫ – ಸಾಗರ ನಗರ ಸೀಮಾ ಪರಿಷತ್ ಸಮ್ಮೇಳನದಲ್ಲಿ ಸನ್ಮಾನ.

೪. ೨೨೦೪ – ವಿಭಾಗೀಯ ಹಿರಿಯ ತಂಡದ ಅಂಚೆ ಚೀಟಿ ಪ್ರದರ್ಶನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.

ವ್ಯಕ್ತಿ ಪರಿಚಯ

ಯತಿರಾಜ್ ವೀರಾಂಬುಧಿ

೧.	ಹೆಸರು	: ಯತಿರಾಜ್ ವೀರಾಂಬುಧಿ
೨.	ಕಾವ್ಯನಾಮ	: ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	: ಮೈಸೂರು, ೧೧-೮-೧೯೫೭
೪.	ಜಿಲ್ಲೆ - ರಾಜ್ಯ	: ಮೈಸೂರು, ಕರ್ನಾಟಕ.
೫.	ವಿದ್ಯಾಭ್ಯಾಸ	: ಬಿ.ಇ. (ಎಲೆಕ್ಟ್ರಿಕಲ್ ಪವರ್).
೬.	ವೃತ್ತಿ	: ಮಾರ್ಕೆಟಿಂಗ್ ಸೀನಿಯರ್ ಮ್ಯಾನೇಜರ್.
೭.	ಕೌಟುಂಬಿಕ	: ಪತ್ನಿ; ಉಷಾ. ಪುತ್ರಿ; ಸುರಭಿ. ಪುತ್ರ; ಸುಘೋಷ್.
೮.	ಸದ್ಯದ ವಿಳಾಸ	: ೮೯, 'ಚಿರಸ್ಮಿತ', ಪಟ್ಟಣಗೆರೆ ವೇರ್ ಹೌಸ್ ಹಿಂಭಾಗ, ರಾಜ ರಾಜೇಶ್ವರಿನಗರ, ಬೆಂಗಳೂರು-೫೬೦೦೯೮
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೦೮೦-೨೮೬೦೩೧೨೦
೧೧.	ಹಸ್ತಾಕ್ಷರ (ಸಹಿ)	:

ಸಾಹಿತ್ಯ ಪರಿಚಯ

ಇವರು ಮೈಸೂರಿನಲ್ಲಿ ಜನಿಸಿದರು. ರೈಲ್ವೆ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ. ಸರ್ಕಾರಿ ಶಾಲೆಯಲ್ಲಿ ಪ್ರೌಢ. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಪಿ.ಯು.ಸಿ. ಮೈಸೂರಿನಲ್ಲಿ ಬಿ.ಇ. ಪದವಿ. ಶಾಲೆಯಲ್ಲಿ ಓದುವಾಗಲೇ ಸಾಹಿತ್ಯಾಸಕ್ತಿ. ಚಂದಮಾಮ ಓದುವ ಹವ್ಯಾಸ. ನಂತರ ಸುಧಾ, ತರಂಗ, ಮಂಗಳ ಇತ್ಯಾದಿಗಳೊಂದಿಗೆ ಪಿ.ಯು.ಸಿ.ಗೆ ಬಂದಾಗ ಆಂಗ್ಲ ಕಾದಂಬರಿಗಳನ್ನೂ ಓದುತ್ತಿದ್ದರು. ೧೯೭೯ರಲ್ಲಿ ಭಾರತದ ಪ್ರವಾಸ ಮಾಡಿ ಅನುಭವಗಳ ದಾಖಲೆ. ಶಾಲೆಗಳಲ್ಲಿ ಕವನಗಳ ರಚನೆ. ಜಯನಗರದ ರೋಟರಾಕ್ಟ್ ಕ್ಲಬ್ ಡೆಡಿಕೇಷನ್ ಆಂಗ್ಲ ಪತ್ರಿಕೆಯ ಸಂಪಾದಕರಾಗಿ ೨ ವರ್ಷ ಸೇವೆ. ೧೯೮೯ರಲ್ಲಿ 'ರಾಗ ಸಂಗಮ ಪತ್ರಿಕೆಯಲ್ಲಿ ಮೊದಲ ಕಿರು ಕಾದಂಬರಿ ಪ್ರಕಟ. ನಂತರ ಇವರ ಬರೆಹಗಳು ಮಂಗಳ ಉಷಾ ಪತ್ರಿಕೆ, ಧಾರವಾಹಿ, ರಾಗ ಸಂಗಮ, ಮಯೂರ, ತುಷಾರ, ಸುಧಾ, ತರಂಗ, ಈ ವಾರ, ಚಂದನ, ಭಾವನಾ ಮಲ್ಲಿಗೆ, ಪ್ರಜಾವಾಣಿ, ಪ್ರಜಾಮತ, ಕನ್ನಡ ಪ್ರಭ, ಕನ್ನಡ ಜ್ಯೋತಿ, ಹಾಗೂ ಮಲ್ಲಿಗೆ ಮುಂತಾದ ಪತ್ರಿಕೆಗಳಲ್ಲಿ ಪ್ರಕಟ. ಕಿರ್ಲೋಸ್ಕರ್ ವಿದ್ಯುತ್ ಕಾರ್ಖಾನೆಯಲ್ಲಿ 'ವಿಚಾರ ವಾಣಿ' ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರಾಗಿಯೂ, ಕನ್ನಡ ಜೋತಿ ಸಂಪಾದಕ ಮಂಡಳಿಯ ಸದಸ್ಯರಾಗಿಯೂ ಸೇವೆ ಸಲ್ಲಿಕೆ. ರಮಾಕಾಂತ್ ಪ್ರೇರಣೆಯಿಂದ ೧೯೯೫ರಲ್ಲಿ 'ಕನ್ನಡಪ್ರಭ'ದಲ್ಲಿ ದೈನಿಕ ಧಾರವಾಹಿ ಪ್ರಕಟ. 'ಸುರಭಿ ಪ್ರಕಾಶನ' ಮತ್ತು 'ಸುಘೋಷ ಸಾಹಿತ್ಯ' ಪ್ರಕಾಶನಗಳ ಪ್ರಾರಂಭ. ಹಲವಾರು ಕೃತಿಗಳ ಪ್ರಕಟ. ಎನ್. ನರಸಿಂಹಯ್ಯನವರಿಂದ ಪತ್ತೇದಾರಿ ಕಾದಂಬರಿ ರಚನೆಗೆ ಪ್ರೇರಣೆ. ಮಂಗಳ ಲೇಖಕರ ಕಮ್ಮಟದಲ್ಲಿ ಭಾಗವಹಿಸಿದರು. ತೆಲಗು ಕಲಿತರು. ಯಂಡಮೂರಿ ತೆಲಗು ಕಾದಂಬರಿಗಳನ್ನು ಅನುವಾದಿಸಿದರು. ಪತ್ರಿಕೆಗಳಲ್ಲಿ ಧಾರವಾಹಿಯಾಗಿ ಬಂತು. ಸಲ್ತನ್ ಆಫ್ ಓಮನ್‌ನಲ್ಲಿ ಮೂರು ವರ್ಷ ಉದ್ಯೋಗ. ೨೦೦೫ರಲ್ಲಿ ಮರಳಿದರು. ಕರ್ಮವೀರ, ವಿಜಯ ಕರ್ನಾಟಕ, ಉದಯವಾಣಿಗಳಲ್ಲಿ ಅಂಕಣ ಬರೆಹಗಾರರಾದರು. ಮ್ಯಾನೇಜ್‌ಮೆಂಟ್, ತತ್ವ ಶಾಸ್ತ್ರದ ಗ್ರಂಥಗಳ ಬಗ್ಗೆ ಒಲವು. ಟಿ.ಕೆ. ರಾಮರಾವ್, ಭೈರಪ್ಪ, ಅಶ್ವಿನಿ, ಉಷನವರತ್ನರಾಮ್ ಇವರ ಮೆಚ್ಚಿನ ಸಾಹಿತಿಗಳು.

ಪ್ರಕಟಿತ ಕೃತಿಗಳು:

ಕಾದಂಬರಿ – ಆಪತ್ತಿಗೆ ಆಹ್ವಾನ, ಪರಿಶೋಧ ಗಾಥೆ, ಮರದಡಿ ಮಳೆ, ಪಂಚಾನನ, ಜೀವನ್ಮುಖಿ, ಕುರುಡು ತಿರುವು, ಸಾಬೀತು, ಹಾಸುಹೊಕ್ಕು, ಕಪ್ಪು ನದಿ, ಹಸ್ತಕ್ಷೇಪ, ಉದ್ಯೋಗ ಪರ್ವ, ಒಂದೊಂದಾಗಿ ಜಾರಿದರೆ, ಕೃತಾಕೃತ, ರಣವೀಳ್ಯ, ಕರೆದರೆ ಬಾರೆ, ಅವಿನಾಭಾವ.

ಕಥಾ ಸಂ. – ಬಿಂದು-ಬಿಂದು ಸೇರಿ ಸಿಂಧು, ತೆನೆ ತೆನೆ ಕೂಡಿದರೆ ಬಳ್ಳ, ಹನನ.

ಲೇ. ನ ಸಂ. – ಮನೆ ಮಾತು, ವಿನೋದ, ವೀರಾಂಬುಧಿ ಜೋಕ್ಸ್.

ಲಭಿಸಿರುವ ಪ್ರಶಸ್ತಿಗಳು:

೧. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪತ್ತೆದಾರಿ ಲೇಖಕ ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ॥ ಯಶೋದಾ ಭಟ್ಟ

೧.	ಹೆಸರು	: ಡಾ॥ ಯಶೋದಾ ನಾರಾಯಣ ಭಟ್ಟ
೨.	ಕಾವ್ಯನಾಮ	: ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	: ಧಾರವಾಡ, ೨೧-೭-೧೯೩೩
೪.	ಜಿಲ್ಲೆ - ರಾಜ್ಯ	: ಧಾರವಾಡ, ಕರ್ನಾಟಕ.
೫.	ವಿದ್ಯಾಭ್ಯಾಸ	: ಎಂ.ಎ., ಪಿಹೆಚ್.ಡಿ.
೬.	ವೃತ್ತಿ	: ನಿವೃತ್ತ ಇಂಗ್ಲೀಷ್ ಪ್ರಾಧ್ಯಾಪಕಿ
೭.	ಕೌಟುಂಬಿಕ	: ಪತಿ; ಶ್ರೀ ನಾರಾಯಣ ಪರಮೇಶ್ವರ ಭಟ್ಟ. ಒಬ್ಬ ಮಗ.
೮.	ಸದ್ಯದ ವಿಳಾಸ	: ಡಾ॥ ಯಶೋದಾ ಭಟ್ಟ, 'ಅವನಿ', ೨೧೭, ೨ನೇ ಮುಖ್ಯರಸ್ತೆ,೩ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ-೫೮೦೦೦೮
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೦೮೩೬-೨೪೭೨೧೩೧
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ಧಾರವಾಡದಲ್ಲಿ ಹುಟ್ಟಿದರು. ಇವರು ಡಾ|| ವಿ.ಕೃ. ಗೋಕಾಕ್ ಹಾಗೂ ಶ್ರೀಮತಿ ಶಾರದಾ ಗೋಕಾಕ್ ದಂಪತಿಗಳ ಪುತ್ರಿ. ತಂದೆ ಹೆಚ್ಚಾಗಿ ಮಹಾರಾಷ್ಟ್ರದಲ್ಲೇ ಇರುತ್ತಿದ್ದುದರಿಂದ ಇವರ ಪ್ರಾಥಮಿಕ ಶಿಕ್ಷಣ ಸಾಂಗಲಿಯಲ್ಲಿ ಮರಾಠಿ ಭಾಷೆಯಲ್ಲಾಯಿತು. ನಂತರ ಸಿಕಂದರಾಬಾದ್, ಗುಜಾರಥಗಳಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ. ಕೊಲ್ಲಾಪುರದಲ್ಲಿ ಮೆಟ್ರಿಕುಲೇಷನ್‌ನಲ್ಲಿ ಪ್ರಥಮ ಸ್ಥಾನ. ಅಲ್ಲೇ ಕಾಲೇಜು ಶಿಕ್ಷಣ ಆರಂಭಿಸಿ ಇಂಟರ್ ಆರ್ಟ್ಸ್ ಮಾಡಿ ೧೯೫೨ರಲ್ಲಿ ಧಾರವಾಡದಲ್ಲಿ ಬಿ.ಎ. ಆನರ್ಸ್ ಹಾಗೂ ಎಂ.ಎ. ಪದವಿ ಗಳಿಸಿದರು. ವಿಶ್ವ ವಿದ್ಯಾನಿಲಯಕ್ಕೆ ಪ್ರಥಮ ಬಂದರು. ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಪಾರಿತೋಷಕಗಳನ್ನೂ ಗಳಿಸಿದ್ದಾರೆ. ಎನ್.ಪಿ. ಭಟ್ಟರೊಂದಿಗೆ ವಿವಾಹವಾಯಿತು. ಪತಿ ಅಖಿಲ ಭಾರತೀಯ ವೃತ್ತಿಯವರು ಪತಿಯೊಂದಿಗೆ ಊರಿಂದೂರಿಗೆ ಅಲೆದಾಟ. ಹಲವಾರು ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ೧೯೮೮ರಲ್ಲಿ ದೆಹೆಲಿಯಲ್ಲಿ ಇಂಗ್ಲೀಷ್ ರೀಡರ್ ಆಗಿ ನಿವೃತ್ತರಾದರು. ತಂದೆಯಿಂದಲೇ ಬಂದ ಸಾಹಿತ್ಯ ಪ್ರೇರಣೆ ಇವರನ್ನು ಸಾಹಿತ್ಯಚಟುವಟಿಕೆಗಳಲ್ಲಿ ತೊಡಗಿಸಿತು. ಸೂರತ ಕರ್ನಾಟಕ ಸಂಘದಲ್ಲಿ ಸೇವೆ ಸಲ್ಲಿಸಿದರು. ಆಕಾಶವಾಣಿಯಲ್ಲಿ ಇಂಗ್ಲೀಷಿನಲ್ಲಿ ಇವರ ಭಾಷಣಗಳು ಪ್ರಸಾರವಾಗಿವೆ. ಅಂತರಾಷ್ಟ್ರೀಯ ಮಹಿಳಾ ವರ್ಷದ ಸಮಾರಂಭಗಳಲ್ಲಿ, ಮಹಿಳಾ ಸಂಕೀರ್ಣಗಳಲ್ಲಿ ಭಾಗವಹಿಸಿದ್ದಾರೆ. ದಿಲ್ಲಿ ಕನ್ನಡಿಗ ಸಂಸ್ಥೆಯ ಆಯೋಜಿಸಿದ ಸಾಹಿತ್ಯ ಸಮ್ಮೇಳನ ಕವಿಗೋಷ್ಠಿಗಳಲ್ಲಿ ಉದ್ಘಾಟನೆ ಮಾಡಿದ್ದಾರೆ. ಐದು ಭಾಷೆಗಳ ಕಾಲೇಜ್ ವಾರ್ಷಿಕ ಸಂಚಿಕೆಯ ಸಂಪಾದಕಿಯಾಗಿದ್ದಾರೆ. ಹಲವಾರು ಇಂಗ್ಲೀಷ್ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ವಿಚಾರ ಸಂಕೀರಣಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ೧೯೮೮ರಲ್ಲಿ ನಿವೃತ್ತರಾದರು. 'ಅವನಿ ರಸಿಕದ ರಂಗ' ವೇದಿಕೆ ಹಾಗೂ 'ಅವನಿ' ಪತ್ರಿಕೆಯ ಸಂಪಾದಕರಾಗಿ ಪತಿಯ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯ ಸಹಾಯಕರಾಗಿ ನಿಂತರು. ಉತ್ತರ ಕನ್ನಡದ ಲೇಖಕಿಯರ ಸಂಘದ ಸ್ಥಾಯಿ ಸದಸ್ಯತ್ವ. ತಾಯಿ ಶಾರದ ಗೋಕಾಕರ ಹೆಸರಿನಲ್ಲಿ ದತ್ತಿ ನೀಡುತ್ತಿದ್ದರೆ. ಶಿರಸಿಯಲ್ಲಿ ನಡೆದ ಹವ್ಯಕ ಮಹಿಳಾ ಸಮ್ಮೇಳನ ಉದ್ಘಾಟಕರು. ಹಲವಾರು ಕಡೆ ನಡೆದ ವಿ.ಕೃ. ಗೋಕಾಕರ ಜನ್ಮ ಶತಮಾನೋತ್ಸವ ಸಮಾರಂಭಗಳಲ್ಲಿ ಭಾಗವಹಿಸಿ ಭಾಷಣ ಮಾಡಿದ್ದಾರೆ. ಇವರದು ಇಂಗ್ಲೀಷಿನಲ್ಲಿ ೮ ಕೃತಿಗಳು ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು:

ಪ್ರಾತಃ ಸ್ಮರಣೀಯರು, ಶ್ರೀ ಸತ್ಯಸಾಯಿ ಚಿಂತನ. **ಸಂಪಾದಿತ** – ಕನ್ನಡ ಕಾವ್ಯ ಪರಂಪರೆ, ಕನ್ನಡಕ್ಕೊಬ್ಬರೇ ಗೋಕಾಕರು.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೬ – ಬೆಂಗಳೂರಿನ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಸಾಂಸ್ಕೃತಿಕ ಪ್ರತಿಷ್ಠಾನದ ವೀರ ವನಿತೆ–ಪ್ರಶಸ್ತಿ.

೨. ೨೦೦೭ – ಹೊಸ ಬಾಳೆ ಶ್ರೀ ಮಹಾಲಕ್ಷ್ಮೀ ಅನಂತ ಸೇವಾ ಟ್ರಸ್ಟ್ – ಬಿ ಅನಂತ ಸೇವಾ ಪುರಸ್ಕಾರ.

ವ್ಯಕ್ತಿ ಪರಿಚಯ

ರಕ್ಷಣಾ. ಎಂ.ಎನ್.

೧.	ಹೆಸರು	:	ರಕ್ಷಣಾ. ಎಂ.ಎನ್.
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಅಡ್ಯನಡ್ಕ, ೨೭-೧೦-೧೯೯೧
೪.	ಜಿಲ್ಲೆ - ರಾಜ್ಯ	:	ದಕ್ಷಿಣ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ದ್ವಿತೀಯ ಪಿ.ಯು.ಸಿ.
೬.	ವೃತ್ತಿ	:	ವಿದ್ಯಾರ್ಥಿನಿ.
೭.	ಕೌಟುಂಬಿಕ	:	
೮.	ಸದ್ಯದ ವಿಳಾಸ	:	D/o ಬಿ. ಮಹಾಬಲ ಭಟ್, ತೃಪ್ತಿ , ಅಡ್ಡನಡ್ಕ, ದ.ಕ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೨೫೫-೨೭೦೩೫೫
೧೧.	ಹಸ್ತಾಕ್ಷರ (ಸಹಿ)	:	ರಕ್ಷಣಾ. ಎಸ್. ಎಂ. Rkshana

ಸಾಹಿತ್ಯ ಪರಿಚಯ

ಇವರು ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲೂಕು ಅಡ್ಯನಡ್ಕದಲ್ಲಿ ಜನಿಸಿದರು. ಇವರು ಶ್ರೀ ಬಿ. ಮಹಾಬಲ ಭಟ್ ಮತ್ತು ಶ್ರೀಮತಿ ಲಲಿತ ಭಟ್ ದಂಪತಿಗಳ ಪುತ್ರಿ. ಇವರು ದ್ವಿತೀಯ ಪಿ.ಯು.ಸಿ. ಮಾಡಿ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಯಾಗಿದ್ದಾರೆ. ಬಾಲ್ಯದಿಂದಲೇ ಸಾಹಿತ್ಯಾಸಕ್ತಳಾದ ಈಕೆ ಒಂಬತ್ತನೇ ವಯಸ್ಸಿನಿಂದಲೇ ಕವನ ರಚಿಸ ತೊಡಗಿದಳು. ಈಕೆ ರಚಿಸಿದ ಶಿಶು ಕವನಗಳು ವಿಜಯ ಕರ್ನಾಟ, ಸುಧಾ ಹಾಗೂ ಕನ್ನಡ ಪ್ರಭಾ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಜಿಲ್ಲಾದ್ಯಂತ ನಡೆಯುವ ಪುಟಾಣಿ ಕವಿ ಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ೨೦೦೫ರಲ್ಲಿ ಕೋಟಾದಲ್ಲಿ ನಡೆದ ಜಿಲ್ಲಾ ಮಕ್ಕಳ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ೨೦೦೨ರಲ್ಲಿ ಇವರ ಪ್ರಥಮ ಸಂಕಲನ ಬಿಡುಗಡೆಯಾಯಿತು. ೨೦೦೩ರಲ್ಲಿ ಉಜಿರೆಯಲ್ಲಿ ನಡೆದ ಜಿಲ್ಲಾ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಧರ್ಮಾಧಿಕಾರಿ ಶ್ರೀ ವಿರೇಂದ್ರ ಹೆಗ್ಗಡೆಯವರು ಎರಡೆನೆಯ ಕವನ ಸಂಕಲನ 'ಗೊಂಚಲು' ಅನಾವರಣ ಗೊಳಿಸಿದರು. ೨೦೦೬ರಲ್ಲಿ ಬೆಂಗಳೂರಿನಲ್ಲಿ ಸರ್. ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ನಡೆಸಿದ ಕವಿಗೋಷ್ಠಿಯಲ್ಲಿ ಇವರು ಭಾಗವಹಿಸಿದ್ದರು. ೨೦೦೬ರಲ್ಲಿ ಇವರು ಕಲಿಯುತ್ತಿದ್ದ ಪುತ್ತೂರು ರಾಮಕೃಷ್ಣ ಪ್ರೌಢಶಾಲೆಯಲ್ಲಿ ಮೂರನೇ ಕವನ ಸಂಕಲನ 'ತೋರಣ' ಬಿಡುಗಡೆಯಾಯಿತು. ಇವರು ಜಿಲ್ಲೆಯಾದ್ಯಂತ ನಡೆಯುವ ಕವಿಗೋಷ್ಠಿ ಹಾಗೂ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಅಂಕುರ, ಗೊಂಚಲು, ತೋರಣ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೪ – ದಕ್ಷಿಣ ಕನ್ನಡ ಜಿಲ್ಲಾ ಕವನ ರಚನಾ ಸ್ಪರ್ಧೆಯಲ್ಲಿ ಬಹುಮಾನ
೨. ೨೦೦೬ – ಪುತ್ತೂರಿನ ಕನ್ನಡ ಜಾಗೃತಿ ಸಮಾವೇಶದಲ್ಲಿ ಸನ್ಮಾನ.
೩. ೨೦೦೪–೦೫ – ಪುತ್ತೂರು ಬಂಟ್ವಾಳಗಳಲ್ಲಿ ಪ್ರತಿಭಾ ಪುರಸ್ಕಾರ.
೪. ೨೦೦೭ – ಬೆಂಗಳೂರು ಸರ್. ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನದ ಸಾಹಿತ್ಯ ಪ್ರಶಸ್ತಿ.

ವ್ಯಕ್ತಿ ಪರಿಚಯ

ರಂಗನಾಥ ಶರ್ಮಾ. ಎನ್.

೧.	ಹೆಸರು	:	ವಿದ್ವಾನ್ ಎನ್. ರಂಗನಾಥ ಶರ್ಮಾ.
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ನಡಹಳ್ಳಿ, ಸೊರಬ, ೧೯೧೫.
೪.	ಜಿಲ್ಲೆ – ರಾಜ್ಯ	:	ಶಿವಮೊಗ್ಗ, ಕರ್ನಾಟಕ.
೫.	ವಿದ್ಯಾಭ್ಯಾಸ	:	
೬.	ವೃತ್ತಿ	:	
೭.	ಕೌಟುಂಬಿಕ	:	ಎರಡು ಗಂಡು, ಎರಡು ಹೆಣ್ಣು ಮಕ್ಕಳು.
೮.	ಸದ್ಯದ ವಿಳಾಸ	:	೧೨೬೧, ಧರಣಿ, ೧೩ನೇ ಕ್ರಾಸ್, ಗಿರಿನಗರ, ೨ನೇ ಹಂತ ಬೆಂಗಳೂರು
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಶಿವಮೊಗ್ಗ ಜಿಲ್ಲೆಸೊರಬ ತಾಲೂಕು ನಡಹಳ್ಳಿಯಲ್ಲಿ ಜನಿಸಿದರು. ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜ್ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ. ವ್ಯಾಕರಣ ವಿದ್ವಾಂಸ. ಅಲಂಕಾರ ಶಾಸ್ತ್ರ ವಿದ್ವಾನ್. ಖಾಸಗಿಯಾಗಿ ಮೈಸೂರು ಕನ್ನಡ ಪಂಡಿತ ಪರೀಕ್ಷೆ ಮಾಡಿದ್ದಾರೆ. ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿದ್ವಾನ್ ಮಾಡಿದ್ದಾರೆ. ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರ ಬೋಧಕರಾಗಿ ವೃತ್ತಿ ಜೀವನ ಆರಂಭಿಸಿ ಪ್ರಾಧ್ಯಪಕರಾಗಿ ನಿವೃತ್ತರಾದರು. ಪ್ರವೃತ್ತಿಯಿಂದ ಸಾಹಿತಿಗಳು. ವಾಲ್ಮೀಕಿ ರಾಮಾಯಣ ಸಂಪೂರ್ಣ ಕಾಂಡಗಳನ್ನು ಮೂಲಸಹಿತವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಭಾಗವತದ ೧೦, ೧೧, ಹಾಗೂ ೧೨ನೇ ಸ್ಕಂದಗಳನ್ನು ಮೂಲ ಸಹಿತ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲಾಗಿದೆ. ಶ್ರೀ ಶಂಕರಚರಿತಾಮೃತ, ಬಾಹುಬಲಿ ವಿಜಯಂ, ಏಕಚಕ್ರಂಕಾವ್ಯೋದ್ಯಾನಂ, ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾರೆ. ವಿಷ್ಣು ಪುರಾಣ, ವಿದ್ಯಾರಣ್ಯರ ಶಂಕರ ದಿಗ್ವಿಜಯಗಳನ್ನು ಮೂಲ ಸಹಿತ ಕನ್ನಡಕ್ಕೆ ಅನುವಾದಿಸಿ ಪ್ರಕಟಸಲಾಗಿದೆ. ಇವರು ವ್ಯಾಕರಣ ಶಾಸ್ತ್ರದ ಪರಿವಾರ, ಮಾನವ ಧರ್ಮ ಶಾಸ್ತ್ರ ಮುಂತಾದ ಪ್ರೌಢ ಗ್ರಂಥಗಳೂ ಸಣ್ಣ ಪುಟ್ಟ ಗ್ರಂಥಗಳು ಸೇರಿ ಒಟ್ಟೂ ೬೨ ಗ್ರಂಥಗಳನ್ನು ಕನ್ನಡ ಹಾಗೂ ಸಂಸ್ಕೃತದಲ್ಲಿ ರಚಿಸಿದ್ದಾರೆ. ಸುಮಾರು ಮುನ್ನೂರಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿವೆ. ಇವರ ವಿದ್ವತ್ತು, ಪಾಂಡಿತ್ಯಗಳನ್ನು ಗುರುತಿಸಿದ ತಿರುಪತಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ 'ಮಹಾ ಮಹೋಪಾಧ್ಯಾಯ'ಎಂಬ ಬಿರುದನ್ನು, ಬಿಹಾರದ ದಬಾಂಗ ಕೇಂದ್ರಿಯ ಸಂಸ್ಕೃತ ವಿಶ್ವವಿದ್ಯಾಲಯ 'ವಿದ್ಯಾ ವಾಚಸ್ಪತಿ'ಎಂಬ ಬಿರುದನ್ನು, ಶ್ರೀ ಪೇಜಾವರ ಮಠದ ಶ್ರೀಗಳು 'ಪಂಡಿತ ರತ್ನಂ'ಎಂಬ ಬಿರುದನ್ನು ಹೀಗೆ ಇನ್ನೂ ಇಂತಹ ೧೫ಕ್ಕೂ ಹೆಚ್ಚು ಪ್ರಶಸ್ತಿ ಗೌರವಗಳು ಇವರಿಗೆ ಸಂದಿವೆ.

ಪ್ರಕಟಿತ ಕೃತಿಗಳು:

ತಾತ್ಪರ್ಯ – ತೈತ್ತರೀಯ ಪ್ರವಚನ, ಹರಿಭಕ್ತ ಸಾರ ಚರಿತ್ರೆ, ವೀರ ಕಂಪಣರಾಯ, ಶ್ರೀಧರ ಚರಿತ್ರೆ, ಯುಗಪುರುಷ ಶಂಕರ. **ವ್ಯಾಕರಣ** – ವ್ಯಾಕರಣ ಶಾಸ್ತ್ರದ ಪರಿವಾರ. **ಪುರಾಣ** – ಪುರಾಣಗಳ ನೆಲೆ ಮತ್ತು ತತ್ವ ವಿಚಾರ. **ಕಥೆ** – ಗುರುಕುಲ ಕಥೆಗಳು, ಶ್ರೀರಾಮ ಕಥಾ ಮಂಜರಿ. **ಲೇ- ನ ಸಂ.** –ಪ್ರಜ್ಞಾ ರಂಗ. **ಕವಿ–ಕಾವ್ಯ** – ಎರಡನೇ ನಾಗವರ್ಮ.

ಲಭಿಸಿರುವ ಪ್ರಶಸ್ತಿಗಳು:

೧. ಸ್ವರ್ಣವಲ್ಲಿ ಶ್ರೀಗಳವರಿಂದ 'ಪಂಡಿತ ರಾಜ'ಗೌರವದ ಕರ್ನಾಟಕ ರಜ್ಯೋತ್ಸವ ಪ್ರಶಸ್ತಿ.
೨. ಅಧ್ಯಾಪಕ ವೃತ್ತಿಗಾಗಿ ರಾಷ್ಟ್ರ ಪ್ರಶಸ್ತಿ.
೩. ಸೇಡಿಯಾಪು ಪ್ರಶಸ್ತಿ.
೪. ದೇರಾಜೇ ಪ್ರಶಸ್ತಿ.
೫. ಕರ್ನಾಟಕ ಸರ್ಕಾರದ ಅನುವಾದ ಅಕಾಡೆಮಿ ಪ್ರಶಸ್ತಿ.
೬. ಶ್ರೀ ರಾಮಚಂದ್ರಾ ಪುರಮಠದ ಚಾತುರ್ಮಾಸ್ಯ ಪ್ರಶಸ್ತಿ.

ವ್ಯಕ್ತಿ ಪರಿಚಯ

ರಂಗಾಚಾರ್ಯ ಗುತ್ತಲ

೧.	ಹೆಸರು	: ಶ್ರೀ ರಂಗಾಚಾರ್ಯ ಗುರುರಾಜಾಚಾರ್ಯ ಗುತ್ತಲ
೨.	ಕಾವ್ಯನಾಮ	: ರಂ.ಗು.ಗು.
೩.	ಹುಟ್ಟಿದ ಸ್ಥಳ ದಿನಾಂಕ	: ಕೂಸನೂರು, ೮-೧-೧೯೪೭.
೪.	ಜಿಲ್ಲೆ - ರಾಜ್ಯ	: ಹಾವೇರಿ, ಕರ್ನಾಟಕ.
೫.	ವಿದ್ಯಾಭ್ಯಾಸ	: ವೇದಾಂತ, ನ್ಯಾಯ, ವ್ಯಾಕರಣ ಇತ್ಯಾದಿ.
೬.	ವೃತ್ತಿ	: ಜಯತೀರ್ಥ ವಿದ್ಯಾಪೀಠದ ಕುಲಪತಿ
೭.	ಕೌಟುಂಬಿಕ	: ಪತ್ನಿ; ರುಕ್ಮಿಣೀ ಬಾಯಿ. ಪುತ್ರಿ; ಸೌ. ಸೀತಾ. ಪುತ್ರರು; ಶ್ರೀ ಸರ್ವಜ್ಞಾಚಾರ್ಯರು, ಶ್ರೀ ವಿದ್ಯಾಧೀಶಚಾರ್ಯ.
೮.	ಸದ್ಯದ ವಿಳಾಸ	: ೧೭೮, ಸುಬ್ಬರಾಯ ಚಟ್ಟಿ ರಸ್ತೆ, ಬಸವನಗುಡಿ, ಬೆಂಗಳೂರು-೫೬೦೦೦೮
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೦೮೦-೨೬೬೦೪೪೫೭, ೯೪೮೦೧೮೧೧೦೦.
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ಹಾವೇರಿ ಜಿಲ್ಲೆ ಕೂಸನೂರುವಿನಲ್ಲಿ ಜನಿಸಿದರು. ಸುಂಸ್ಕೃತ ಸಂಪ್ರದಾಯಸ್ಥ ಮನೆತನದಿಂದ ಬಂದವರು. ಆಧ್ಯಾತ್ಮಿಕ ವಾತವರಣದಲ್ಲಿ ಬೆಳೆದವರು. ಕನ್ನಡ ಸಂಸ್ಕೃತ ಕಲಿತರು. ಗುರುಕುಲ ಪದ್ಧತಿಯಲ್ಲಿ ಆಧ್ಯಾತ್ಮಿಕ ವಿದ್ಯಾಭ್ಯಾಸ. ತಂದೆ ಗುರುರಾಜಾಚಾರ್ಯ ಗುತ್ತಲ ಸಂನ್ಯಾಸ ಸ್ವೀಕರಿಸಿ ಉತ್ತರಾಧಿ ಮಠದ ಪೀಠಾಧಿಪತಿಗಳಾದರು. ಶ್ರೀ ಸತ್ಯ ಪ್ರಮೋದ ತೀರ್ಥರೆಂಬ ನಿರಂತರ ಅಧ್ಯಯನ, ಪಾಠ ಪ್ರವಚನ, ಧಾರ್ಮಿಕ ವಿಚಾರ ಪ್ರಚಾರಗಳ ಸಂಚಾರದಲ್ಲಿ ನಿರತರಾಗಿದ್ದರು. ಇವರು ತಂದೆಯೊಂದಿಗೆ ಊರೂರು ತಿರುಗಾಟದಲ್ಲಿ ಶಾಲ ಶಿಕ್ಷಣ ದುಸ್ತರವಾಯಿತು. ಸಮಗ್ರ ಭಾರತ ಇವರ ಕಲಿಕೆಯ ಪಾಠಶಾಲೆಯಾಯಿತು. ಪ್ರಕೃತಿಯ ಮಡಿಲೇ ಅಧ್ಯಯನ ಪೀಠವಾಯಿತು. ಓದಿದ್ದು ದರ್ಶನ ವಾಙ್ಞಯ, ಅತಿ ಜಟಿಲ ನ್ಯಾಯ ಶಾಸ್ತ್ರ. ಗುರುಗಳ ವರ ಬೇಡಿ ನರಸಿಂಹಾಚಾರ್ಯರು, ತಿರುವಾದಿ ವಿಜಯೀಂದ್ರ ಆಚಾರ್ಯರು ವೃತ್ತಿ ಆಧ್ಯಾತ್ಮ ಅಧ್ಯಯನ-ಉಪನ್ಯಾಸ. ಪ್ರವೃತ್ತಿ ಸಾಹಿತ್ಯ ಸೃಷ್ಟಿ. ಚಿಂತನ ಮನನ ಹವ್ಯಾಸ. ಶ್ರೀ ಜಯತೀರ್ಥರ ಶ್ರೀ ಮನ್ನ್ಯಾಯ ಸುಧಾ ಮೇರು ಕೃತಿಯ ವಿಚಾರಗಳ ಶೋಧ. ವಿದ್ಯಾಮಂದಿರ ಸಂಸ್ಕೃತ ಪಾಠಶಾಲೆಯ ಪ್ರಾರಂಭ. ಮೂವತ್ತು ವರ್ಷಗಳಿಂದ ಶಿಷ್ಯರಿಗೆ ವೇದಾಂತ ವಿದ್ಯಾದಾನ. ವಿದ್ಯಾಮಂದಿರ ನಂತರ ಜಯತೀರ್ಥ ವಿದ್ಯಾಪೀಠವಾಗಿ ಇವರು ಅದರ ಕುಲಪತಿಗಳಾದರು. ಶ್ರೀ ವೇದವ್ಯಾಸರ ಶ್ರೀ ಮದ್ಭಾಗವತಕ್ಕೆ ಶ್ರೀ ಯಾದವಾಚಾರ್ಯರ ಸಂಸ್ಕೃತ ವ್ಯಾಖ್ಯಾನವಿದೆ. ಶ್ರೀ ಸತ್ಯಧರ್ಮ ಯತಿಗಳ ವ್ಯಾಖ್ಯಾನವಿದೆ. ಈ ಎರೆಡೂ ವ್ಯಾಖ್ಯಾನಗಳನ್ನೂ ಇವರು ಕನ್ನಡದಲ್ಲಿ ತಂದಿದ್ದಾರೆ. ೧೦ ಸಂಪುಟಗಳು ಪ್ರಕಟವಾಗಿದ್ದು ಇನ್ನೂ ೧೫-೨೦ ಪ್ರಕಟವಾಗಬೇಕಾಗಿದೆ. ಇವರು ಭಾಗವಹಿಸಿದ ವಿಚಾರಗೋಷ್ಠಿ, ಸಂಕಿರಣಗಳಿಗೆ ಲೆಕ್ಕವಿಲ್ಲ. ತಿರುಪತಿಯ ಶ್ರೀ ಮಧ್ವ ಸಿದ್ಧಾಂತ ಉನ್ನಾಹಿನೀ ಸಭೆಯ ಅಧ್ಯಕ್ಷೀಯ ಪದವಿಯನ್ನೂ ೩೫ ವರ್ಷಗಳಿಂದ ನಿರ್ವಹಿಸುತ್ತಿದ್ದಾರೆ. ಅಖಿಲ ಭಾರತ ಮಾಧ್ವ ಮಂಡಲದ ೧೦ನೆಯ ತತ್ವಜ್ಞಾನ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಸಂಶೋಧನ ಕ್ಷೇತ್ರದಲ್ಲಿ ಅನುವಾದ ಸಾಹಿತ್ಯ ಕ್ಷೇತ್ರದಲ್ಲಿ ಇವರ ಸೇವೆ ಅಪಾರ. ಇವರ ಪತ್ನಿ ಶ್ರೀಮತಿ ರುಕ್ಮಿಣಿಬಾಯಿ ಅನುವಾದ ಕಾರ್ಯದಲ್ಲಿ ನೆರವಾಗುತ್ತಾರೆ. ಇವರು ಈಗಿನ ಉತ್ತರಾದಿಮಠದ **ಶ್ರೀ ಸತ್ಯಾತ್ಮ ತೀರ್ಥರ ಶ್ರೀ ಚರಣರು** ಶ್ರೀ ಸುಧಾ ಮಾಸ ಪತ್ರಿಕೆಯ ಸಂಪಾದಕರು.

ಪ್ರಕಟಿತ ಕೃತಿಗಳು:
ಶ್ರೀ ಮದ್ಭಾಗವತ ಭಾಗ ೧ ರಿಂದ ೧೦ (ಕನ್ನಡದಲ್ಲಿ)

ಲಭಿಸಿರುವ ಪ್ರಶಸ್ತಿಗಳು:
೧. ಶ್ರೀ ಜಯತೀರ್ಥ ಶೆಟ್ ಶತಮಾನೋತ್ಸವದಲ್ಲಿ ಶ್ರೀ ಮನ್ನ್ಯಾಯಸುಧಾ ವಿಶಾರದಾ ಪ್ರಶಸ್ತಿ.
೨. ಎಮ್.ಪಿ.ಎಲ್. ಶಾಸ್ತ್ರೀ ಪ್ರತಿಷ್ಠಾನ ಪ್ರಶಸ್ತಿ.
೩. ಉಭಯ ವೇದಾಂತಿ ಸಂಘದ ವೇದಾಂತಿ ವಿದ್ವಾನ್ ಪ್ರಶಸ್ತಿ.
೪. ಉತ್ತರಾದಿ ಮಠದ ಉನ್ನತ - ಧ್ಯಾನ ಪ್ರಮೋದ ಪ್ರಶಸ್ತಿ.
೫. ಫಲಿಮಾರು ಮಠದ ವಿದ್ಯಾಮಾನ್ಯ ಕೃಷ್ಣಪ್ರಸಾದ ವಿದ್ಯಾಮಾನ್ಯ ಪ್ರಶಸ್ತಿ.

ವ್ಯಕ್ತಿ ಪರಿಚಯ

ರಾಜ್ಯಶ್ರೀ ಕುಳಮರ್ವ

೧.	ಹೆಸರು	:	ರಾಜ್ಯಶ್ರೀ ಕುಳಮರ್ವ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಮಂಗಳೂರು, ೧-೧೧-೧೯೮೮
೪.	ಜಿಲ್ಲೆ - ರಾಜ್ಯ	:	ಮಂಗಳೂರು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಇ.
೬.	ವೃತ್ತಿ	:	ವಿದ್ಯಾರ್ಥಿನಿ (ಸ್ನಾತಕೋತ್ತರ)
೭.	ಕೌಟುಂಬಿಕ	:	ವಿದ್ಯಾರ್ಥಿನಿ
೮.	ಸದ್ಯದ ವಿಳಾಸ	:	ರಾಜ್ಯಶ್ರೀ, ವಿ.ಬಿ. ಕುಳಮರ್ವರ ಮಗಳು, ಶ್ರೀ ನಿಧಿ, ನಾರಯಣಮಂಗಲ, ಕುಂಬಳೆ ಅಂಚೆ-೬೭೧೩೨೧. ಕಾಸರಗೋಡು ಜಿಲ್ಲೆ, ಕೇರಳ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೪೯೯೮-೨೧೩೫೧೫
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಕರ್ನಾಟಕ ರಾಜ್ಯ ಮಂಗಳೂರು ಜಿಲ್ಲೆ ಮಂಗಳೂರಿನಲ್ಲಿ ಜನಿಸಿದರು. ಇವರು ಶ್ರೀ ವಿ.ಬಿ. ಕುಳಮರ್ವ ಮತ್ತು ಶ್ರೀಮತಿ ಲಲಿತಾ ಲಕ್ಷ್ಮೀ ಕುಳಮರ್ವ ದಂಪತಿಗಳ ಪುತ್ರಿ. ಪ್ರಾಥಮಿಕ ಹಾಗೂ ಮಧ್ಯಮಿಕ ಶಿಕ್ಷಣ ಕುಂಬಳೆ. ಪದವಿ ಪೂರ್ವ ಪುತ್ತೂರು. ಇಂಜಿನಿಯರಿಂಗ ಪದವಿ ಪಡೆದಿದ್ದಾರೆ. ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ. ಶಾಲದಿನಗಳಲ್ಲೇ ಕವನ, ಕಥ ರಚಿಸಲು ಆರಂಭಿಸಿದರು. ಹಾಡುವುದು ಹವ್ಯಾಸ. ಕಯ್ಯಾರ ಕಿಞ್ಞಣ್ಣ ರೈ, ವಿ.ಬಿ ಅರ್ತಿಕಜೆ, ಎಂ.ವಿ.ಭಟ್, ಮಧುರಾಂಗನ, ಗೋಪಾಲ ಕೃಷ್ಣ ಭಟ್ ಮಥುರಕಾನನ ಮುಂತಾದವರ ಪ್ರೋತ್ಸಾಹದಿಂದ ಸಾಹಿತ್ಯದ ಕಡೆ ಒಲವು. ಕು.ಗೋ. ಮಾರ್ಗದರ್ಶನ. ಇವರನ್ನು ದಕ್ಷಿಣ ಕನ್ನಡ ಜಿಲ್ಲ ಮಕ್ಕಳ ಸಾಹಿತ್ಯ ಸಂಗಮ, ಕನ್ನಡ ಸಾಹಿತ್ಯ ಪರಿಷತ್, ಚುಟುಕ ಸಾಹಿತ್ಯ ಪರಿಷತ್ತಿನ ವೇದಿಕೆಗಳೂ ಪ್ರೋತ್ಸಾಹಿಸಿದವು. ಕುವೆಂಪು, ಮಾಸ್ತಿ, ಕಾರಂತ, ಬೇಂದ್ರೆ, ಮುಂತಾದ ಹಿರಿಯ ಸಾಹಿತಿಗಳ ಸಾಹಿತ್ಯದಿಂದ ಸ್ಫೂರ್ತಿ ಪಡೆದರು. ಇವರ ಬರೆಹಗಳು ಉದಯವಾಣಿ, ವಿಜಯ ಕರ್ನಾಟಕ, ಹೊಸದಿಗಂತ, ಪ್ರಜಾವಾಣಿ, ತುಷಾರ, ಕಾರವಲ್, ಉತ್ತರದೇಶ, ಸವಿತಾ ಮಿತ್ರ, ಕಲಾ ದರ್ಶನ, ಯುಗ ಪುರುಷ ಹಾಗೂ ಕನ್ನಡ ಕೈರಳಿ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವರು ಆರನೆಯ ತರಗತಿಯಲ್ಲಿ ಓದುತ್ತಿರುವಾಗಲೇ ಇವರದೊಂದು ಕವನ ಸಂಕಲನವೂ ಪ್ರಕಟವಾಯಿತು. ಇವರು ಹಲವು ಸಾಹಿತ್ಯ ರಚನಾ ಕಮ್ಮಟಗಳಲ್ಲಿ, ಜಿಲ್ಲಾ ಮಟ್ಟದ ಗೋಷ್ಠಿಗಳಲ್ಲಿ ಭಾಗವಹಿಸುತ್ತಿರುತ್ತಾರೆ. ನಾಲ್ಕು ಕವಿ ಗೋಷ್ಠಿ ಅಧ್ಯಕ್ಷ ಸ್ಥಾನ ವಹಿಸಿದ್ದಾರೆ. ಹಲವು ಮಕ್ಕಳ ಸಮ್ಮೇಳನಗಳ ಕಾರ್ಯಕ್ರಮ ನಿರ್ವಹಿಸಿದ್ದಾರೆ. ಮಡಕೇರಿ, ಮಂಗಳೂರು ಆಕಾಶವಾಣಿಗಳಲ್ಲಿ ಸಂದರ್ಶನ, ಕಥೆ, ಕವಿತೆ ಪ್ರಸಾರವಾಗಿವೆ. ಹೊರನಾಡ ಸಂಸ್ಕೃತಿ ಸಮ್ಮೇಳನ, ಮಂಗಳೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ನಗುವ ಹೂವುಗಳು, ಯುಗಾದಿಯ ಕುಸುಮಗಳು, ರೆಕ್ಕೆ ಬಲಿತ ಹಕ್ಕಿ.
ಅಧ್ಯಾತ್ಮಿಕ ವಚನ ಸಂಕಲನ – ತಾತ್ವಿಕ ವಚನಗಳು.

ಲಭಿಸಿರುವ ಪ್ರಶಸ್ತಿಗಳು:
೧. ೨೦೦೨ – ಅಖಿಲ ಕರ್ನಾಟಕ ವಿದ್ಯಾಸಾಗರ ಬಾಲ ಪುರಸ್ಕಾರ.
೨. ೨೦೦೫ – ಸರ್. ಎಂ. ವಿಶ್ವೇಶ್ವರಯ್ಯ ಪ್ರತಿಷ್ಠಾನ ಪ್ರಶಸ್ತಿ.
೩. ಡಾ|| ಶಿವರಾಮ ಕಾರಂತರ ಜನ್ಮ ಶತಾಬ್ದಿ ಕಾವ್ಯ ಪುರಸ್ಕಾರ.
೪. ೨೦೦೪ – ಕನ್ನಡ ಸಾಹಿತ್ಯ ಪರಿಷತ್ತಿನ ಪುರಸ್ಕಾರ.
೫. ೨೦೦೪ – ಕರ್ನಾಟಕ ಪ್ರತಿಭಾ ಅಕಾಡೆಮಿ ಪುರಸ್ಕಾರ.

ವ್ಯಕ್ತಿ ಪರಿಚಯ

ಡಾ|| ರಾಜೇಂದ್ರ. ಡಿ.ಕೆ.

೧. ಹೆಸರು	:	ಡಾ|| ರಾಜೇಂದ್ರ. ಡಿ.ಕೆ.
೨. ಕಾವ್ಯನಾಮ	:	ಇರುವುದಿಲ್ಲ
೩. ಹುಟ್ಟಿದ ಸ್ಥಳ ದಿನಾಂಕ	:	ದಂಡಿನಶಿವರ, ತುರುವೇಕೆರೆ ತಾ. ೧೩-೪-೧೯೪೨
೪. ಜಿಲ್ಲೆ - ರಾಜ್ಯ	:	ತುಮಕೂರು, ಕರ್ನಾಟಕ.
೫. ವಿದ್ಯಾಭ್ಯಾಸ	:	ಎಂ.ಎ., ಪಿಹೆಚ್.ಡಿ.
೬. ವೃತ್ತಿ	:	ಕನ್ನಡ ಪ್ರಾಧ್ಯಾಪಕ (ವಿಶ್ರಾಂತ)
೭. ಕೌಟುಂಬಿಕ	:	ಪತ್ನಿ; ಡಾ|| ಟಿ.ಎಂ. ಸರಸ್ವತಿ. ಪುತ್ರ; ಎಂ.ಆರ್.ಗೌತಮ್. ಪುತ್ರಿ; ಎಂ.ಆರ್. ಪುನೀತ.
೮. ಸದ್ಯದ ವಿಳಾಸ	:	ನಂ. ೪೮, ವಂದನ , ಮಾರುತಿ ದೇವಸ್ಥಾನದ ರಸ್ತೆ, ಸರಸ್ವತಿ ಪುರಂ, ಮೈಸೂರು-೫೭೦೦೦೯
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೦೮೨೧-೨೫೪೪೪೮೧೯, ೯೮೪೫೫೨೮೧೦೫
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕು ದಂಡಿನಶಿವರದಲ್ಲಿ ಹುಟ್ಟಿದರು. ೧೯೬೯ರಲ್ಲಿ ಕನ್ನಡ ಎಂ.ಎ. ಮಾಡಿ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸಿ ೧೯೭೪ರಲ್ಲಿ ಪಿಹೆಚ್.ಡಿ. ಪದವಿ ಗಳಿಸಿದ್ದಾರೆ. ೧೯೬೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಂಶೋಧನ ಸಹಾಯಕರಾಗಿ ವೃತ್ತಿ ಜೀವನ ಆರಂಭ. ನಂತರ ಅಧ್ಯಾಪಕರಾಗಿ, ರೀಡರ್ ಆಗಿ, ಪ್ರಾಧ್ಯಾಪಕರಾಗಿ ೧೯೯೯ರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿ ೨೦೦೦ರಲ್ಲಿ ನಿವೃತ್ತಿ. ನಂತರವೂ ಇವರು ಒಂದು ವರ್ಷ ವಿಷಯ ವಿಶ್ವ ಕೋಶದ ಜಾನಪದ ಸಂಪುಟದ ಸಂಪಾದಕರಾಗಿದ್ದರು. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಪ್ರಬಂಧ ಸಾಹಿತ್ಯ, ವಿಚಾರ ಸಾಹಿತ್ಯ, ವಿಮರ್ಶೆ, ವ್ಯಕ್ತಿ ಚಿತ್ರಣ, ಮಕ್ಕಳ ಸಾಹಿತ್ಯ ಹಾಗೂ ವಿಶೇಷವಾಗಿ ಜಾನಪದ ಸಂಗ್ರಹ, ಸಂಪಾದನೆ ವಿಶ್ಲೇಷಣೆ ರಚಿಸಿದ್ದಾರೆ. ೪ ಪ್ರಬಂಧ, ೯ ಜಾನಪದ ವಿಮರ್ಶೆ, ೩ ಜೀವನ ಚಿತ್ರ, ೪ ಮಕ್ಕಳ ಪುಸ್ತಕ, ನಾಲ್ಕು ಸಂಪಾದಿತ ಹಾಗೂ ೭ ಗ್ರಂಥ ಸಂಪಾದನೆ ಮಾಡಿದ್ದಾರೆ. ಇವರು ಭಾರತೀಯ ಕುಟುಂಬ ಯೋಜನೆ ಮೈಸೂರು ಶಾಖೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಚುಟುಕ ಸಾಹಿತ್ಯ ಪರಿಷತ್ತು ಮುಡಲಪಾಯ ಯಕ್ಷಗಾನ, ಕೊನೇಹಳ್ಳಿ, ಕುವೆಂಪು ಟ್ರಸ್ಟ್ ಹಾಗೂ ಜೀಶಂಪ ಟ್ರಸ್ಟ್ ಮುಂತಾದ ಸಂಸ್ಥೆಗಳ ಸದಸ್ಯರಾಗಿಯೂ ಮೈಸೂರಿನ ಬರೆಹಗಾರರ ಸಂಘದ ಮಾಜಿ ಅಧ್ಯಕ್ಷರಾಗಿಯೂ ಮೈಸೂರು ವಿಶ್ವವಿದ್ಯಾಲಯ ಜನಪದ ಕಲಾಕೂಟದ ಮಾಜಿ ಸಂಚಾಲಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಕರ್ನಾಟಕ ವಿಶ್ವವಿದ್ಯಾಲಯದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಗೋಷ್ಠಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಜಾನಪದ ಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿದ್ದರು. ಶಿವಮೊಗ್ಗ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿದ್ದಾರೆ. ಇವರು ಹತ್ತು ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಸಾರಾಂಗದ ಗೌರವ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತ ಮೈಸೂರಿನಲ್ಲಿ ನೆಲಸಿ ವಿಶ್ರಾಂತ ಜೀವನ ಸಾಗಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು:

ಪ್ರಬಂಧ – ಮಾತಿನ ಮಲ್ಲರು, ದೇವ ಗಂಗೆ, ಘಟನೆಗಳು, ನಿಜ ಸಲ್ಲಾಪ.

ವಿಮರ್ಶೆ – ಅನುಶೀಲನ ಒಳನೋಟ. **ಸಾಹಿತ್ಯ ಸಂಚಯ** – ಕುವೆಂಪು ಸಾಹಿತ್ಯಾವಲೋಕನ.

ಜಾನಪದ – ಜಾನಪದ ಸಮೀಕ್ಷೆ, ಜಾನಪದ ಸಂಚಯ, ಜಾನಪದ ಸಮಾಲೋಚನೆ, ಜಾನಪದ ಸಮನ್ವಯ, ಮುರಾವು ಜಾನಪದದ ಕೆಲವು ಗ್ರಹಿಕೆಗಳು, ಜಾನಪದ ನಂಬಿಕೆಗಳು.

ಜೀವನ ಚಿತ್ರ – ತಿ. ಮರಿಯಪ್ಪ, ನು. ಗುಜ್ಜೇಗೌಡರು. ವ್ಯಕ್ತಿ ಚಿತ್ರಗಳು.

ಮಕ್ಕಳ ಸಾಹಿತ್ಯ – ಮೈಲಾರಿ ಲಿಂಗ, ಮೂಡಲ ಪಾಯ. **ಸಂಪಾದಿತ** – ಶಿಶು ಪ್ರಾಸಗಳು, ಕರಪಾಲ ಮೇಳ. **ಗ್ರಂಥ ಸಂಪಾದನೆ** – ಜಾನಪದ, ಕಾವ್ಯ ಗಂಗೋತ್ರಿ.

ಲಭಿಸಿರುವ ಪ್ರಶಸ್ತಿಗಳು:

೧. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜಾನಪದ ತಜ್ಞ ಪಶಸ್ತಿ.

೨. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ.

೩. ಜನದನಿ ಸಾಂಸ್ಕೃತಿಕ ಟ್ರಸ್ಟ್‌ನಿಂದ ಡಾ॥ಜೀಶಂಪ ಪ್ರಶಸ್ತಿ.

೪. ಕುವೆಂಪು ಟ್ರಸ್ಟ್ ಪುಸ್ತಕ ಬಹುಮಾನ.

ವ್ಯಕ್ತಿ ಪರಿಚಯ

ಡಾ || ರಾಮಕೃಷ್ಣ ಜೋಶಿ

೧. ಹೆಸರು : ರಾಮಕೃಷ್ಣ ಜೋಶಿ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಸೋಂದಾ, ಶಿರಸಿ, ೧೪-೦೬-೧೯೪೫.

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಪಿ.ಎಚ್.ಡಿ.

೬. ವೃತ್ತಿ : ಅಧ್ಯಾಪಕ (ನಿವೃತ್ತ).

೭. ಕೌಟುಂಬಿಕ : ಪತ್ನಿ; ಚಂದ್ರಮತಿ ಸೋಂದಾ. ಪುತ್ರಿ; ಅಲಕಾ.ಕೆ.

೮. ಸದ್ಯದ ವಿಳಾಸ : 'ಚಿಂತನ' ೫೫೧, ೨೪ನೇ ತಿರುವು,
ಹೆಬ್ಬಾಳ, ೨ನೇ ಹಂತ,
ಮೈಸೂರು -೫೭೦೦೧೭

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೨೧ - ೨೩೦೧೯೮೩

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕು ಸೋಂದಾದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ. ಪ್ರೌಢ ಶಿಕ್ಷಣ ಭೈರುಂಬೆ. ಸಂಸ್ಕೃತ ವಿಧ್ಯಾಭ್ಯಾಸ ಶೃಂಗೇರಿ ಮತ್ತು ಉಡುಪಿ. ಎಂ.ಎ. ಮುಕ್ತ ವಿಶ್ವವಿದ್ಯಾಲಯ ಮೈಸೂರು. ಜಾನಪದ – ಯಕ್ಷಗಾನದ ಬಗ್ಗೆ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯಪಿಹೆಚ್.ಡಿ ಗಳಿಸಿದ್ದಾರೆ. ಕುವೆಂಪು ಸಾಹಿತ್ಯದಿಂದ ಪ್ರಭಾವಿತರು. ೧೯೬೬ರಿಂದ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನ ಆರಂಭ. ೨೦೦೩ರಲ್ಲಿ ನಿವೃತ್ತಿ. ಪ್ರವೃತ್ತಿಯಿಂದ ಸಾಹಿತಿಗಳಾದ ಇವರ ಪ್ರಥಮ ಬರೆಹ ಪ್ರಕಟವಾದ ಪತ್ರಿಕೆ ಶಿರಸಿಯ ಸಮಾಚಾರ. ಶೃಂಗೇರಿಯ ಸಂಸ್ಕೃತ ವಿದ್ಯಾಪೀಠದಲ್ಲಿ ಆರು ವರ್ಷಗಳ ಕಾಲ ಕಾವ್ಯ ಮತ್ತು ಸಾಹಿತ್ಯ ಅಭ್ಯಾಸ ಮಾಡಿದ್ದಾರೆ. ಉಡುಪಿಯಲ್ಲಿ ಅಲಂಕಾರ ವಿದ್ವತ್ ಮಾಡಿದ್ದಾರೆ. ಕನ್ನಡ ಪಂಡಿತ ಪರೀಕ್ಷೆ ಪಾಸು ಮಾಡಿದ್ದಾರೆ. ದಕ್ಷಿಣ ಭಾರತದ ಹಿಂದೀ ಪ್ರಚಾರ ಸಭಾದ ಪ್ರವೀಣ ಪಾಸು ಮಾಡಿದ್ದಾರೆ! ಇವರ 'ಯಕ್ಷಗಾನಕ್ಕೆ ಇಡುಗುಂಜಿ ಮೇಳದ ಕೊಡುಗೆ' ಮಹಾಪ್ರಬಂಧ ಮುದ್ರಣವಾಗಿದೆ. ಇವರು 'ಏಡ್ಸ್ ಕುರಿತು ಮಾತುಕತೆ' ಎಂಬ ಸಮುದಾಯ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡುವ ಕೃತಿ ರಚಿಸಿದ್ದಾರೆ. ಇವರು ಹಲವು ಅಭಿನಂದನಾ ಗ್ರಂಥಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಎಫ್.ಪಿ.ಐ. ಮೈಸೂರು ಶಾಖೆಯ ಮನೋ ವಿಕಾಸ ಗ್ರಂಥಮಾಲೆಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ೧೯೯೬–೯೭ರಲ್ಲಿ ಲೋಕಹಿತ ಪತ್ರಿಕೆಯ ಸಂಪಾದಕರಾಗಿದ್ದರು. ಮೈಸೂರು ವಿಶ್ವವಿದ್ಯಾಲಯಯ ಕನ್ನಡ ವಿಶ್ವಕೋಶದ ಸಂಪುಟಗಳಲ್ಲಿ ಇವರ ೨೫ಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿವೆ. ಪ್ರೌಢಶಾಲೆಯ ಪಠ್ಯ ಪುಸ್ತಕ ರಚನಾ ಸಮಿತಿಯ ಸದಸ್ಯರಾಗಿದ್ದರು. 'ದೂತ' ಮಾಸಿಕದ ಅಂಕಣ–ಕಾರರಾಗಿದ್ದಾರೆ. 'ಗ್ರಂಥಲೋಕ' ಪತ್ರಿಕೆಯಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. ಇವರು ಅಮೆರಿಕಾ, ಮಲೇಶ್ಯಾ, ಥೈಲ್ಯಾಂಡ್, ಸಿಂಗಪುರ ಹಾಗೂ ಲಂಕಾ ದೇಶಗಳ ಪ್ರವಾಸ ಮಾಡಿದ್ದಾರೆ. ಭಾರತದ ಬಹುತೇಕ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಮಾಡಿದ್ದಾರೆ. ಹೊನ್ನಾವರದಲ್ಲಿ ನಡೆದ ಅಕಾಡೆಮಿಯ ಯಕ್ಷಗಾನ ಗೋಷ್ಠಿಯ ಅಧ್ಯಕ್ಷತೆ, ೨೦೦೩ರ ರಾಮಚಂದ್ರಪುರದಲ್ಲಿನ 'ಯಕ್ಷಗಾನದ ಮಹಾಸಮ್ಮೇಳನ'ದ ಯಕ್ಷಗಾನ ಪರಂಪರೆಯ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಮೈಸೂರಿನ ಆಕಾಶವಾಣಿಯಲ್ಲಿ ಇವರ ಭಾಷಣ, ಚಿಂತನಗಳು ಪ್ರಸಾರವಾಗುತ್ತವೆ. ಮೈಸೂರಿಗೆ ಹಲವು ಯಕ್ಷಗಾನ ಮಂಡಳಿಗಳನ್ನು ಕರೆಸಿ ಪ್ರದರ್ಶನ ಏರ್ಪಡಿಸಿದ್ದಾರೆ. ಒಳ್ಳೆಯ ಭಾಷಣಕಾರರು. ಮೈಸೂರಿನ ಉ.ಕ. ಜಿಲ್ಲಾ ಸಾಂಸ್ಕೃತಿಕ ಸಂಘದ ಕೋಶಾಧ್ಯಕ್ಷರಾಗಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಭಾರತೀಯ ಕುಟುಂಬ ಯೋಜಾನಾ ಸಂಘಕ್ಕೂ ಇವರ ಸೇವೆ ಸಂದಿದೆ.

ಪ್ರಕಟಿತ ಕೃತಿಗಳು:
ವೈಚಾರಿಕತೆ – ಅಮಲಿನ ದಾರಿ.
ವೈದ್ಯಕೀಯ – ಏಡ್ಸ್ ಕುರಿತ ಮಾತುಕತೆ (ಅನುವಾದಿತ ಕೃತಿ).
ಅಭಿನಂದನ ಗ್ರಂಥ ಸಂಪಾದನೆ – ಬೆಳ್ಳಿಗುರು ದಯಾಭಿವಂದನ.

ವ್ಯಕ್ತಿ ಪರಿಚಯ

ಡಾ|| ರಾಮಶೇಷನ್. ಎನ್.ಕೆ.

೧. ಹೆಸರು : ಡಾ|| ಎನ್.ಕೆ.ರಾಮ ಶೇಷನ್

೨. ಕಾವ್ಯನಾಮ : 'ಭಾರತೀ'

೩. ಹುಟ್ಟಿದ ಸ್ಥಳ ದಿನಾಂಕ : ತುಮಕೂರು, ೦೯-೦೪-೧೯೪೬

೪. ಜಿಲ್ಲೆ - ರಾಜ್ಯ : ತುಮಕೂರು, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಸ್‌ಸಿ., ಬಿ.ಟಿ., ಪಿ.ಹೆಚ್‌ಡಿ., ಸಾಹಿತ್ಯರತ್ನ, ಶಾಸನಶಾಸ್ತ್ರ ಡಿಪ್ಲಮೊ.

೬. ವೃತ್ತಿ : ಕನ್ನಡ ಕಿರಿಯ - ಅಧ್ಯಾಪಕ.

೭. ಕೌಟುಂಬಿಕ : ಪತ್ನಿ; ಭಾರತೀ ಮಳೂರು. ಮಗಳು; ಮಾನಸ

೮. ಸದ್ಯದ ವಿಳಾಸ : ನಂ. ೧೭, ಶ್ರೀ ಗುರು ಸದನ, ಎಲ್.ಐ.ಸಿ. ಕಾಲೋನಿ, ೧ನೇ ಮೈನ್, ಶ್ರೀರಾಮ ಪುರ, ೭ನೇ ಹಂತ, ಮೈಸೂರು ೫೭೦೦೨೩

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೨೧ - ೨೩೬೨೮೬೫

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ತುಮಕೂರಿನಲ್ಲಿ ಹುಟ್ಟಿದರು. ತಾಯಿ ಶ್ರೀ ರಂಗಮ್ಮ ಹಿರಿಯ ಗಮಕಿ. ಅವರ ಗಮಕ ಕಾವ್ಯ ವಾಚನ ಹಗೂ ಹಗೂ ವ್ಯಾಖ್ಯಾನ ಇವರ ಬಾಲ್ಯದಿಂದಲೇ ಇವರ ಮೇಲೆ ಪ್ರಭಾವ ಬೀರಿದೆ. ಇವರು ಬಿ.ಎಸ್‌ಸಿ., ಬಿಎಲ್. ಮಾಡಿ ಕನ್ನಡಶಾಸನ ಶಾಸ್ತ್ರದಲ್ಲಿ ಎಂ.ಎ. ಪದವೀಧರರು. ಸಾಹಿತ್ಯ ರತ್ನ ಡಿಪ್ಲೊಮಾ ಶಾಸನಶಾಸ್ತ್ರ. ಶಿವಮೊಗ್ಗದಲ್ಲಿ ಪದವಿ. ತುಮಕುಕೂರಿನಲ್ಲಿ ಲಾ ಪದವಿ. ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿದ್ದುಕೊಂಡು ಕಾಲೇಜು ಓದಿದರು. ವಿದ್ಯಾರ್ಥಿ ದಿಸೆಯಿಂದಲೇ ಸಾಹಿತ್ಯಾಸಕ್ತರಾದರು. ಕಥೆ, ಕವನ ಪ್ರಭಂದ ಹಾಗೂ ರಂಗಭೂಮಿಯ ಬಗ್ಗೆಯೂ ಬರೆಯ ತೊಡಗಿದರು. ಡಾ|| ಸಾ.ಶಿ. ಮರುಳಯ್ಯ, ಪ್ರೋ ಜಿ.ಎಸ್. ಸಿದ್ಧಲಿಂಗಯ್ಯ ಮುಂತಾದವರ ಪ್ರಭಾವ ಡಾ|| ಚಿದಾನಂದ ಮೂರ್ತಿ, ಡಾ|| ಪಿ.ವಿ. ನಾರಾಯಣ, ಡಾ ಶಿವರುದ್ರಪ್ಪ ಮುಂತಾದ ಹಿರಿಯರ ಪ್ರೋತ್ಸಾಹ. ಹರಿದಾಸ ಸಾಹಿತ್ಯದ ಆಂದೋಳನ ಮುಖ್ಯ ಗುತಿಸುವ ಹಾಗೂ ವಚನ – ಆಳ್ವಾರುಗಳ ಪ್ರಬಂಧದೊಂದಿಗೆ ಸಮೀಕ್ಷೆ ನಡೆಸುವ ಸಾಂಸ್ಕೃತಿಕ ಅಧ್ಯಯನ. ೧೯೯೮ರಲ್ಲಿ ಸಾದರ ಪಡಿಸಿದ ಸಂಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಪಿಹೆಚ್.ಡಿ. ಪದವಿಗಳಿಸಿದ್ದಾರೆ. ಇವರಿಗೆ ಇಂಗ್ಲೀಷ್, ಸಂಸ್ಕೃತ, ಹಿಂದಿ, ತೆಲಗು ಹಾಗೂ ತಮಿಳು ಭಾಷೆಗಳಲ್ಲಿ ಪಾಂಡಿತ್ಯವಿದೆ. ಇವರು ವೃತ್ತಿಯಿಂದ ಅಧ್ಯಾಪಕರಾದರೆ ಪ್ರವೃತ್ತಿಯಿಂದ ಸಾಹಿತಿಗಳು ಅನುವಾದ, ಉಪನ್ಯಾಸ, ಶಾಸನ ಅಧ್ಯಯನ, ವಿಮರ್ಶೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರತರಾಗಿರುವುದು ಇವರ ಹವ್ಯಾಸ. ಇವರು ಕವನ, ಮಕ್ಕಳ ಸಾಹಿತ್ಯ, ಇತಿಹಾಸ, ದಾಸ ಸಾಹಿತ್ಯ, ಜೀವನ ಚರಿತ್ರೆ ಹಾಗೂ ಸಂಪಾದನೆ ಕುರಿತ ಗ್ರಂಥಗಳು ಅನುವಾದಿತ ಗ್ರಂಥಗಳೂ ಪ್ರಕಟವಾಗಿವೆ. ಇವರ ಕೃತಿಗಳನ್ನು ಕೇಂದ್ರ ಸಾಹಿತ್ಯ ಅಕಾಡೆಮಿ, ಎನ್.ಬಿ.ಟಿ., ರಾಷ್ಟ್ರೋತ್ಥಾನ ಪರಿಷತ್ತು ಮುಂತಾದ ಸಂಸ್ಥೆಗಳು ಪ್ರಕಟಿಸಿವೆ. ಕೆಲವು ಗ್ರಂಥಗಳಲ್ಲಿ ಸೇರ್ಪಡೆಯಾಗಿವೆ. ಕೆಲವು ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ. ಟಿ.ಟೀ.ಡೀ. ಪ್ರಕಟಣೆ ಸಪ್ತಗಿರಿಯಲ್ಲೂ ಪ್ರಕಟವಾಗುತ್ತದೆ. ಕನ್ನಡ ಪ್ರಭ ಪತ್ರಿಕೆಯಲ್ಲೂ ವಿಮರ್ಶೆ ಮಾಡುತ್ತಾರೆ. ಕಸ್ತೂರಿ, ಮಯೂರ, ಸುಧಾ, ಪುಸ್ತಕ ಪ್ರಪಂಚ ಪತ್ರಿಕೆಗಳಲ್ಲೂ ಬರೆಹಗಳು ಪ್ರಕಟವಾಗುತ್ತಿವೆ. ಆಕಾಶವಾಣಿಯಲ್ಲಿ ಇವರ ಭಾಷಣ, ಚಿಂತನಗಳು ಪ್ರಸಾರವಾಗುತ್ತವೆ. ಇವರಿಗೆ ಜೀವ ವಿಮಾ ಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವವಿದೆ. ಮೈಸೂರಿನ ಭಾರತೀ ವಿದ್ಯಾಭವನದಲ್ಲಿಯೂ ಸೇವೆ ಸಲ್ಲಿಸಿದ್ದಾರೆ.

ಪ್ರಕಟಿತ ಕೃತಿಗಳು:

ಕವನ ಸಂ. – ಕೆರೆಯ ನುಳಿಸಿದ ಮರ.

ಮಕ್ಕಳ ಸಾಹಿತ್ಯ – ಗೋಪಾಲ ಕೃಷ್ಣ ದೇವಧರ್, ಭಿಕ್ಷು ಉತ್ತಮ, ಬಳ್ಳಾರಿ ರಾಘವ, ಮೋತಿಲಾಲ್ ಘೋಷ್.

ಇತಿಹಾಸ – ಕರ್ನಾಟಕದ ಕೋಟೆಗಳು, ಮಧುಗಿರಿ.

ಜೀವನ ಚರಿತ್ರೆ – ಜಿ.ಪಿ. ರಾಜರತ್ನಂ, ವಿಜಯದಾಸರು, ಮೋತಿಲಾಲ್ ಘೋಷ್.

ಸಂಪಾದನೆ – ಸೋಮೇಶ್ವರ ಶತಕ, ಗಾದೆಗಳು.

ವ್ಯಕ್ತಿ ಪರಿಚಯ



ಲಲಿತ. ಎಸ್.ಜಿ.

೧. ಹೆಸರು : ಎಸ್.ಜಿ. ಲಲಿತ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ವಿರಾಜಪೇಟೆ, ೧೪-೦೫-೧೯೩೪.

೪. ಜಿಲ್ಲೆ - ರಾಜ್ಯ : ಕೊಡಗು, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ. ಹಿಂದಿ

೬. ವೃತ್ತಿ : ನಿವೃತ್ತಳು (ಹಿಂದಿ ಅನುವಾದಕಿ)

೭. ಕೌಟುಂಬಿಕ : ಅವಿವಾಹಿತೆ

೮. ಸದ್ಯದ ವಿಳಾಸ : ೧೩೮/ಎ, ೪ನೇ ಮುಖ್ಯರಸ್ತೆ, ಎಂ. ಬ್ಲಾಕ್,
ಕುವೆಂಪು ನಗರ, ಎರಡನೆ ಹಂತ,
ಮೈಸೂರು - ೫೭೦೦೨೩

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೨೪೬೧೭೫೪

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಕೊಡಗಿನ ವಿರಾಜಪೇಟೆಯಲ್ಲಿ ಜನಿಸಿದರು. ಇವರು ಎಸ್. ಗಂಗಾಧರ ಮತ್ತು ಎನ್.ಜಿ. ಸರೋಜ ದಂಪತಿಗಳ ಪುತ್ರಿ. ಇವರ ಶಿಕ್ಷಣ ಆರಂಭ ಮಡಕೇರಿಯಲ್ಲಿ. ತಂದೆಯೂ ವೃತ್ತಿಯಿಂದ ಶಿಕ್ಷಕರೇ. ಆಗಿನ್ನೂ ಕೊಡಗು ಕರ್ನಾಟಕ ರಾಜ್ಯದ ಜಿಲ್ಲೆಯಾಗಿರಲಿಲ್ಲ ಪ್ರತ್ಯೇಕವಾಗಿತ್ತು. ತಂದೆಗೆ ವರ್ಗವಾದುದರಿಂದ ಇವರ ಕುಟುಂಬ ೧೯೪೬ರಿಂದ ವಿರಾಜಪೇಟೆಯಲ್ಲಿರ ತೊಡಗಿತು. ಸ್ವಂತ ಮನೆಯು ವಾಸ. ಇವರು ವಿರಾಜಪೇಟೆಯಲ್ಲಿ ಓದು ಮುಂದುವರೆಸಿ ೧೯೫೦ರಲ್ಲಿ ಎಸ್.ಎಸ್.ಎಲ್.ಸಿ. ಪಾಸಾದರು. ಅಲ್ಲಾಗ ಕಾಲೇಜ್ ಇರಲಿಲ್ಲ. ಮನೆಯಲ್ಲೇ ಕುಳಿತು ಹಿಂದಿ ಓದಿ ಮದ್ರಾಸಿನ ರಾಷ್ಟ್ರ ಭಾಷಾ ವಿಶಾರದ ಪರೀಕ್ಷೆಗಳನ್ನು ಪಾಸು ಮಾಡಿದರು. ನಂತರ ಮದರಾಸಿನ ಹಿಂದೀ ಪ್ರಚಾರ ಸಭೆಯ ಆವರಣದಲ್ಲಿ ನಡೆಯುತ್ತಿದ್ದ 'ಪ್ರವೀಣ್ ಪ್ರಚಾರಕ್'ಹಾಸ್ಟೆಲಿನಲ್ಲಿದ್ದುಕೊಂಡು ಓದಿ ಅದರಲ್ಲೂ ತೇರ್ಗಡೆಯಾದರು. ವಿರಾಜಪೇಟೆಯ ಸರ್ಕಾರಿ ಸ್ಕೂಲಿನಲ್ಲಿ ಕೆಲವು ಸಮಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು. ಮತ್ತೆ ಓದು ಮುಂದುವರೆಸುವ ಆಸೆಯಿಂದ ಮದರಾಸಿಗೆ ಹೋದರು. ಹಿಂದಿ ಐಚ್ಛಿಕವಾಗಿ ಬಿ.ಎ. ಪದವಿ ಗಳಿಸಿದರು. ಆಗ್ರಾಕ್ಕೆ ಹಿಂದಿ ಎಂ.ಎ. ಮಾಡಿದರು ಆಗಲೇ ಇವರಿಗೆ ಬರೆಯುವ ಹುಚ್ಚೂ ಇತ್ತು. 'ನಾನು ಕಂಡ ಕಾಶ್ಮೀರ' ಲೇಖನ ಬರೆದು 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದರು – ೧೯೬೯. ಬರೆಯಲು ತಂದೆಯ ಪ್ರೋತ್ಸಾಹವಿತ್ತು. ೧೯೭೨ ರಿಂದ ೧೯೯೨ ರವರಗೆ ಬೆಂಗಳೂರಿನ ವಾಯುಸೇನೆಯಲ್ಲಿ ಕೆಲಸ ಮಾಡಿದರು. ಹಿಂದಿ ಇನ್‌ಸ್ಟ್ರಕ್ಟರ್ ಆಗಿದ್ದವರು. 'ಸೀನಿಯರ್ ಟ್ರಾನ್ಸ್‌ಲೇಟರ್' ಆದರು. ಅಧಿಕಾರಿಗಳಿಗೆ ಹಿಂದಿ ಪಾಠ ಮಾಡುತ್ತಿದ್ದರು. ೧೯೭೪ರಲ್ಲಿ ಇವರು ಬರೆದ ಪ್ರೇಮ ಚಂದರ ಕಾದಂಬರಿಗಳು ಗ್ರಂಥವನ್ನು ಮೈಸೂರು ವಿಶ್ವವಿದ್ಯಾಲಯಯು ಪ್ರಕಟಿಸಿತು. ಪ್ರವಾಸ ಪ್ರಿಯರು ಕನ್ಯಾಕುಮಾರಿಯಿಂದ ಕಾಶ್ಮೀರದವರಗೆ ಪ್ರವಾಸ ಮಾಡಿದ್ದಾರೆ. ೧೯೭೮ರಲ್ಲಿ ವಿದೇಶ ಪ್ರವಾಸವನ್ನೂ ಮಾಡಿದ್ದಾರೆ. ಈಜಿಪ್ಟಿನ ಪಿರಮಿಡ್ಡುಗಳು, ಯುರೋಪಿನ ಆರೇಳು ದೇಶಗಳು ಇಂಗ್ಲೆಂಡ್ ಬಹುವಾಗಿ ಆಕರ್ಷಿಸಿತು. ೧೯೯೨ರಲ್ಲಿ ನಿವೃತ್ತರಾದ ನಂತರ ಇವರು ತಂದೆ–ತಾಯಿಗಳೊಂದಿಗೆ ಸ್ವಂತ ಮನೆಯಲ್ಲಿ ಮೈಸೂರಿನ ನಿವಾಸಿಗಳಾಗಿದ್ದಾರೆ. ಈಗ ತಂದೆ – ತಾಯಿಗಳಿಲ್ಲ. ಇವರು ತಾವೇ ಹಣ ಖರ್ಚು ಮಾಡಿ ಪ್ರಕಟಿಸಿದ ಪುಸ್ತಕಗಳನ್ನು ಓದುಗರಿಗೆ ಉಚಿತವಾಗಿ ಹಂಚಿದ್ದಾರೆ. ೭೬ರ ಹರೆಯದಲ್ಲೂ ಸಾಹಿತ್ಯದ ಚಟುವಟಿಕೆಗಳಲ್ಲಿ ನಿರತರಾಗಿರುತ್ತಾರೆ. ಮನಸ್ಸಿಗೆ ಬಂದದ್ದನ್ನು ಬರೆಯುತ್ತಾರೆ. ಪ್ರಕಟಿಸುವ ಹುಚ್ಚಿಲ್ಲ.

ಪ್ರಕಟಿತ ಕೃತಿಗಳು:

ವಿಮರ್ಶೆ – ಪ್ರೇಮ ಚಂದರ ಕಾದಂಬರಿಗಳು.

ಇತರೆ – ನನ್ನ ತಂದೆ.

ಲೇ. ನ ಸಂ. – ಲೇಖನಗಳ ಸಂಕಲನ.

ವ್ಯಕ್ತಿ ಪರಿಚಯ

ಲಲಿತಾ ರೈ

೧.	ಹೆಸರು	: ಶ್ರೀಮತಿ ಲಲಿತಾ ರೈ
೨.	ಕಾವ್ಯನಾಮ	: ಲಲಿತಾ
೩.	ಹುಟ್ಟಿದ ಸ್ಥಳ ದಿನಾಂಕ	: ಮಂಗಳೂರು, ೨೨–೮–೧೯೨೮
೪.	ಜಿಲ್ಲೆ – ರಾಜ್ಯ	: ದಕ್ಷಿಣ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	: ಬಿ.ಎ., ಬಿ.ಎಡ್.
೬.	ವೃತ್ತಿ	: ಹೈಸ್ಕೂಲ್ ಶಿಕ್ಷಕಿ (ಅಲ್ಪಕಾಲ).
೭.	ಕೌಟುಂಬಿಕ	: ಪತಿ; ರಘು ರಾಮ ರೈ. ಪುತ್ರಿ; ಗಾಯತ್ರಿ ರೈ, ಚಿತ್ರಾ ಟಿ ರಾಜಾ, ಕೃಪಾ ಎ.ಶೆಟ್ಟಿ. ಪುತ್ರ; ಜಿತೇಂದ್ರ ಮೋಹನ ರೈ.
೮.	ಸದ್ಯದ ವಿಳಾಸ	: ಲಲಿತಾ ಆರ್ ರೈ, ನೇಮು ಶೆಟ್ಟಿ ಕಾಂಪೋಂಡು, ಕಲಾ ಕುಂಜದ ಬಳಿ, ಕೋಡಿಯಾಲಬೈಲ್, ಮಂಗಳೂರು–೫೭೫೦೦೩
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೨೪೯೫೭೬೧
೧೧.	ಹಸ್ತಾಕ್ಷರ (ಸಹಿ)	: ಲಲಿತಾ ರೈ

ಸಾಹಿತ್ಯ ಪರಿಚಯ

ಇವರು ಮಂಗಳೂರಿನಲ್ಲಿ ಹುಟ್ಟಿದರು. ಬಿ.ಎ. ಪದವೀಧರರು. ಬಿ.ಎಡ್. ಮಾಡಿ ಅಲ್ಪ ಕಾಲ ಹೈಸ್ಕೂಲ್ ಟೀಚರ್‌ಆಗಿ ಸೇವೆ ಸಲ್ಲಿಸಿದರು. ವೃತ್ತಿಯಲ್ಲಿ ಶಿಕ್ಷಕಿ, ಪ್ರವೃತ್ತಿಯಿಂದ ಸಾಹಿತಿ. ಹೈ ಸ್ಕೂಲ್ ದಿನಗಳಿಂದಲೇ ಸಾಹಿತ್ಯಾಸಕ್ತರಾಗಿ ಬರೆಯುವ ಚಟ ಅಂಟಿಕೊಂಡಿತು. ಓದುವ ಆಸಕ್ತಿಯುವುಂಟಾಯಿತು. ಇವರಿಗೆ ಬಾಲ್ಯದಿಂದಲೇ ಸಾಹಿತ್ಯದಲ್ಲಿ ಪ್ರೀತಿಯಿತ್ತು. ಓದು ನಿರಂತರವಾಗಿ ಸಾಗಿತು. ಇವರು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಬರೆಯುತ್ತಾರೆ, ಮೊದಲು ಕನ್ನಡ ಸಾಹಿತ್ಯ ಪರಿಚಯ ಮಾಡಿಕೊಂಡರು, ನಂತರ ಇಂಗ್ಲೀಷಿಗೆ ಕೈ ಹಾಕಿದರು. ೧೯೪೬-೪೭ರಲ್ಲಿ ಇಂಟರ್ ಮೀಡಿಯಟ್ ವಿದ್ಯಾಭ್ಯಾಸದಲ್ಲೇ ಸ್ವತಃ ಕನ್ನಡ ಉಪನ್ಯಾಸಕರಾಗಿದ್ದ ಕಡಂಗೋಡ್ಲು ಶಂಕರ ಭಟ್ಟರಿಂದ ಬರವಣಿಗೆಗೆ ಪ್ರಚೋದನೆಯಾಯಿತು. ಶ್ರೀಯುತ ಕುಳಕುಂದ ಶಿವರಾಯರಿಂದಲೂ (ನಿರಂಜನ) ಸಣ್ಣ ಕಥೆ ಬರೆಯಲು ಪ್ರೋತ್ಸಾಹ ದೊರೆಯಿತು. ಆಗಿನ್ನೂ ಅವರು ನಿರಂಜನರಾಗಿರಲಿಲ್ಲ. ಇವರು ರಚಿಸಿದ ಬರೆಹಗಳು ಪ್ರಭಾತ, ಪ್ರಜಾಮತ, ನವಯುಗ, ಅರುಣ ಹಾಗೂ ಇತರ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗ ತೊಡಗಿತು. ಇದೇ ಸಮಯದಲ್ಲಿ ಕಲ್ಪನಾದತ್ ಬರೆದ ಇಂಗ್ಲೀಷ್ ಕೃತಿಯನ್ನು ಇವರು ಭಾಷಾಂತರಿಸಿ 'ಲಲಿತ'ಕಾವ್ಯನಾಮದಲ್ಲಿ ಪ್ರಕಟಿಸಿದರು. ಈ ಕೃತಿಗೆ ಕುಳಕುಂದ ಶಿವರಾಯರು ಮುನ್ನುಡಿ ಬರೆದಿದ್ದಾರೆ. ಸೆಂಟ್ ಅಗ್ನೇಸ್ ಕಾಲೇಜನ್ನು ಬಿಟ್ಟು ಮದ್ರಾಸ್ ಸೇರಿದರು. ೧೯೪೮ರಲ್ಲಿ ಮಂಗಳೂರಿಗೆ ಬಂದು ಸರ್ಕಾರಿ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು. ಆಗಲೂ ಇವರು ಕಾಲೇಜಿನ ಮ್ಯಾಗ್‌ಜೈನ್ ಗೋಡೆ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ೧೯೫೧ರಲ್ಲಿ ವಿವಾಹವಾದರು. ನಂತರ ಆರೋಗ್ಯ ಹಾಗೂ ಸಾಂಸಾರಿಕ ಸಮಸ್ಯೆಗಳಿಂದ ೧೫ ವರ್ಷಗಳ ಅಜ್ಞಾತವಾಸ. ೫ ವರ್ಷ ಆಸ್ಪತ್ರೆ ವಾಸ. ನಂತರ ಕೆನರಾ ಬಾಯ್ಸ್ ಹಸ್ಕೂಲಿನಲ್ಲಿ ಅಲ್ಪಕಾಲ ದುಡಿತ ೧೯೮೭ರಲ್ಲಿ ನಿವೃತ್ತಿ. ಸಮಾಜ ಸೇವೆ ಹಾಗೂ ಸಾಹಿತ್ಯ ರಚನೆ ಪುನರಾರಂಭ. ಆಕಾಶವಾಣಿಯಲ್ಲಿಯೂ ಸೇವೆ. ೨೦೦೫ರಲ್ಲಿ ಪ್ರಥಮ ಕಥಾ ಸಂಕಲನ ಪ್ರಕಟ. ಆರೋಗ್ಯದ ಅಡಚಣೆ, ಕಣ್ಣಿನ ದೃಷ್ಟಿಮಾಂದ್ಯದ ತೊಂದರೆಗಳಿಂದ ಬಳಲುತ್ತಿದ್ದಾರೆ. ಸಮಯದೊಂದಿಗೆ ಸ್ಪರ್ಧೆ ನಡೆಸುತ್ತಿದ್ದಾರೆ.

ಪ್ರಕಟಿತ ಕೃತಿಗಳು:
ಕಥಾ ಸಂ. – ಮತ್ತೆ ಬೆಳಗಿತು ಸೊಡರು.

ವ್ಯಕ್ತಿ ಪರಿಚಯ

ಲಕ್ಷ್ಮಯ್ಯ

೧.	ಹೆಸರು	: ಲಕ್ಷ್ಮಯ್ಯ
೨.	ಕಾವ್ಯನಾಮ	: ಲಕ್ಷ್ಮಣ ಕಳ್ಳಂಬೆಳ್ಳ.
೩.	ಹುಟ್ಟಿದ ಸ್ಥಳ ದಿನಾಕ	: ೧೩-೦೪-೧೯೪೯.
೪.	ಜಿಲ್ಲೆ - ರಾಜ್ಯ	: ತುಮಕೂರು, ಕರ್ನಾಟಕ.
೫.	ವಿದ್ಯಾಭ್ಯಾಸ	: ಎಂ.ಎ., ಬಿ.ಇ.ಡಿ.
೬.	ವೃತ್ತಿ	: ಪ.ಪೂ. ಕಾಲೇಜು, ಪ್ರಾಂಶುಪಾಲರು.
೭.	ಕೌಟುಂಬಿಕ	: ಪತ್ನಿ; ಶ್ರೀಮತಿ ಚಿಕ್ಕಮ್ಮಣ್ಣಿ. ಪುತ್ರ; ಎಲ್. ಬಾಲಸುಂದರ್ ಪುತ್ರಿ; ಎಲ್. ಲಲಿತಾಂಬ.
೮.	ಸದ್ಯದ ವಿಳಾಸ	: ಲಕ್ಷ್ಮಣ ಕಳ್ಳಂಬೆಳ್ಳ, ಎಂ.ಐ.ಜಿ., ಕೆ.ಹೆಚ್.ಬಿ ಕಾಲನಿ, ಟ್ಯಾಂಕ್ ಮೈದಾನ, ನಾಗಮಂಗಲ-೫೭೧೪೩೨. ಮಂಡ್ಯ ಜಿಲ್ಲೆ.
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೦೮೨೩೪-೨೮೫೩೨೩, ೯೪೪೮೧೪೪೧೭೨೬.
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ತುಮಕೂರು ಜಿಲ್ಲೆ ಶಿರಾ ತಾಲೂಕು ಕಳ್ಳಂಬೆಳ್ಳ ಪಿ.ಎಂ.ಪಾಳ್ಯದಲ್ಲಿ ಜನಿಸಿದರು. ಇವರು ಶ್ರೀ ನರಸಿಂಹಯ್ಯ ಮತ್ತು ಶ್ರೀಮತಿ ಸಣ್ಣ ರಂಗಮ್ಮ ಶತಾಯುಷಿ ದಂಪತಿಗಳ ಪುತ್ರ. ತಂದೆ ಹರಿಕಥೆ ದಾಸರು. ಪ್ರಾಥಮಿಕ ಶಾಲೆ ಹುಟ್ಟೂರಲ್ಲೇ. ಮಾಧ್ಯಮಿಕ, ಪ್ರೌಢ, ಪದವಿಪೂರ್ವ, ಪದವಿ ಮತ್ತು ಬಿ.ಎಡ್.ಗಳನ್ನು ತುಮಕೂರಿನಲ್ಲೇ 'ಬೋರ್ಡಿಂಗ್ ಹೋಂ'ಗೆ ಸೇರಿ ಮಾಡಿದರು. ೧೯೭೪ರಲ್ಲಿ ಬೆಂಗಳೂರಿನ ಕೊತ್ತನೂರು ಸಿದ್ದಾರ್ಥ ಪ್ರೌಢಶಾಲೆಗೆ ಸಹ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ಒಂದು ವರ್ಷದ ನಂತರ ಮಂಡ್ಯ ಜಿಲ್ಲೆ ಅಕ್ಕಿಹೆಬ್ಬಾಳಿಗೆ ಬಂದರು. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಆ ಶಾಲೆಯಲ್ಲಿರುವಷ್ಟು ಸಮಯ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿದರು. ನಂತರ ನಾಗಮಂಗಲ, ಚಾಮರಾಜನಗರ, ಚಿಕ್ಕಮಗಳೂರು, ಬೂಕನಕೆರೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ೨೦೦೭ರಲ್ಲಿ ಚಂದೂಪುರದಲ್ಲಿ ಪ್ರಾಂಶುಪಾಲರಾಗಿ ನಿವೃತ್ತರಾದರು. ಈಗ ನಾಗಮಂಗಲದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಇವರು ಕಥೆ, ಕವನ, ನಾಟಕ, ಕಾದಂಬರಿ, ಚುಟುಕು ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಗ್ರಂಥ ರಚಿಸಿದ್ದಾರೆ. ಇವರು ತಾವೇ ರಚಿಸಿದ ನಾಟಗಳನ್ನು ವಿದ್ಯಾರ್ಥಿಗಳಿಂದ ಆಡಿಸಿ ನಾಟಕೋತ್ಸವಗಳಲ್ಲಿ ಭಾಗವಹಿಸಿ ಬಹುಮಾನಗಳನ್ನೂ ಪಡೆಯುವಂತೆ ಮಾಡಿದ್ದಾರೆ. ಮೈಸುರು ದಸರಾ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಉಡುಪಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಹಾಗೂ ಇನ್ನೂ ಹಲವಾರು ಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಇವರು ರಚಿಸುವ ಸಾಹಿತ್ಯ ಕೃತಿಗಳನ್ನು ರಾಜ್ಯೋತ್ಸವ ಸಂದರ್ಭದಲ್ಲೇ ಬಿಡುಗಡೆ ಮಾಡುವುದು ಇವರ ವೈಶಿಷ್ಟ್ಯ. ಇವರು ಸೇವೆ ಸಲ್ಲಿಸಿದ ಕಾಲೇಜುಗಳಲ್ಲೆಲ್ಲಾ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು.

ಪ್ರಕಟಿತ ಕೃತಿಗಳು:

ನಾಟಕ – ಕೊಟ್ನಲ್ಲ ಕೈನಾ, ಬಾಳೊಂದು ಬವಣೆ, ಸಂಪ್ರದಾಯದ ಸಂಕೋಲೆ, ಛಲಗಾರ ಚಾಣಕ್ಯ, ಅಂಬೆ ಏನೆಂಬೆ? **ಕಥಾ ಸಂ.** – ಸುಮಧುರ ಕಥಾ ಸಂಗಮ.

ಕಾದಂಬರಿ – ಪ್ರೇಮದ ಪುತ್ಥಳಿ. **ಕವನ ಸಂ.** – ಭಾವ ಸಂಗಮ. **ಚುಟುಕ ಸಂ.** – ಚುಟುಕು ಕುಟುಕು. **ಅಂಕಣ ಸಂ.** – ಅಯ್ಯೋ ಬಿಡ್ರಿ. **ನಾಟಕ ಸಂ.** – ಹಾಸ್ಯ ಭರಿತ ನಾಟಕಗಳು, ಪೌರಾಣಿಕ ನಾಟಕಗಳು.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೬ – ಆದಿ ಚುಂಚನಗಿರಿ ಕವಿಗೋಷ್ಠಿಯಲ್ಲಿ ಸನ್ಮಾನ.
೨. ೧೯೯೯ – ದಸರಾ ಕವಿಗೋಷ್ಠಿ ಸನ್ಮಾನ.
೩. ಚುಟುಕು ಕವಿಗೋಷ್ಠಿಯಲ್ಲಿ ಸಂಘಟನಾಕಾರ ಪ್ರಶಸ್ತಿ.
೪. ೨೦೦೬ – ಬೆಂಗಳೂರಿನ ವಿಶ್ವೇಶ್ವರಯ್ಯ ಇಂಜನಿಯರಿಂಗ್ ಟ್ರಸ್ಟ್ ಪ್ರಶಸ್ತಿ.
೫. ೨೦೦೭ – ಮಂಡ್ಯ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ.

ವ್ಯಕ್ತಿ ಪರಿಚಯ

ಲಕ್ಷ್ಮೀಕಾಂತ ಹೆಗಡೆ

೧.	ಹೆಸರು	: ಲಕ್ಷ್ಮೀಕಾಂತ ಶಂಕರ ಹೆಗಡೆ
೨.	ಕಾವ್ಯನಾಮ	: ಲಕ್ಷ್ಮೀಕಾಂತ ಹೆಗಡೆ
೩.	ಹುಟ್ಟಿದ ಸ್ಥಳ ದಿನಾಂಕ	: ಹಸ್ರಗೋಡು, ೨೪-೨-೧೯೪೫.
೪.	ಜಿಲ್ಲೆ - ರಾಜ್ಯ	: ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	: ಬಿ.ಇ. ಮೆಕ್ಯಾನಿಕಲ್
೬.	ವೃತ್ತಿ	: ನಿವೃತ್ತ ಇಂಜಿನಿಯರ್
೭.	ಕೌಟುಂಬಿಕ	: ಪತ್ನಿ; ಗಂಗಾ ಹೆಗಡೆ. ಒಬ್ಬ ಪುತ್ರ, ಒಬ್ಬ ಪುತ್ರಿ.
೮.	ಸದ್ಯದ ವಿಳಾಸ	: ಅಕ್ಷರ ೭೩೮, ೭ನೇ ಕ್ರಾಸ್, ೧೨ನೇ ಮೈನ್, ಮೈಕೋ ಲೇಔಟ್, ಬಿ.ಟಿ.ಎಂ. ೨ನೇ ಹಂತ, ಬೆಂಗಳೂರು-೫೬೦೦೭೬.
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೦೮೦-೨೬೬೮೩೬೧೬, ೯೪೮೧೪೭೮೦೪೭.
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕು ಹಸ್ರಗೋಡುವಿನಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ ಆಯಿತು. ೫ ರಿಂದ ೭ ಕೋಡ್ಪರಕುಂಜಿ ಪ್ರಾಥಮಿಕ ಶಾಲೆಯಲ್ಲಾಯಿತು. ಹೈಸ್ಕೂಲು ಸರಕುಳಿ ಎಸ್.ಎಸ್.ಎಲ್.ಸಿ. ವಿದ್ಯೋದಯ ಸೆಕೆಂಡರಿ ಸ್ಕೂಲ್ ಮುಡಳಿಯಲ್ಲಾಯಿತು. ಪದವಿಪೂರ್ವ ಶಿರಸಿಯಲ್ಲಾಯಿತು. ೧೯೭೦ರಲ್ಲಿ ಗುಲ್ಬರ್ಗಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕಾನಿಕಲ್ ಬಿ.ಇ. ಪದವಿಗಳಿಸಿದರು. ವಿದ್ಯಾರ್ಥಿ ದೆಸೆಯಲ್ಲೇ ಕನ್ನಡ, ಇಂಗ್ಲೀಷ್ ಚರ್ಚಾ ಸ್ಪರ್ಧೆಗಳಲ್ಲಿ ಕಾಲೇಜಿನ ಪ್ರತಿನಿಧಿಯಾಗಿ ಭಾಗವಹಿಸುತ್ತಿದ್ದರು. ಕನ್ನಡ ವಿದ್ಯಾರ್ಥಿ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಚಿಕ್ಕಂದಿನಿಂದಲೇ ಸಾಹಿತ್ಯಾಸಕ್ತಿ. ಯಕ್ಷಗಾನ, ಹಿಂದೂಸ್ಥಾನಿ ಸಂಗೀತದ ವಾತವರಣದಲ್ಲಿ ಬೆಳೆದರು. ಶಿಕ್ಷಕರ ಪ್ರಭಾವದಿಂದ ರಾಮಕೃಷ್ಣ, ವಿವೇಕಾನಂದ, ರಮಣ ಮಹರ್ಷಿಗಳ ಸಾಹಿತ್ಯ ಅಧ್ಯಯನ ಮಾಡಿದರು. ಜೈಮಿನಿ, ಗದುಗಿನ ಭಾರತಗಳ ಪಠಣಗಳಿಂದ ಸ್ಫೂರ್ತಿ ಪಡೆದು ಕವನ ರಚನೆಗೆ ತೊಡಗಿದರು. ಯಕ್ಷಗಾನ ಅರ್ಥಧಾರಿಯಾಗಿಯೂ ಪರಿಶ್ರಮವಿದೆ. ಇವರು ಇಂಗ್ಲೀಷ್‌ನಲ್ಲಿಯೂ ಕವನ ರಚಿಸುತ್ತಾರೆ. ಬೆಂಗಳೂರಿನ ಮೋಟಾರ್ ಇಂಡಸ್ಟ್ರೀಸ್ ಕಂಪನಿಯಲ್ಲಿ ಇವರ ವೃತ್ತಿ ಜೀವನ ಆರಂಭ. ೨೦೦೨ರಲ್ಲಿ ನಿವೃತ್ತಿ. ಶ್ರೀ ರಾಮಚಂದ್ರಜಿ ಮಹಾರಾಜೇಶ ಹಾಗೂ ಜಹಾನಪುರ ಇವರ ಯೋಗಪದ್ಧತಿಯನ್ನು ಅಭ್ಯಾಸ ಮಡಿದವರು ಇಂದಿಗೂ ಅದನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇವರು ಮೂಲ ಅರಬಿಂದೋ ವಿರಚಿತ 'ಯೋಗಾಂಗ ಸಪ್ತ ಚತುಷ್ಟಯ', 'ಆಧ್ಯಾತ್ಮಿಕ ಜೀವನಕ್ಕೆ ದಾರಿ', 'ಜೀವನ ರಹಸ್ಯ', 'ಆಧ್ಯಾತ್ಮಿಕ ಜೀವನ ಅನುಷ್ಠಾನ ಸೂತ್ರಗಳು' ಹಾಗೂ 'ಅತೀಂದ್ರಿಯತೆ ಶಕ್ತಿ ವಿದ್ಯೆ' ಹಾಗೂ 'ಸೃಷ್ಟಿ ಸೂಕ್ತಗಳು ಮತ್ತು ಮೃತ್ಯು ಸೂಕ್ತಗಳು'ಮುಂತಾದ ಕೃತಿಗಳನ್ನು ಅನುವಾದಿಸಿದ್ದಾರೆ. ಬೆಂಗಳೂರು ಆಕಾಶವಾಣಿಯಲ್ಲಿ ಇವರ ಚಿಂತನ ಕಾರ್ಯಕ್ರಮ 'ಮಧು ಗೀತೆ'ಯನ್ನು ಕುರಿತ ವಿಶೇಷ ಸಂದರ್ಶನ ಪ್ರಸಾರವಾಗಿದೆ. ಮಧು ಗೀತೆ ಉಮರ ಖಯ್ಯಾಮ್‌ನ ರುಬಾಯಿಯಾತ್ ಫಿಜ್ಜ್‌ರಾಲ್ಡ್‌ನ ಇಂಗ್ಲೀಷ್ ಪದ್ಯಾನುವಾದ. ಇವರು 'ವಿಶ್ವೇಶ್ವರಯ್ಯ ದರ್ಶನ' ಕೃತಿಯನ್ನು ಇಂಗ್ಲೀಷ್‌ಗೆ ಅನುವಾದ ಮಾಡಿದ್ದಾರೆ. ಇಂಗ್ಲೀಷ್‌ನಿಂದ ಹತ್ತಕ್ಕೂ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಪ್ರಕಟಿತ ಕೃತಿಗಳು:
ಕನ್ನಡಕ್ಕೆ ಅನುವಾದ – ಶ್ರೀ ಬಾಬಾಜಿಯವರ ಸಂದೇಶಗಳು, ಶ್ರೀ ವಿದ್ಯಾ ಉಪಾಸನೆ, ಪುನರ್ಜನ್ಮ, ವೇದದ ಬೆಳಕಿನಲ್ಲಿ ಆಧುನಿಕ ಸಮಸ್ಯೆಗಳ ನಿರ್ವಹಣೆ.

ವ್ಯಕ್ತಿ ಪರಿಚಯ

ವಾದಿರಾಜಾಚಾರ್ಯ ಕರಣಮ್

೧.	ಹೆಸರು	:	ವಾದಿರಾಜಾಚಾರ್ಯ ಕರಣಮ್
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಮಂಡರಗಿ, ೧೭-೧೦-೧೯೭೩
೪.	ಜಿಲ್ಲೆ - ರಾಜ್ಯ	:	ಗುಲ್ಬರ್ಗಾ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ. (ಅಲಂಕಾರ)
೬.	ವೃತ್ತಿ	:	ಸಂಶೋಧಕ
೭.	ಕೌಟುಂಬಿಕ	:	ಪತ್ನಿ; ಉಷಾ ಕರಣಮ್, ಪುತ್ರಿ; ಮಹಿತಾ. ಪುತ್ರ; ಶುಭಾಂಗ.
೮.	ಸದ್ಯದ ವಿಳಾಸ	:	೧೫-೨, ಉತ್ತರಾದಿ ಮಠ ಕಾಂಪೌಂಡ್, ಉತ್ತರಾದಿ ಮಠದ ರಸ್ತೆ, ಶಂಕರಪುರಂ, ೫ನೇ ಅಡ್ಡರಸ್ತೆ, ಬಸವನಗುಡಿ, ಬೆಂಗಳೂರು-೫೬೦೦೦೪
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೪೪೮೪೪೪೨೮೮
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಯಾದಗಿರಿ ಜಿಲ್ಲೆ ಮಂಡರಗಿಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ನಾರಾಯಣ ಪೇಟೆಯಲ್ಲಿ ಪಡೆದರು. ಇವರು ಏಳನೆಯ ತರಗತಿಯ ನಂತರ ದ್ವೈತ ವೇದಾಂತ ಅಧ್ಯಯನ ಶ್ರೀ ಸತ್ಯಧ್ಯಾನ ವಿದ್ಯಾಪೀಠ ಮುಂಬಯಿಯಲ್ಲಿ ಮಾಡಿದರು. ಬೆಂಗಳೂರಿನ ಉತ್ತರಾಧಿ ಮಠದ ಪೀಠಾಧಿಪತಿಗಳಾದ ಶ್ರೀ ಸತ್ಯಾತ್ಮ ತೀರ್ಥರ ಸನ್ನಿಧಿಯಲ್ಲಿ ಉನ್ನತ ವ್ಯಾಸಂಗ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಅಲಂಕಾರ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಸದ್ಯ ಉತ್ತಾರಧಿ ಮಠದ ವಿಶ್ವಮಧ್ವ ಮಹಾಪರಿಷತ್ತಿನ ಸಂಶೋಧನಾ ವಿಭಾಗದಲ್ಲಿ ಸಂಶೋಧಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಲವು ಸಂಸ್ಕೃತ ಗ್ರಂಥಗಳ ಸಂಪಾದಕರು. ಕನ್ನಡದಲ್ಲಿ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಬಾಲ್ಯದಿಂದಲೂ ಇವರಿಗೆ ಸಾಹಿತ್ಯದ ಬಗ್ಗೆ ಒಲವು. ಓದುವುದೇ ಹವ್ಯಾಸ. ವಿಮರ್ಶೆ ಮಾಡುವುದರಲ್ಲಿ ಆಸಕ್ತಿ. ಸತ್ಯಕಾಮ, ವಿ.ಎಮ್. ಇನಾಂದಾರ್, ವಿ.ಕೃ. ಗೋಕಾಕ್, ಡಿ.ವಿ.ಜಿ., ಶಿವರಾಮ ಕಾರಂತರು, ಎಸ್.ಎಲ್. ಭೈರಪ್ಪ ಮುಂತಾದ ಸಾಹಿತಿಗಳ ಸಾಹಿತ್ಯ ಇವರ ಮೇಲೆ ಪ್ರಭಾವ ಬೀರಿದೆ. ಪುರಂದರದಾಸರು, ಕನಕದಾಸರು, ಶ್ರೀ ಪಾದರಾಜರು ಹಾಗೂ ಶ್ರೀ ವ್ಯಾಸರಾಜರ ಕೃತಿಗಳಿಂದ ಸ್ಫೂರ್ತಿ ಪಡೆದಿದ್ದಾರೆ. ಉತ್ತರಾಧಿ ಮಠ ಪ್ರತಿವರ್ಷ ನಡೆಸುವ ಮಧ್ವ ಸಿದ್ಧಾಂತ ಅಭಿವೃದ್ಧಿ ಕಾರಿಣೀ ಸಭೆಯಲ್ಲಿ ಭಾಗವಹಿಸಿ ಸ್ತ್ರೀ ಧರ್ಮಗಳು, ಭಾರತ ಕರ್ಮ ಭೂಮಿ ಮುಂತಾದ ವಿಷಯಗಳ ಪ್ರಬಂಧ ಮಂಡಿಸಿದ್ದಾರೆ. ಇವರು ಬರೆದ ಹಲವಾರು ಪೌರಾಣಿಕ ಸಣ್ಣ ಕಥೆಗಳು ಶ್ರೀ ಸುಧಾ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇವರು ರಚಿಸಿದ ಪತಿವ್ರತಾ ಸ್ತ್ರೀ ಧರ್ಮಕ್ಕೆ ಅವರ ಆಚಾರ-ವಿಚಾರಕ್ಕೆ ಸಂಬಂಧಿಸಿದ ಗ್ರಂಥ ತೆಲಗು ಭಾಷೆಗೆ ಅನುವಾದವಾಗಿದೆ. ಇದು ಐವತ್ತು ಸ್ಮೃತಿ ಪುರಾಣಗಳ ಸಾರವನ್ನೊಳಗೊಂಡಿದೆ. ಸಂಧ್ಯಾವಂದನಾದಿ ಧಾರ್ಮಿಕ ಆಚಾರ-ವಿಚಾರಗಳಿಗೆ ಸಂಬಂಧಿಸಿದ ನಾಮಧಾರಣೆ ಗ್ರಂಥವನ್ನು ೩೫ ಧಾರ್ಮಿಕ ಗ್ರಂಥಗಳನ್ನು ಅವಲೋಕಿಸಿ ರಚಿಸಿರುತ್ತಾರೆ. ಇದು ತೆಲುಗಿಗೆ ತರ್ಜುಮೆಗೊಂಡಿದೆ. ಮಹಾಭಾರತ, ಭಾಗವತ ಹಾಗೂ ನರಸಿಂಹ ಪುರಾಣಗಳ ಆಧಾರದಿಂದ ಭಕ್ತ ಮಾರ್ಕಾಂಡೇಯ ಗ್ರಂಥ ರಚಿಸಿರುತ್ತಾರೆ. ಶ್ರೀ ಮದ್ಭಾಗವತ ಗ್ರಂಥ ಆಧಾರಿತ ಶ್ರೀ ಯೋಗಾದೇಶ ಸ್ತುತಿ ಗ್ರಂಥ ರಚಿಸಿರುತ್ತಾರೆ. ದಶೋಪನಿಷತ್ತುಗಳಲ್ಲೊಂದಾದ ಅಥರ್ವಣೋಪನಿಷತ್ತಿಗೆ ಕನ್ನಡದಲ್ಲಿ ಅಥರ್ವಣೋಪನಿಷದ್ಭಾಷ್ಯ ಗ್ರಂಥ ರಚಿಸಿದ್ದಾರೆ. ಯಮ-ನಚಿಕೇತರ ಸಂವಾದ ಆಧಾರಿತ ಕಾಠಕೋಪನಿಷದ್ಭಾಷ್ಯ ಗ್ರಂಥ ರಚಿಸಿದ್ದಾರೆ.

ಪ್ರಕಟಿತ ಕೃತಿಗಳು:

ಆಧ್ಯಾತ್ಮಿಕ - ಪತಿವ್ರತಾ, ನಾಮಧಾರಣೆ, ಭಕ್ತ ಮಾರ್ಕಂಡೇಯ, ಶ್ರೀ ಯೋಗಾದೇಶ ಸ್ತುತಿ, ಅಥರ್ವಣೋಪನಿಷದ್ಭಾಷ್ಯ, ಕಾಠಕೋಪನಿಷದ್ಭಾಷ್ಯ.

ವ್ಯಕ್ತಿ ಪರಿಚಯ

ಪ್ರೊ. ವಿಜಯಕುಮಾರ ಗಿಡ್ನವರ.

೧. ಹೆಸರು	:	ಪ್ರೊ. ವಿಜಯಕುಮಾರ ಗಿಡ್ನವರ.
೨. ಕಾವ್ಯನಾಮ	:	'ವಿಜಯಕುಮಾರ'
೩. ಹುಟ್ಟಿದ ಸ್ಥಳ ದಿನಾಂಕ	:	ಬಿಜಾಪುರ, ೧೭-೧೧-೧೯೪೨.
೪. ಜಿಲ್ಲೆ - ರಾಜ್ಯ	:	ಬಿಜಾಪುರ, ಕರ್ನಾಟಕ.
೫. ವಿದ್ಯಾಭ್ಯಾಸ	:	ಎಂ.ಸ್ಸಿ. ಕೃಷಿ, ಎಫ್.ಇ.ಎಸ್.ಡಬ್ಲ್ಯು.ಎಸ್.
೬. ವೃತ್ತಿ	:	ವಿಶ್ರಾಂತ ಪ್ರಧ್ಯಾಪಕರು ಹಾಗೂ ಮುಖ್ಯಸ್ಥರು.
೭. ಕೌಟುಂಬಿಕ	:	ಪತ್ನಿ; ಜಯಶ್ರೀ ಬಿ.ಎ. ಪುತ್ರಿಯರು; ನಯನ ಲೋಕೇಶ, ಪ್ರಿಯದರ್ಶನಿ.
೮. ಸದ್ಯದ ವಿಳಾಸ	:	ನಿಸರ್ಗ, ೧೪ನೇ ಅಡ್ಡರಸ್ತೆ, ನವೋದಯ ನಗರ ಧಾರವಾಡ-೫೮೦೦೦೩
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೯೪೮೮೧೨೮೧೦೦೫
೧೧. ಹಸ್ತಾಕ್ಷರ (ಸಹಿ)	:	ವಿಜಯಕುಮಾರ. ಗಿಡ್ನವರ

ಸಾಹಿತ್ಯ ಪರಿಚಯ

ಇವರು ಬಿಜಾಪುರದಲ್ಲಿ ಜನಿಸಿದರು. ಬಾಲ್ಯ ಜೀವನ ವಿದ್ಯಾಭ್ಯಾಸಗಳೆಲ್ಲಾ ಬಿಜಾಪುರದಲ್ಲೇ. ಇವರ ತಂದೆ ಎಸ್.ವಿ.ಗಿಡ್ನವರ ಬ್ರಿಟಿಷರ ಆಡಳಿತದಲ್ಲಿ ಸೇವೆ ಸಲ್ಲಿಸಿದವರು. ಇವರು ಸಾಹಿತ್ಯ ಪ್ರೇಮಿ, ಸ್ವತಃ ಸಾಹಿತಿಗಳು. ಸುಮಾರು ಹತ್ತು ಸಾವಿರ ಪುಸ್ತಕಗಳ ಗ್ರಂಥ ಭಂಡಾರವಿಟ್ಟು ಕೊಂಡವರು. ಸಾಹಿತಿಗಳ ಪ್ರೇಮಿಯಾಗಿದ್ದರು. ದ.ರಾ.ಬೇಂದ್ರೆ, ಶ್ರೀ ಮುಗಳಿ, ವಿ.ಕೃ. ಗೋಕಾಕ್, ಎಸ್.ಡಿ. ಇಂಚಲ, ಚೆನ್ನಮಲ್ಲಪ್ಪ, ಗಲಿಗಲೀ ಮಧುರ ಚೆನ್ನರು, ಬಸವರಾಜ ಕಟ್ಟೀ ಮನಿ, ಪಾಟೀಲ ಪುಟ್ಟಪ್ಪ, ಎಸ್.ಎಸ್. ಮಾಳಾವಾಡ ಹಾಗೂ ಚೆನ್ನವೀರ ಕಣವಿ ಮುಂತಾದವರ ಒಡನಾಟವಿದ್ದವರು. ಇವರ ಸಾಹಿತ್ಯದ ಆರಂಭಕ್ಕೂ ಸುಭದ್ರವಾದ ಬುನಾದಿ ಸಿಗುವಂತಾಯಿತು. ತಂದೆಯ ಗ್ರಂಥ ಭಂಡಾರಕ್ಕೆ ಬರುತ್ತಿದ್ದ ಗ್ರಂಥಗಳನ್ನೆಲ್ಲ ಓದುತ್ತಿದ್ದರು. ಮನೆಯವರ ಪ್ರೋತ್ಸಾಹವೂ ಸಿಕ್ಕಿತು. ಇವರು ೮ನೇ ತರಗತಿಯಲ್ಲಿ ಓದುವಾಗಲೇ ಸಣ್ಣ ಕಥೆ ಬರೆಯಲಾರಂಭಿಸಿದರು. ಶಾಲೆಯ ಮ್ಯಾಗ್‌ಜೈನಲ್ಲಿ ಪ್ರಕಟವಾಗುತ್ತಿತ್ತು. ನಂತರ ನಿರಂತರವಾಗಿ ಬರವಣಿಗೆ ಸಾಗಿತು. ಲೇಖನಗಳನ್ನೂ ಬರೆಯ ತೊಡಗಿದರು. ಇವರು ಎಂ.ಎಸ್.ಸಿ. ಕೃಷಿ ಮಾಡಿ ಬೆಂಗಳೂರು, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪಾಧ್ಯಾಪಕರಾಗಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ ಇದೀಗ ಧಾರವಾಡದಲ್ಲಿ ನೆಲಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ವೃತ್ತಿಯಿಂದ ಕೃಷಿ ವಿಜ್ಞಾನಿಗಳಾಗಿ ಪ್ರವೃತ್ತಿಯಿಂದ ಸಾಹಿತಿಗಳಾದರೂ ಅವರ ಬರವಣಿಗೆಯನ್ನು ಕಥೆ, ಕಾದಂಬರಿ ಬರೆಯಲು ತೊಡಗಿಸುವುದಕ್ಕಿಂತ ಕೃಷಿ ಸಾಹಿತ್ಯಕ್ಕೆ ಸಂಬಂಧಪಟ್ಟ ಬರವಣಿಗೆಯಲ್ಲಿ ತೊಡಗುವುದು ಅನಿವಾರ್ಯವಾಯಿತು. ದೇಶ ವಿದೇಶಗಳ ವೈಜ್ಞಾನಿಕ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ದೇಶ ವಿದೇಶಗಳ ಪ್ರತಿಷ್ಠಿತ ಜರ್ನಲ್‌ಗಳಲ್ಲಿ ೭೮ಕ್ಕೂ ಹೆಚ್ಚು ಪ್ರಬಂಧಗಳು ಪ್ರಕಟವಾಗಿವೆ. ಇವರು ಮುಂದಿನ ಬರವಣಿಗೆಯನ್ನೆಲ್ಲಾ ಕೃಷಿ ತೋಟಗಾರಿಕೆ, ಪಶುವೈದ್ಯಕೀಯ, ಹೂ, ಹಣ್ಣು, ತರಕಾರಿ ವಿಷಯಗಳಿಗೆ ಸೀಮಿತವಾಗಿ ಜನಪ್ರಿಯ ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಉದಯವಾಣಿ, ಪ್ರಪಂಚ, ವಿಜಯ ಕರ್ನಾಟಕ, ಕನ್ನಡ ಪ್ರಭ, ಸುಧಾ, ತರಂಗ, ಜೀವನ, ಜಯಂತಿ, ಕಸ್ತೂರಿ, ಮಯೂರ ಮುಂತಾದ ಪತ್ರಿಕೆಗಳಲ್ಲಿ ಐನೂರಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿವೆ, ಅಷ್ಟೇ ಅಲ್ಲದೆ ಅನ್ನದಾತ, ಕೃಷಿ ಕಾಮಧೇನು, ಕೃಷಿ ಮುನ್ನಡೆ ಹಾಗೂ ಕೃಷಿ ಲೋಕ ಮುಂತಾದ ಪತ್ರಿಕೆಗಳಲ್ಲೂ ಪ್ರಕಟವಾಗಿವೆ. ಇವರು ನೀರಾವರಿ ಹಾಗೂ ವಿವಿಧ ಬೆಳಗಳಿಗೆ ಸಂಬಂಧಿಸಿದಂತೆ ೧೨ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವರ ಪ್ರತಿಭೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವ ಪ್ರಶಸ್ತಿ ನೀಡಿವೆ. ಇವರು ಹೈದರಾಬಾದಿನಿಂದ ಪ್ರಕಟವಾಗುವ ಕೃಷಿ ಮಾಸಿಕದ ಸಂಪಾದಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು:

ಕೃಷಿ ವಿಜ್ಞಾನ – ಹತ್ತಿ, ಭತ್ತ, ಬಟಾಟೆ, ಕಬ್ಬು ಇತ್ಯಾದಿ.

ಲಭಿಸಿರುವ ಪ್ರಶಸ್ತಿಗಳು:

೧. ೧೯೭೯ – ಸಂಯುಕ್ತ ಕರ್ನಾಟಕದಲ್ಲಿ ಅತ್ಯುತ್ತಮ ಬರೆಹಗಾರ ಪ್ರಶಸ್ತಿ.

೨. ೧೯೮೨ – ಪ್ರಜಾವಾಣಿ ರಾಜ್ಯ ಮಟ್ಟದ ಬರೆಹಗಾರರ ಪ್ರಶಸ್ತಿ.

೩. ೧೯೯೭ – ವಿಜಯ ಕರ್ನಾಟಕದ ಅತ್ಯುತ್ತಮ ಕೃಷಿ ಸಾಹಿತ್ಯ ಲೇಖಕ ಪ್ರಶಸ್ತಿ.

ವ್ಯಕ್ತಿ ಪರಿಚಯ

ವಿಜಯಾ ಸುಬ್ರಹ್ಮಣ್ಯ

೧. ಹೆಸರು : ವಿಜಯಾ ಸುಬ್ರಹ್ಮಣ್ಯ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಶಂಕರಮೂಲೆ, ನೀರ್ಚಾಲು ಗ್ರಾ. ೨೩–೮–೪೯

೪. ಜಿಲ್ಲೆ – ರಾಜ್ಯ : ಕಾಸರಗೋಡು, ಕೇರಳ.

೫. ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ.

೬. ವೃತ್ತಿ : ಗ್ರಂಥಪಾಲಿಕೆ

೭. ಕೌಟುಂಬಿಕ : ಪತಿ; ದಿ. ಸುಬ್ರಹ್ಮಣ್ಯ.

೮. ಸದ್ಯದ ವಿಳಾಸ : ಕಾರ್ತಿಕೇಯ , ನಾರಯಣ ಮಂಗಲ,
ಕುಂಬಳೆ, ಕಾಸರಗೋಡು, ಕೇರಳ–೬೭೧೩೨೧

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೪೯೯೮–೨೧೪೧೨೫, ೦೯೦೩೭೮೯೧೦೨೯.

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಕೇರಳದ ಕಾಸರಗೋಡು ಜಿಲ್ಲೆ ಶಂಕರಮೂಲೆ ನೀರ್ಚಾಲು ಗ್ರಾಮದಲ್ಲಿ ಜನಿಸಿದರು. ಇವರು ಶ್ರೀ ಶಂಭುಭಟ್ಟ ಮತ್ತು ಶ್ರೀಮತಿ ಶಾರದ ದಂಪತಿಗಳ ಪುತ್ರಿ. ಪ್ರಾಥಮಿಕ ವಿದ್ಯಾಭ್ಯಾಸ ಇಂಚ್ಲಂಪಾಡಿ, ಪ್ರೌಢ ನೀರ್ಚಾಲುಗಳಲ್ಲಿ ಮಾಡಿ ಎಸ್.ಎಸ್.ಎಲ್.ಸಿ. ಮಾಡಿ ವೃತ್ತಿಯಿಂದ ಗ್ರಂಥಪಾಲಕಿಯಾಗಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳು. ಶಾಲದಿನಗಳಲ್ಲಿಯೇ ಇವರು ಸಾಹಿತ್ಯಾಸಕ್ತರು. ಸಭೆ, ಚರ್ಚಾಕೂಟಗಳಲ್ಲಿ ಭಾಗವಹಿಸುತ್ತಿದ್ದರು. ಕಥೆ, ಕಾದಂಬರಿ ಓದುತ್ತಿದ್ದರು. ಚುಟುಕ ಕವನ ಬರೆಯುತ್ತಿದ್ದರು. ೧೯೭೧ರಲ್ಲಿ ವಿವಾಹವಾದರು. ಮಕ್ಕಳಾಗಲಿಲ್ಲ. ಅದೇ ಕೊರಗು ಹತ್ತಿಕೊಂಡಿತು. ಒಮ್ಮೆ ಡಾ, ಅನುಪಮಾ ನಿರಂಜನರ ಆಕಾಶವಾಣಿಯಲ್ಲಿ ಭಾಷಣ ಕೇಳಿ ಬರವಣಿಗೆಗೆ ಅಲವತ್ತುಕೊಂಡರು. ದುಃಖ ದೂರವಾಯಿತು. ಹೊಸದಿಗಂತ ಪತ್ರಿಕೆಯಲ್ಲಿ ಚುಟುಕ ಪ್ರಕಟವಾಯಿತು. ನಂತರ ಸಣ್ಣ ಕಥೆ, ಲೇಖನ ಪ್ರಕಟವಾಯಿತು. ಬಹುಮಾನಗಳು ಬಂದವು. ಇವರ ಹಾಸ್ಯ, ಪ್ರಬಂಧ ಮುಂತಾದ ಬರೆಹಗಳು ಉದಯವಾಣಿ, ಹೊಸದಿಗಂತ, ವಿಜಯ ಕರ್ನಾಟಕ, ಕಾರವಾಲ್, ಮಂಗಳ, ಮಯೂರ, ತರಂಗ, ತುಷಾರ, ಮಂಜುವಾಣೀ, ಕಲಾದರ್ಶನ, ಹವ್ಯಕ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗ ತೊಡಗಿತು. ಇವರು ಮಕ್ಕಳ ಕಥೆ, ಕವನಗಳನ್ನೂ ಬರೆಯುತ್ತಾರೆ. ೧೯೭೭ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಮಕ್ಕಳ ಸಾಹಿತ್ಯ ಸಂಕಲನದಲ್ಲಿ ಇವರದೂ ಕಥೆ ಸೇರಿದೆ. ಹಲವು ಸಂಕಲನಗಳಲ್ಲಿ ಹಾಸ್ಯ, ಪ್ರಬಂಧಗಳು ಸೇರಿವೆ. ಕಾಸರಗೋಡಿನಿಂದ ಪ್ರಕಟವಾಗುವ ಉತ್ತರ ದೇಶ ದೈನಿಕದಲ್ಲಿ ಇವರ ಅಂಕಣ ಬರೆಹ ಪ್ರಕಟವಾಗುತ್ತಿವೆ. ತೋಟಗಾರಿಕೆ, ಕಸೂತಿ, ವಯರ್ ಬ್ಯಾಗ್ ಹಾಕುವುದು ಇವರ ಹವ್ಯಾಸ. ಇವರು ೨೦೦೫ರಲ್ಲಿ ಮೈಸೂರಿನಲ್ಲಿ ನಡೆದ ಹವೀಕ ಸಂಘ, ೨೦೦೭ರಲ್ಲಿ ಹೊನ್ನಾವರದಲ್ಲಿ ನಡೆದ ಪ್ರಥಮ ಹವಿಗನ್ನಡ ಸಮ್ಮೇಳನ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಪ್ರಬಂಧ ಮಂಡಿಸಿದ್ದಾರೆ. ೨೦೦೨ರಿಂದ ಕುಂಬಳೆ ಸಮೀಪದ ಮುಜುಂಗಾವಿಯ ಶ್ರೀ ಭಾರತೀ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಗ್ರಂಥಪಾಲಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾಲಯದಿಂದ ಪ್ರಕಟವಾಗುವ ಜ್ಯೋತಿರ್ನಿಧಿ ತ್ರೈಮಾಸಿಕ ಸಂಪಾದಕ ಮಂಡಲಿಯಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಲೇಖನಗಳು ಸ್ಮರಣ ಸಂಚಿಕೆಗಳಲ್ಲಿಯೂ ಪ್ರಕಟವಾಗುತ್ತವೆ. ಮಂಗಳೂರು ಆಕಾಶವಾಣಿಯಲ್ಲಿ ಇವರ ಚಿಂತನಗಳು ಪ್ರಸಾರವಾಗಿವೆ. ಇವರು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ, ಮಂಗಳೂರು ಕರಾವಳಿ ವಾಚಕಿ, ಲೇಖಕಿಯರ ಸಂಘ ಹಾಗೂ ಬೆಂಗಳೂರು ಹವ್ಯಕ ಅಧ್ಯಯನ ಕೇಂದ್ರದ ಆಜೀವ ಸದಸ್ಯರು.

ಪ್ರಕಟಿತ ಕೃತಿಗಳು:

ಗೀತ ಸಂ. – ಜನಪದ ಗೀತೆಗಳು. **ಕಥಾ ಸಂ.** – ಹತ್ತೆಸಳು, ಹೊಂಗಿರಣ.
ವ್ಯಕ್ತಿ ಚಿತ್ರಗಳು ಸಂ. – ಪುರಾಣ ಪುನೀತೆಯರು, ಪುರಾಣ ಪುರುಷ ರತ್ನಗಳು.
ಆಧ್ಯಾತ್ಮಿಕ – ಇಷ್ಟಾರ್ಥ ವಿಷ್ಣುನಾಮಾವಳಿ.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೯ – ಕೊಡಗಿನ ಗೌರಮ್ಮ ಪ್ರಶಸ್ತಿ. ೨. ೨೦೦೬ – ಕಾಸರಗೋಡು ಗಡಿನಾಡು ಸಾಂಸ್ಕೃತಿಕ ಪ್ರತಿಷ್ಠಾನ ಪ್ರಶಸ್ತಿ. ೩. ೨೦೦೬ – ಹವ್ಯಕ ಸಂಘ ಮೈಸೂರಿನಲ್ಲಿ ಸನ್ಮಾನ.
೪. ೨೦೦೭ – ಹೊನ್ನಾವರ ಹವಿಗನ್ನಡ ಸಮ್ಮೇಳನದಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ

ವಿಶ್ವೇಶ್ವರ

೧.	ಹೆಸರು	:	ವಿಶ್ವೇಶ್ವರ ಅತ್ತೀಮುರುಡು
೨.	ಕಾವ್ಯನಾಮ	:	'ಶರಾಧವ', 'ಅತ್ತೀಮುರುಡು ವಿಶ್ವೇಶ್ವರ'
೩.	ಹುಟ್ಟಿದ ಸ್ಥಳ ದಿನಾಂಕ	:	ಅತ್ತೀಮುರುಡು , ೨೮-೦೫-೧೯೫೦.
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಸ್.ಎಸ್.ಎಲ್.ಸಿ.
೬.	ವೃತ್ತಿ	:	ವ್ಯವಸಾಯ.
೭.	ಕೌಟುಂಬಿಕ	:	ಪತ್ನಿ; ಶ್ರೀಮತಿ ಮಹಾದೇವಿ. ಪುತ್ರ; ನರೇಂದ್ರ. ಪುತ್ರಿಯರು; ಅಂಜನಾ, ಗೀರ್ವಾಣಿ.
೮.	ಸದ್ಯದ ವಿಳಾಸ	:	ಅತ್ತೀಮುರುಡು ವಿಶ್ವೇಶ್ವರ, ಹೇರೂರು, ಉ.ಕ.-೫೮೧೪೫೦
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೨೯೪೦೩೧
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕು ಅತ್ತೀಮುರುಡು ಗ್ರಾಮದಲ್ಲಿ ಜನಿಸಿದರು. ಅರಣ್ಯಾವೃತ ಎರಡೇ ಎರಡು ಮನೆಯ ಗ್ರಾಮ. ಇವರು ಶ್ರೀ ರಾಮಕೃಷ್ಣ ಮತ್ತು ಶ್ರೀಮತಿ ಸರಸ್ವತಿ ದಂಪತಿಗಳ ಕಿರಿಯ ಪುತ್ರ. ತಂದೆಯ ಮರಣಾನಂತರ ತಾಯಿಯೇ ಬೆಳೆಸಿದರು. ಪ್ರಾಥಮಿಕ ಶಿಕ್ಷಣ ಹೊಸಗದ್ದೆ. ಹೆಗ್ಗರಣೆಯಲ್ಲಿ ಪ್ರೌಢ. ೧೯೭೮ರಲ್ಲಿ ಎಸ್.ಎಸ್.ಎಲ್.ಸಿ. ಮಾಡಿದರು. ಇಂಗ್ಲೀಷ್ ಸೀನಿಯರ್ ಮಾಡಿ ಹಿಂದೀ ಭಾಷಾ ಭೂಷಣರಾದರು. ಬಡತನದಿಂದಾಗಿ ಓದಿಗೆ ಇತಿಶ್ರೀ. ಪ್ರಾಥಮಿಕ ಶಾಲೆಯಿಂದಲೇ ಬರವಣಿಗೆಯ ಒಲವು. ಇವರ ಮೊದಲ ಕವಿತೆ 'ಶ್ರೀಧರ ಸಂದೇಶ' ಮಾಸಿಕದಲ್ಲಿ ಪ್ರಕಟವಾಯಿತು. 'ಮುನ್ನಡೆ'ಯಲ್ಲಿಯೂ ಪ್ರಕಟವಾದವು. ಇವರ ಕವಿತೆ, ನಾಟಕಗಳನ್ನು ಓದಿದ ಶಾಲೆಯ ಗುರುಗಳು ರಂಗದಮೇಲೆ ತಂದರು. ಕೆಕ್ಕಾರ ಗಣೇಶ ಭಟ್ಟರು ಮುನ್ನಡೆ ಸಂಪಾದಕರು ಇವರ ಪರೋಕ್ಷ ಗುರುಗಳು. 'ನಾಗರಿಕ'ದಲ್ಲಿ ಇವರ ಕವನಗಳು ಪ್ರಕಟವಾದವು. ಪರಿಚಯ ಪ್ರಕಟವಾಯಿತು. ನಂತರ ಗ್ರಾಮ ಭಾರತಿ, ಲೋಕ ಧ್ವನಿ, ಜನ ಮಾಧ್ಯಮ, ಕರ್ಮವೀರ, ಧ್ಯೇಯನಿಷ್ಠೆ ಪತ್ರಕರ್ತ, ಕದಂಬಾ ವಾಣಿ, ಚಿಗುರು ಮುಂತಾದ ಪತ್ರಿಕೆಗಳಲ್ಲಿ ಇವರ ಕವನಗಳು ಪ್ರಕಟವಾಯಿತು. ಧಾರವಾಡ ಬಾನುಲಿಯಿಂದ ಇವರ ಕವನ ಪ್ರಸಾರವಾಯಿತು. ೧೯೮೦ರಲ್ಲಿ ಸ್ಥಳೀಯ ಪತ್ರಿಕೆಯೊಂದರ ವರದಿಗಾರರಾದರು. ಅಂಕಣ ಬರೆಹಗಳನ್ನು ಬರೆಯತೊಡಗಿದರು. ನಂತರ ಇವರ ಗಮನ ಇತಿಹಾಸದತ್ತ ಹೊರಳಿತು. ಶಿಲಾ ಶಾಸನಗಳು, ವಾಸ್ತುಶಿಲ್ಪ, ಮೂರ್ತಿಶಿಲ್ಪ ಹಳೆಯ ದಾಖಲೆಗಳನ್ನು ಹುಡುಕಿ ಲೇಖನಗಳನ್ನು ಬರೆಯ ತೊಡಗಿದರು. ಕಾರವಾರದಲ್ಲಿ ನಡೆದ ಇತಿಹಾಸ ಸಮ್ಮೇಳನದಲ್ಲಿ ಭಾಗವಹಿಸಿ 'ಹೇರೂರು ಸೀಮೆ' ಸಂಶೋಧನಾತ್ಮಕ ಪ್ರಬಂಧ ಮಂಡಿಸಿದರು. ಇವರು ಹಲವಾರು ಗೋಷ್ಠಿಗಳು ವಿಚಾರ ಸಂಕಿರಣಗಳಲ್ಲೂ ಭಾಗವಹಿಸಿದ್ದಾರೆ. ಪ್ರಬಂಧ ಮಂಡಿಸಿದ್ದಾರೆ. ಧರ್ಮಶ್ರೀ, ಮಲ್ಲಾರ, ಸಂಯುಕ್ತ ಕರ್ನಾಟಕ, ಕರಾವಳಿ ವಾರ್ತೆ, ಚುನಾವಣೆ, ಶ್ರೀ ಸಾಮನ್ಯ, ಶಿರಸಿ ಸಮಾಚಾರ, ಕ.ಸಾ.ಪ. ಪತ್ರಿಕೆ ಮುಂತಾದ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗುತ್ತಿವೆ. ಯಕ್ಷಗಾನದ ಬಗ್ಗೆಯೂ ಇವರು ಬರೆದಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಕುಟ್ಮಲ, ಚಿಗುರು, ಚಪ್ಪರ–ಕವಿ.
ಸಂಶೋಧನೆ – ಹೇರೂರು ಸೀಮೆ. **ಲೇ. ನ ಸಂ.** – ನ್ಯಗ್ರೋಧ ತೀರ್ಥಮತ್ತೂರ ಚಾರಿತ್ರಿಕ ದಾಖಲೆಗಳು, ಇಟಗಿಯ ಇತಿವೃತ್ತ.

ಲಭಿಸಿರುವ ಪ್ರಶಸ್ತಿಗಳು:
೧. ಮಂಡಳ ಪಂಚಾಯಿತ ಹೆಗ್ಗರಣೆಯಲ್ಲಿ ಸನ್ಮಾನ.
೨. ಸಿದ್ದಾಪುರ ಸಾಂಸ್ಕೃತಿಕ ಸಂಘದಲ್ಲಿ ಸನ್ಮಾನ.
೩. ಬೆಂಗಳೂರಿನ ಅಖಿಲ ಹವ್ಯಕ ಮಹಾಸಭೆ ಸನ್ಮಾನ.
೪. ರಾಮ ಚಂದ್ರಾಪುರ ಮಠದ ಶ್ರೀಗಳಿಂದ ಸನ್ಮಾನ.
೫. ಶಿವಮೊಗ್ಗ ವಸುಧಾ ವೈಶಾಲಿ ಜಿ.ಡಿ.ಸಮಿತಿ ಸನ್ಮಾನ.
೬. ಪಾರ್ಸಿ ಕಟ್ಟೆ ದಿವಾನ ಯಕ್ಷಗಾನ ಸಮೂಹದವರ ಸನ್ಮಾನ.

ವ್ಯಕ್ತಿ ಪರಿಚಯ

ಪ್ರೊ. ವಿಷ್ಣು ರಾಮಕೃಷ್ಣ ಜೋಷಿ

೧. ಹೆಸರು : ವಿಷ್ಣು ರಾಮಕೃಷ್ಣ ಜೋಷಿ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಕಲ್ಲಬ್ಬೆ, ೨೮-೦೮-೧೯೪೭.

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ. ಸಂಸ್ಕೃತ, ಎಂ.ಎ. ಕನ್ನಡ.

೬. ವೃತ್ತಿ : ನಿವೃತ್ತ ಉಪನ್ಯಾಸಕ

೭. ಕೌಟುಂಬಿಕ : ಪತ್ನಿ; ಉಮಾಜೋಷಿ.
ಪುತ್ರಿಯರು; ಸ್ಮಿತಾ ಭಟ್ಟ, ಕವಿತಾ ಜೋಷಿ.

೮. ಸದ್ಯದ ವಿಳಾಸ : ರಾಮಕೃಷ್ಣ ನಿಲಯ, 'ಮುಕ್ತಾ' ಬಗ್ಗೋಣ,
ಅಂಚೆ ಕಲಭಾಗ, ತಾ. ಕುಮಟ ೫೮೧೩೪೩. ಉ.ಕ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೮೬-೨೨೨೫೫೩, ೯೯೧೬೨೪೯೯೦೯

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕು ಕಲ್ಲಬ್ಬೆ ಗ್ರಾಮದಲ್ಲಿ ಜನಿಸಿದರು. ಪುರೋಹಿತ ಕುಂಟುಂಬದಿಂದ ಬಂದವರು. ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ ಆಯಿತು. ಹೈಸ್ಕೂಲ್ ಶಿಕ್ಷಣ ಪ್ರಗತಿ ವಿದ್ಯಾಲಯ ಮೂರೂರು ಕಲ್ಲಬ್ಬೆಯಲ್ಲಿ. ಬಿ.ಎ. ಪದವಿ ಕುಮಟಾದಲ್ಲಿ. ಸ್ನಾತಕೋತ್ತರ ಪದವಿ ಹಾಗು ಸಂಸ್ಕೃತ ಓದು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ. ೧೯೭೨ ರಲ್ಲಿ ಕಾರವಾರದ ಬಾಡಾದಲ್ಲಿರುವ ಶಿವಾಜಿ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿವೃತ್ತಿ ಜೀವನ ಆರಂಭ. ೧೯೮೮ ರಿಂದ ಕುಮಟಾದ ಡಾ|| ಬಾಳಿಗಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯಕ್ಕೆ ಸೇವಾ ವರ್ಗಾವಣೆ. ೨೦೦೮ರಲ್ಲಿ ನಿವೃತ್ತಿ. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ರಾಮಾಯಣ, ಮಹಾಭಾರತ, ವೇದ, ಉಪನಿಷತ್ತು, ಭಗವದ್ಗೀತೆ, ಶ್ರೀ ಮದ್ಭಾಗವತ ಹಾಗೂ ಶಂಕರ ಸಾಹಿತ್ಯ ಮೊದಲಾದವುಗಳ ಬಗ್ಗೆ ರಾಜ್ಯಾದ್ಯಂತ ಸಾವಿರಕ್ಕೂ ಅಧಿಕ ಉಪನ್ಯಾಸಗಳನ್ನು ಮಾಡಿದ್ದಾರೆ. ಇಂತಹ ಉಪನ್ಯಾಸಗಳ ಪ್ರಚಾರಕ್ಕಾಗಿಯೇ ಇವರು ಕುಮಟಾದಲ್ಲಿ 'ಸಂಸ್ಕೃತಿ ಉಪನ್ಯಾಸ ವೇದಿಕೆ' ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಪತ್ರಿಕೋದ್ಯಮದಲ್ಲಿ ಸುದೀರ್ಘ ೨೮ ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಉದಯವಾಣಿ, ಸಂಯುಕ್ತ ಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ ಜಿಲ್ಲೆಯ ಸಮಸ್ಯೆಗಳಿಗೆ ಸಂಬಂಧಿಸಿದ ವಿಶೇಷ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರು ಸಂಯುಕ್ತ ಕರ್ನಾಟಕ, ಕರ್ಮವೀರ, ತರಂಗ, ಕರಾವಳಿ, ಮುಂಜಾವು ಹಾಗೂ ಹೊಸ ದಿಗಂತ ಮುಂತಾದ ಪತ್ರಿಕೆಗಳಲ್ಲಿ ಸಾಂಸ್ಕೃತಿಕ ಅಂಕಣ ನಿರ್ವಾಹಕರು. ಇವರ ೧ ಕವಕ ಸಂಕಲನ, ೧ ಅಂಕಣ ಬರೆಹಗಳ ಸಂಗ್ರಹ ಇತ್ಯಾದಿ ೧೩ ಕೃತಿಗಳು ಪ್ರಕಟವಾಗಿವೆ. ಇವರಿಗೆ ಯಕ್ಷಗಾನದಲ್ಲಿಯೂ ಆಸಕ್ತಿ ಇದ್ದು ತಾಳಮದ್ದಳೆ ಹವ್ಯಾಸಿ ಅರ್ಥಧಾರಿ. ಕುಮಟಾದಲ್ಲಿ ಜರುಗಿದ ವಿಚಾರ ಸಂಕೀರ್ಣದಲ್ಲಿ ಮನಸ್ಮೃತಿಯ ಬಗ್ಗೆ ಪ್ರಬಂಧ ಮಂಡಿಸಿದ್ದಾರೆ. ಇವರ ಕೆಲವು ಕೃತಿಗಳು ಕರ್ನಾಟಕ ಹಾಗೂ ಮಂಗಳೂರು ವಿಶ್ವವಿದ್ಯಾಲಯ ಬಿ.ಎ. ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳಾಗಿವೆ.

ಪ್ರಕಟಿತ ಕೃತಿಗಳು:

ಕವನ ಸಂ – ಮಂದಾರ. **ಅಂಕಣ** – ಸೌದಾನ್ವಿ. **ಸಾಹಿತ್ಯ** – ಸಂಸ್ಕೃತ ಸಾಹಿತ್ಯ ಪ್ರವೇಶ.
ಸುಭಾಷಿತ – ಭಾಷಾ ಕವಿಯ ಸುಭಾಷಿತ, ಕಾಳಿದಾಸ ಸುಭಾಷಿತ, ಬಾಳಿಗೆ ಬೆಳಕು ಸುಭಾಷಿತ.
ವಿಮರ್ಶೆ – ರಾಮಾಯಣ ಅಂತರಂಗ ಶೋಧ, ವಾಲ್ಮೀಕಿ ಚಿಂತನ ಮಂಥನ, ಪುರಾಣಾ ಚಿಂತನ ಮಂಥನ. **ಇತರೆ** – ದರ್ಶನ ಸಂಗ್ರಹ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೩ – ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸನ್ಮಾನ.
೨. ೨೦೦೪ – ಸೋಂದಾ ಉತ್ಸವ ಸನ್ಮಾನ.
೩. ಹಲವಾರು ಗುರುಪೀಠಗಳಲ್ಲಿ ಸನ್ಮಾನ.
೪. ರೋಟರಿ ಹಾಗೂ ಲಯನ್ಸ್ ಕ್ಲಬ್‌ಗಳಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ

ಡಾ|| ವಿದ್ವಾನ್. ವಿ.ಎನ್. ಭಟ್ಟ

೧.	ಹೆಸರು	: ಡಾ|| ವಿದ್ವಾನ್. ವಿಷ್ಣು ನರಸಿಂಹ ಭಟ್ಟ
೨.	ಕಾವ್ಯನಾಮ	: ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	: ಬೆತ್ತಗೇರಿ, ತಾ. ಕುಮಟಾ ೧-೩-೧೯೪೩
೪.	ಜಿಲ್ಲೆ - ರಾಜ್ಯ	: ಉ.ಕ. ಜಿಲ್ಲೆ, ಕರ್ನಾಟಕ.
೫.	ವಿದ್ಯಾಭ್ಯಾಸ	: ಎಂ.ಎ.(ಸಂಸ್ಕೃತ), ಎಂ.ಎ.(ಕನ್ನಡ).
೬.	ವೃತ್ತಿ	: ವಿದ್ವಾನ್ (ಅಲಂಕಾರ ಶಾಸ್ತ್ರ) ಕನ್ನಡ ಪಂಡಿತ, ಹಿಂದಿ ರಾಷ್ಟ್ರ ಭಾಷಾ ಪ್ರವೀಣ, ಡಿ.ಲಿಟ್.
೭.	ಕೌಟುಂಬಿಕ	: ವಿವಾಹಿತ. ಪತ್ನಿ, ಇಬ್ಬರು ಮಕ್ಕಳು
೮.	ಸದ್ಯದ ವಿಳಾಸ	: ಜ್ಞಾನದೀಪ, ಸಹ್ಯಾದ್ರಿ ನಗರ, ೩ನೇ ಮೇನ್. ವಿನೋಬ ನಗರ ಬಡಾವಣೆ, ಶಿವಮೊಗ್ಗ - ೫೭೭೨೦೪
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೯೪೪೯೪೭೫೧೨೩
೧೧.	ಹಸ್ತಾಕ್ಷರ (ಸಹಿ)	: 

ಸಾಹಿತ್ಯ ಪರಿಚಯ

ಇವರು ಉ.ಕ. ಜಿಲ್ಲೆ ಕುಮಟಾ ತಾಲೂಕು ಬೆತ್ತಗೇರಿಯಲ್ಲಿ ಜನಿಸಿದರು. ಹುಟ್ಟೂರಲ್ಲೇ ಎಸ್.ಎಸ್.ಎಲ್.ಸಿ.ವರಗಿನ ಶಿಕ್ಷಣ. ಮಹಾರಾಜ ಕಾಲೇಜಿನಲ್ಲಿ ಪದವಿ. ೧೯೭೧ರಲ್ಲಿ 'ಅಲಂಕಾರ ಶಾಸ್ತ್ರ ವಿದ್ವಾನ್' ಪರೀಕ್ಷೆಯಲ್ಲಿ ರ್‍ಯಾಂಕ್ ಬಂದರು. ೧೯೭೩ರಲ್ಲಿ ಸಂಸ್ಕೃತ ಎಂ.ಎ. ರ್‍ಯಾಂಕ್ ಪಡೆದರು. ಕನ್ನಡ ಎಂ.ಎ ಮಾಡಿದರು. ಕನ್ನಡ ಪಂಡಿತ ಪರೀಕ್ಷೆ, ಹಿಂದಿ ರಾಷ್ಟ್ರ ಭಾಷಾ ಪ್ರವೀಣಗಳಲ್ಲಿಯೂ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರು. 'ಭಾರತೀಯ ಕಾವ್ಯ ಶಾಸ್ತ್ರ ವಿಮರ್ಶೆ' ಪ್ರೌಢ ಪ್ರಬಂಧಕ್ಕೆ ಇಂಟರ್ ನ್ಯಾಷನಲ್ ಯುನಿವರ್ಸಿಟಿ ಆಫ್ ವಾಷಿಂಗ್‌ಟನ್ ಸಂಸ್ಥೆಯಿಂದ ಡಿ.ಲಿಟ್. ಪದವಿ ಪಡೆದರು. ೧೯೭೩ರಿಂದ ಕುಮಟಾದ ಡಾ॥ ಎ.ವಿ ಬಾಳಿಗಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿ ಚಿಕ್ಕಮಗಳೂರು ಶಿವಮೊಗ್ಗಗಳಲ್ಲಿ ಪ್ರವಾಚಕರಾಗಿ, ಪ್ರಧ್ಯಾಪಕರಾಗಿ ವಿಭಾಗದ ಮುಖ್ಯಸ್ಥರಾಗಿ ೩೦ವರ್ಷಗಳು ಸೇವೆ ಸಲ್ಲಿಸಿ ನಿವೃತ್ತರಾದರು. ಪ್ರವೃತ್ತಿಯಿಂದ ಸಾಹಿತಿಗಳಾದ ಇವರಿಗೆ ನಾಟಕ, ಯಕ್ಷಗಾನ, ಅರ್ಥಗಾರಿಕೆಗಳ ಹವ್ಯಾಸವಿದೆ. ಅಂತರ ಕಾಲೇಜು ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದಾರೆ. ಇವರು, ಕವನ, ಚಿಂತನ, ವಿಮರ್ಶೆ, ಆಧ್ಯಾತ್ಮಿಕ ಹಾಗೂ ಕಾವ್ಯಮೀಮಾಂಸೆಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಬರೆದು ವಿಕ್ರಮ, ತರಂಗ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ವಿವಿಧ ಪುಸ್ತಕಗಳಲ್ಲಿ ಮುನ್ನುಡಿ-ಹಿನ್ನುಡಿಗಳನ್ನು ಬರೆದಿದ್ದಾರೆ. ಇವರ ಸಾಹಿತ್ಯದ ವಿವಿಧ ಪ್ರಕಾರಗಳ ೧೫ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗಿವೆ. ಇವರದೇ ಪ್ರಕಾಶನವೂ ಇದೆ. ಇವರ ಉಪನ್ಯಾಸಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ. ವಿಶ್ವವಿದ್ಯಾಲಯಯ ಪ್ರಸಾರಾಂಗ ಮಠ-ಮಂದಿರ, ಶಾಲಾ-ಕಾಲೇಜು, ಸಂಘ-ಸಂಸ್ಥೆಗಳ ವೇದಿಕೆಗಳಲ್ಲಿ ಸಾವಿರಕ್ಕೂ ಹೆಚ್ಚು ಉಪನ್ಯಾಸಗಳನ್ನು ಮಾಡಿದ್ದಾರೆ. ಇವರು ಬನಾರಸ್ ಹಿಂದೂ ವಿಶ್ವವಿದ್ಯಾಲಯ ಕಾಶಿ ಪಿಹೆಚ್.ಡಿ. ಬೋರ್ಡ ಸದಸ್ಯರಾಗಿದ್ದರು. ಚಿತ್ತಗೇರಿಯಲ್ಲಿ ವೇದ ಸಂಸ್ಕೃತ ಪಾಠಶಾಲೆ ಸ್ಥಾಪಿಸಿ ಧರ್ಮಾರ್ಥ ನಡೆಯುವ ವ್ಯವಸ್ಥೆ ಮಾಡಿಸಿದ್ದಾರೆ. 'ವೇದ ವಿಜ್ಞಾನ ಸಪ್ತಾಹ' ಮುಂತಾದುವಲ್ಲಿ ಕಾರ್ಯದರ್ಶಿಯಾಗಿ ದುಡಿದಿದ್ದಾರೆ. 'ವೈದಿಕ ಪರಿಷತ್ತು ಶಿವಮೊಗ್ಗ'ದ ಅಧ್ಯಕ್ಷರಾಗಿದ್ದರು.

ಪ್ರಕಟಿತ ಕೃತಿಗಳು:

ಅಧ್ಯಾತ್ಮಿಕ - ಜ್ಞಾನ ದೀಪ, ಸುಜ್ಞಾನ ದೀಪ.

ಇತರೆ - ಭಾರತೀಯ ಹಬ್ಬಗಳ ವೈಶಿಷ್ಟ್ಯ.

ವಿಮರ್ಶೆ - ಕಾವ್ಯಶಾಸ್ತ್ರ ವಿಮರ್ಶೆ, ಹಿಂದೂ ಹಬ್ಬಗಳ ಅಂತರಂಗ, ಸಂಸ್ಕೃತ ಸಾಹಿತ್ಯವಾಹಿನಿ, ಸಿರಿ ಕೂಡಲಿ.

ಲಭಿಸಿರುವ ಪ್ರಶಸ್ತಿಗಳು:

೧. ಆರ್ಯಭಟ ಅಂತರ ರಾಷ್ಟ್ರೀಯ ಪ್ರಶಸ್ತಿ.
೨. ಆರ್. ಎಸ್. ಜಯಗೋಪಾಲ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿ.
೩. ವಿದ್ಯಾವಾರಿಧಿ ಪ್ರಶಸ್ತಿ.
೪. ಸಾಹಿತ್ಯ ರತ್ನ ರಶಸ್ತಿ.
೫. ವಿದ್ಯಾಶಂಕರ ಪ್ರಶಸ್ತಿ.
೬. ಸುವರ್ಣ ಕರ್ನಾಟಕ ಪತಂಜಲಿ ರತ್ನ ಪ್ರಶಸ್ತಿ ಇತ್ಯಾದಿ.

ವ್ಯಕ್ತಿ ಪರಿಚಯ

ವೀರಭದ್ರಪ್ಪ. ಎಚ್.

೧. ಹೆಸರು : ಹಂಚಿನಮನಿ ವೀರಭದ್ರಪ್ಪ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಕೊಟ್ಟೂರು, ೦೧-೦೭-೧೯೫೬.

೪. ಜಿಲ್ಲೆ - ರಾಜ್ಯ : ಬಳ್ಳಾರಿ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಎಂ.ಫಿಲ್.

೬. ವೃತ್ತಿ : ಕನ್ನಡ ಉಪನ್ಯಾಸಕ.

೭. ಕೌಟುಂಬಿಕ : ಪತ್ನಿ; ಎನ್. ಗುರುಪಾದಮ್ಮ. ಪುತ್ರಿ; ಐಸಿರಿ. ಪುತ್ರ; ಅನಿಕೇತನ.

೮. ಸದ್ಯದ ವಿಳಾಸ : ಆರ್.ಬಿ.ಎ.ಎನ್.ಎಂ.ಎಸ್. ಪ.ಪೂ. ಕಾಲೇಜು, ನಂ. ೧೨/ಎ,ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ ಬೆಂಗಳೂರು-೫೬೦೦೪೨

೯. ಖಾಯಂ ವಿಳಾಸ : ನಂ. ೪೧, ಮೊದಲನೇ ಮಹಡಿ, ೧ನೇ ಸಿ ಕ್ರಾಸ್, ೫ನೇ ತಿರುವು, ಎ.ಜಿ.ಜಿ. ಬಡಾವಣೆ. ೨ನೇ ಹಂತ, ಮಹಾಲಕ್ಷ್ಮೀಪುರ ಬೆಂಗಳೂರು-೫೬೦೦೮೬

೧೦. ದೂರವಾಣಿ ಸಂಖ್ಯೆ : ೯೪೪೮೩೯೩೨೦೧, ೯೪೮೦೦೩೮೭೩೮.

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲೂಕು ಕೊಟ್ಟೂರಿನಲ್ಲಿ ಜನಿಸಿದರು. ರೈತ ಕುಟುಂಬದಿಂದ ಬಂದವರು. ಪ್ರಾಥಮಿಕ ಶಿಕ್ಷಣ ಹುಟ್ಟೂರಿನಲ್ಲೇ. ಪ್ರೌಢ ಹಾಗೂ ಕಾಲೇಜು ಶಿಕ್ಷಣ ಚಳ್ಳಕೆರೆಯಲ್ಲಿ. ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರರು. ಜಡಭರತರ ಎರಡು ನಾಟಕಗಳ-ಅಧ್ಯಯನಕ್ಕಾಗಿ ಎಂ.ಫಿಲ್. ಪದವಿ ಪಡೆದಿದ್ದಾರೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ. ಬಾಲ್ಯದಿಂದಲೇ ಸಾಹಿತ್ಯಾಸಕ್ತರಾದ ಇವರ ಮೇಲೆ ಉತ್ತಮ ಹಾಡುಗಾರರಾದ ತಂದೆ ಹಾಗೂ ಜನಪದ ಕಥೆಗಾರ್ತಿಯಾದ ತಾಯಿಯವರ ಪ್ರಭಾವ ಬೀರಿದೆ. ಬಿ.ಪಿ. ವೀರೇಂದ್ರ ಕುಮಾರ ಹಾಗೂ ಬಿ. ರಾಜಶೇಖರಪ್ಪ ಇವರುಗಳ ಸಾಹಿತ್ಯ ಬೋಧನೆ ಇವರ ಸಾಹಿತ್ಯ ರಚನೆಗೆ ಹೆಚ್ಚಿನ ಉತ್ಸಾಹವನ್ನಿತ್ತಿದೆ. ಇವರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಚಾರಣಗಳಲ್ಲಿ ಭಾಗವಹಿಸಿ ಶಿಲಾರೋಹಣ, ಪರ್ವತಾರೋಹಣ, ವಾಯು ಸಾಹಸ, ಹಿಮ ಸಾಹಸ ಮುಂತಾದ ಸಾಹಸ ಕ್ರೀಡೆಗಳಲ್ಲಿ ತರಬೇತಿ ಪಡೆದಿದ್ದಾರೆ. ವಿದ್ಯಾರ್ಥಿದೆಸೆಯಿಂದಲೇ ಸಾಹಿತ್ಯ ರಚನೆಗೆ ತೊಡಗಿದ ಇವರ ಬರೆಹಗಳು ನಾಡಿನ ಪತ್ರಿಕೆಗಳಾದ ತರಂಗ, ಸುಧಾ, ಪ್ರಜಾವಾಣಿ, ಮಾರ್ಚ ಆಫ್ ಕರ್ನಾಟಕ, ಜನಪದ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು ವಿಮರ್ಶಾ ಲೇಖನ, ಸಾಹಸ ಚಟುವಟಿಕೆಯ ಅನುಭವಗಳು ಸಾಹಿತ್ಯ ಸಂವಾದ ಚರ್ಚೆಗಳು ಇತ್ಯಾದಿಗಳ ಬಗ್ಗೆ ಬರೆಯುತ್ತಾರೆ. ಇವರಿಗೆ ಸಾಕ್ಷ್ಯಚಿತ್ರಗಳ ನಿರ್ಮಾಣದಲ್ಲಿ ಅನುಭವವಿದೆ. ನಾಡಿನ ಅನೇಕ ಸಾಹಿತ್ಯಕ, ಸಾಂಸ್ಕೃತಿಕ ವೇದಿಕೆಗಳಲ್ಲಿ, ವಿವಿಧ ಅಕಾಡೆಮಿಗಳಲ್ಲಿ, ಹಂಪಿ ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ ನಡೆಸಿದ ವಿಚಾರ ಸಂಕೀರಣಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಕಸ್ತೂರಿ ಚಾನೆಲ್, ಝೀ ಚಾನೆಲ್, ದೂರದರ್ಶನ ಚಂದನ ವಾಹಿನಿಗಳ ಚರ್ಚೆ, ಸಂವಾದ, ನಿರೂಪಣಾ ಕಾರ್ಯಗಳಲ್ಲಿ ಭಾಗವಹಿಸಿದ್ದಾರೆ. ೧೯೮೪ರಲ್ಲಿ ಚಳ್ಳಕೆರೆ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿ ಜೀವನ ಆರಂಭ. ನಂತರ ಪದವಿ ಪೂರ್ವ ಕಾಲೇಜಿನಲ್ಲಿ ಖಾಯಂ ವೃತ್ತಿ. ೨೫ ವರ್ಷಗಳ ಸೇವಾನುಭವ. ಪ್ರಸ್ತುತ ಬೆಂಗಳೂರಿನ ಆರ್.ಬಿ.ಎ.ಎನ್.ಎಮ್.ಎಸ್. ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಇವರ ರಂಗಭೂಮಿಯ ಚಟುವಟಿಕೆಗಳಿಗೆ ನೀ.ನಾ.ಸಂ. ಪ್ರೇರಣೆ. ಅನೇಕ ಅಭಿನಂದನಾ ಗ್ರಂಥಗಳಿಗೆ ಲೇಖನ ಬರೆದಿದ್ದಾರೆ. ಇವರ ರಂಗಭೂಮಿ ಸಾಹಿತ್ಯ ಕಥನ ರಂಗಭೂಮಿ ಸಾಹಿತ್ಯ ಕುರಿತ ವಿವಿಧ ಲೇಖನ ಸಂಕಲನವನ್ನೂ ಬೆಂಗಳೂರಿನ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಕಟಿಸಿದೆ.

ಪ್ರಕಟಿತ ಕೃತಿಗಳು:

ರಂಗಭೂಮಿ – ರಂಗಭೂಮಿ ಹಾಗೂ ಸಾಹಿತ್ಯ ಕಥನ.

ವ್ಯಕ್ತಿ ಚಿತ್ರಣ – ಹಿಂದಣ ಹೆಜ್ಜೆಯನರಿತಲ್ಲದೆ.

ಕ್ರೀಡೆ – ಚಾರಣ ಏನಿದರ ಹೂರಣ.

ವ್ಯಕ್ತಿ ಪರಿಚಯ

ವೆಂಕಟಗಿರಿ ಕಡೇಕಾರ್

೧.	ಹೆಸರು	:	ವೆಂಕಟಗಿರಿ ಕಡೇಕಾರ್
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಉಡುಪಿ, ೨೨-೧೧-೧೯೪೫.
೪.	ಜಿಲ್ಲೆ - ರಾಜ್ಯ	:	ಉಡುಪಿ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ.
೬.	ವೃತ್ತಿ	:	ಬ್ಯಾಂಕ ಮ್ಯಾನೇಜರ್ ನಿವೃತ್ತ
೭.	ಕೌಟುಂಬಿಕ	:	ಪತ್ನಿ; ಶ್ರೀಮತಿ ಉಷಾ. ಪುತ್ರಿ; ಶ್ರೀಮತಿ ಮನೋಹರಿ ರಾಜೇಶ್, ಪುತ್ರರು; ಭರತ್ ವೆಂಕಟಗಿರಿ, ಶರತ್ ವೆಂಕಟಗಿರಿ
೮.	ಸದ್ಯದ ವಿಳಾಸ	:	ನಂ ೪-೧೬೬, ಶ್ರೀಮಾತ, ಕಪ್ಪೆಟ್ಟು, ಅಂಚೆ ಅಂಬಲಪಡಿ, ಉಡುಪಿ ೫೭೬೧೦೩
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೨೦ -೨೫೨೭೫೮೫, ೯೯೦೦೪೦೭೨೯೫
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉಡುಪಿಯಲ್ಲಿ ಜನಿಸಿದರು. ಶ್ರೀ ಮಹಾ ಗಣಪತಿ ಶಾಲೆ ಕಡೇಕಾರ್ ಇಲ್ಲಿ ಪ್ರಾಥಮಿಕ ಶಿಕ್ಷಣ, ಉಡುಪಿಯಲ್ಲಿ ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣ, ಪಿ.ಯು.ಸಿ.ಯೂ ಅಲ್ಲೇ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ ಸ್ನಾತಕೋತ್ತರ ಅಪೂರ್ಣ. ಕರ್ನಾಟಕ ಬ್ಯಾಂಕಿನ ಉದ್ಯೋಗಿಯಾಗಿ ವೃತ್ತಿ ಜೀವನ ಆರಂಭ. ಹಲವಾರು ಕಡೆ ವರ್ಗಾವಣೆ ಪ್ರಬಂಧಕರಾಗಿ ನಿವೃತ್ತಿ. ಅಂಬಲಪಾಡಿಯಲ್ಲಿ ನೆಲಸಿ ವಿಶ್ರಾಂತ ಜೀವನ ಸಾಗಿಸುತ್ತಿದ್ದಾರೆ. ಇವರು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಮಾಸ್ತಿ, ಕೆ.ವಿ ಅಯ್ಯರ್ ಮುಂತಾದವರ ಪ್ರಭಾವಕ್ಕೊಳಗಾಗಿ ಸಾಹಿತ್ಯದಲ್ಲಿ ಆಸಕ್ತಿ ಬೆಳೆಯಿತು. ಓದುವ ಹುಚ್ಚು ಹಿಡಿಯಿತು. ಶಾಲಾ ವಾಚನಾಲಯಕ್ಕೂ ಹೋಗಿ ಓದುತ್ತಿದ್ದರು. ಹೆಚ್ಚು ಓದಿದಂತೆಲ್ಲ ಬರೆಯುವುದರಲ್ಲಿ ಅಭಿರುಚಿವುಂಟಾಯಿತು. ತರಗತಿಯಲ್ಲಿ ಕುಳಿತೇ ಕವಿತೆಗಳನ್ನು ಬರೆಯ ತೊಡಗಿದರು. 'ಕಾಗೆ ಹೇಳಿತು ನೀತಿ ಪಾಠ' ಪ್ರಥಮ ಬರೆಹ. ಶಾಲಾ ಹಸ್ತಪ್ರತಿಯಲ್ಲೂ ಬರೆಯ ತೊಡಗಿದರು. ಇವರ ಕಥೆ, ಕವಿತೆ ಪ್ರಸಿದ್ಧ ಪತ್ರಿಕೆಗಳಲ್ಲಿಯೂ ಪ್ರಕಟಗೊಂಡವು. ದಿ. ಶ್ರೀನಿವಾಸ ಉಡುಪ ಹಾಗೂ ಟಿ. ಮಹಬಲೇಶ್ವರ ಭಟ್ಟರ ಉತ್ತೇಜನ ಇವರೊಬ್ಬ ಲೇಖಕರಾಗಲು ಕಾರಣವಾಯಿತು. ೧೯೬೮ರಲ್ಲಿ ಇವರ ಪ್ರಥಮ ಕಾದಂಬರಿ 'ಸ್ವಭಾವ' ಪ್ರಕಟವಾಯಿತು. ಮಾರನೇ ವರ್ಷ 'ಎಸಳುಗಳು' ಕವನ ಸಂಕಲನ ಹಾಗೂ 'ಮೇರಿ' ಕಥಾ ಸಂಕಲನ ಪ್ರಕಟವಾಯಿತು. ಇವರು ಕಥೆ, ಕವನ ಹಾಗೂ ಕಾದಂಬರಿಗಳ ರಚನೆಯನ್ನು ಮುಂದುವರೆಸಿದರು. ೨ ಕಾದಂಬರಿಗಳು, ೨ ಕವನ ಸಂಗ್ರಹ, ೧ ಕಥಾ ಸಂಕಲನ, ೧ ಮಿನಿ ಕಾದಂಬರಿಯನ್ನು ಪ್ರಕಟಿಸಿರುವುದಲ್ಲದೆ ಒಂದು ಪ್ರಣಯ ಸುನೀತಿಗಳು ಹಾಗೂ ಒಂದು ಖಂಡ ಕಾವ್ಯ ಪ್ರಕಟವಾಗುವುದರಲ್ಲಿದೆ. ಇವರು ನಿವೃತ್ತಿಯ ನಂತರ ಹತ್ತು ವರ್ಷಗಳು ನಿಷ್ಕ್ರಿಯರಾಗಿದ್ದು, ಇದೀಗ ಮತ್ತೆ ಪೂರ್ಣಾವಧಿಯ ಕಾಲವನ್ನು ಸಾಹಿತ್ಯ ರಚನೆಗಾಗಿಯೇ ವಿನಿಯೋಗಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಎಸಳುಗಳು.
ನವ್ಯಕಾವ್ಯ – ತಾಳ ತಂಬೂರಿ ಮದ್ದಳೆ.
ಕಾದಂಬರಿ – ಸ್ವಭಾವ, ಅತೃಪ್ತಿ, ಕೃಷ್ಣವೇಣಿ.
ಕಥಾ ಸಂ. – ಮೇರಿ

ವ್ಯಕ್ತಿ ಪರಿಚಯ

ವೆಂಕಟ್ರಮಣ ಭಟ್. ಎ.

೧. ಹೆಸರು	:	ಎ ವೆಂಕಟ್ರಮಣ ಭಟ್
೨. ಕಾವ್ಯನಾಮ	:	ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ (ಕೊವೆಂ)
೩. ಹುಟ್ಟಿದ ಸ್ಥಳ ದಿನಾಂಕ	:	ಕೊಕ್ಕಡ, ೧೦-೦೩-೧೯೫೬.
೪. ಜಿಲ್ಲೆ - ರಾಜ್ಯ	:	ದಕ್ಷಿಣ ಕನ್ನಡ, ಕರ್ನಾಟಕ.
೫. ವಿದ್ಯಾಭ್ಯಾಸ	:	ಎಂ.ಎ. ಸಂಸ್ಕೃತ, ಎಂ.ಎ. ಕನ್ನಡ, ರಾಜ ಭಾಷಾ ವಿದ್ವಾನ್, ಬಿ.ಎಡ್.
೬. ವೃತ್ತಿ	:	ಸಂಸ್ಕೃತ ಅಧ್ಯಾಪಕ.
೭. ಕೌಟುಂಬಿಕ	:	ಪತ್ನಿ; ಸರ್ವಮಂಗಳಾ ವಿ.ಭಟ್. ಪುತ್ರ; ವಿನಯ ಕೃಷ್ಣ.
೮. ಸದ್ಯದ ವಿಳಾಸ	:	೧೭, 'ಪ್ರಣವ', ಕಾವೇರಿನಗರ, ೨ನೇ ಹಂತ, ಮಂಡ್ಯ-೫೭೧೪೦೧
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೯೯೭೨೪೪೪೮೧೮೩, ೯೬೩೨೪೬೫೧೫೯
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ದಕ್ಷಿಣ ಕನ್ನಡ ಜಿಲ್ಲೆ ಕೊಕ್ಕಡದಲ್ಲಿ ಜನಿಸಿದರು. ಎಂ.ಎ. ಕನ್ನಡ ಮತ್ತು ಸಂಸ್ಕೃತ, ರಾಜ ಭಾಷಾ ವಿದ್ವಾನ್ ಬಿ.ಎಡ್. ಮಾಡಿ ಸಂಸ್ಕೃತ ಅಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಶಾಲಾದಿನಗಳಿಂದಲೂ ಸಾಹಿತ್ಯಾಸಕ್ತರು. ಚಿಕ್ಕಂದಿನಿಂದಲೇ ಪತ್ರಿಕೆಗಳಿಗೆ ಬರೆಯುವ ಅಭ್ಯಾಸ ಬೆಳೆಸಿಕೊಂಡರು. ವಾಚಕರ ವಿಭಾಗದಲ್ಲಿ ಪತ್ರಗಳು ಪ್ರಕಟವಾಗುತ್ತಿರುತ್ತವೆ. ಉದಯವಾಣಿ, ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಮೈಸೂರು ಮಿತ್ರ, ಪ್ರಜಾನುಡಿ ಮುಂತಾದ ಪತ್ರಿಕೆಗಳಲ್ಲಿ ಇವರ ಪ್ರಚಲಿತ ಲೇಖನಗಳು, ಸುಧಾ, ತರಂಗ, ಮಯೂರ, ತುಷಾರ, ನೂತನ, ಕೊಳಲು ಮುಂತಾದ ಪತ್ರಿಕೆಗಳಲ್ಲಿ ಕಿರು ಲೇಖನ, ವೈಚಾರಿಕ ಲೇಖನಗಳು ಪ್ರಕಟವಾಗುತ್ತಿರುತ್ತವೆ. ವಿಶ್ವದ ಏಕೈಕ ಸಂಸ್ಕೃತ ದಿನ ಪತ್ರಿಕೆ ಸುಧರ್ಮ ಮೈಸೂರಿನಿಂದ ಪ್ರಕಟವಾಗುತ್ತಿದೆ. ಈ ಪತ್ರಿಕೆಯಲ್ಲಿ ಇವರ ಲೇಖನಗಳು ಪ್ರಕಟವಾಗುತ್ತಿರುತ್ತವೆ. ಹಾಗೂ ಸುಧರ್ಮ ಪ್ರಶ್ನಮಂಚ ಅಂಕಣ ಬರೆಹಗಾರರು. ಮತ್ತೊಂದು ಸಂಸ್ಕೃತ 'ಸಂಭಾಷಣಾ ಸಂದೇಶ' ಮಾಸಪತ್ರಿಕೆಯಲ್ಲಿಯೂ ಇವರ ಲೇಖನಗಳು ಪ್ರಕಟವಾಗುತ್ತಿರುತ್ತವೆ. ಗದ್ಯ ಬರೆಹದಲ್ಲಿ ಪ್ರಾವೀಣ್ಯರಾದ ಇವರು ಕವನಗಳನ್ನೂ ರಚಿಸುತ್ತಾರೆ. ಇವರು ಆಧ್ಯಾತ್ಮಿಕ, ವೈಚಾರಿಕ ಹಗೂ ಸಮಕಾಲೀನ ಸಮಸ್ಯೆಗಳನ್ನು ಕುರಿತು ಬರೆಯುತ್ತಿರುತ್ತಾರೆ. ಮಂಡ್ಯದ ವೈಕುಂಠ ವಾರ್ತ ಆಧ್ಯಾತ್ಮಿಕ ಪತ್ರಿಕೆಯ ನಿರ್ವಾಹಕ ಸಂಪಾದಕರಾಗಿ ಆರಂಭದಿಂದಲೂ ಸುಮಾರು ಹನ್ನೊಂದು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಆಕಾಶವಾಣಿ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿ ಬರೆಹಗಳು ಪ್ರಸಾರವಾಗಿವೆ. ಇವರು ರಚಿಸಿರುವ ಚಿಂತನ, ಆಧ್ಯಾತ್ಮಿಕ ಬರೆಹಗಳ ಮೂರು ಕೃತಿಗಳಲ್ಲದೇ ಸಂಸ್ಕೃತದಲ್ಲಿಯೂ ಇವರು 'ಸುಗಂಧ' ಎಂಬ ಕೃತಿಯನ್ನೂ ರಚಿಸಿದ್ದಾರೆ.

ಪ್ರಕಟಿತ ಕೃತಿಗಳು:
ಆಧ್ಯಾತ್ಮಿಕ – ಅಮೃತ.
ಚಿಂತನ ಸಂಕಲನ – ಕಿರಣ, ಬೆಳಕು.

ಲಭಿಸಿರುವ ಪ್ರಶಸ್ತಿಗಳು:

೧. ಸುಧರ್ಮ ಪತ್ರಿಕೆಯ ೩೮ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ದೇವವಾಣಿ ಧುರೀಣ ಪ್ರಶಸ್ತಿ ನೀಡಿದೆ.

೨. ರಾಷ್ಟ್ರೋತ್ಥಾನ ಬಳಗದಿಂದ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ.

೩. ಪರಿಸರ ಪ್ರಶಸ್ತಿ.

ವ್ಯಕ್ತಿ ಪರಿಚಯ

ವೇದಗರ್ಭ ಶೇಷಗಿರಿರಾವ್. ಜಿ.

೧.	ಹೆಸರು	:	ವೇದಗರ್ಭ ಜಿ. ಶೇಷಗಿರಿರಾವ್
೨.	ಕಾವ್ಯನಾಮ	:	ವೇದಗರ್ಭ.
೩.	ಹುಟ್ಟಿದ ಸ್ಥಳ ದಿನಾಂಕ	:	ಧಾರವಾಡ. ೫-೧-೧೯೪೬.
೪.	ಜಿಲ್ಲೆ - ರಾಜ್ಯ	:	ಧಾರವಾಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎಸ್.ಸಿ. (ಅಗ್ರಿ), ಎಂ.ಎ. ಸಂಸ್ಕೃತ (ಪಿ.ಹೆಚ್.ಡಿ).
೬.	ವೃತ್ತಿ	:	ನಿವೃತ್ತ ಕೃಷಿ ಅಧಿಕಾರಿ.
೭.	ಕೌಟುಂಬಿಕ	:	ಇಬ್ಬರು ಪುತ್ರರು. ಒಬ್ಬ ಪುತ್ರಿ.
೮.	ಸದ್ಯದ ವಿಳಾಸ	:	ವೇದಗರ್ಭ, ೭೬, ೨ ಎ ಕ್ರಾಸ್, ೩ನೇ ಮುಖ್ಯರಸ್ತೆ. ನಾಗೇಂದ್ರ ಬ್ಲಾಕ್, ಬಿ.ಎಸ್.ಕೆ. ೩ನೇ ಹಂತ. ಬೆಂಗಳೂರು-೫೬೦೦೦೫೦
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦-೨೬೭೨೯೮೨೭
೧೧.	ಹಸ್ತಾಕ್ಷರ (ಸಹಿ)		



ಸಾಹಿತ್ಯ ಪರಿಚಯ

ಇವರು ಜನಿಸಿದ್ದು ಧಾರವಾಡದಲ್ಲಿ. ಇವರು ಶ್ರೀಮತಿ ಮತ್ತು ಶ್ರೀ ಜಿ.ಗುಂಡುರಾವ್ ದಂಪತಿಗಳ ಪುತ್ರ. ಮಾಧ್ವ ಬ್ರಾಹ್ಮಣ ಸುಂಸ್ಕೃತ ಕುಟುಂಬದಿಂದ ಬಂದವರು. ತಂದೆ ಶಾಲಾ ಶಿಕ್ಷಕರು. ಇವರ ಪ್ರಾಥಮಿಕ ಶಿಕ್ಷಣ ಕಂಪ್ಲಿಯಲ್ಲಾಯಿತು. ಮಾಧ್ಯಮಿಕ ಹಾಗೂ ಪಿ.ಯು. ವರಗೆ ಹರಪನಹಳ್ಳಿಯಲ್ಲಾಯಿತು. ನಂತರ ಧಾರವಾಡ ಕೃಷಿ ವಿಶ್ವವಿದ್ಯಾಲಯಯುಲ್ಲಿ ಬಿ.ಎಸ್ಸಿ. ಕೃಷಿ ಪದವೀಧರರಾದರು. ೧೯೭೧ರಲ್ಲಿ ಕೃಷಿ ಇಲಾಖೆಯಲ್ಲಿ ಕೃಷಿ ಅಧಿಕಾರಿಯಾಗಿ ವೃತ್ತಿ ಜೀವನ ಆರಂಭ. ೨೦೦೩ರಲ್ಲಿ ನಿವೃತ್ತರಾಗಿ ಇದೀಗ ಬೆಂಗಳೂರಿನಲ್ಲಿಯೇ ನೆಲಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಸಾಹಿತ್ಯ ಪ್ರವೃತ್ತಿಯ ಇವರು ಶಾಲಾ ಹಾಗೂ ಕಾಲೇಜು ದಿನಗಳಲ್ಲಿಯೇ ಸಾಹಿತ್ಯದಿಂದ ಆಕರ್ಷಿತರಾಗಿ ಕನ್ನಡ ವಾಕ್ ಸ್ಪರ್ಧೆ, ಕುಮಾರ ಭಾರತ ವಾಚನ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಳಿಸುತ್ತಿದ್ದರು. ಬಾಹ್ಯ ವಿದ್ಯಾರ್ಥಿಯಾಗಿ ೧೯೭೧ರಲ್ಲಿ ಸಂಸ್ಕೃತದಲ್ಲಿ ಪದವಿ ಪಡೆದರು. ಮೈಸೂರು ಮುಕ್ತ ವಿಶ್ವವಿದ್ಯಾಲಯದಿಂದ ಸಂಸ್ಕೃತ ಎಂ.ಎ. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ದ್ವೈತ ವೇದಾಂತದಲ್ಲಿ ಆನಂತ್ಯ ನಿರೂಪಣೆ ಎಂಬ ವಿಷಯದಲ್ಲಿ ಸಂಶೋಧನಾತ್ಮಕ ಪ್ರಬಂಧ ರಚಿಸಿ ಪಿ.ಹೆಚ್.ಡಿ ಪದವಿ ಪಡೆಯಲು ಅಧ್ಯಯನ ನಡೆಸಿದ್ದಾರೆ. ಕನ್ನಡದಲ್ಲಿ ಪಾಠ-ಪ್ರವಚನ ಮಾಡುವುದು ಹವ್ಯಾಸ. ಸಂಘ ಸಂಸ್ಥೆ ಹಾಗೂ ಮಠಗಳಲ್ಲಿ ಸಾವಿರಾರು ಪ್ರವಚನ ಮಾಡಿದ್ದಾರೆ. ಇವರು ಪ್ರಕಟಿಸಿರುವ ೧೪ ಕೃತಿಗಳಲ್ಲಿ ಧಾರ್ಮಿಕವೂ ಸೇರಿವೆ. ಇವು ವೈದಿಕವಾಙ್ಮಯದಿಂದ ದಾಸ ಸಾಹಿತ್ಯದವರಗೆ ವಿವಿಧ ಪ್ರಕಾರಕ್ಕೆ ಸೇರಿದ ಸಂಶೋಧನಾತ್ಮಕ ಕೃತಿಗಳು. ಆಧುನಿಕ ವಿಜ್ಞಾನಿಗಳ ಅಭಿಪ್ರಾಯ ಮೇಳೈಸಿದೆ. ಇವರು 'ಹರಿದಾಸ ವಾಹಿನಿ' ಹಾಗೂ 'ಮುಖ್ಯ ಪ್ರಾಣ' ಮಾಸಪತ್ರಿಕೆಗಳಲ್ಲಿ ಹರಿದಾಸ ಸಾಹಿತ್ಯ ಮಹಾಭಾರತ ಉಪಾಖ್ಯಾನಗಳ ಬಗ್ಗೆ ಧಾರವಾಹಿಯಾಗಿ ಲೇಖನಗಳನ್ನು ಬರೆಯುತ್ತಿದ್ದಾರೆ. ಶ್ರೀಮತಿ ನಾಗರತ್ನ ಹ. ಗೋಪಾಲದಾಸರು, ಎಂ.ಟಿ. ಪ್ರಹ್ಲಾದ, ಸಾ.ಶಿ. ಮರುಳಯ್ಯ ಇವರ ಮೇಲೆ ಪ್ರಭಾವ ಬೀರಿದ್ದಾರೆ. ಇವರು ಮಹಾಭಾರತ ಆದಿ ಪರ್ವದಲ್ಲಿ ಬರುವ ಉಪಾಖ್ಯಾನಗಳನ್ನೆಲ್ಲ ಸಂಗ್ರಹಿಸಿ ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಕರ್ನಾಟಕರಾಜ್ಯ ಸರ್ಕಾರ ಪ್ರಕಟಿಸಿರುವ ಸಾಹಿತ್ಯದ ಮುನ್ನುಡಿ – ಕನಕದಾಸರು ಗ್ರಂಥ ವಿಮರ್ಶೆಯ ರೂಪದಲ್ಲಿ ಪ್ರಕಟಿಸಿದ್ದಾರೆ. ಇವರಿಗೆ ಹರಿದಾಸ ಸಾಹಿತ್ಯದಬಗ್ಗೆ ಹೆಚ್ಚಿನ ಒಲವು. ಹರಿದಾಸ ಸಾಹಿತ್ಯದ ಮೌಲ್ಯಮಾಪನದಲ್ಲಿ ತೊಡಗಿದ್ದಾರೆ.

ಪ್ರಕಟಿತ ಕೃತಿಗಳು:

ಮಹಭಾರತ – ಮಹಭಾರತ ಉಪಾಖ್ಯಾನಗಳು. **ದಾಸ ಸಾಹಿತ್ಯ** – ಕನಕದಾಸರು. ಹರಿದಾಸ ಸಾಹಿತ್ಯದಲ್ಲಿ ತೀರ್ಥ ಕ್ಷೇತ್ರಗಳು. ಹರಿಕಥಾಮೃತಸಾರ – ಸಂಗ್ರಹ. ಹರಿನಾಮಾವಳಿ.
ಭಾಗವತ – ಭಾಗವತ ಶ್ಲೋಕ ಮಂಜರಿ, ಭಾಗವತ ಸಾರೋದ್ಧಾರ. **ಭಕ್ತಿ** – ಗರುಡ ಶೇಷ – ಶಿವ ಸ್ತೋತ್ರ ಮಂಜರಿ, ವಿಘ್ನೇಶ್ವರ ಸ್ತೋತ್ರಮಂಜರಿ, ತುಳಸಿ ಸ್ತೋತ್ರ ಮಂಜರಿ.
ಇತರೆ – ಸ್ವರ್ಣಗೌರಿ – ಮಂಗಳಗೌರಿ ವ್ರತಗಳು, ಸಾಧಕರ ಪ್ರಥಮ ಸೋಪಾನ.

ಲಭಿಸಿರುವ ಪ್ರಶಸ್ತಿಗಳು:

೧. ಪೇಜಾವರ ಮಠ ಶ್ರೀಪಾದಂಗಳವರಿಂದ – ವೇದಗರ್ಭ ಪ್ರಶಸ್ತಿ.
೨. ಉತ್ತರಾದಿ ಮಠ ಶ್ರೀಗಳವರಿಂದ ಸುಧಾ ಪ್ರಶಸ್ತಿ.

ವ್ಯಕ್ತಿ ಪರಿಚಯ

ಪ್ರೊ. ಶಕುಂತಲ ಚೆನ್ನಪ್ಪ ಸಿಂಧೂರ

೧.	ಹೆಸರು	:	ಪ್ರೊ. ಶಕುಂತಲ ಚೆನ್ನಪ್ಪ ಸಿಂಧೂರ
೨.	ಕಾವ್ಯನಾಮ	:	ಕಾಲಕಾಲೇಶ್ವರಾ.
೩.	ಹುಟ್ಟಿದ ಸ್ಥಳ ದಿನಾಂಕ	:	ಕೋಟುಮಚಿಗಿ, ೨೮-೦೬-೧೯೬೦
೪.	ಜಿಲ್ಲೆ – ರಾಜ್ಯ	:	ಗದಗ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಎಂ.ಫಿಲ್ (ಪಿ.ಹೆಚ್.ಡಿ).
೬.	ವೃತ್ತಿ	:	ಕನ್ನಡ ಪ್ರಾಧ್ಯಾಪಕರು.
೭.	ಕೌಟುಂಬಿಕ	:	ಪತಿ; ಪ್ರೊ. ಶಿವಪುತ್ರಪ್ಪ ವೀರಪ್ಪ ಕುಂದಗೋಳ
೮.	ಸದ್ಯದ ವಿಳಾಸ	:	'ಶಿವಗಂಗಾ ನಿಲಯ' ಕರಿಯಮ್ಮ ಬಡಾವಣೆ, ಪಿ ಅಂಡ್ ಟಿ ಕ್ವಾಟ್ರಸ್ ಹಿಂದೆ, ರಾಜೀವಗಾಂಧಿನಗರ, ಗದಗ-೫೮೨೧೦೧.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೨೩೪೮೯೨, ೯೯೮೦೭೧೧೪೩೫.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಗದಗ ಜಿಲ್ಲೆ ಕೋಟುಮಚಗಿಯಲ್ಲಿ ಜನಿಸಿದರು. ಇವರು ಎಂ.ಎ. ಪದವೀಧರರಾಗಿ ಎಂ.ಫಿಲ್. ಮಾಡಿ ಜೇ.ಟಿ. ಪದವಿ ಕಾಲೇಜ್ ಗದಗದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳು. ಶಾಲಾದಿನಗಳಿಂದಲೇ ಕವನ, ಲೇಖನ ರಚಿಸ ತೊಡಗಿದರು. ಇವರು ೧೯೯೪ಳ ರಿಂದ ರಂಗಭೂಮಿ, ವಚನ ಸಾಹಿತ್ಯ, ಯೋಗ, ವೀರಶೈವ ಮಠಗಳು, ಜನಪದ ಸಾಹಿತ್ಯ, ಚುಟುಕ, ಮಹಿಳೆ, ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಇತ್ಯಾದಿ ವಿಷಯಗಳ ಕುರಿತು ಸಾಧನೆ, ಅನುಭಾವಪಥ, ದಿಕ್ಸೂಚಿ ಇತ್ಯಾದಿ ನಿಯತಕಾಲಿಕೆಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ, ಅಭಿನಂದನ ಗ್ರಂಥಗಳಲ್ಲಿ, ದೀಪಾವಳಿ ವಿಶೇಷಾಂಕಗಳಲ್ಲಿ ಹಾಗೂ ಮೈಸೂರಿನ ಪ್ರಾಚ್ಯ ಇಲಾಖೆಯ ಸಂಚಿಕೆಗಳಿಗೆ ಲೇಖನ ಬರೆದಿದ್ದಾರೆ, ಮತ್ತು ದಿನಪತ್ರಿಕೆಗಳಾದ ವಿಜಯ ಕರ್ನಾಟಕ, ನವೋದಯ, ನಾಗರಿಕ, ಪ್ರಜಾವಾಣಿ ಸಂಯುಕ್ತ ಕರ್ನಾಟಕಗಳಲ್ಲೂ ಇವರ ಹಲವಾರು ಲೇಖನಗಳು ಪ್ರಕಟವಾಗಿವೆ. ದೂರದರ್ಶನ ಚಂದನದ ಥಟ್ ಅಂತ ಹೇಳಿ, ಬೆಳಗು, ನಾಟಕದ ಮಾರ್ಗದರ್ಶಕರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇವರು ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಯಾಗಿ, ಕೆ.ಎಲ್.ಇ ಮಹಿಳಾ ಕಾಲೇಜು ವಾರ್ಷಿಕ ಸಂಚಿಕೆಯ ಪ್ರಧಾನ ಸಂಪಾದಕರಾಗಿ, ಅದೇ ಕಾಲೇಜಿನ ಸಾಂಸ್ಕೃತಿಕ ಸಂಘ, ಕ್ರೀಡಾ ಸಂಘ ಹಳೇ ವಿದ್ಯಾರ್ಥಿನಿಯ ಸಂಘ, ಯೋಗಶಿಕ್ಷಣ ಮಹಿಳಾ ಕಾಲೇಜು, ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಾಪಕರ ಪರಿಷತ್ತಿನ ಮಹಿಳಾ ಪ್ರತಿನಿಧಿಯಾಗಿ, ಅಖಿಲ ಭಾರತ ಶರಣ ಪರಿಷತ್ತಿನ ಸ್ಮರಣ ಸಂಚಿಕೆ ಸಂಪಾದಕರಾಗಿ, ಇನ್ನರ್ ವೀಲ್ ಕ್ಲಬ್ ಗದಗ ಇತ್ಯಾದಿ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರು ಕುಂದಣಗಾರ ಸ್ಮಾರಕ ಚಿಂತನ ಸಮಿತಿ ಕೌಜಲಗಿ, ಉ.ಕ. ಲೇಖಕಿಯರ ಸಂಘ, ಗದಗ ಜಿಲ್ಲಾ ಸಾಹಿತ್ಯ ಸಮ್ಮೇಳನ ವೀರಶೈವ ಪ್ರಗತಿಶೀಲ ಸಂಘ ಮುಂತಾದ ಇನ್ನೂ ಇಂತಹ ಹತ್ತಾರು ಸಭೆ, ಸಮಾರಂಭ, ಸಮ್ಮೇಳನ, ವಿಚಾರ ಸಂಕೀರಣಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇವರು ಪುನರ್ ನವೀಕರಣ ಶಿಬಿರ, ಓರಿಯಂಟೇಶನ್ ಶಿಬಿರ. ರಾಷ್ಟ್ರಮಟ್ಟದ ಸಮಾವೇಶಗಳಲ್ಲೂ ಭಾಗವಹಿಸಿದ್ದಾರೆ. ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಸಮಾಜ ಸೇವಕಿ. ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ವಿದ್ಯಾವರ್ಧಕ ಸಂಘ ಇತ್ಯಾದಿ ಸಂಘಗಳ ಆಜೀವ ಸದಸ್ಯರು.

ಪ್ರಕಟಿತ ಕೃತಿಗಳು:

ಪಠ್ಯ ಪುಸ್ತಕ – ಬಿ.ಎ. ಜಾನಪದ – ವಿದ್ವಾಂಸ ಬಿ.ಎಸ್. ಗದ್ದಗಿಮಠ. **ಇತರೆ** – ಮುಂಡರಗಿಗ್ರಾಮ ಒಂದು ವಿವೇಚನೆ. **ಬಯಲಾಟ** – ಹಿರಣ್ಯಕಶಿಪು, ಏಕಲವ್ಯ ಉಪಾಖ್ಯಾನ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೦ – ಚಿತ್ರದುರ್ಗ ಬಸವ ಕೇಂದ್ರ ಮುರುಘ ರಾಜೇಂದ್ರ ಮಠ ಶಿಕ್ಷಕ ಪ್ರಶಸ್ತಿ.
೨. ೨೦೦೩ – ಜಗದ್ಗುರು ಮುರುಗೋಡು ಮಠದ ಸಂಸ್ಕೃತಿ ಸೌಗಂಧ ಪ್ರಶಸ್ತಿ.
೩. ೨೦೦೭ – ಚಿತ್ರದುರ್ಗ ಬಸವ ಕೇಂದ್ರ ಮು.ರಾ.ಮಠ ಶಿಕ್ಷಕ ಪ್ರಶಸ್ತಿ.

ವ್ಯಕ್ತಿ ಪರಿಚಯ

ಶರೀಫಾಬಿ

೧.	ಹೆಸರು	:	ಶರೀಫಾಬಿ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಚಿತ್ರದುರ್ಗ, ೦೬–೦೮–೧೯೫೨.
೪.	ಜಿಲ್ಲೆ – ರಾಜ್ಯ	:	ಚಿತ್ರದುರ್ಗ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ., ಬಿ.ಇಡಿ., ಆರ್.ಬಿ.ಪಿ.
೬.	ವೃತ್ತಿ	:	ನಿವೃತ್ತ ಶಿಕ್ಷಕಿ.
೭.	ಕೌಟುಂಬಿಕ	:	ವಿವಾಹಿತೆ, ಸಂತಾನವಿಲ್ಲ.
೮.	ಸದ್ಯದ ವಿಳಾಸ	:	ಶರೀಫಾಬಿ, ನಿವೃತ್ತ ಶಿಕ್ಷಕರು, ಮಕ್ಕಾ ಮಸೀದಿ ಮುಂಭಾಗ, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ–೫೭೭೫೦೧
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೪೪೫೧೧೨೫೧೧
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಚಿತ್ರದುರ್ಗದಲ್ಲಿ ಜನಿಸಿದರು. ಪ್ರಾಥಮಿಕ ಉರ್ದು ಮಾಧ್ಯಮ ಶಿಕ್ಷಣ ಬುರುಜನ ಹಟ್ಟಿ. ಮಾಧ್ಯಮಿಕ ಕೆಳಗೋಟೆ. ಪ್ರೌಢ ಶಿಕ್ಷಣ ಆಂಗ್ಲ ಮಾಧ್ಯಮ ಚಿತ್ರದುರ್ಗ. ಹಿಂದಿ ಕಲಿತರು. ೧೯೮೩ರಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಮದ್ರಾಸ್ ಸಂಸ್ಥೆಯಿಂದ ರಾಷ್ಟ್ರ ಭಾಷಾ ಪ್ರವೀಣ ಎರಡನೇ ಶ್ರೇಣಿಯಲ್ಲಿ ತೇರ್ಗಡೆಯಾದರು. ಕನ್ನಡ ಓದು, ಬರೆಯುವುದನ್ನು ಕಲಿತರು. ಪರೀಕ್ಷೆ ಕಟ್ಟಿ ಉತ್ತೀರ್ಣರಾದರು. ಹೊಲಿಗೆ ಇವರ ಹವ್ಯಾಸ. ಅದರ ಪರೀಕ್ಷೆಯನ್ನೂ ಮಾಡಿದ್ದಾರೆ. ಮಹಾರಾಣಿ ಬಾಲಕಿಯರ ಪದವಿಪೂರ್ವ ಕಾಲೇಜು ಚಿತ್ರದುರ್ಗದಲ್ಲಿ ಶಿಕ್ಷಣ ಪಡೆದರು. ೧೯೮೮ರಲ್ಲಿ ಪದವಿ ಪಡೆದರು. ೧೯೯೪ರಲ್ಲಿ ಬಿ.ಇಡಿ. ತರಬೇತಿ ಪಡೆದರು. ಶಾಲದಿನಗಳಲ್ಲಿಯೇ ಇವರು ಹಗ್ಗದಾಟ, ರಿಂಗ್, ಖೊಖ್ಖೋ, ಥ್ರೋಬಾಲ್, ಶಾಟ್ ಪುಟ್, ಓಟ ಇತ್ಯಾದಿ ಆಟೋಟಗಳಲ್ಲಿ ಭಾಗವಹಿಸುತ್ತಿದ್ದರು. ಇವರಿಗೆ ಚಿತ್ರಕಲೆ, ಸಂಗೀತಗಳಲ್ಲಿಯೂ ಆಸಕ್ತಿ ಇದೆ. ೧೯೮೨ ರಿಂದ ೨೦೦೮ರವರಗೆ ಮಹಾರಾಣಿ ಬಾಲಕಿಯರ ಪ್ರೌಢಶಾಲೆಯಲ್ಲಿ ವೃತ್ತಿ ಶಿಕ್ಷಣದ ಶಿಕ್ಷಕಿಯಾಗಿ, ಪದವಿಪೂರ್ವ ಕಾಲೇಜಿನಲ್ಲಿ ಹಿಂದಿ ಬೋಧಕರಾಗಿ ಸೇವೆ ಸಲ್ಲಿಸಿ ೨೦೦೮ರಲ್ಲಿ ಸ್ವಯಂ ನಿವೃತ್ತಿ ಪಡೆದರು. ಸಾಹಿತ್ಯಾಸಕ್ತರಾದ ಇವರು ೧೯೯೮ರಿಂದ ೨೦೦೫ರವರಗಿನ ಎರಡು ಅವಧಿಯಲ್ಲಿ ಚಿತ್ರದುರ್ಗದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸಕ್ರಿಯವಾಗಿ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಅಭಿರುಚಿ ಸಾಹಿತ್ಯ, ಸಾಂಸ್ಕೃತಿಕ ವೇದಿಕೆ ಚಿತ್ರದುರ್ಗ ಸದಸ್ಯರಾಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಈ ವೇದಿಕೆಯಲ್ಲಿ ಇವರಿಗೆ ಪ್ರಸಿದ್ಧ ಸಾಹಿತಿಗಳ ಪರಿಚಯವಾಗಿದೆ. ಈ ವೇದಿಕೆಯಿಂದಲೇ ಇವರ ಮೂರು ಕೃತಿಗಳು ಬಿಡುಗಡೆಯಾಗಿವೆ. ೨೦೦೯ರಲ್ಲಿ ಚಿತ್ರದುರ್ಗದಲ್ಲಿ ನಡೆದ ೭೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಇವರು ಕಾವ್ಯ ವಾಚನ ಮಾಡಿದ್ದಾರೆ. ಜಿಲ್ಲಾ ಕವನ ಸಂಕಲನದಲ್ಲಿ ಇವರ ಕವನಗಳು ಸೇರಿವೆ. ಬಿ.ಎಲ್. ವೇಣು ಅಭಿನಂದನ ಗ್ರಂಥದಲ್ಲಿ ಇವರ ಲೇಖನವಿದೆ. 'ಪ್ರಜಾಪತಿ', 'ಜಾನಪದ ಕರ್ನಾಟಕ' ಪತ್ರಿಕೆಗಳಲ್ಲಿ ಇವರ ಬರೆಹಗಳು ಪ್ರಕಟವಾಗಿವೆ. ಹಲವು ವಿಶೇಷ ಸಂಚಿಕೆಗಳಲ್ಲಿಯೂ ಇವರ ಬರೆಹಗಳು. ಚಿತ್ರದುರ್ಗದ ಆಕಾಶವಾಣಿಯಲ್ಲಿ ಇವರ ಚಿಂತನ ಪ್ರಸಾರವಾಗಿದೆ. ಚರ್ಚೆಗಳಲ್ಲಿ ಭಾಗವಹಿಸಿದ್ದಾರೆ. 'ಮಂದಾರ'ದಲ್ಲಿ ಇವರನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಇವರು ಕುಪ್ಪಳ್ಳಿಯಲ್ಲಿ ಹಾಗು ಜೋಗಿಕಟ್ಟೆಯಲ್ಲಿ ನಡೆದ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರದೇ ಸ್ವಂತ ಮಲ್ಲಿಕಾ ಪ್ರಕಾಶನವಿದೆ.

ಪ್ರಕಟಿತ ಕೃತಿಗಳು:
ಕವನ ಸಂ.– ಬೆಟ್ಟದ ಸಂಪಿಗೆ. ನಲ್ನುಡಿ. **ಸಂಕಲನ** – ಮುಂಜಾವಿನ ಹನಿಗಳು.
ಲೇ. ನ ಸಂ. – ನೆಲದ ನಂಟು

ಲಭಿಸಿರುವ ಪ್ರಶಸ್ತಿಗಳು:
೧. ಚಿತ್ರದುರ್ಗದ ಆಕಾಶವಾಣಿಯ ಬಹುಮಾನ.

ವ್ಯಕ್ತಿ ಪರಿಚಯ

ಡಾ|| ಶಶಿಕಲಾ ಪಿ ಕೃಷ್ಣಮೂರ್ತಿ

೧. ಹೆಸರು : ಡಾ|| ಶಶಿಕಲಾ ಪಿ ಕೃಷ್ಣಮೂರ್ತಿ

೨. ಕಾವ್ಯನಾಮ : ಕಲಾಕೃಷ್ಣ

೩. ಹುಟ್ಟಿದ ಸ್ಥಳ ದಿನಾಂಕ : ಬೆಂಗಳೂರು, ೨೪-೮-೧೯೬೧

೪. ಜಿಲ್ಲೆ - ರಾಜ್ಯ : ಬೆಂಗಳೂರು, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಬಿ.ಬಿಎಸ್., ಡಿಸಿ.ಪಿ., ಎಂ.ಡಿ. (ಪೆಥಾಲಜಿ)

೬. ವೃತ್ತಿ : ಪ್ರಾಧ್ಯಾಪಕರು.

೭. ಕೌಟುಂಬಿಕ : ಪತಿ; ಡಾ|| ಎಲ್. ಕೃಷ್ಣಮೂರ್ತಿ.
ಪುತ್ರಿಯರು; ಡಾ, ರೇವತಿ ಕೆ., ಡಾ|| ರೋಹಿಣಿ
ಕೆ. ಪುತ್ರ; ರಾಕುಲ್. ಕೆ.

೮. ಸದ್ಯದ ವಿಳಾಸ : ೧೯೨೬/೨೫, ೧೨ನೇ ಕ್ರಾಸ್, ಸಿದ್ಧವೀರಪ್ಪ ಬಡಾವಣೆ, ದಾವಣಗೆರೆ-೫೭೭೦೦೪.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೧೯೨-೨೨೦೭೩೫, ೯೯೭೨೫೦೯೭೮೫.

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಬೆಂಗಳೂರಿನಲ್ಲಿ ಜನಿಸಿದರು. ಇವರು ಶ್ರೀ ಪಟ್ಟಾಭಿರಾಮ ಶಾಸ್ತ್ರಿ ಮತ್ತು ಶ್ರೀಮತಿ ಪಿ. ಜಯಮ್ಮ ದಂಪತಿಗಳ ಪುತ್ರಿ. ಎಂ.ಬಿ.ಬಿ.ಎಸ್., ಎಂ.ಡಿ. ಪೆಥಾಲಾಜಿ, ಡಿ.ಸಿ.ಪಿ. ಮಾಡಿದ್ದಾರೆ. ದಾವಣಗೆರೆಯ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಪ್ರಧ್ಯಾಪಕರು ಮತ್ತು ಪೆಥಾಲಾಜಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳು. ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಕನ್ನಡ ಭಾಷೆಯಲ್ಲಿ ದಾವಣಗೆರೆಯಿಂದ ಪ್ರಕಟವಾಗುವ ನಗರವಾಣಿ ದಿನ ಪತ್ರಿಕೆಯಲ್ಲಿ ಇವರು ಆರೋಗ್ಯವೇ ಭಾಗ್ಯ ವೆಂಬ ಅಂಕಣವನ್ನು ಬರೆಯುತ್ತಿದ್ದಾರೆ. ಇದಲ್ಲದೆ ಅಡುಗೆ ಆರೋಗ್ಯ ಹಾಗೂ ಅಂತರಾಳ ಅಂಕಣಗಳಿಗೂ ಇವರೇ ಲೇಖಕಿ. ಪ್ರಜಾವಾಣಿಯಲ್ಲಿ ಭೂಮಿಕ , ಅರೋಗ್ಯ ಮಾಸ ಪತ್ರಿಕೆ, ಸಂಜೀವಿನಿ, ಸೈಕಾಲಾಜಿ, ಮತ್ತು ವ್ಯಕ್ತಿತ್ವ ವಿಕಸನ, ತರಳಬಾಳು ತ್ರೈಮಾಸಿಕ ಪತ್ರಿಕೆಗಳಲ್ಲೂ ಇವರ ಲೇಖನಗಳು ಪ್ರಕಟವಾಗುತ್ತವೆ. ಇವರ ೨೫೦ಕ್ಕೂ ಹೆಚ್ಚು ಅಂಕಣ ಬರೆಹಗಳು ಪ್ರಕಟವಾಗಿವೆ. ಅನೇಕ ಪತ್ರಿಕೆಗಳಲ್ಲಿ ಇವರ ಆರೋಗ್ಯ ಕುರಿತ ಲೇಖನಗಳು ಪ್ರಕಟವಾಗುತ್ತವೆ. ಇವರು ತೆಲಗು ಹಾಗೂ ಇಂಗ್ಲೀಷ್‌ನಿಂದ ಭಾಷಾಂತರಿಸಿ ಧ್ಯಾನ ಕಸ್ತೂರಿ ಮಾಸ ಪತ್ರಿಕೆಗಾಗಿ ಕಳುಹಿಸುತ್ತಾರೆ. ರಕ್ತದಾನ, ಸೇವೆ, ಪರಿಸರ ರಕ್ಷಣೆ ಹಾಗೂ ಧ್ಯಾನ ಕುರಿತ ಕವಿತೆಗಳನ್ನು ಬರೆದು ಪ್ರಕಟಿಸುತ್ತಾರೆ. ಅನೇಕ ಸ್ಮರಣ ಸಂಚಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. ಕನ್ನಡ ಬಳಗದ ಸ್ಮರಣ ಸಂಚಿಕೆ, ಬಾಪೂಜಿ ವಿದ್ಯಾಸಂಸ್ಥೆಯ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ ಇತ್ಯಾದಿಗಳ ಸಂಪಾದಕರಾಗಿ ಸಂಪಾದಕ ಮಂಡಳಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಆಧ್ಯಾತ್ಮಿಕತೆಯ ಬಗ್ಗೆ ಆಸಕ್ತಿಯಿದ್ದು ಸಾಧಾನಾಶ್ರಮ, ರಾಮಕೃಷ್ಣ ಆಶ್ರಮದ ಭಕ್ತರಲ್ಲೊಬ್ಬರಾಗಿದ್ದಾರೆ. ಮಾತಾ ಯೋಗಾನಂದಮಯಿ ಅವರೊಂದಿಗೆ ಸೇರಿ ಸೇವಾ ಕಾರ್ಯಗಳಲ್ಲಿ ಭಾಗವಹಿಸಿದ್ದಾರೆ. ಶಾಲ ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಹಲವಾರು ಧ್ಯಾನ ಶಿಬಿರಗಳನ್ನು ಏರ್ಪಡಿಸಿದ್ದಾರೆ. ಸಮ್ಮೇಳನಗಳಲ್ಲಿ ಭಾಗವಹಿಸಿ ಉಪನ್ಯಾಸ ಮಾಡಿದ್ದಾರೆ. ಉತ್ತಮ ಸಮಾಜ ಸೇವಕರು. ಬಡ ಹೆಣ್ಣು ಮಕ್ಕಳ ವಿಧ್ಯಾಭ್ಯಾಸಕ್ಕೆ ಧನ ಸಹಾಯ ಮಾಡುತ್ತಾರೆ. ಅನಾಥಾಲಯ ಮಕ್ಕಳಿಗೆ ಸಹಾಯ ಮಾಡುತ್ತಾರೆ. ದಾವಣಗೆರೆ ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾಗಿ, ಮಹಿಳಾ ವಿದ್ಯಾರ್ಥಿ ನಿಲಯದ ನಿಲಯ ಪಾಲಕರಾಗಿ, ರೆಡ್ ಕ್ರಾಸ್ ಸಂಸ್ಥೆಯ ಸದಸ್ಯರಾಗಿ ರೋಟರಿ ಮುಂತಾದ ಸಂಸ್ಥೆಗಳ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಕಟಿತ ಕೃತಿಗಳು:
ವೈದ್ಯಕೀಯ – ಪ್ರಾಣ ಉಳಿಸುವ ಪ್ರಥಮ ಚಿಕಿತ್ಸೆ.
ಅನುವಾದ: ವಿದ್ಯಾರ್ಥಿಗಳು ವಿದ್ಯೆಯಲ್ಲಿ ವಿಜಯ ಸಾಧಿಸಬೇಕೆಂದರೆ

ಲಭಿಸಿರುವ ಪ್ರಶಸ್ತಿಗಳು:
೧. ೨೦೦೮ – ಬೆಸ್ಟ್ ಡಾಕ್ಟರ್ ಪ್ರಶಸ್ತಿ.
೨. ೨೦೦೮ – ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ.

ವ್ಯಕ್ತಿ ಪರಿಚಯ

ಶಾಮಸುಂದರ. ಬಿ.

೧.	ಹೆಸರು	:	ಬಿ ಶಾಮಸುಂದರ
೨.	ಕಾವ್ಯನಾಮ	:	ಬಿ.ಶಾ.
೩.	ಹುಟ್ಟಿದ ಸ್ಥಳ ದಿನಾಂಕ	:	ಮೈಸೂರು. ೧೨.೧೧.೧೯೩೪
೪.	ಜಿಲ್ಲೆ – ರಾಜ್ಯ	:	ಮೈಸೂರು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಡಿ.ಐ.ಟಿ.
೬.	ವೃತ್ತಿ	:	ಮಾನವಿಕ ಸಂಪಾದಕ (ನಿವೃತ್ತ), ಕನ್ನಡ ವಿಶ್ವ ಕೋಶ.
೭.	ಕೌಟುಂಬಿಕ	:	ಪತ್ನಿ; ಇಂದಿರ, ಪುತ್ರರು; ಮಧುಸೂದನ, ಮನೋಹರ.
೮.	ಸದ್ಯದ ವಿಳಾಸ	:	ಮನೆ. ನಂ. ೮೩೩, ೩ ನೇ ತಿರುವು, ಲೋಕ ರಂಜನ ಮಹಲ್ ರಸ್ತೆ. ಇಟ್ಟಿಗೆಗೂಡು. ಮೈಸೂರು–೫೭೦೦೧೦
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೯೭೨೧೧೮೦೮೬, ೯೯೪೫೧೧೧೫೬೯.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಮೈಸೂರಿನಲ್ಲಿ ಹುಟ್ಟಿ ಮೈಸೂರಿನಲ್ಲಿಯೇ ವಿದ್ಯಾಭ್ಯಾಸ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ಎಂ.ಎ. ಪದವೀಧರರು. ಭಾಷಾಂತರ ಡಿಪ್ಲೊಮಾ ಮಾಡಿದ್ದಾರೆ. ಮಾನಸ ಗಂಗೋತ್ರಿಯ ಕುವೆಂಪು ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವಕೋಶ ವಿಭಾಗದಲ್ಲಿ ಮಾನವಿಕ ಸಂಪಾದಕರಾಗಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರ. ೧೦ ಕಥಾ ಸಂಕಲನಗಳು, ೬ ನಾಟಕಗಳು, ೧೦ ಪ್ರಬಂಧ ಸಂಕಲನಗಳು, ೨ ಕಾದಂಬರಿ, ೧ ಕವನ ಸಂಕಲನ, ೨ ಶಿಶು ಸಾಹಿತ್ಯ, ೨ ಜೀವನ ಚರಿತ್ರೆ, ೪ ಸಂಕೀರ್ಣ, ೨ ಸಂಪಾದಿತ ಕೃತಿಗಳನ್ನು ಪ್ರಕಟಿಸಿರುವ ಇವರ ಹಲವು ಕಥೆ, ನಾಟಕಗಳು, ಸಂದರ್ಶನ, ಭಾಷಾಣಗಳು ಬೆಂಗಳೂರು, ಮೈಸೂರು ಆಕಾಶವಾಣಿಗಳಿಂದ ಪ್ರಸಾರವಾಗಿವೆ. ಇವರ ನೂರಾರು ಕಥೆ, ಕವನ, ಲೇಖನಗಳು ನಾಡಿನ ಪತ್ರಿಕೆಗಳಲ್ಲಿ ೧೯೫೭ರಿಂದ ಪ್ರಕಟವಾಗುತ್ತಿವೆ. ಇವರು ವಿವಿಧ ಸಂಘ ಸಂಸ್ಥೆಗಳಿಂದ ನಡೆಸಿದ ಸಾಹಿತ್ಯ ಗೋಷ್ಠಿ, ಸಮ್ಮೇಳನಗಳಲ್ಲಿ ವಿವಿಧ ವಿಷಯಗಳ ಕುರಿತು ಭಾಷಣ ಮಾಡಿದ್ದಾರೆ. ಪ್ರಬಂಧಗಳನ್ನು ಮಂಡಿಸಿದ್ದಾರೆ. ಹಲವು ಸಂಘಗಳ ಅಧ್ಯಕ್ಷರಾಗಿ, ಉದ್ಘಾಟಕರಾಗಿ, ಉಪನ್ಯಾಸಕರಾಗಿ ಭಾಗವಹಿಸಿದ್ದಾರೆ. ಇವರ ಒಂದು ಕಥೆ ಚಲನ ಚಿತ್ರವಾಗಿದೆ. ಇವರು ಹಾಡು ಹಾಗು ಸಾಹಿತ್ಯ ರಚಿಸಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಲೇಖಕರಾಗಿ, ಸಂಪಾದಕರಾಗಿ ಕಾರ್ಯನಿರ್ವಾಹಕ ಸಂಪಾದಕರಾಗಿ, ಮೈಸೂರಿನ ಬರೆಹಗಾರರ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ ಜ್ಞಾನವಾಹಿನಿ ಶಿಕ್ಷಣ ಸಂಸ್ಥೆ ಸ್ಥಾಪನಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ ಹಲವಾರು ಕಥೆಗಳಿಗೆ ಬಹುಮಾನ ಲಭಿಸಿವೆ. ಇವರ ನಾಟಕ ಧಾರವಾಡ ವಿಶ್ವವಿದ್ಯಾಲಯ, ಬಿ.ಎ. ಪಠ್ಯ ಪುಸ್ತಕವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ ಬಿ.ಕಾಂ. ತರಗತಿಗೆ ಮತ್ತೊಂದು ನಾಟಕ ಪಠ್ಯವಾಗಿದೆ. ಇವರು ಹಲಾವಾರು ಕನ್ನಡ ಪರ ಹೋರಾಟ, ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗಾವಹಿಸಿದ್ದಾರೆ. ಉತ್ತಮ ಸಂಘಟಕರು. ಇವರ ಕೆಲವು ಕಥೆಗಳು ಮಲೆಯಾಳಂ, ಹಿಂದಿ ಹಾಗೂ ಇಂಗ್ಲೀಷ್‌ಗೆ ಅನುವಾದವಾಗಿವೆ.

ಪ್ರಕಟಿತ ಕೃತಿಗಳು:

ಕಥಾ ಸಂ – ಆತಿಥ್ಯ, ಬಂದಿ, ಬೆಳಕು ಹರಿಯುವ ಮುನ್ನ.

ನಾಟಕ – ಅಲ್ಲಾವುದ್ದೀನ್ ಖಿಲ್ಜಿ, ಜಾತಿಗೆ ಜೈ, ಕುವರ ಲಕ್ಷ, ಸುಳಿ.

ಪ್ರಬಂಧ – ಮುಖಗಳು, ನಮಗೇಕೆ ಸ್ವಾಮಿ, ಹಸು ಡಾಕ್ಟರ್, ಬೆಳಕಿಂಡಿ.

ಕಾದಂಬರಿ – ದರ್ಶಿ, ಅಂಚೆಯಿಂದ ಬಂದದ್ದು. **ಕವನ ಸಂ** –ಕರಿನಾಗರ ನೆರಳು.

ಶಿಶು ಸಾಹಿತ್ಯ – ಮಕ್ಕಳ ದಿನಚರಿ, **ಸಂಪಾದಿತ** – ಕಥೆಗಳು, ಪ್ರಹ್ಲಾದ. **ಜೀವನ ಚರಿತ್ರೆ** – ಕನ್ನಡ ಪತ್ರಿಕಾ ಲೋಕದ ಧೀಮಂತರು. **ಸಂಕೀರ್ಣ** – ತಾವರೆ ಕೆರೆ, ತ.ರಾ.ಸು.

ಲಭಿಸಿರುವ ಪ್ರಶಸ್ತಿಗಳು:

೧. ಜಾತಿಗೆ ಜೈ –ಕೃತಿಗೆ ಮುಂಬಯಿ ತಲಗೇರಿ ವೆಂಕಟರಾವ್ ಸ್ಮಾರಕ ಬಹುಮಾನ.

೨. ಕ.ಸಾ.ಪ.ನ ಪ್ರಬಂಧ ಸಂಕಲನಕ್ಕೆ ದತ್ತಿ ಬಹುಮಾನ.

ವ್ಯಕ್ತಿ ಪರಿಚಯ

ಶಿವಾನಂದ ಕಳವೆ

೧. ಹೆಸರು	:	ಶಿವಾನಂದ ಕಳವೆ
೨. ಕಾವ್ಯನಾಮ	:	ಇರುವುದಿಲ್ಲ
೩. ಹುಟ್ಟಿದ ಸ್ಥಳ ದಿನಾಂಕ	:	ಕಳವೆ, ೫-೫-೧೯೭೨
೪. ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫. ವಿದ್ಯಾಭ್ಯಾಸ	:	ಬಿ.ಕಾಂ., ಪತ್ರಿಕೋದ್ಯಮ ಡಿಪ್ಲೊಮಾ.
೬. ವೃತ್ತಿ	:	ಕೃಷಿ
೭. ಕೌಟುಂಬಿಕ	:	ತಿಳಿಸಿಲ್ಲ
೮. ಸದ್ಯದ ವಿಳಾಸ	:	ಕಳವೆ ಅಂಚೆ, ಶಿರಸಿ ತಾ. (ಉ.ಕ)-೫೮೧೪೦೧
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೯೪೪೮೦೨೩೭೧೫
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕಿನ ಕಳವೆಯಲ್ಲಿ ಜನಿಸಿದರು. ಬಿ.ಕಾಂ. ಪದವೀಧರರು. ಮೈಸೂರಿನಲ್ಲಿ ಪತ್ರಿಕೋದ್ಯಮದಲ್ಲಿ ಶಿಕ್ಷಣ ಪಡೆದರು. ೧೯೯೦ರಲ್ಲಿ ಪತ್ರಿಕಾರಂಗ ‹ ಪ್ರವೇಶಿಸಿದರು. ಸ್ಥಳೀಯ ಪತ್ರಿಕಾ ವರದಿಗಾರರಾಗಿ ಕಾರ್ಯನಿರ್ವಹಣಾರಾಂಭ. ೧೯೯೫ರಿಂದ ಹವ್ಯಾಸಿ ಪತ್ರಕರ್ತರಾಗಿ ಕಾರ್ಯಾರಂಭ ಮಾಡಿದರು. ಪರಿಸರ ಕುರಿತ ನುಡಿಚಿತ್ರ ಬರೆಹಗಳಲ್ಲಿ ವಿಶೇಷ ಆಸಕ್ತಿ. ಕೃಷಿ ಅಂಕಣ-ಕಾರರು. ಗ್ರಾಮೀಣ ಪತ್ರಿಕೋದ್ಯಮದಲ್ಲಿ ವಿಶೇಷ ಒಲವು. ಅಭ್ಯುದಯ ಮಾಧ್ಯಮ ರಂಗದಲ್ಲಿಯೂ ಕಾರ್ಯನಿರ್ವಹಿಸುತ್ತಾರೆ. ಪ್ರವೃತ್ತಿಯಿಂದ ಸಾಹಿಗಳಾದ ಇವರು ಪರಿಸರ ಗ್ರಾಮೀಣ ಜನ ಜೀವನ ಕುರಿತ ೬೦೦ಕ್ಕೂ ಹೆಚ್ಚು ಚಿತ್ರ ಲೇಖನಗಳು ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವಿಜಯ ಕರ್ನಾಟಕದಲ್ಲಿ ಕಾನ್ ಚಿಟ್ಟೆ-ಪರಿಸರ ಅಂಕಣ ಬರೆದಿದ್ದಾರೆ. ೨೦೦೩ರಿಂದ ಉದಯವಾಣಿಯಲ್ಲಿ ಬಹುಧಾನ್ಯ ಹಾಗೂ ೨೦೦೭ರಿಂದ ಆಡಿಕೆ ಪತ್ರಿಕೆಯಲ್ಲಿ ಮುಡೆಬಳ್ಳಿ ಅಂಕಣ ಬರೆಯುತ್ತಿದ್ದಾರೆ. ಕೃಷಿ ಸಂಘದ ಇಂಟರನೆಟ್ ಮ್ಯಾಗಜಿನನಲ್ಲಿ ಅಕೇಸಿಯಾ ಸಸ್ಯದ ಕುರಿತಾಗಿ ಮುಳ್ಳೇ-ಹಣ್ಣು ಅಂಕಣ ಬರೆಯುತ್ತಿದ್ದಾರೆ. ಕರ್ನಾಟಕದ ನದಿ ದಂಡೆಯ ಕಾಡು ಮಾವಿನ ಕುರಿತು ೧೯೯೨ ರಿಂದ ಮಾಹಿತಿ ಸಂಗ್ರಹ ಮಾಡುತ್ತ ೪೫೦ ಮಿಡಿ ಮಾವಿನ ತಳಿಗಳ ದಾಖಲಾತಿ ಮಾಡಿದ್ದಾರೆ. ಜಲ ಸಂರಕ್ಷಣೆ ಮಾರ್ಗದರ್ಶನಕ್ಕೆ ಮಲೆನಾಡು ಮಳೆ ಕೇಂದ್ರ ಸ್ಥಾಪನೆ ಮಾಡಿದ್ದಾರೆ. ೧೯೨೮ ರಿಂದ ೩೨ರ ಕಾಲದ ಸ್ವಾತಂತ್ರ್ಯ ಸಂಗ್ರಾಮದ ಭೂಗತ ಪತ್ರಿಕೆ ಸತ್ಯಾಗ್ರಹ ಕರಪತ್ರ ಸಂಗ್ರಹ ಹಾಗೂ ಅಧ್ಯಯನ ನಡೆಸಿದ್ದಾರೆ. ರಾಜ್ಯದ ವಿವಿಧ ಪ್ರದೇಶಗಳಲ್ಲಿ ಪರಿಸರ ಶಿಕ್ಷಣ ಕಾರ್ಯಗಾರಗಳಲ್ಲಿ ಸಂಘಟಕರಾಗಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಕೃಷಿ, ಗ್ರಾಮೀಣ ಪರಿಸರ ಪತ್ರಿಕೋದ್ಯಮದ ಬಗೆಗೆ ೨೦ಕ್ಕೂ ಹೆಚ್ಚು ಶಿಬಿರಗಳನ್ನು ಸಂಘಟಿಸಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಪಠ್ಯ ಪುಸ್ತಕದಲ್ಲಿ ಇವರ ಮಸಣಕ್ಕೆ ಮರ ಬೆಳೆದವರು ಪಾಠವಿದೆ. ಕೇರಳ ಏಳನೇ ತರಗತಿಗೂ ಇವರ ನನ್ನ ಶಾಲೆಯ ದಾರಿ ಪಾಠವಿದೆ.

ಪ್ರಕಟಿತ ಕೃತಿಗಳು:

ಪರಿಸರ – ಕಾಡು ನೆಲದ ಕಾಲಮಾನ, ಒಡಲ ನೋವಿನ ತೊಟ್ಟಿಲ ಹಾಡು, ಮೊನೋ ಕಲ್ಚರ್ ಮಹಾಯಾನೆ, ಕಾಲುದಾರಿಯ ದಾಖಲೆ, ಕಾನ್ ಚಿಟ್ಟೆ, ಮನದ ಜಗುಲಿಗೆ ಕಾನನ. ದೇಸಿ ಅರಣ್ಯ ಜ್ಞಾನ, ತದ್ರೂಪಿ ಕಾಡು, ಹಸುರು ಪುಸ್ತಕದ ಹಳೆಯ ಪುಟಗಳು.

ಲಭಿಸಿರುವ ಪ್ರಶಸ್ತಿಗಳು:

೧. ರಾಜ್ಯ ಕಾರ್ಯ ನಿರತ ಪತ್ರ ಕರ್ತರ ಸಂಘದಿಂದ ಚಿತ್ರಲೇಖನ ಪುರಸ್ಕಾರ.

೨. ೧೯೯೯ – ಲಂಡನ್ನಿನ ಪ್ಯಾನೋಸ್ ಹೆಲ್ತ್ ಮೀಡಿಯಾ ಪುರಸ್ಕಾರ.

೩. ೨೦೦೪ – ಪರಿಸರ ಚಟುವಟಿಕೆಗಾಗಿ ಪಾವನಾ ಪುರಸ್ಕಾರ.

೪. ೨೦೦೬ – ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ಪರಿಸರ ಪತ್ರಿಕೋದ್ಯಮ ಪ್ರಶಸ್ತಿ.

೫. ೨೦೦೫ ಬಹರೆನ್ ಪನಾಮಾ ನಗರದ ಸಾರ್ಥ ಫೌಂಡೇಶನ್ ಸನ್ಮಾನ.

ವ್ಯಕ್ತಿ ಪರಿಚಯ

ಶ್ರೀ ಶಿವಾನಂದ ಹಣಮಂತಪ್ಪಾ ವಾಸನ

೧.	ಹೆಸರು	:	ಶ್ರೀ ಶಿವಾನಂದ ಹಣಮಂತಪ್ಪಾ ವಾಸನ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ನಂದಿಹಾಳ, ೧೧-೦೬-೧೯೬೫.
೪.	ಜಿಲ್ಲೆ - ರಾಜ್ಯ	:	ಬೆಳಗಾವಿ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಟಿ.ಸಿ.ಹೆಚ್., ಬಿ.ಎ (ಹಿಂದಿ).
೬.	ವೃತ್ತಿ	:	ಪದೋನ್ನತ ಪ್ರಧಾನ ಗುರುಗಳು
೭.	ಕೌಟುಂಬಿಕ	:	ಪತ್ನಿ; ಶಾಂತಬಾಯಿ. ಪುತ್ರರು; ಸತೀಶ, ಹಣಮಂತ ಗೌಡ.
೮.	ಸದ್ಯದ ವಿಳಾಸ	:	ಸ.ಹಿ.ಪ್ರಾ.ಶಾಲೆ, ಶಿವಶಂಕರ ನಗರ (ಹ) ತಾ. ಗೋಕಾಕ ಬೆಳಗಾವಿ.
೯.	ಖಾಯಂ ವಿಳಾಸ	:	ಮುಕ್ಕಾಂ ಪೋಸ್ಟ್, ನಂದಿಹಾಳ. ತಾ. ರಾಮದುರ್ಗ. ಜಿ. ಬೆಳಗಾವಿ
೧೦.	ದೂರವಾಣಿ ಸಂಖ್ಯೆ	:	೯೮೪೫೨೪೬೫೩೮
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲಾ ರಾಯದುರ್ಗ ತಾಲೂಕು ನಂದಿಹಾಳ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ನಂದಿಹಾಳ ಗ್ರಾಮದಲ್ಲಿಯೇ ಆಯಿತು. ಪ್ರೌಢ ಶಿಕ್ಷಣ ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲೂಕು ಕರೂರದಲ್ಲಾಯಿತು. ಪದವಿ ಪೂರ್ವ ಹಾಗೂ ಟಿ.ಸಿ.ಹೆಚ್. ತರಬೇತಿ ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕು ಹಿರೇಕುಂಬಿಯಲ್ಲಾಯಿತು. ೧೯೮೫ರಲ್ಲಿ ತಬಚಿ ಗ್ರಾಮದಲ್ಲಿ ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದರು. ೧೯೮೮ರಲ್ಲಿ ಹಿಡಕಲ್ ಡ್ಯಾಂ ಪ್ರಾಥಮಿಕ ಶಾಲೆಗೆ ಹೋದರು. ೧೯೯೫ರಲ್ಲಿ ಪಾಚ್ಛಾಪುರಕ್ಕೆ ಬಂದರು. ೨೦೦೭ರಲ್ಲಿ ಪದನ್ನೋತ ಪ್ರಧಾನ ಗುರುಗಳಾಗಿ ಬಡ್ತಿ ಪಡೆದರು. ಶಾಲಾ ದಿನಗಳಲ್ಲೇ ಇವರು ಸಾಹಿತ್ಯದ ಕಡೆ ಆಸಕ್ತರಾದರು. ಮಕ್ಕಳ ಕಥೆ, ಹಾಡು ಬರೆಯ ತೊಡಗಿದರು. ಅಭಿನಯ, ನೃತ್ಯ ಹವ್ಯಾಸ. ಕೆ.ಎಸ್. ನರಸಿಂಹ ಸ್ವಾಮಿ, ಕುವೆಂಪು, ದ.ರಾ. ಬೇಂದ್ರೇ, ಎಸ್.ಎಮ್. ಹರದ ಗಟ್ಟಿ ಹಾಗೂ ಬಾಳೇಶ ಲಕ್ಷಟ್ಟಿ ಮುಂತಾದ ಸಾಹಿತಿಗಳ ಸಾಹಿತ್ಯ ಓದಿ ಪ್ರಭಾವಿತರಾದರು. ಇವರ ಪ್ರಥಮ ಗ್ರಂಥ ಮಕ್ಕಳ ಕವನ ಸಂಕಲನ. ಇದಲ್ಲದೆ ಇವರು ನಾಟಕವನ್ನೂ ರಚಿಸಿದ್ದಾರೆ. ಬೆಳಗಾವಿ ಜಿಲ್ಲಾ ೨೦೦೬ ಸುವರ್ಣ ಕರ್ನಾಟಕ ವರ್ಷಾ ಚರಣೆಯ ನೆನಪಿಗಾಗಿ 'ಸುವರ್ಣ ಸೌರಭ' ಗ್ರಂಥ ಸಂಪಾದಕರಾಗಿದ್ದಾರೆ. ಇವರ ಲೇಖನಗಳು, ಶಾಂತಿ ಪಥ, ಬಸವ ಪಥ, ಸಿದ್ದಲಿಂಗೇಶ್ವರ ವಾಣಿ, ತರಂಗ, ಸುಧಾ, ಮಯೂರ, ತೆಂಕಣ ಗಾಳಿ, ಕನ್ನಡಮ್ಮ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇವರು ಚುಟುಕ, ಹಾಸ್ಯ ಲೇಖನ, ಕಥೆ ಹಾಗೂ ಲೇಖನಗಳನ್ನು ಬರೆಯುತ್ತಾರೆ. ಇವರು ಹುಕ್ಕೇರಿ ತಾಲೂಕು ಮಕ್ಕಳ ಸಾಹಿತ್ಯ ವೇದಿಕೆಯ ಸಂಘಟನಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ತಾಲೂಕು ಹಾಗೂ ಜಿಲ್ಲಾ ಮಟ್ಟದ ಕವಿ ಗೋಷ್ಠಿ ಹಾಗೂ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿದ್ದಾರೆ. ಗೋಕಾಕ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಘಟಕದ ಪದಾಧಿಕಾರಿಯಾಗಿ ಸಾಹಿತ್ಯ ಸಂಕೀರ್ಣ, ಕವಿ ಗೋಷ್ಠಿ ಹಾಗೂ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿದ್ದಾರೆ. ಶ್ರೀ ಸಂತಶಿಶುನಾಳ ಶರೀಫರ ಬಯಲು ಬಯಲಾಗ್ಯೆತಿ ಕವನ ರಚಿಸಿ ಕ್ಯಾಸೆಟ್ ತಂದಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಮಕ್ಕಳ ಕಣ್ಮಣಿ ನೆಹರು, ಸೌರಭ. ಸಂಪಾದನೆ – ಸುವರ್ಣ ಸೌರಭ

ಲಭಿಸಿರುವ ಪ್ರಶಸ್ತಿಗಳು:
೧. ೧೯೯೨ – ಹುಕ್ಕೇರಿ ತಾಲೂಕು ಅತ್ಯುತ್ತಮ ಬೋಧಕ ಪ್ರಶಸ್ತಿ.
೨. ೧೯೯೩ – ಜಿಲ್ಲಾ ಮಟ್ಟದ ಅತ್ಯುತ್ತಮ ಬೋಸ್ವರ್ ಸನ್ಮಾನ.
೩. ೧೯೯೮ – ಪುಟಾಣಿ ವಿಜ್ಞಾನ ಬಳಗದಿಂದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ.
೪. ಸರ್ಕಾರ ಯೋಜನೆಯಲ್ಲಿ ಜಿಲ್ಲಾ ಮಟ್ಟದ ಪುರಸ್ಕಾರ ಪ್ರಮಾಣ ಪತ್ರ.

ವ್ಯಕ್ತಿ ಪರಿಚಯ



ಶ್ರೀಧರ ಹಂದೆ. ಹೆಚ್.

೧. ಹೆಸರು : ಹೆಚ್. ಶ್ರೀಧರ ಹಂದೆ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಹಂದಟ್ಟು, ಕೋಟ – ೧೫–೧೨–೧೯೩೫

೪. ಜಿಲ್ಲೆ – ರಾಜ್ಯ : ಉಡುಪಿ, ಕರ್ನಾಟಕ.

೫. ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ., ಹಿಂದಿ ರತ್ನ.

೬. ವೃತ್ತಿ : ನಿವೃತ್ತ ಅಧ್ಯಾಪಕ.

೭. ಕೌಟುಂಬಿಕ : ಪತ್ನಿ; ಶ್ರೀಮತಿ ವಸುಮತಿ. ಪುತ್ರ; ಸುಜಯೀಂದ್ರ ಹಂದೆ. ಪುತ್ರಿಯರು; ಶ್ರೀಮತಿ ಅಭಿಲಾಷ, ಶ್ರೀಮತಿ ಪೂರ್ಣಿಮಾ

೮. ಸದ್ಯದ ವಿಳಾಸ : ಸಂಚಾಲಕರು, ಸಾಲಿಗ್ರಾಮ ಮಕ್ಕಳ ಮೇಳ (ರಿ), ಪಟೇಲರ ಮನೆ, ಅಂಚೆ ಕೋಟ. ೫೭೬೨೨೧. ಉಡುಪಿ ಜಿಲ್ಲೆ.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೨೦–೨೫೬೪೩೮೧, ೯೯೪೫೫೬೩೦೦೫.

೧೧. ಹಸ್ತಾಕ್ಷರ (ಸಹಿ) : [signature]

ಸಾಹಿತ್ಯ ಪರಿಚಯ

ಇವರು ಉಡುಪಿ ಜಿಲ್ಲೆ ಕೋಟದ ಹಂದಟ್ಟು ಗ್ರಾಮದಲ್ಲಿ ಜನಿಸಿದರು. ಎಸ್.ಎಸ್.ಎಲ್.ಸಿ. ವರಗೆ ವಿದ್ಯಾಭ್ಯಾಸ. ಹಿಂದಿ ರತ್ನ ಮಾಡಿದ್ದಾರೆ. ವೃತ್ತಿಯಿಂದ ಅಧ್ಯಾಪಕರು. ಪ್ರವೃತ್ತಿಯಿಂದ ಸಾಹಿತಿಗಳು. ಯಕ್ಷಗಾನದ ಹವ್ಯಾಸ. ಇವರ ಸಾಹಿತ್ಯಾಭ್ಯಾಸವೂ ಹೆಚ್ಚಾಗಿ ಯಕ್ಷಗಾನ ಪ್ರಸಂಗಗಳಿಗೆ ಸಂಬಂಧಪಟ್ಟಿದ್ದೇ ಆಗಿದೆ. ಅರ್ಥ ಸಂಭಾಷಣೆ, ಪ್ರಸಂಗ ಹಾಗೂ ಜೀವನ ಚರಿತ್ರೆ ರಚಿಸುವುದರಲ್ಲಿ ಸಿದ್ಧ ಹಸ್ತರು. ಇವರಿಗೆ ಮಕ್ಕಳಿಗೆ ಯಕ್ಷಗಾನ ಕಲಿಸುವುದರಲ್ಲಿ ವಿಶೇಷ ಆಸಕ್ತಿ. ಇದರ ಸಲುವಾಗಿಯೇ ಇವರು ೧೯೭೫ರಲ್ಲಿ 'ಸಾಲಿಗ್ರಾಮ ಮಕ್ಕಳ ಮೇಳ'ವನ್ನು ಅಸ್ತಿತ್ವಕ್ಕೆ ತಂದರು. ಶಾಲಾ ಮಕ್ಕಳಿಗೆ ತರಬೇತು ನೀಡಿ ಪ್ರಥಮ ಪ್ರದರ್ಶನವನ್ನು ಮಂಗಳೂರಿನ ಪಿ.ವಿ.ಎಸ್. ಕಲಾಕುಂಜದಲ್ಲಿ ನೀಡಲಾಯಿತು. ಪ್ರೇಕ್ಷಕರ ಮೆಚ್ಚುಗೆಗಳಿಸಿತು. ಕಳೆದ ೩೬ ವರ್ಷಗಳಿಂದ ಇವರು ಮಕ್ಕಳ ಮೇಳವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರೊಂದಿಗೆ ಇವರ ಸಹ ಶಿಕ್ಷಕರಾದ ಕಾರ್ಕಡ ಶ್ರೀನಿವಾಸ ಉಡುಪರು ಸೇರಿದ್ದಾರೆ. ಪರಿಸರದ ಶಾಲಾ ವಾರ್ಷಿಕೋತ್ಸವದ ತರಬೇತಿ ನೀಡಲು ಹೋಗುತ್ತಿದ್ದ ಈ ಶಿಕ್ಷಕದ್ವಯರು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಮೇಳವನ್ನು ಕಟ್ಟಿದರು. ಈ ಹದಿಹರಯದ ಮಕ್ಕಳ ಶೈಕ್ಷಿಣಕ ಅಭ್ಯಾಸಕ್ಕೆ ಅಡ್ಡಿಯಾಗದಂತೆ ಬಿಡುವಿನ ವೇಳೆಯಲ್ಲಿ ಅಷ್ಟೇ ತರಬೇತಿ ನೀಡುತ್ತಿದ್ದರು. ಶಿಸ್ತು ಕಲಿಸಿದರು. ಮಕ್ಕಳ ಮೇಳದ ಪ್ರದರ್ಶನಗಳು ರಾಜ್ಯಾದ್ಯಂತವಲ್ಲದೆ ಕ್ರಮೇಣ ಮುಂಬಯಿ, ಗೋವಾ, ಚೆನ್ನೈ, ಟ್ರಿವೆಂಡ್ರಮ್. ಕೊಚ್ಚಿ ಮುಂತಾದ ಕಡೆಗಳಲ್ಲೂ ನಡೆಯತೊಡಗಿತು. ಎಲ್ಲಕ್ಕಿಂತ ಹೆಚ್ಚಾಗಿ ಈ ಮಕ್ಕಳ ಮೇಳದ ಯಕ್ಷಗಾನ ಸಾಗರೋತ್ತರ ಖಂಡಗಳಲ್ಲೂ ದಿಗ್ವಿಜಯ ಗಳಿಸಿತು. ೧೯೭೮ರಲ್ಲಿ ಅಮೆರಿಕಾದ ವಿಶ್ವಮಕ್ಕಳ ಉತ್ಸವದಲ್ಲಿ ಭಾರತದ ಏಕೈಕ ತಂಡವಾಗಿ ಭಾಗವಹಿಸಿತು. ನಂತರ ಸೆನ್‌ಜೋಸ್, ಅಟ್ಲಾಂಟ, ಬಫೆಲೋ, ನ್ಯೂಯಾರ್ಕ, ವಾಷಿಂಗ್‌ಟನ್ ಮುಂತಾದ ನಗರಗಳಲ್ಲೂ ಪ್ರದರ್ಶನ ನೀಡಿತು. ೧೯೮೫ರಲ್ಲಿ ಬೆಹರಿನ್ ಕನ್ನಡ ಸಂಘದ ಪರವಾಗಿ ಒಂದು ವಾರ ವಿವಿಧೆಡೆಗಳಲ್ಲಿ ಪ್ರದರ್ಶನ ನೀಡಿತು. ೧೯೮೮ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿತು. ಮೂರು ಬಾರಿ ದೆಹಲಿಯ ರಾಷ್ಟ್ರೀಯ ನಾಟಕ ಮಹಾವಿದ್ಯಾಲಯ ಆಯೋಜಿಸಿದ ರಾಷ್ಟ್ರೀಯ ಮಕ್ಕಳ ಕಲೋತ್ಸವದಲ್ಲಿ ಭಾಗವಹಿಸಿದೆ. ಇಲ್ಲಿಯವರೆಗೆ ಸುಮಾರು ೨೫೦೦ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದೆ.

ಪ್ರಕಟಿತ ಕೃತಿಗಳು:
ಯಕ್ಷಗಾನ – ಶ್ರೀ ಸಾಲಿಗ್ರಾಮ ಕ್ಷೇತ್ರೋತ್ಪತ್ತಿ.
ಜೀವನ ಚರಿತ್ರೆ – ಶ್ರೀ ಹಾರಾಡಿ ನಾರಾಯಣ ಗಾಣಿಗ.

ಲಭಿಸಿರುವ ಪ್ರಶಸ್ತಿಗಳು:
೧. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರು.
೨. ಜಾನಪದ ಪ್ರಶಸ್ತಿ.
೩. ಯಕ್ಷಗಾನ ಅಕಾಡೆಮಿ ಪ್ರಶಸ್ತಿ.
೪. ದ್ರೋಣಾಚಾರ್ಯ ಪ್ರಶಸ್ತಿ.
೫. ಶ್ರೀ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮಿಜಿ ಪ್ರಶಸ್ತಿ. ೬. ಭಾರ್ಗವ ಪ್ರಶಸ್ತಿ.

ವ್ಯಕ್ತಿ ಪರಿಚಯ

ಶ್ರೀಪಾದ ವಿ. ಹೆಗಡೆ

೧.	ಹೆಸರು	:	ಶ್ರೀಪಾದ ವಿಶ್ವೇಶ್ವರ. ಹೆಗಡೆ
೨.	ಕಾವ್ಯನಾಮ	:	ಇರುವುದಿಲ್ಲ.
೩.	ಹುಟ್ಟಿದ ಸ್ಥಳ ದಿನಾಂಕ	:	ಮಗೇಗಾರು, ೨೯-೦೬-೧೯೫೨
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ., ಬಿಎಡ್.
೬.	ವೃತ್ತಿ	:	ಪ್ರೌಢಶಾಲಾ ಮುಖ್ಯ ಉಪಧ್ಯಾಯ.
೭.	ಕೌಟುಂಬಿಕ	:	ಪತ್ನಿ; ರತ್ನಾ. ಪುತ್ರಿ; ಅಶ್ವಿನಿ. ಪುತ್ರ; ಗೌತಮ.
೮.	ಸದ್ಯದ ವಿಳಾಸ	:	ಮಗೇಗಾರು ಅಂಚೆ, ತ್ಯಾರ್ಸಿ, ಸಿದ್ದಾಪುರ ತಾ. ಉತ್ತರ ಕನ್ನಡ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೮೯-೨೩೧೪೬೦, ೯೫೯೧೫೫೬೧೯೬.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕಿನ ಮಗೇಗಾರು ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೇ ಆಯಿತು. ಶಿರಸಿ ತಾಲೂಕು ಹುಲೇಕಲ್ ಪ್ರೌಢ ಶಾಲೆಯಲ್ಲಿ ನಂತರದ ಶಿಕ್ಷಣ ಪಡೆದು ಶಿರಸಿ ಮಹಾ ವಿದ್ಯಾಲಯದಲ್ಲಿ ಬಿ.ಎ. ಪದವಿ ಪಡೆದರು. ಧಾರವಾಡದಲ್ಲಿ ಬಿ.ಎಡ್. ಪದವಿ ಗಳಿಸಿದರು. ಸಿದ್ದಾಪುರ ತಾಲೂಕಿನ ಬಿದ್ರಾಕಾನಿನಲ್ಲಿರುವ ಎಂ.ಜಿ.ಸಿ.ಎಮ್. ಪ್ರೌಢಶಾಲೆಯಲ್ಲಿ ೩೬ ವರ್ಷ ಸಹಶಿಕ್ಷಕರಾಗಿ ಸೇವೆ ಸಲ್ಲಿಸಿ ಇದೀಗ ಎರಡು ವರ್ಷಗಳಿಂದ ಮುಖ್ಯಾಧ್ಯಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಗಣಿತದ ಜೊತೆಗೆ ಆಂಗ್ಲ ಭಾಷೆಯನ್ನು ಬೋಧಿಸುತ್ತಾರೆ. ಸಂಪನ್ಮೂಲ ವ್ಯಕ್ತಿ. ೧೯೫೭ರಲ್ಲಿ ಇವರಲ್ಲಿ ಸ್ಥಾಪನೆಯಾದ ಶ್ರೀ ಮಹಾಗಣಪತಿ ನಾಟ್ಯ ಕಲಾ ಸಂಘದೊಡನೆ ಸಖ್ಯ ಬೆಳಸಿಕೊಂಡ ಇವರಿಗೆ ಬಣ್ಣದ ಗೀಳಿನ ಹವ್ಯಾಸವಿದೆ. ಈ ಸಂಘದ ಅಧ್ಯಕ್ಷರಾಗಿಯೂ ಇದ್ದರು. ಕಾರಂತ, ಭೈರಪ್ಪ, ಕುವೆಂಪು, ಬೇಂದ್ರೆ ಮುಂತಾದವರ ಕೃತಿಗಳಿಂದ ಪ್ರಭಾವಿತರಾಗಿ ಸಾಹಿತ್ಯದ ಬಗ್ಗೆ ಆಸಕ್ತಿ ಹೆಚ್ಚಿತು. ಪ್ರೇಮಚಂದ್‌ರ 'ದಫನ್' ಕಥೆಯನ್ನು ನಾಟಕ ರೂಪಕ್ಕಿಳಿಸಿದ್ದಾರೆ. ಹಂಪೆ ಕನ್ನಡ ವಿಶ್ವವಿದ್ಯಾಲಯ ನಡೆಸಿದ ನಾಟಕ ಶಿಬರದಲ್ಲಿ ಭಾಗವಹಿಸಿದ್ದಾರೆ. ಸಿದ್ದಾಪುರ ಕರಬಂದಿ ಚಳವಳಿ ಆಧಾರಿತ 'ದೇವಿಯ ದೀವಿಗೆ' ಹವ್ಯಕ ಭಾಷೆಯಲ್ಲಿ ನಾಟಕ ರಚಿಸಿದ್ದಾರೆ. ಸಿದ್ದಾಪುರಾ ಸ್ವಾಂತಂತ್ರ ಹೋರಾಟಗಾರರು, ಮಾಲೆಯರ ಯಶೋಗಾಥೆಯನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ. ಇವರ ನಾಟಕಗಳು ಆಕಾಶವಾಣಿಯಲ್ಲಿ ಬಿತ್ತರಗೊಂಡಿವೆ. ಇವರು ನಾಟಕಗಳನ್ನಲ್ಲದೆ ಕವನ, ಕಾದಂಬರಿಗಳನ್ನೂ ಬರೆದಿದ್ದಾರೆ. ಶಾಲೆಗೆ ಬರುವ ಬಡ ಮಕ್ಕಳ ಬಗ್ಗೆ ವಿಶೇಷ ಕಾಳಜಿಯುಳ್ಳ ಇವರು ಬ್ಯಾಂಕಿನಲ್ಲಿ ೫೦ ಸಾವಿರ ರೂಪಾಯಿ ಠೇವಣಿ ಇಟ್ಟು ಅದರಿಂದ ಬರುವ ಬಡ್ಡಿಯನ್ನು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ. ಯಕ್ಷಗಾನದ ಹವ್ಯಾಸ ಇರುವ ಇವರು ಯಕ್ಷಗಾನ ತಾಳಮದ್ದಲೆಯಲ್ಲಿ ಅರ್ಥ ಹೇಳುತ್ತಾರೆ. ನಾಟಕಕಾರರಾದ ಇವರು ನಿರ್ದೇಶಕರಾಗಿ ಶಾಲ ಮಕ್ಕಳಲ್ಲಿ ರಂಗಭೂಮಿಯ ಬಗ್ಗೆ ಅಭಿರುಚಿ ಹುಟ್ಟುವ ನಾಟಕಗಳನ್ನು ನಿರ್ದೇಶಿಸುತ್ತಾರೆ. ಕಲೆ, ಸಾಹಿತ್ಯದ ಬಗ್ಗೆಯೂ ಮಕ್ಕಳಲ್ಲಿ ಒಲವು ಮೂಡಿಸುತ್ತಾರೆ. ಶಿಕ್ಷಕ ವೃತ್ತಿಯ ಬಗ್ಗೆ ವಿಶೇಷ ಅಭಿಮಾನವುಳ್ಳವರು.

ಪ್ರಕಟಿತ ಕೃತಿಗಳು:

ನಾಟಕಗಳು – ದೇವಿಯ ದೀವಿಗೆ, ಕಂಗಿನಂಗಳದಲ್ಲಿ, ಕ್ರಾಂತಿಯ ಕಿಡಿ, ತೊಟ್ಟಿಲು ತೂಗುವವರು, ಹೋರಾಟದ ಮಟ್ಟಲೇರಿದಾಗ.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೮ – ಜೋಗದಲ್ಲಿ ನಡೆದ ಅಖಿಲ ಕರ್ನಾಟಕ ನಾಟಕ ರಚನಾ ಸ್ಪರ್ಧೆಯಲ್ಲಿ ಬಹುಮಾನ.

ವ್ಯಕ್ತಿ ಪರಿಚಯ

ಶ್ರೀ ಶೈಲ ಗುರುಸಿದ್ಧಯ್ಯಾ ಮಠಪತಿ

೧. ಹೆಸರು : ಶ್ರೀ ಶೈಲ ಗುರುಸಿದ್ಧಯ್ಯಾ ಮಠಪತಿ

೨. ಕಾವ್ಯನಾಮ : ಸಿರಿಗಿರಿ

೩. ಹುಟ್ಟಿದ ಸ್ಥಳ ದಿನಾಂಕ : ಜಿನರಾಳ. ತಾಹುಕ್ಕೇರಿ ೨೫-೧೦-೧೯೭೫.

೪. ಜಿಲ್ಲೆ – ರಾಜ್ಯ : ಬೆಳಗಾವಿ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಬಿ.ಈಡಿ, ಎಂ.ಫಿಲ್.,
ಪಿ.ಜಿ.ಡಿ.ಬಿ.ಎಸ್.

೬. ವೃತ್ತಿ : ಉಪನ್ಯಾಸಕ

೭. ಕೌಟುಂಬಿಕ : ಇಲ್ಲ

೮. ಸದ್ಯದ ವಿಳಾಸ : ವಸತಿ, ಜಿನರಾಳ, ಅಂಚೆ, ಹಂಚಿನಾಳ,
ತಾ, ಹುಕ್ಕೇರಿ. ಜಿ. ಬೆಳಗಾವಿ ೫೯೧೨೪೩

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೩೩–೨೯೫೮೦೩, ೯೬೧೧೬೮೨೨೫೯

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕು ಜಿನರಾಳ ಗ್ರಾಮದಲ್ಲಿ ಜನಿಸಿದರು. ತಂದೆ ಪ್ರಾಥಮಿಕ ಶಾಲ ಶಿಕ್ಷಕರು. ಪ್ರಾಥಮಿಕ ಶಿಕ್ಷಣ ಜಿನರಾಳ ಗ್ರಾಮದಲ್ಲೇ ಆಯಿತು. ಯಮಕನಮರಡಿ ಸಿ.ಇ.ಎನ್. ಪ್ರೌಢಶಾಲೆಯಲ್ಲಿ ನಂತರದ ಅಧ್ಯಯನ ಯಾದಗೂಡ ಮತ್ತು ಹುಕ್ಕೇರಿಗಳಲ್ಲಿ ಕಾಲೇಜು ಶಿಕ್ಷಣ. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಕನ್ನಡ ಸ್ನಾತಕೋತ್ತರ ಪದವಿ. ದಾವಣಗೆರೆ ಜಿಲ್ಲೆ ಹರಪನಹಳ್ಳಿಯಲ್ಲಿ ಬಿ.ಎಡ್. ವ್ಯಾಸಂಗ. ೨೦೦೮ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ 'ಕನ್ನಡ ಜಾಗೃತಿ ಕೇಂದ್ರ-ಬೆಂಚಣಿಮಠ' ವಿಷಯ ಕುರಿತ ಎಂ.ಫಿಲ್. ಪದವಿಗಳಿಕೆ. ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಬಸವ ಸಾಹಿತ್ಯ ಅಧ್ಯಯನ ಸ್ನಾತಕೋತ್ತರ ಪದವಿಯನ್ನು ಚಿನ್ನದ ಪದಕದೊಂದಿಗೆ ಗಳಿಸಿದ್ದಾರೆ. ವೃತ್ತಿಯಿಂದ ಉಪನ್ಯಾಸಕರು. ಪ್ರವೃತ್ತಿಯಿಂದ ಸಾಹಿತಿಗಳು. ಇವರು ಶಾಲಾ ದಿನಗಳಿಂದಲೇ ಕವನ ರಚಿಸುತ್ತಿದ್ದರು. ಗಾಯನ ಹವ್ಯಾಸ ಇದೆ. ತಂದೆ ಶ್ರೀ ಗುರುಸಿದ್ದಯ್ಯನವರಿಂದ ಭಾಷಣ ಮಾಡುವ ಪ್ರೇರಣೆ. ಇವರ ಮೊದಲ ಕವಿತೆ ಬೆಂಗಳೂರಿನ ಮುದ್ದಣ್ಣ ಸ್ಮಾರಕ ಟ್ರಸ್ಟಿನವರು ಹೊರತಂದ 'ಕನ್ನಡ-ನಾಡು ನುಡಿ' ಕೃತಿಯಲ್ಲಿ ಪ್ರಕಟವಾಗಿದೆ. ಧಾರವಾಡ ಆಕಾಶವಾಣಿಯ ಕಾವ್ಯಲಹರಿಯಲ್ಲಿ ಇವರು ಸ್ವರಚಿತ ಕಾವ್ಯ ವಾಚನ ಮಾಡುತ್ತಿರುತ್ತಾರೆ. ರಾಜ್ಯ ಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಚುಟುಕು ವಾಚನ ಮಾಡಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ ನಡೆಸಿದ ಕಾರ್ಯಗಾರಗಳಲ್ಲಿ ಭಾಗವಹಿಸಿದ್ದಾರೆ. ಇವರ ಕವನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಮೈಸೂರಿನ ಬುದ್ಧಿ ಜೀವ ಬಳಗ ಹೊರತಂದ 'ಕೆ.ಎಸ್.ಎನ್. ಒಂದು ನೆನಪು' ಕೃತಿಯಲ್ಲಿ ಇವರ ಕವನ ಪ್ರಕಟವಾಗಿದೆ. ಗುಲ್ಬರ್ಗಾದ 'ಕವಿ ಕಾವ್ಯ' ತ್ರೈ ಮಾಸಿಕದಲ್ಲಿ ಇವರ ವ್ಯಕ್ತಿ ಪರಿಚಯ ಪ್ರಕಟವಾಗಿದೆ. ಇವರ ಕವನ, ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಹಾಗೂ ಕಾಲೇಜು ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು. ಇವರು ಹಲವಾರು ಸಭೆ -ಸಮಾರಂಭಗಳಲ್ಲಿ ಭಾಗವಹಿಸಿ ಉಪನ್ಯಾಸ ಮಾಡುತ್ತಿರುತ್ತಾರೆ.

ಪ್ರಕಟಿತ ಕೃತಿಗಳು:

ಕವನ ಸಂ – ಬಿಂದು, ದುಂಬಿಯಾನ.

ಸಂಪಾದನೆ (ಇತರರೊಂದಿಗೆ) – ಸಿರಿ ಗಂಗೋತ್ರಿ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೨ ಚಿತ್ರದುರ್ಗದ ಬೃಹನ್ಮಠದಲ್ಲಿ 'ಶಿಕ್ಷಣ ಪ್ರೇಮಿ' ಪ್ರಶಸ್ತಿ.

೨. ರಾಜ್ಯ ಮಟ್ಟದ ಕವನ ರಚನೆ ಸ್ಪರ್ಧೆಯಲ್ಲಿ ಬಹುಮಾನ

ವ್ಯಕ್ತಿ ಪರಿಚಯ

ಶೈಲಾಕುಮಾರಿ ಕೆ.

೧.	ಹೆಸರು	: ಕೆ. ಶೈಲಾಕುಮಾರಿ
೨.	ಕಾವ್ಯನಾಮ	: ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	: ಕುಳಮರುವ, ನೀರ್ಚಾಲು, ೦೯-೦೨-೧೯೬೫
೪.	ಜಿಲ್ಲೆ - ರಾಜ್ಯ	: ಕಾಸರಗೋಡು, ಕೇರಳ.
೫.	ವಿದ್ಯಾಭ್ಯಾಸ	: ಬಿ.ಎಸ್‌ಸಿ. ಬಿ.ಲಿಬ್. ಎಂ.ಲಿಬ್ (ಮಾಹಿತಿ ಮತ್ತು ಗ್ರಥಾಲಯ ವಿಜ್ಞಾನ)
೬.	ವೃತ್ತಿ	: ಗೃಹಿಣಿ
೭.	ಕೌಟುಂಬಿಕ	: ಪತಿ; ಡಾ|| ವಸಂತಕುಮಾರ ಪೆರ್ಲ. ಪುತ್ರಿಯರು, ಅರ್ಥಾಪೆರ್ಲ, ಅಯನಾಪೆರ್ಲ. ಪುತ್ರ; ಆಗಮಕೃಷ್ಣ ಪೆರ್ಲ್
೮.	ಸದ್ಯದ ವಿಳಾಸ	: "ಭೂಮಿಗೀತ", ಕುಂಜತ್ತ ಬೈಲು, ಮಂಗಳೂರು. ೫೭೫೦೧೫ (ದ.ಕ.)
೯.	ಖಾಯಂ ವಿಳಾಸ	: ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	: ೯೪೪೮೭೭೩೭೪೭, ೦೮೨೪-೨೪೮೮೪೫೮೩
೧೧.	ಹಸ್ತಾಕ್ಷರ (ಸಹಿ)	:

ಸಾಹಿತ್ಯ ಪರಿಚಯ

ಇವರು ಕೇರಳ ರಾಜ್ಯ ಕಾಸರಗೋಡು ಜಿಲ್ಲೆ ಕುಳಮರುವ ನೀರ್ಚಾಲುವಿನಲ್ಲಿ ಜನಿಸಿದರು. ಇವರು ಪ್ರಖ್ಯಾತ ಸಾಹಿತಿ, ಕಲಾವಿದ ಜ್ಯೋತಿಷ ಪಂಡಿತ ಪ್ರಸಿದ್ಧ ಮನೆತನದಿಂದ ಬಂದವರು. ಇವರು ಡಾ|| ವಸಂತ ಕುಮಾರ ಪೆರ್ಲ ಅವರ ಪತ್ನಿ. ಇವರು ಬಿಎಸ್.ಸಿ., ಬಿಲಿಬ್, ಮಾಡಿ ಗ್ರಂಥಾಲಯ ವಿಜ್ಞಾನದಲ್ಲಿ ಎಂ.ಲಿಬ್ ಮಾಡಿರುತ್ತಾರೆ. ದ,ಕ, ಜಿಲ್ಲೆಯ ಉಜಿರೆಯಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ವಿಜ್ಞಾನ ಪದವಿ ಓದುತ್ತಿರುವಾಗಲೇ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿ ಕಥೆ, ಕವನ ಬರೆದು ಪ್ರಕಟಿಸ ತೊಡಗಿದರು. ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಓದು ಮುಗಿಸಿ ಮದರಾಸಿನ 'ಅಮೆರಿಕನ್ ಸೆಂಟರ್' ಗ್ರಂಥಾಲಯದಲ್ಲಿ ಗ್ರಂಥ ಪಾಲಕಿಯಾಗಿ ಕೆಲವು ಕಾಲ ಸೇವೆ ಸಲ್ಲಿಸಿದರು. ನಂತರ ಮಣಿಪಾಲದಲ್ಲಿರುವ ಹೋಟೆಲ್ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಐದಾರು ವರ್ಷ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿದರು. ವಿವಾಹದ ನಂತರ ನೌಕರಿ ಬಿಟ್ಟರು. ಪತಿಯೊಂದಿಗೆ ಸೇರಿ 'ಮನೆ ಮನೆ ಕವಿ ಗೋಷ್ಠಿ' ಹಾಗೂ ಭೂಮಿ ಗೀತೆ ಸಾಂಸ್ಕೃತಿಕ ಸಂಘಟನೆಗಳನ್ನು ಹುಟ್ಟುಹಾಕಿದರು. ಇವರು ಬರೆಯುವ ಕಥೆ, ಕವನ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಉಡುಪಿಯಲ್ಲಿ ೨೦೦೭ರಲ್ಲಿ ಜರುಗಿದ ೭೪ ಅಖಿಲ ಭಾರತ ಕ.ಸಾ. ಸಮ್ಮೇಳನದಲ್ಲಿ ಇವರ 'ಮುದ್ದುಗಿಣಿಯ ಸಾಕಿ' ಕಥಾ ಸಂಕಲನ ಬಿಡುಗಡೆಯಾಯಿತು. ಇವರು ಅಂಕಣ ಬರೆಹಗಾರರು. ಉದಯವಾಣಿ, ಹೊಸ ದಿಗಂತ ಮುಂತಾದ ಪತ್ರಿಕೆಗಳಿಗೆ ಸಂಗೀತ, ನೃತ್ಯ, ಶಾಸ್ತ್ರೀಯ ಕಾರ್ಯಕ್ರಮಗಳ ಕುರಿತು ವಿಮರ್ಶೆ ಬರೆಯುತ್ತಾರೆ. ಇವರು ಸ್ವತಃ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದೆ. ಆಕಾಶವಾಣಿ ಮೈಸೂರು, ಮಂಗಳೂರು, ಕಾರವಾರಗಳಿಂದ ಇವರ ಕಥೆ, ಕವನಗಳು ಪ್ರಸಾರವಾಗುತ್ತವೆ. ಮಹಿಳಾ ವಾಣಿಯಲ್ಲಿಯೂ ಕಾರ್ಯಕ್ರಮ ನೀಡುತ್ತಾರೆ. ಹಾಡುಗಳಿಗೆ ರಾಗ ಸಂಯೋಜನೆ ಮಾಡುತ್ತಾರೆ. ಜಿಲ್ಲಾ ಹಗೂ ರಾಜ್ಯ ಮಟ್ಟದ ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಇವರ ಮಕ್ಕಳಿಬ್ಬರು ಶಾಸ್ತ್ರೀಯ ನೃತ್ಯ ಕಲಾವಿದರು. ಇವರ ಮನೆಯಲ್ಲಿ ಸುಮಾರು ನಾಲ್ಕು ಸಾವಿರದಷ್ಟು ಉತ್ತಮ ಕೃತಿಗಳ ಗ್ರಂಥ ಭಂಡಾರವಿದೆ. ಇವರ ಮನೆಯೊಂದು ಸಾಹಿತ್ಯ, ಸಂಗೀತ, ಕಲೆ ಸಂಸ್ಕೃತಿಗಳ ಬೀಡು.

ಪ್ರಕಟಿತ ಕೃತಿಗಳು:
ಕಥಾ ಸಂ. – ಮುದ್ದು ಗಿಣಿಯ ಸಾಕಿ.

ಲಭಿಸಿರುವ ಪ್ರಶಸ್ತಿಗಳು:
೧. ಕೊಡಗಿನ ಗೌರಮ್ಮ ಕಥಾ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಲಭಿಸಿದೆ.

ವ್ಯಕ್ತಿ ಪರಿಚಯ

ಶ್ವೇತಾ ನರಗುಂದ

೧. ಹೆಸರು : ಶ್ವೇತಾ ನರಗುಂದ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಬಾಗಲಕೋಟೆ, ೧೧-೦೨-೧೯೫೪

೪. ಜಿಲ್ಲೆ - ರಾಜ್ಯ : ಬಾಗಲಕೋಟೆ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎಸ್.ಸಿ. (ಪ್ರಾಣಿ ಶಾಸ್ತ್ರ)

೬. ವೃತ್ತಿ : ಆಸ್ಪತ್ರೆ ಮೇಲ್ವಿಚಾರಕಿ.

೭. ಕೌಟುಂಬಿಕ : ಪತಿ; ಡಾ॥ ಕಿಶೋರ ನರಗುಂದ.
ಮೂವರು ಪುತ್ರಿಯರು.

೮. ಸದ್ಯದ ವಿಳಾಸ : ೨೨, ಸುಭಾಶ ನಗರ, ಎಂ.ಎಂ. ಸೆಕ್ಟರ್ ೧,
ಬೆಳಗಾವಿ ೫೯೦೦೧೬

೯. ಖಾಯಂ ವಿಳಾಸ : ಮೇಲಿನಂತೆ'

೧೦. ದೂರವಾಣಿ ಸಂಖ್ಯೆ : ೯೮೮೦೨೯೮೮೪೦

೧೧. ಹಸ್ತಾಕ್ಷರ (ಸಹಿ) : ಶ್ವೇತಾ ನರಗುಂದ

ಸಾಹಿತ್ಯ ಪರಿಚಯ

ಇವರು ಬಾಗಲಕೋಟೆಯಲ್ಲಿ ಜನಿಸಿದರು. ಇವರು ಶ್ರೀ ಚಿದಂಬರ ಜೀವಣ ಭಟ್ಟ ಜೋಶಿ ಮತ್ತು ಶ್ರೀಮತಿ ಲಲಿತಾ ಜೋಷಿಯವರ ಮಗಳು. ತಾಯಿಯ ತೌರುಮನೆ ಬಾಗಲಕೋಟೆ. ತಂದೆ ಹುಬ್ಬಳ್ಳಿಯ ಲ್ಯಾಮಿಂಗ್‌ಟನ್ ಹೈಸ್ಕೂಲಿನಲ್ಲಿ ಪ್ರಿನ್ಸಿಪಾಲ-ರಾಗಿದ್ದರು. ತಾಯಿ ಹುಬ್ಬಳ್ಳಿಯ ಮಹಿಳಾ ವಿದ್ಯಾ ಪೀಠದಲ್ಲಿ ಪ್ರಿನ್ಸಿಪಾಲರಾಗಿದ್ದರು. ಇವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಹುಬ್ಬಳ್ಳಿಯಲ್ಲಾಯಿತು. ಪದವಿ ಪಿ.ಸಿ ಔಬಿನ್ ಸಾಯಿನ್ಸ್ ಕಾಲೇಜಿನಲ್ಲಾಯಿತು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಣಿಶಾಸ್ತ್ರದಲ್ಲಿ ಸ್ನಾತಕೊತ್ತರ ಪದವಿ ಮಾಡಿದ್ದಾರೆ. ಪತಿಯೊಂದಿಗೆ ಲಿಬಿಯ ದೇಶದ ಬೆಂಗಾಝಿ ಊರಿನಲ್ಲಿದ್ದಾಗ ಇಂಡಿಯನ್ ಕಮ್ಯೂನಿಟಿ ಸ್ಕೂಲಿನ ಮಾಧ್ಯಮಿಕ ವಿಭಾಗದಲ್ಲಿ ಕೆಲವು ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಈಗ ಬೆಳಗಾವಿಯಲ್ಲೇ ನೆಲಸಿ ೨೦ ವರ್ಷಗಳಿಂದ ಆಸ್ಪತ್ರೆ ನಿರ್ವಹಣೆ ಕಾರ್ಯದಲ್ಲಿ ನಿರತರಾಗಿದ್ದಾರೆ. ಇವರು ಪ್ರಾಥಮಿಕ ಮಟ್ಟದಲ್ಲೇ ಸಾಹಿತ್ಯದ ಬಗ್ಗೆ ಆಸಕ್ತರಾದರು. ಆಗಿನಿಂದಲೇ ಇವರ ಬರವಣಿಗೆಯೂ ಪ್ರಾರಂಭವಾಯಿತು. ವೃತ್ತಿಯಿಂದ ಇವರು ಆಸ್ಪತ್ರೆ ಮೇಲ್ವಿಚಾರಕರಾದರೂ ಪ್ರವೃತ್ತಿಯಿಂದ ಸಾಹಿತಿಗಳು. ವಿದ್ಯಾರ್ಥಿ ದೆಸೆಯಿಂದಲೇ ನಿಬಂಧ ರಚಿಸುತ್ತಿದ್ದರು. ಭಾಷಣ, ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ನಾಟಕಗಳಲ್ಲಿ ಪಾತ್ರ ಮಾಡಿ ಬಹುಮಾನ ಪಡೆಯುತ್ತಿದ್ದರು. ರಂಗೋಲಿ, ಹೆಣಿಗೆ ಇವರ ಹವ್ಯಾಸ. ರಸಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರತಿ ವರ್ಷವೂ ಭಾಗವಹಿಸಿ ಬಹುಮಾನ ಗಳಿಸುತ್ತಿದ್ದರು. ಇವರು 'ನ್ಯಾಷನಲ್ ಮೆರಿಟ್ ಸ್ಕಾಲರ್‌ಶಿಪ್' ಪಡೆದ ವಿದ್ಯಾರ್ಥಿನಿ. ವಿದ್ಯಾರ್ಥಿ ದೆಸೆಯಲ್ಲೆ ಇವರ ಲೇಖನಗಳು ಕರ್ಮವೀರ ಪತ್ರಿಕೆಯಲ್ಲಿ ಪ್ರಕಟವಾಗುತ್ತಿತ್ತು. ಆಕಾಶವಾಣಿಯಲ್ಲಿಯೂ ಇವರ ತಾಯಿಯೊಂದಿಗೆ ಕಾರ್ಯಕ್ರಮಗಳು ಪ್ರಸಾರವಾಗಿವೆ. ಇವರು ಬೆಳಗಾವಿ ಜಿಲ್ಲಾ ಲೇಖಕಿಯರ ಸಂಘದ ಎರಡು ವರ್ಷದ ಅವಧಿಗೆ ಗೌರವ ಅಧ್ಯಕ್ಷೆಯಾಗಿದ್ದರು.

ಪ್ರಕಟಿತ ಕೃತಿಗಳು:
ಕವನ ಸಂ. – ಹೇಮಗರ್ಭ, ಕಿಂಕಿಣಿ.
ಮಕ್ಕಳ ಕವನ ಸಂ. – ತಲಲಂ ಪಂ ಪಂ.
ಕಥಾ ಸಂ. – ಕಾತ್ಯಾಯಿನಿ ಅಮ್ಮನೂ ವೇಲು ಪಕ್ಷಿಯೂ.
ಸಂಪಾದನೆ – ಕಾವ್ಯ ಕುಂದಣ (ಸಹ ಸಂಪಾದಕರೊಂದಿಗೆ).

ಲಭಿಸಿರುವ ಪ್ರಶಸ್ತಿಗಳು:
೧ ಗುಡಿಬಂಡೆ ಪೂರ್ಣಿಮಾ ಪ್ರಶಸ್ತಿ.
೨ ಬೆಳಗಾವಿ ಸಾಹಿತ್ಯ ಪ್ರತಿಷ್ಠಾನದ ಸಿರಿಗನ್ನಡ ಪ್ರಶಸ್ತಿ.
೩ ಕಾಸರಗೋಡು ಸಾಹಿತ್ಯ ಪ್ರತಿಷ್ಠಾನದ 'ಸುವರ್ಣ ಕರ್ನಾಟಕ ಪ್ರಶಸ್ತಿ'.
೪ ಸಾಹಿತ್ಯ ಪರಿಷತ್ತಿನ 'ಕೆ ವಾಸುದೇವಾಚಾರ್ ದತ್ತಿ ಬಹುಮಾನ.
೫ ೨೦೦೬ – ಸಂಯುಕ್ತ ಕರ್ನಾಟಕ ಯುಗಾದಿ ಕವನ ಸ್ಪರ್ಧೆಯ ಬಹುಮಾನ.
೬ ೨೦೦೭ – ಗೀತಾ ದೇಸಾಯಿ ದತ್ತಿ ನಿಧಿ ಕಥಾ ಸ್ಪರ್ಧೆ ಬಹುಮಾನ.
೭ ೨೦೦೭ – ಗೀತಾ ಕುಲಕರ್ಣಿ ದತ್ತಿ ನಿಧಿ ಕಥಾಸ್ಪರ್ಧೆ ಬಹುಮಾನ.
೮. ೨೦೧೦ – ತುಷಾರ ೩೬ನೇ ಹುಟ್ಟುಹಬ್ಬ ಕಥಾ ಸ್ಪರ್ಧೆ ಪುರಸ್ಕಾರ.

ವ್ಯಕ್ತಿ ಪರಿಚಯ

ಸಂಗಪ್ಪ ಮಲ್ಲಪ್ಪ ಬಾಗಲಕೋಟ

೧. ಹೆಸರು : ಸಂಗಪ್ಪ ಮಲ್ಲಪ್ಪ ಬಾಗಲಕೋಟ

೨. ಕಾವ್ಯನಾಮ : ಸಂಗಮೇಶ ಬಾಗಲಕೋಟ

೩. ಹುಟ್ಟಿದ ಸ್ಥಳ ದಿನಾಂಕ : ಬಾಗಲಕೋಟ, ೯–೩–೧೯೩೭

೪. ಜಿಲ್ಲೆ – ರಾಜ್ಯ : ವಿಜಾಪುರ, ಕರ್ನಾಟಕ.

೫. ವಿದ್ಯಾಭ್ಯಾಸ : ಟ್.ಸಿ.ಎಲ್.

೬. ವೃತ್ತಿ : ಶಿಕ್ಷಕ ನಿವೃತ್ತಿ

೭. ಕೌಟುಂಬಿಕ : ಪತ್ನಿ; ಬಸಮ್ಮ.
ಪುತ್ರರು; ಶ್ರೀಶೈಲ, ಮಲ್ಲಿಕಾರ್ಜುನ

೮. ಸದ್ಯದ ವಿಳಾಸ : ಸಂಗಮೇಶ ಬಾಗಲಕೋಟೆ, ರೋಣಿಹಾಲ,
ಬಾಗೆವಾಡಿ, ವಿಜಾಪುರ–೫೮೩೨೧೧.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೬೧೧೫೩೭೯೨೯, ೯೪೪೯೩೫೩೪೪೯

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಬಾಗಲಕೋಟೆಯಲ್ಲಿ ಜನಿಸಿದರು. ಟಿ.ಸಿ.ಎಲ್. ೧೧ನೆ ಟ್ರೆಂಡ್ ಶಿಕ್ಷಣ ಮುಗಿಸಿ ೨-೬-೧೯೬೨ ರಲ್ಲಿ ಪ್ರಾಥಮಿಕ ಶಿಕ್ಷಣ ಶಾಲಾ ಶಿಕ್ಷಕರಾಗಿ ಜೀವನ ಆರಂಭಿಸಿ ಮೂವತ್ತಮೂರು ವರ್ಷ ಶಿಕ್ಷಣ ಇಲಾಖೆಗೆ ಸೇವೆ ಸಲ್ಲಿಸಿ ೧೯೯೫ರಲ್ಲಿ ಸೇವೆಯಿಂದ ನಿವೃತ್ತರಾದರು. ವೃತ್ತಿಯಿಂದ ಶಿಕ್ಷಕರು ಪ್ರವೃತ್ತಿಯಿಂದ ಸಾಹಿತಿಗಳು, ಅದರಲ್ಲೂ ಮಕ್ಕಳ ಸಾಹಿತ್ಯದ ಬಗ್ಗೆ ಹೆಚ್ಚಿನ ಒಲವು. ಶಾಲ ದಿನಗಳಲ್ಲಿಯೇ ಓದು ಬರೆಹದೊಂದಿಗೆ ಮಕ್ಕಳ ಸಾಹಿತ್ಯ ರಚಿಸ ತೊಡಗಿದರು. ಕವನ ರಚಿಸಿದರು. ಮಕ್ಕಳ ಸಾಹಿತ್ಯ ರಚನೆಯಲ್ಲಿ ವಿಶೇಷ ತರಬೇತಿ ಪಡೆದರು. ೧೯೮೮ರಲ್ಲಿ ಧಾರವಾಡದಲ್ಲಿ ಮಕ್ಕಳ ಮನೆ ಇವರು ಜರುಗಿಸಿದ ವಿಚಾರ ಗೋಷ್ಠಿಯಲ್ಲಿ, ೧೯೯೦ರಲ್ಲಿ ಮಕ್ಕಳ ನಾಟಕ ರಚನಾ ಶಿಬಿರದಲ್ಲಿ, ೧೯೮೮ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಅಷ್ಟಭಾಷಾ ಕವಿಗೋಷ್ಠಿಯಲ್ಲಿ, ೧೯೯೪ರಲ್ಲಿ ಜಮಖಂಡಿಯಲ್ಲಿ ಜರುಗಿದ ೩ನೇ ಶಿಕ್ಷಣ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ, ೧೯೯೨ರಲ್ಲಿ ಚೆನ್ನಪಟ್ಟಣದಲ್ಲಿ ಜರುಗಿದ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಗೋಷ್ಠಿಯಲ್ಲಿ ಇವರು ಸಕ್ರಿಯವಾಗಿ ಭಾಗವಹಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 'ಕಾಲು ಶತಮಾನ' ಸಂಪಾದನಾ ಕೃತಿಯಲ್ಲಿ ಇವರ ಕವನಗಳು ಸೇರಿವೆ. ಮಹಾರಾಷ್ಟ್ರ ರಾಜ್ಯ ಹೊರ ತಂದಿರುವ ಕನ್ನಡ ಪಠ್ಯ ಪುಸ್ತಕದಲ್ಲಿ ಇವರ ಕವನ ಆಯ್ಕೆಯಾಗಿದೆ. ಇವರ ಬರೆಹಗಳು ನಾಡಿನ ಪ್ರಸಿದ್ಧ ಪತ್ರಿಕೆಗಳಾದ ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಸುಧಾ ಹಾಗೂ ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರಕಟಿತ ಕೃತಿಗಳು:
ಮಕ್ಕಳ ಕವನ ಸಂ. – ಪತಂಗ, ಬಣ್ಣದ ಕಾರು, ಗುಲಾಬಿ ಗುಚ್ಛ.

ಲಭಿಸಿರುವ ಪ್ರಶಸ್ತಿಗಳು:

೧. ೧೯೮೮ – ಗುಲಾಬಿ ಗುಚ್ಛ ಕೃತಿಗೆ ಬನಹಟ್ಟಿ ಮಹದೇವಪ್ಪ ಕರ್ಲಟ್ಟಿ ಪುರಸ್ಕಾರ.
೨. ೧೯೯೯ ಅದೇ ಕೃತಿಗೆ ಕಂಚ್ಯಾಣಿ ಶರಣಪ್ಪ ದತ್ತ ನಿಧಿ ಪುರಸ್ಕಾರ.
೩. ೧೯೯೯ ಅದೇ ಕೃತಿಗೆ ಬಾಗಲಕೋಟೆ ಶ್ರೀ ಗುರು ಗಂಗಾಧರ ಸ್ವಾಮಿ ಸರಗಣಾಚಾರ ಪುರಸ್ಕಾರ.

ವ್ಯಕ್ತಿ ಪರಿಚಯ

ಡಾ॥ ಸತೀಶಕುಮಾರ.ಶಿ.ಗವತಿ.

೧.	ಹೆಸರು	:	ಡಾ॥ ಸತೀಶಕುಮಾರ.ಶಿ.ಗವತಿ.
೨.	ಕಾವ್ಯನಾಮ	:	ಡಾ॥ಎಸ್.ಎಸ್.ಗವತಿ.
೩.	ಹುಟ್ಟಿದ ಸ್ಥಳ ದಿನಾಂಕ	:	ಶಿಂಧಿಹಟ್ಟಿ. ತಾ.ಹುಕ್ಕೇರಿ. ೨೪-೦೯-೧೯೬೦.
೪.	ಜಿಲ್ಲೆ - ರಾಜ್ಯ	:	ಜಿ. ಬೆಳಗಾವಿ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಎಲ್.ಎಲ್.ಬಿ., ಪಿಹೆಚ್.ಡಿ.
೬.	ವೃತ್ತಿ	:	ಉಪನ್ಯಾಸಕ
೭.	ಕೌಟುಂಬಿಕ	:	ಪತ್ನಿ; ಗೀತಾ. ಪುತ್ರಿ; ಪೂಜಾ. ಪುತ್ರ; ಅನೂಪ
೮.	ಸದ್ಯದ ವಿಳಾಸ	:	ಸತ್ಯಗೀತ ನಿಲಯ, ಅಂಜನೇಯ ನಗರ, ಹುಕ್ಕೇರಿ. ೫೯೧೩೦೨. ಜಿ. ಬೆಳಗಾವಿ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೪೪೯೧೦೭೯೪೦
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕು ಶಿಂಧಿಹಟ್ಟಿಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಶಿಂಧಿಹಟ್ಟಿ ಹಾಗೂ ಹಿಡಕಲ್ ಡ್ಯಾಂನಲ್ಲಾಯಿತು. ಪ್ರೌಢ ಶಿಕ್ಷಣವೂ ಅಲ್ಲೇ. ಪದವಿ ಸಂಕೇಶ್ವರ. ೧೯೮೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ೧೯೮೬ರಲ್ಲಿ ಬಿ.ವಿ. ಬೆಲ್ಲದ ಕಾನೂನು ಮಹಾವಿದ್ಯಾಲಯದಲ್ಲಿ ೧೯೮೯ರಲ್ಲಿ ಎಲ್.ಎಲ್.ಬಿ. ಪದವಿಗಳಿಸಿದ್ದಾರೆ. ೧೯೯೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ದಿ ಇಂಪ್ಯಾಕ್ಟ್ ಆಫ್ ಎಕಾನಮಿಕ್ ಡೆವಲೆಪ್‌ಮೆಂಟ್ ಆನ್ ಪೊಲಿಟಿಕಲ್ ಪಾರ್ಟಿಸಿಪೇಷನ್' ವಿಷಯದ ಕುರಿತು ಮಹಾಪ್ರಬಂಧ ಮಂಡಿಸಿ ಪಿಹೆಚ್.ಡಿ. ಪದವಿಗಳಿಸಿದ್ದಾರೆ. ಇದು ರಾಜ್ಯಾಶಾಸ್ತ್ರಕ್ಕೆ ಸಂಬಂಧಿಸಿದೆ. ಇವರು ೧೯೮೩ರಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿ ಹುಕ್ಕೇರಿಯ ಎಸ್.ಎಸ್.ಎನ್. ಮಹಾವಿದ್ಯಾಲಯದಲ್ಲಿ ವೃತ್ತಿ ಜೀವನ ಆರಂಭಿಸಿದರು. ಈಗ ಆಯ್ಕೆ ಶ್ರೇಣಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳು. ಇವರ ಮೇಲೆ ಎಸ್.ಎಲ್. ಭೈರಪ್ಪ, ಚಿದಾನಂದ ಮೂರ್ತಿ ಹಾಗೂ ಪಾಟೀಲ ಪುಟ್ಟಪ್ಪ ಪ್ರಭಾವ ಬೀರಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ಕಥೆ, ಕವನ ಲೇಖನ ರಚಿಸಲು ಆರಂಭಿಸಿದರು. ಕ್ರೀಡೆ, ಪ್ರವಾಸ ಇವರ ಹವ್ಯಾಸ. ಒಳ್ಳೆ ಭಾಷಣಗಾರರು. ಇವರ ಸಾಹಿತ್ಯ ನಾಣ್ಯದ ಎರಡು ಮುಖಗಳಂತೆ ಸಾಹಿತ್ಯ ಹಾಗೂ ಕಾನೂನು ಎರಡನ್ನೂ ಒಳಗೊಂಡಿದೆ. ದೂರ ಶಿಕ್ಷಣ ನಿರ್ದೇಶನಾಲಯ ಧಾರವಾಡ ೨೦೦೫ ರಿಂದ ೨೦೦೯ರವರಗೆ ಬಿ.ಎ. ಹಾಗೂ ಎಂ.ಎ. ಪ್ರಥಮ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ರಾಜ್ಯ ಶಾಸ್ತ್ರ ವಿಷಯದ ಅಧ್ಯಯನ ಸಾಮಗ್ರಿ ಒದಗಿಸುತ್ತಿತ್ತು. ಇವರು ಬೆಳಗಾವಿಯ 'ಹಸಿರು ಕ್ರಾಂತಿ' ದಿನ ಪತ್ರಿಕೆಯ ಅಂಕಣಕಾರರಾಗಿ ೪೦ಕ್ಕೂ ಹೆಚ್ಚು ವಿಷಯಗಳ ಕುರಿತು ಲೇಖನ ಬರೆದಿದ್ದಾರೆ. ಇವರು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣ, ಹಾವೇರಿಯಲ್ಲಿ ನಡೆದ ಎಸ್.ಎಸ್. ಮಹಿಳಾ ಕಾಲೇಜ್ ರಾಷ್ಟ್ರೀಯ ವಿಚಾರ ಸಂಕಿರಣ, ಸಿಂಧಗಿಯಲ್ಲಿ ಜೆ.ಪಿ. ಪೋರ್‌ವಾಲ್ ಮಹಾವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ, ಕೂಡಲ ಸಂಗಮದಲ್ಲಿ ಜರುಗಿದ ಅಧ್ಯಾಪಕರ ವೇದಿಕೆಯ ರಾಜ್ಯಮಟ್ಟದ ವಿ.ಸ.ದಲ್ಲಿ ಹಾಗೂ ಜೆ.ಎಸ್.ಎಸ್. ಕಾಲೇಜು ಗೋಕಾಕದಲ್ಲಿ ನಡೆದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದಾರೆ.

ಪ್ರಕಟಿತ ಕೃತಿಗಳು:

ರಾಜ್ಯಶಾಸ್ತ್ರ – ಅಧ್ಯಕ್ಷೀಯ ಸರಕಾರ ಬೇಕೇ?, ಪ್ರಜಾಪ್ರಭುತ್ವ ಮತ್ತು ಮೌಲ್ಯಗಳು.

ಶೈಕ್ಷಣಿಕ – ಅಭ್ಯಸನ ಮತ್ತು ಯೋಜನೆಗಳ ಪಠ್ಯಕ್ರಮ ಮಾದರಿ ಪುಸ್ತಕ, ಕಾನೂನು ಭಾರತದ ಸಂವಿಧಾನ ಸರಕಾರ ಮತ್ತು ರಾಜಕೀಯ (ಸಹ ಲೇಖಕರೊಂದಿಗೆ), ಮಾನವನ ಹಕ್ಕುಗಳು, ಭಾರತದಲ್ಲಿ ಕೇಂದ್ರ ರಾಜ್ಯ ಸಂಬಂಧಗಳು.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೪ – ಹುಕ್ಕೇರಿ ತಾಲೂಕು ಆದರ್ಶ ಶಿಕ್ಷಕ – ಪ್ರಶಸ್ತಿ

ವ್ಯಕ್ತಿ ಪರಿಚಯ

ಡಾ|| ಸದಾನಂದ ಆರ್. ಶೆಟ್ಟಿ

೧. ಹೆಸರು : ಡಾ|| ಸದಾನಂದ ರಾಮಕೃಷ್ಣ ಶೆಟ್ಟಿ

೨. ಕಾವ್ಯನಾಮ : ಸದಾನಂದ

೩. ಹುಟ್ಟಿದ ಸ್ಥಳ ದಿನಾಕ : ಗೋಕರ್ಣ, ೦೬–೦೪–೧೯೩೭.

೪. ಜಿಲ್ಲೆ – ರಾಜ್ಯ : ಕುಮಟ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಎಂ.ಲಿಬ್.ಎಸ್.ಸಿ., ಎಂ.ಎ.
ಪಿಹೆಚ್.ಡಿ. ಎಲ್.ಎಲ್.ಬಿ., ಸಿ.ಐ.ಎಫ್.ಆರ್.

೬. ವೃತ್ತಿ : ನಿವೃತ್ತ ಗ್ರಂಥಪಾಲ,

೭. ಕೌಟುಂಬಿಕ : ಪತ್ನಿ; ಸುಮತಿ. ಪುತ್ರಿಯರು; ಶಾಲಿನಿ, ಪರಿಮಳ.

೮. ಸದ್ಯದ ವಿಳಾಸ : 'ಸರಸ್ವತಿ ಕೃಪಾ' ನಾಯಕ–ವಕೀಲ ಕಾಂಪೌಂಡ್,
ಬೆಳಗಾಂವ ರೋಡ, ಧಾರವಾಡ–೫೮೦೦೦೮

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೬–೨೪೪೨೨೭೭, ೯೪೮೧೧೬೨೫೭೫.

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕು ಗೋಕರ್ಣದಲ್ಲಿ ಜನಿಸಿದರು. ಪ್ರಾಥಮಿಕ ಹಾಗೂ ಮಧ್ಯಮಿಕ ಶಿಕ್ಷಣ ಅಂಕೋಲದಲ್ಲಿ ನಡೆಯಿತು. ಪ್ರತಿಭಾವಂತ ವಿದ್ಯಾರ್ಥಿ. ನ್ಯಾಷನಲ್ ಮೆರಿಟ್ ವಿದ್ಯಾರ್ಥಿ ವೇತನ ಪಡೆದವರು. ತಂದೆ ತಾಯಿಗಳೂ ಶಿಕ್ಷಕರು. ಅಂಚೆ ತಂತಿ ಇಲಾಖೆಯ ನೌಕರರಾಗಿ ಶಿಕ್ಷಣಾಭ್ಯಾಸ ಮುಂದುವರೆಸಿದರು. ಗುಲ್ಬರ್ಗಾದಲ್ಲಿ ಇರುವಾಗ ಬಿ.ಎ. ಆನರ್ಸ್ ಮಾಡಿದರು. ಪಿ.ಜಿ.ಡಿಗ್ರಿ ಮಾಡಿ ಇತಿಹಾಸ ವಿಷಯವಾದ ಯುಗಯುಗಾಂತರ ಬನವಾಸಿ ವಿಷಯದಲ್ಲಿ ಸಂಶೋಧನಾತ್ಮಕ ಪ್ರಬಂಧ ರಚಿಸಿ ಪಿಹೆಚ್.ಡಿ. ಪದವಿ ಪಡೆದರು. ಪ್ರವೃತ್ತಿಯಿಂದ ಸಾಹಿಗಳಾದ ಇವರು ಚುಟುಕ, ಕವಿತೆ ಬರೆಯು ತೊಡಗಿದರು. ಪ್ರಬಂಧ ಬರೆದರು. ವಿವಿಧ ವಿಷಯಗಳ ಕುರಿತು ಹಲವಾರು ಗ್ರಂಥಗಳನ್ನು ರಚಿಸಿದರು. ಆಕಾಶವಾಣಿಯಲ್ಲಿ ಇವರ ಭಾಷಣಗಳು ಪ್ರಸಾರವಾಗಿವೆ. ಇವರು ಹಲವಾರು ವಿಷಯಗಳ ಮೇಲೆ 'ಗ್ರಂಥ ವಿವರಣ ಪಟ್ಟಿ'ಗಳನ್ನು ಸಿದ್ಧಪಡಿಸಿ ಕೊಟ್ಟಿದ್ದಾರೆ. ದಾ.ರ. ಬೇಂದ್ರೆ, ವಿ.ಕೃ. ಗೋಕಾಕ, ಸಸ ಮಾಳವಾಡ, ಚೆನ್ನವೀರ ಕಣವಿ, ದಿನಕರ ದೇಸಾಯಿ, ಗೌರೀಶ ಕಾಯ್ಕಿಣಿ, ದೇವೇಂದ್ರ ಕುಮಾರ ಹಕಾರಿ, ಪಾ.ಪು. ಮುಂತಾದ ಸಾಹಿತಿ ದಿಗ್ಗಜರ ನಿಕಟ ಸಂಪರ್ಕವಿತ್ತು. ಉತ್ತಮ ಭಾಷಣಕಾರರು. ಗ್ರಂಥಪಾಲಕರಾಗಿ ಸೇರಿದ ಮೇಲೆ ಯುವಕರ ಮಾರ್ಗದರ್ಶಕರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಪಾಲಕರಾಗಿ ನಿವೃತ್ತರಾದರು. ಭಾರತೀಯ ಇತಿಹಾಸ ಹಾಗೂ ಶಾಸನ ಶಾಸ್ತ್ರ ವಿಭಾಗದಲ್ಲಿ, ನೇಷನಲ್ ಇನ್‌ಸ್ಟಿಟ್ಯೂಟ್ ಆಫ್ ಒಪನ್ ಸ್ಕೂಲಿಂಗ್ ನವದೆಹಲಿಯಲ್ಲಿ ಸಂಯೋಜಕರಾಗಿ, ರೋಟರಿ ಇಂಟರ್ ನೇಷನಲ್ ಅಧ್ಯಕ್ಷರಾಗಿ ಮಕ್ಕಳ ಅಕಾಡೆಮಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಸಾಹಿತ್ಯ ಕರಿಷತ್ತು, ಕರ್ನಾಟಕ ಹಿಸ್ಟಾರಿಕಲ್ ಸೊಸೈಟಿ, ಮಥಿಕ್ ಸೊಸೈಟ್ ಹಾಗೂ ಇಂಡಿಯನ್ ಲೈಬ್ರೆರಿ ಅಸೋಸಿಯೇಷನ್ ಮುಂತಾದ ಸಂಸ್ಥೆಗಳ ಸಂಪರ್ಕದಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರು ಕನ್ನಡ, ಇಂಗ್ಲೀಷ್, ಕೊಂಕಣಿಯಲ್ಲಿ ಭಾಷಣ ಮಾಡುತ್ತಾರೆ.

ಪ್ರಕಟಿತ ಕೃತಿಗಳು:

ಜೀವನ ಚರಿತ್ರೆ – ಯುಗ ಪ್ರವರ್ತಕ ಸ್ವಾಮಿ ವಿವೇಕಾನಂದ, ಮಾತೆ ಶಾರದದೇವಿ.

ಇತಿಹಾಸ – ಗದಗ ದರ್ಶನ, ಕರ್ನಾಟಕ ಶಿಲಾಶಾಸನ, ಬನವಾಸಿ–ಒಂದು ಸಾಂಸ್ಕೃತಿಕ ಸಮೀಕ್ಷೆ. ಗ್ರಂಥಾಲಯ, ಯುಗ ಯುಗಾಂತರ ಬನವಾಸಿ.

ಲಭಿಸಿರುವ ಪ್ರಶಸ್ತಿಗಳು:

೧. ವಿದ್ಯಾರತ್ನ ಪ್ರಶಸ್ತಿ ಪೌರ ಸನ್ಮಾನ.

೨. ಶಾರದ ಶಾಲ್ಮಲಾ ಪ್ರಶಸ್ತಿ.

೩. ಬನವಾಸಿ ಕದಂಬೋತ್ಸವ ಪ್ರಶಸ್ತಿ. ೪. ಮೇರಾ ಭಾರತ್ ಪ್ರಶಸ್ತಿ.

೫. ೨೦೦೭ – ಶೃಂಗೇರಿ ಶೀ ಶಾರದಾ ಪೀಠ ಪೌರ ಸನ್ಮಾನ.

೬. ನವದೆಹಲಿ ಇಂದಿರಾ ಗಾಂಧಿ ಪ್ರಶಸ್ತಿ.

೭. ರೋಟರಿ ಇಂಟರ್ ನೇಷನಲ್ ಪಲ್ಸ್ ಪೋಲಿಯೋ ನಿವಾರಣ ಪ್ರಶಸ್ತಿ.

೮. ಮಕ್ಕಳ ಅಕಾಡೆಮಿ ಹಾಗೂ ರೋಟರಿ ಕ್ಲಬ್ ಆದರ್ಶ ಶಿಕ್ಷಕ ಪ್ರಶಸ್ತಿ.

ವ್ಯಕ್ತಿ ಪರಿಚಯ

ಸಂಧ್ಯಾ .ಸಿ.ಆರ್.

೧.	ಹೆಸರು	:	ಸಂಧ್ಯಾ .ಸಿ.ಆರ್.
೨.	ಕಾವ್ಯನಾಮ	:	ಸಂಧ್ಯಾಸುರೇಶ್
೩.	ಹುಟ್ಟಿದ ಸ್ಥಳ ದಿನಾಂಕ	:	ಚಿಕ್ಕಮಗಳೂರು, ೧೮-೧೦-೧೯೬೪
೪.	ಜಿಲ್ಲೆ - ರಾಜ್ಯ	:	ಚಿಕ್ಕಮಗಳೂರು, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ. ಸಮಾಜ ಶಾಸ್ತ್ರ, ಡಿಪ್ಲೊಮಾ ಪತ್ರಿಕೋದ್ಯಮದಲ್ಲಿ, ಟಿ.ಸಿ.ಹೆಚ್.
೬.	ವೃತ್ತಿ	:	ಶಿಕ್ಷಕಿ
೭.	ಕೌಟುಂಬಿಕ	:	ಪತಿ; ಸುರೇಶ್ ವಿ ಪಾಂಡುರಂಗಿ
೮.	ಸದ್ಯದ ವಿಳಾಸ	:	ನಂ. ೫೧೭/೨, ಶ್ರೀ ರೇಣುಕಾ ಕೃಪ, ರಾಂ ಅಂಡ್ ಕೋ. ವೃತ್ತ. ಪಿ.ಜೆ.ಬಡಾವಣೆ, ದಾವಣಗೆರೆ-೫೭೭೦೦೨
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೯೮೦೧೮೩೫೪೨, ೯೮೪೪೪೦೨೯೧೭, ೯೪೮೧೩೬೧೦೮೧.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಚಿಕ್ಕಮಗಳೂರಿನಲ್ಲಿ ಹುಟ್ಟಿದರು. ಇವರು ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾಭ್ಯಾಸವನ್ನು ಚಿಕ್ಕಮಗಳೂರಿನಲ್ಲಿ ಮಾಡಿದರು. ಶಿಕ್ಷಕರ ತರಬೇತಿ ೧೯೮೨ ದಾವಣಗೆರೆ. ಪಿ.ಯು.ಸಿ., ಬಿ.ಎ. ದಾವಣಗೆರೆ. ಎಂ.ಎ. ಸಮಾಜಶಾಸ್ತ್ರ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ ೧೯೯೬ ಮೈಸೂರು. ಅಲ್ಲೇ ಇವರು ಕನ್ನಡ ಎಂ.ಎ. ಕೂಡ ಮಾಡಿದ್ದಾರೆ. ಪತ್ರಿಕೋದ್ಯಮ ಡಿಪ್ಲೊಮಾ ಮಾಡಿದ್ದಾರೆ. ೧೯೮೩ ಖಾಸಗೀ ಶಾಲೆಯಲ್ಲಿ ವೃತ್ತಿ ಜೀವನ ಆರಂಭ. ೧೯೯೯ರವರಗೆ ಅರೆ ಸರಕಾರಿ ಸೇವೆ. ೨೦೦೪ ರಿಂದ ಹರಿಹರ ತಾಲೂಕು ಬೆಳ್ಳೂರಿನಲ್ಲಿ ಸಹ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಲೆ ದಿನಗಳಲ್ಲೇ ಕಥೆ, ಕವನ, ಲೇಖನ ಬರೆಯಲು ಆರಂಭ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ. ಸಂಗೀತ, ಚಿತ್ರಕಲೆ ಹವ್ಯಾಸ. ಕುವೆಂಪು, ರವಿ ಬೆಳಗೆರೆ, ಜಯಂತ ಕಾಯ್ಕಿಣಿ, ಬೇಂದ್ರೆ, ಪೂಚಂತೆ ಮುಂತಾದ ಸಾಹಿತಿಗಳು ಇವರ ಮೇಲೆ ಪ್ರಭಾವ ಬೀರಿದ್ದಾರೆ. ಇವರ ಕವನ, ಕಥೆಗಳು ಜನತವಾಣಿ, ನಗರವಾಣಿ, ಪ್ರಿಯಾಂಕ, ಸುಧಾ, ತರಂಗ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಇವರು ೬೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿ ಹಾಗೂ ಮಹಿಳಾ ಸಮಿತಿಗಳಲ್ಲಿ ಭಾಗವಹಿಸಿದ್ದರು. ಚುಟುಕ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಇವರು ಸುಮಾರು ೪೦೦ ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಅತಿಥಿ, ನಿರೂಪಕಿಯಾಗಿ ಭಾಗವಹಿಸಿದ್ದಾರೆ. ರಾಯಚೂರಿನಲ್ಲಿ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕವಿಗೋಷ್ಠಿಯಲ್ಲಿ ಕಾವ್ಯವಾಚನ ಮಾಡಿದ್ದಾರೆ. ಇವರು ನಾಟಕ, ನೃತ್ಯ, ಏಕಪಾತ್ರಭಿನಯ ಕೂಡ ಮಾಡುತ್ತಾರೆ. ಶಾಲಾ ಕಾಲೇಜು ಹಂತದಲ್ಲಿಯೇ ಇವರು ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಒಂದೆರೆಡು ಚಲನ ಚಿತ್ರಗಳಲ್ಲಿ ಗೌರವ ನಟಿಯಾಗಿ ಅಭಿನಯಿಸಿದ್ದಾರೆ. ಇವರದು ಬಹುಮುಖ ಪ್ರತಿಭೆ. ಯಕ್ಷಗಾನ ಪ್ರಸಂಗದಲ್ಲೂ ಪುಟ್ಟ ಪಾತ್ರ ವಹಿಸಿದ್ದಾರೆ. ೨೦೦೧ರಲ್ಲಿ ಇವರ ಪ್ರಥಮ ಕವನ ಸಂಕಲನ ಬಿಡುಗಡೆಯಾಯಿತು. ಇವರು ಬೆಳ್ಳಿಗೆರೆ-೬೧ ಪುಸ್ತಕಕ್ಕಾಗಿ ನೂರು-ನೂರಿಪ್ಪತ್ತು ಚಲನ ಚಿತ್ರ ನಟ-ನಟಿಯರ ಸಂದರ್ಶನ ಮಾಡಿದ್ದಾರೆ. ಜಿಲ್ಲಾ ಘಟಕದ ಚುಟುಕ ಸಾಹಿತ್ಯ ಪರಿಷತ್ತಿನ ಗೌ. ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ವನಿತಾ ಸಾಹಿತ್ಯವೇದಿಕೆ ಸದಸ್ಯೆಯಾಗಿದ್ದಾರೆ.

ಪ್ರಕಟಿತ ಕೃತಿಗಳು:
ಕವನ ಸಂ. – ಸಂಧ್ಯಾ ಕವಿತೆಗಳು. **ಕಥಾ ಸಂ. –** ನಿಲ್ಲು ನಿಲ್ಲೇ ಪತಂಗ.

ಲಭಿಸಿರುವ ಪ್ರಶಸ್ತಿಗಳು:
೧. ದಾವಣಗೆರೆ ಗೃಹಿಣಿ ಪ್ರಶಸ್ತಿ.
೨. ಏಕ ಪಾತ್ರಾಭಿನಯಕ್ಕಾಗಿ ಬಹುಮಾನ.

ವ್ಯಕ್ತಿ ಪರಿಚಯ

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

೧.	ಹೆಸರು	:	ಸಂತೇಬೆನ್ನೂರು ಸುಮತೀಂದ್ರ ನಾಡಿಗ್
೨.	ಕಾವ್ಯನಾಮ	:	ಸುಮನಾ
೩.	ಹುಟ್ಟಿದ ಸ್ಥಳ ದಿನಾಂಕ	:	ಸಂತೇಬೆನ್ನೂರು. ೮-೧೧-೧೯೪೫.
೪.	ಜಿಲ್ಲೆ - ರಾಜ್ಯ	:	ದಾವಣಗೆರೆ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ., ಡಿಪ್ಲೊಮಾ ಇನ್ ಜರ್ನಲಿಸಂ.
೬.	ವೃತ್ತಿ	:	ವ್ಯವಸಾಯೋದ್ಯಮಿ
೭.	ಕೌಟುಂಬಿಕ	:	ಪತ್ನಿ; ಪದ್ಮಲತಾ ನಾಡಿಗ್. ಪುತ್ರಿ; ಛಾಯಶ್ರೀ. ಪುತ್ರ; ಗೋವಿಂದ ಚೇತನ.
೮.	ಸದ್ಯದ ವಿಳಾಸ	:	ಕೋಟೆ ರಸ್ತೆ, ಸಂತೇಬೆನ್ನೂರು-೫೭೭೫೫೨
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೧೮೦-೨೫೬೪೫೧, ೯೯೦೦೨೪೩೭೮೦
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ದಾವಣಗೆರೆ ಜಿಲ್ಲೆ ಸಂತೆಬೆನ್ನೂರಿನಲ್ಲಿ ಜನಿಸಿದರು. ಇವರು ಶ್ರೀ ಗೋವಿಂದರಾವ್ ನಾಡಿಗ ಮತ್ತು ಶ್ರೀಮತಿ ರಂಗಮ್ಮ ದಂಪತಿಗಳ ಪುತ್ರ. ಇವರು ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣ ಹುಟ್ಟೂರಿನಲ್ಲೇ ಪಡೆದರು. ಪಿ.ಯು. ಸರ್ಕಾರಿ ಪದವಿ ಪೂರ್ವ ಕಾಲೇಜ್ ಸಂತೆಬೆನ್ನೂರು. ಬಾಹ್ಯ ಪದವಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಜರ್ನಲಿಸಂ ಡಿಪ್ಲೊಮಾ ಬಾಹ್ಯ ಮೈಸುರು ವಿಶ್ವವಿದ್ಯಾಲಯ ವೃತ್ತಿಯಿಂದ ವ್ಯವಸಾಯಗಾರ. ಪ್ರವೃತ್ತಿಯಿಂದ ಸಾಹಿತಿ. ಇತಿಹಾಸ ಸಂಶೋಧಕ. ಪತ್ರಕರ್ತ. ಶಾಸನಗಳು ಹಾಗೂ ಹಸ್ತಪ್ರತಿಗಳ ಪತ್ತೆ ಹಚ್ಚುತ್ತಾರೆ. ಚೆನ್ನಗಿರಿ ತಾಲೂಕು ಶಾಸನಗಳು ಮತ್ತು ಇತಿಹಾಸ ಹಾಗೂ ದಾವಣಗೆರೆ ಜಿಲ್ಲೆ ಶಾಸನ ಮತ್ತು ಇತಿಹಾಸ ಸಂಶೋಧಕರು. ಇತ್ತೀಚಿಗೆ ದಾವಣಗೆರೆ ಜಿಲ್ಲೆ ಇತಿಹಾಸದ ಕೆಲವು ಹೆಜ್ಜೆಗಳು ಗ್ರಂಥ ರಚಿಸಿ ಪ್ರಕಟಿಸಿದ್ದಾರೆ. ನಾಣ್ಯ ಮತ್ತು ಅಂಚೆ ಚೀಟಿ ಸಂಗ್ರಹ ಹವ್ಯಾಸ. ಛಾಯ ಚಿತ್ರ ಪ್ರದರ್ಶನ, ಚಾರಿತ್ರಿಕ ಸ್ಥಳಗಳ ವೀಕ್ಷಣೆ, ಸಭಾ ಸಮಾರಂಭಗಳಲ್ಲಿ ವಿಚಾರ ಸಂಕೀರಣಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡನೆ. ಇವರು ಗ್ರಾಮೀಣ ವಾಣಿ ಸಹಸಂಪಾದಕರಾಗಿ, ಪ್ರಜಾವಾಣಿ ವರದಿಗಾರರಾಗಿ ಹಾಗೂ ವಿಜಯ ಕರ್ನಾಟಕದ ವರದಿಗಾರನಾಗಿ ಕಾರ್ಯನಿರ್ವಹಿಸಿದ್ದಾರೆ. ಆಕಾಶವಾಣಿ ಚಿಂತನ, ರಶ್ಮಿ ಕಾರ್ಯಕ್ರಮ ಹಾಗೂ ರಸಪ್ರಶ್ನೆ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ನೂರಕ್ಕೂ ಹೆಚ್ಚು ಪತ್ರಿಕಾ ಲೇಖನಗಳನ್ನು ಬರೆದಿದ್ದಾರೆ. ಮೂವತ್ತಕ್ಕೂ ಹೆಚ್ಚು ಅಪ್ರಕಟಿತ ಶಾಸನಗಳನ್ನು ಪತ್ತೆಹಚ್ಚಿದ್ದಾರೆ. ಸಮಾಜ ಸೇವಕರು. ವಿಜಯ ಯುವಕ ಸಂಘದ ಶಿಕ್ಷಣ ಸಂಸ್ಥೆಗಳ ಕಾರ್ಯ ನಿರ್ವಾಹಣಾಧಿಕಾ-ರಿಯಾಗಿ, ದಾವಣಗೆರೆ ಜಿಲ್ಲೆ ಇತಿಹಾಸ ಸಂಶೋಧನಾ ಮಂಡಳಿ ಉಪಾಧ್ಯಕ್ಷರಾಗಿ, ಚೆನ್ನಗಿರಿ ತಾಲೂಕು ಮಕ್ಕಳ ಸಾಹಿತ್ಯ ವೇದಿಕೆಯ ಉಪಾಧ್ಯಕ್ಷರಾಗಿ ಇನ್ನೂ ಹಲವಾರು ಸಂಘ ಸಂಸ್ಥೆಗಳ ಪದಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಕ.ಸಾ.ಪ. ಬೆಂಗಳೂರು ಕರ್ನಾಟಕ ಇತಿಹಾಸ ಅಕಾಡೆಮಿ ಹಾಗೂ ಕರ್ನಾಟಕ ಮಕ್ಕಳ ಸಾಹಿತ್ಯ ವೇದಿಕೆಯ ಸದಸ್ಯರು. ಸಂತೇಬೆನ್ನೂರು ಹೊಬಳಿ ಕ.ಸಾ.ಪ. ಮಾಜಿ ಅಧ್ಯಕ್ಷ. ಚೆನ್ನಗಿರಿ ತಾಲೂಕು ಕ.ಸಾ.ಪ.ನ ಮಾಜಿ ಕೋಶಾಧ್ಯಕ್ಷ. ಜಿಲ್ಲಾ ರಾಷ್ಟ್ರೀಯ ಹಸ್ತ ಪ್ರತಿ ಅಭಿಯಾನದ ಜಿಲ್ಲಾ ಸಂಯೋಜಕ. ಮಂತ್ರಾಲಯ ಮಾಧ್ವ ಮಠ ಶಾಸನ ಸಂಪುಟುಗಳ ಸದಸ್ಯ. ಸಂತೇಬೆನ್ನೂರು ರಾಮಚಂದ್ರ ದೇವಸ್ಥಾನ ಸಮಿತಿ ಹಾಗೂ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿಗಳ ಸದಸ್ಯ. ಇವರು ಅಮೆರಿಕಾ, ಕೆನಡ, ಭಾರತಗಳ ಪ್ರವಾಸ ಮಾಡಿಬಂದಿದ್ದಾರೆ.

ಪ್ರಕಟಿತ ಕೃತಿಗಳು:

ಶಿಶು ಸಾಹಿತ್ಯ – ಶಿಶು ವಿಹಾರದ ಶಿಕ್ಷಕಿಯರ ಮಾರ್ಗದರ್ಶಿ. **ಭಕ್ತಿ** – ಶ್ರೀರಾಮ ಭಜನಾ.
ಕಾವ್ಯ – ಸೂಳೆಕೆರೆ ಸಾಂಗತ್ಯ. **ಇತಿಹಾಸ** – ಸಂತೇಬೆನ್ನೂರು ನಾಯಕರು, ಕನ್ನಡ ಪರಿಚಾರಕರು.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೧ – ಸಂತೆಬೆನ್ನೂರಿನ ವಿಜಯ ಯುವಕ ಸಂಘದ ಸನ್ಮಾನ.
೨. ೨೦೦೨ – ಚೆನ್ನಗಿರಿ ತಾಲೂಕು ಕನ್ನಡ ರಾಜ್ಯೋತ್ಸವ ಸಮಿತಿ ಸನ್ಮಾನ.
೩. ೨೦೦೬ – ನಂಜನಗೂಡಿನ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಸನ್ಮಾನ.
೪. ೨೦೦೮ – ದಾವಣಗೆರೆ ಜಿಲ್ಲಾಡಳಿತ ರಾಜ್ಯೋತ್ಸವ ಪ್ರಶಸ್ತಿ.
೫. ೨೦೦೯ – ಚೆನ್ನಗಿರಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸನ್ಮಾನ.

ವ್ಯಕ್ತಿ ಪರಿಚಯ

ಸರದೇಶಪಾಂಡೆ. ಶ್ರೀ. ಚಿ.

೧.	ಹೆಸರು	:	ಸರದೇಶಪಾಂಡೆ. ಶ್ರೀಕೃಷ್ಣ. ಚಿದಂಬರ.
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಬೆಳಗಾವಿ, ೪-೯-೧೯೩೪.
೪.	ಜಿಲ್ಲೆ - ರಾಜ್ಯ	:	ಬೆಳಗಾವಿ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎಸ್.ಸಿ.
೬.	ವೃತ್ತಿ	:	ನಿವೃತ್ತ ಸೈನ್ಯಾಧಿಕಾರಿ
೭.	ಕೌಟುಂಬಿಕ	:	ವಿಧುರ, ಇಬ್ಬರು ಪುತ್ರರು. ಒಬ್ಬ ಪುತ್ರಿ.
೮.	ಸದ್ಯದ ವಿಳಾಸ	:	೧೩-ಅ, 'ಶಿಶಿರ', ೧ನೇ ಕ್ರಾಸ್, ರಜತಗಿರಿ, ಧಾರವಾಡ-೫೮೦೦೦೪
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೬-೨೪೬೧೭೯೮
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬೆಳಗಾವಿಯಲ್ಲಿ ಜನಿಸಿದರು. ಬಿ.ಎಸ್.ಸಿ.ವರಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಪ್ರಾಥಮಿಕ ಶಿಕ್ಷಣ ಸವದತ್ತಿ ತಾಲೂಕು ಮುನವಳ್ಳಿಯಲ್ಲಾಯಿತು. ನಂತರ ಬೋರ್ಡ್ ಹೈಸ್ಕೂಲ್ ಧಾರವಾಡ ಹಾಗೂ ಮೆಟ್ರಿಕ್ ಮಾಡಿ ೧೯೫೧ರಲ್ಲಿ ಭೋಸಲಾ ಮಿಲಿಟರಿ ಸ್ಕೂಲ್ ನಾಸಿಕ್‌ನಲ್ಲಾಯಿತು. ೧೯೫೫ನಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಬಿ.ಎಸ್.ಸಿ. ಪದವಿ ಗಳಿಸಿದರು. ನಂತರ ಅಧಿಕಾರಿಯಾಗಿ ಸೈನ್ಯ ಸೇರಿದರು. ೧೯೯೦ರವರಗೆ ಸೇವೆ ಸಲ್ಲಿಸಿ ನಿವೃತ್ತರಾದರು. ೨೦೦೧ರಿಂದ ಕನ್ನಡ ಸಾಹಿತ್ಯದ ಬಗ್ಗೆ ಒಲವಿದ್ದು ಬರೆಯಲು ಉಪಕ್ರಮಿಸಿದರು. ವೃತ್ತಿಯಿಂದ ಮಿಲಿಟರಿ ಅಧಿಕಾರಿ ಆದರೂ ಪ್ರವೃತ್ತಿಯಿಂದ ಸಾಹಿತಿಗಳಾದ ಇವರಿಗೆ ಮೊದಲಿನಿಂದಲೂ ಓದುವ ಬರೆಯುವ ಚಟವಿತ್ತು. ಕಥೆ, ಕಾದಂಬರಿ, ಇತಿಹಾಸ ಗ್ರಂಥಗಳನ್ನು ಒದುತ್ತಿದ್ದರು. ಪ್ರವಾಸ ಪ್ರಿಯರು. ಮಿಲಿಟರಿ ವಿಷಯಗಳ ಬಗ್ಗೆ ಹೆಚ್ಚಿನ ಆಸಕ್ತಿ. ಶಾಸ್ತ್ರೀಯ ಸಂಗೀತ ಕೇಳುವ ಹವ್ಯಾಸ. ಕುವೆಂಪು, ಬೇಂದ್ರೆ, ಕಾರಂತರು, ಭೈರಪ್ಪ, ಮಾಸ್ತಿ, ಅನಂತಮೂರ್ತಿ, ಡಿ.ವಿ.ಜಿ., ಗೋಕಾಕರು, ಮುಗಳಿ ಮುಂತಾದ ಸಾಹಿತಿಗಳು ಹಾಲ್ಕೇನ್, ಎ.ಜೆ. ಕ್ರಾನಿನ್, ಹೆನ್ರಿಕ್ ಇಬ್ಸನ್, ಮೊಪಾಸಾ, ಟಾಲ್‌ಸ್ಟಾಯ್ ಮುಂತಾದ ಪಾಶ್ಚಾತ್ಯ ಕವಿಗಳು ನೀರಜ ಚೌದರಿ, ಇರಾವತಿ ಕರ್ವೆ, ಪವನ ವರ್ಮ, ಯಶಪಾಲ್, ಅರುಂಧತಿ ರಾಯ್ ಮುಂತಾದ ಭಾರತೀಯ ಸಾಹಿತಿಗಳು ಇವರ ಮೇಲೆ ಪ್ರಭಾವ ಬೀರಿದ್ದಾರೆ. 'ಆಸ್ಥೆ' ಇವರ ಪ್ರಥಮ ಕಾದಂಬರಿ ೨೦೦೪ರಲ್ಲಿ ಇವರು ಯುದ್ಧ ಶಾಸ್ತ್ರದ ಮೇಲೆ ಬರೆದ ಪುಸ್ತಕ ಪ್ರಕಟವಾಯಿತು. ಇವರು ಆತ್ಮಕಥೆ ಬರೆದಿದ್ದಾರೆ. ನಾಗ ಬುಡಕಟ್ಟು ಜನರ ಬಗ್ಗೆ ೨೦೦೫ರಲ್ಲಿ ಒಂದು ಪುಸ್ತಕ ಬರೆದಿದ್ದಾರೆ. ೧೯೭೨ರಲ್ಲಿ ಇವರು ಕರ್ಮವೀರದಲ್ಲಿ ಯುದ್ಧ ಶಾಸ್ತ್ರ ಕುರಿತು ಲೇಖನಗಳನ್ನು ಬರೆದಿದ್ದಾರೆ, ಕಥೆ ಬರೆದಿದ್ದಾರೆ. ಕಸ್ತೂರಿ, ಉತ್ಥಾನಗಳಲ್ಲಿಯೂ ಇವರ ಬರೆಹಗಳು ಪ್ರಕಟವಾಗಿವೆ. ಇವರ ೫ ಆಂಗ್ಲ ಕಾದಂಬರಿಗಳನ್ನು ದೆಹಲಿಯ ಪ್ರಕಾಶಕರು ಪ್ರಕಟಿಸಿದ್ದಾರೆ. ಹಿಂದಿ, ಮರಾಠಿ ಸೇರಿ ಸಾವಿರಕ್ಕೂ ಹೆಚ್ಚು ಓದಿದ ಗ್ರಂಥಗಳನ್ನು ಗ್ರಂಥಾಲಯಗಳಿಗೆ ದಾನ ಮಾಡಿದ್ದಾರೆ. ೧೯೫೫ರಲ್ಲಿ ಐ.ಎಂ.ಎ. ವೃತ್ತಿ ಆರಂಭ. ತರಬೇತಿಯ ನಂತರ ಕುಮಾಂವು ರೆಜಿಮೆಂಟಿನಲ್ಲಿ ಸೇವೆ. ಜಮ್ಮು-ಕಾಶ್ಮೀರ್, ಪಂಜಾಬ್, ರಾಜಾಸ್ಥಾನ್, ಟಿಬೆಟ್ ಬಾರ್ಡರ್, ಅಸ್ಸಾಂ, ಮೇಘಾಲಯ, ನಾಗಲ್ಯಾಂಡ್, ಮಣಿಪುರ, ತ್ರಿಪುರ, ಮಿಜೋರಾಂ ಗಡಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಬಾಂಗ್ಲ, ಶ್ರೀಲಂಕಾ ನಾಗ ಬಂಡುಕೋರರ ವಿರುದ್ಧ ಯುದ್ಧ ಮಾಡಿದ್ದಾರೆ.

ಪ್ರಕಟಿತ ಕೃತಿಗಳು:

ಕಾದಂಬರಿ - ಆಸ್ಥೆ, ಗಡಿದಾಟಿದವರು, ಯುದ್ಧ ಕಲೆ-ಯುದ್ಧ-ಯೋಧ.

ಆತ್ಮಕಥೆ - ಹಿಡಿದ ದಾರಿ. **ಮಾನವಿಕ** - ನಾಗಜನಾಂಗ. ಖೆಮ್ನುಗನ್ನರು

ಲಭಿಸಿರುವ ಪ್ರಶಸ್ತಿಗಳು:

೧. ರಾಷ್ಟ್ರಪತಿಗಳಿಂದ ಎರಡು ಪದಕ.

೨. ೧೯೯೯ - ಕರ್ನಾಟಕ ರಾಜ್ಯ ಪ್ರಶಸ್ತಿ.

ವ್ಯಕ್ತಿ ಪರಿಚಯ

ಡಾ॥ ಸರಸ್ವತಿ ಟಿ.ಎಂ.

೧. ಹೆಸರು : ಡಾ॥ ಸರಸ್ವತಿ ಟಿ.ಎಂ.

೨. ಕಾವ್ಯನಾಮ : ಸರಸ್ವತೀ ರಾಜೇಂದ್ರ

೩. ಹುಟ್ಟಿದ ಸ್ಥಳ ದಿನಾಂಕ : ತಿಮ್ಮಸಂದ್ರ, ೦೭-೦೧-೧೯೪೬

೪. ಜಿಲ್ಲೆ - ರಾಜ್ಯ : ರಾಮನಗರ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಪಿಹೆಚ್.ಡಿ.

೬. ವೃತ್ತಿ : ಗೃಹಿಣಿ

೭. ಕೌಟುಂಬಿಕ : ಪತಿ; ಡಿ.ಕೆ. ರಾಜೇಂದ್ರ. ಪುತ್ರ; ಎಂ.ಆರ್.ಗೌತಮ್. ಪುತ್ರಿ; ಎಂ.ಆರ್. ಪುನೀತ.

೮. ಸದ್ಯದ ವಿಳಾಸ : ನಂ. ೪೮, 'ವಂದನ', ಮಾರುತಿ ದೇವಸ್ಥಾನದ ರಸ್ತೆ, ಸರಸ್ವತಿ ಪುರಂ, ಮೈಸೂರು-೫೭೦೦೦೯

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೨೧-೨೫೪೪೪೪೧೯

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ರಾಮನಗರ ಜಿಲ್ಲೆ ಚೆನ್ನಪಟ್ಟಣ ತಾಲೂಕು ತಿಮ್ಮಸಂದ್ರದಲ್ಲಿ ಜನಿಸಿದರು. ಇವರು ಶ್ರೀ ಟಿ. ಮಾದಯ್ಯ ಗೌಡರು ಮತ್ತು ಶ್ರೀಮತಿ ಟಿ. ಶಾರದಮ್ಮ ದಂಪತಿಗಳ ಪುತ್ರಿ. ತಂದೆ ಸ್ವಾತಂತ್ರ್ಯ ಹೋರಾಟಗಾರರು, ವಕೀಲರು, ರಾಜಕಾರಣಿಗಳು ಆಗಿದ್ದರು. ಬಾಲ್ಯದಿಂದಲೂ ಓದಿನಲ್ಲಿ ಚುರುಕಾಗಿದ್ದರು. ವಿಜ್ಞಾನ ವಿದ್ಯಾರ್ಥಿನಿಯಾಗಿ ಪಿ.ಯು.ಸಿ.ಯಲ್ಲಿ ರ್‍ಯಾಂಕ್ ಪಡೆದ ಪ್ರತಿಭಾನ್ವಿತೆ. ಅನಿವಾರ್ಯ ಕಾರಣಗಳಿಂದ ಆಗ ವಿದ್ಯಭ್ಯಾಸ ಮುಂದುವರಿಸಲಾಗಲಿಲ್ಲ. ೧೯೭೧ರಲ್ಲಿ ಜಾನಪದ ವಿದ್ವಾಂಸರಾದ ಡಾ||ಡಿ.ಕೆ. ರಾಜೇಂದ್ರ ಇವರೊಂದಿಗೆ ವಿವಾಹವಾಯಿತು. ಮೈಸೂರಿನ ನಿವಾಸಿಯಾದರು. ಓದಲು ಅನುಕೂಲವಿದ್ದ ಮೈಸೂರಿನಲ್ಲಿ ವ್ಯಾಸಂಗ ಮುಂದುವರಿಸಿದರು. ಮೈಸೂರು ಮುಕ್ತ ವಿಶ್ವ ವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರರಾದರು. ೫ ಚಿನ್ನದ ಪದಕ ಗಳಿಸಿದರು. ನಂತರ ಡಾ|| ಎನ್.ಎಸ್. ತಾರಾನಾಥ ಮಾರ್ಗದರ್ಶನದಲ್ಲಿ ಸಂಸೋಧನೆ ನಡೆಸಿ ಕನ್ನಡದಲ್ಲಿ ಉತ್ತರ ರಾಮ ಕಥಾ ಕಾವ್ಯಗಳು ವಿಷಯದಲ್ಲಿ ಪ್ರೌಢ ಪ್ರಬಂಧ ರಚಿಸಿ ಡಾಕ್ಟರೇಟ್ ಪದವಿ ಗಳಿಸಿದರು. ಮೊದಲಿನಿಂದಲೂ ಅಧ್ಯಯನದಲ್ಲಿ ಆಸಕ್ತಿವುಳ್ಳ ಇವರು ಆಧ್ಯಾತ್ಮಿಕ ಚಿಂತನದಲ್ಲಿಯೂ ತೊಡಗುವರು. ಇವರ ಸಾಹಿತ್ಯ ರಚನೆ ಕವನದಿಂದ ಪ್ರಾರಂಭವಾಯಿತು. ನಂತರ ಉತ್ತರ ರಾಮಾಯಣ ಇತ್ಯಾದಿ ಗ್ರಂಥಗಳ ಬಗ್ಗೆ ವಿಮರ್ಶೆ, ಲೇಖನಗಳನ್ನು ಬರೆಯ ತೊಡಗಿದರು. ನಂತರ ಮಕ್ಕಳ ಸಾಹಿತ್ಯ ರಚಿಸ ತೊಡಗಿದರು. ಅವೆಲ್ಲ ಪ್ರಕಟವಾಯಿತು. ಸಮಾಜ ಸೇವೆಯ ಹವ್ಯಾಸವುಳ್ಳ ಇವರು ಸಂಘ ಮಿತ್ರ ಸ್ನೇಹ ಕೂಟದ ಸದಸ್ಯರು. ಇವರು ಡಾ|| ತುಳಸಿ ರಾಮಚಂದ್ರ ಮತ್ತು ಡಾ|| ಉಷಾ ಪಾಠಕ್ ಅವರೊಂದಿಗೆ ಕೂಡಿ ಮೈಸೂರಿನಲ್ಲಿ 'ಸಾಹಿತ್ಯ ಸಿಂಚನ ಎಂಬ ಸಂಘ ಪ್ರಾರಂಭಿಸಿದ್ದಾರೆ. ಈ ಸಂಘವು ಹಲವಾರು ವರ್ಷಗಳಿಂದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಹಲವಾರು ಸಂಘ ಸಂಸ್ಥೆಗಳ ಸದಸ್ಯರಾದ ಇವರು ಮೈಸೂರು ರಾಮಕೃಷ್ಣಾಶ್ರಮದ ಕಾರ್ಯಕ್ರಮಗಳಲ್ಲಿ ಸ್ವಯಂ ಸೇವಕಿಯಾಗಿ ಪಾಲ್ಗೊಂಡು ಕಾರ್ಯ ನಿರ್ವಹಿಸುತ್ತಾರೆ.

ಪ್ರಕಟಿತ ಕೃತಿಗಳು:

ಕವನ ಸಂ. – ನಾನೊಂದು ಲೋಕ.

ವಿಮರ್ಶೆ – ಸಂಕಥನ, ಸಂಚೇತನ.

ಜೀವನ ಚರಿತ್ರೆ – ಸಂಚಿ ಹೊನ್ನಮ್ಮ, ಆದಿಕವಿ ವಾಲ್ಮೀಕಿ.

ಮಕ್ಕಳ ಸಾಹಿತ್ಯ – ಮಾತು ಮುತ್ತು.

ವ್ಯಕ್ತಿ ಪರಿಚಯ

ಡಾ॥ ಸರಸ್ವತಿ ವಿಜಯಕುಮಾರ್

೧.	ಹೆಸರು	:	ಡಾ॥ ಸರಸ್ವತಿ ವಿಜಯಕುಮಾರ್
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಮದ್ದೂರು, ೧೨–೧೨–೧೯೪೮.
೪.	ಜಿಲ್ಲೆ – ರಾಜ್ಯ	:	ಮಂಡ್ಯ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ. (ಕನ್ನಡ), ಬಿ.ಎಡ್., ಎಂ.ಎ. (ಜೈನ ಶಾಸ್ತ್ರ ಮತ್ತು ಪ್ರಾಕೃತ), ಪಿಹೆಚ್.ಡಿ.
೬.	ವೃತ್ತಿ	:	ಪ್ರಾಧ್ಯಾಪಕಿ
೭.	ಕೌಟುಂಬಿಕ	:	ಪತಿ; ವೈ.ಪಿ. ವಿಜಯಕುಮಾರ್. ಪುತ್ರಿಯರು; ತೇಜಸ್ವಿನಿ ವಿ.ಕುಮಾರ್, ಯಶಸ್ವಿನಿ ವಿ.ಕುಮಾರ್.
೮.	ಸದ್ಯದ ವಿಳಾಸ	:	ಎಂ.೨೮, ೧ನೇ ಹಂತ, ನೃಪತುಂಗ ರಸ್ತೆ, ಕುವೆಂಪು ನಗರ, ಮೈಸೂರು–೫೭೦೦೨೩
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೨೫೬೦೦೬೫
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ಜನಿಸಿದರು. ಇವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಶ್ರೀರಂಗ ಪಟ್ಟಣ ಮತ್ತು ಮಾಯಸಂದ್ರದಲ್ಲಿ ಪಡೆದರು. ಪ್ರೌಢ ಶಿಕ್ಷಣ ಸೆಂಟ್ ಮೇರಿಸ್ ಹೈಸ್ಕೂಲ್ ಮೈಸೂರು. ಬಿ.ಎ. ಮಹಾರಾಣಿ ಕಾಲೇಜ್ ಮೈಸೂರು. ಎಂ.ಎ. ಕನ್ನಡ ಎಂ.ಎ. ಪ್ರಾಕೃತ ಮತ್ತು ಜೈನ ಶಾಸ್ತ್ರ ಮೈಸೂರು ವಿಶ್ವವಿದ್ಯಾಲಯ ಮೈಸೂರು. ಕನ್ನಡದಲ್ಲಿ ಆದಿ ತೀರ್ಥಂಕರರ ಚರಿತೆಗಳು ಕುರಿತು ಮಹಾ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ. ಪಡೆದಿದ್ದಾರೆ ೧೯೯೨. ಶಾಲಾದಿನಗಳಲ್ಲೇ ಸಾಹಿತ್ಯಾಸಕ್ತರು. ನಾಟಕ, ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ೧೯೭೦ ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ವೃತ್ತಿ ಜೀವನ ಆರಂಭಿಸಿದರು. ೧೯೭೨ ರಿಂದ ೨೦೦೨ ರವರಗೆ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಮೈಸೂರಿನಲ್ಲಿ ಶಿಕ್ಷಣ ತಜ್ಞೆಯಾಗಿ ಸೇವೆ ಸಲ್ಲಿಸಿದರು. ಜೈನ ಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮೈಸೂರು ವಿಶ್ವವಿದ್ಯಾಲಯಯಲ್ಲಿ ಗೌರವ ಉಪನ್ಯಾಸಕರಾಗಿ ಎರಡು ವರ್ಷ ಸೇವೆ ಸಲ್ಲಿಸಿದರು. ಜೈನ ಸಾಹಿತ್ಯ ಶಾಸ್ತ್ರ ಸಿದ್ಧಾಂತಗಳಲ್ಲಿ ಇವರಿಗೆ ವಿಶೇಷ ಒಲವು. ಇದಕ್ಕೆ ಸಂಬಂಧ ಪಟ್ಟಂತೆ ಅನೇಕ ಲೇಖನಗಳು ತರಂಗ, ಹೊಸತು, ಮಲ್ಲಾರ, ವಿವೇಕ ಪ್ರಭ, ಆಂಗ್ಲ ಜೈನ್ ಜರ್ನಲ್, ಮೊದಲಾದ ಪತ್ರಿಕೆಗಳಲ್ಲಿ, ವಿಶ್ವವಿದ್ಯಾಲಯ ಪತ್ರಿಕೆಗಳಲ್ಲಿ, ಕನ್ನಡ ಅಧ್ಯಯನ, ಪ್ರಭುದ್ಧ ಕರ್ನಾಟಕ ಹಾಗೂ ಕರ್ನಾಟಕ ಭಾರತಿ ಮುಂತಾದ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಸಾರ್ಥಕ, ಬರಹ, ಬಾಗಿನ ಮುಂತಾದ ಸಂಸ್ಮರಣ ಸಂಚಿಕೆಗಳಲ್ಲಿಯೂ ಪ್ರಕಟವಾಗಿವೆ. ಇವರು ಹಲವಾರು ರಾಷ್ಟ್ರೀಯ, ಅಂತರ ರಾಷ್ಟ್ರೀಯ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಭಾಷಣಗಳನ್ನೂ ಮಾಡಿದ್ದಾರೆ.

ಪ್ರಕಟಿತ ಕೃತಿಗಳು:
ಭಾಷೆ – ಅಪಭ್ರಂಶ ಭಾಷೆ ಮತ್ತು ಸಾಹಿತ್ಯ, ಕನ್ನಡ ಭಾಷಾ ಬೋಧನೆ.
ನಿಘಂಟು (ಇತರರೊಂದಿಗೆ) – ಜೈನ ಪಾರಿಭಾಷಿಕ ಪದಕೋಶ.
ಜಾನಪದ – ರತ್ನತ್ರಯರು ಮತ್ತು ಜಾನಪದ.
ಜೈನ ಸಾಹಿತ್ಯ – ಕನ್ನಡದಲ್ಲಿ ಆದಿ ತೀರ್ಥಂಕರ ಚರಿತೆಗಳು, ದಿಗಂಬರ ಶ್ವೇತಾಂಬರ ಪರಂಪರೆಗಳಲ್ಲಿ ಆದಿ ಪುರಾಣ ಪ್ರಸಂಗಗಳು (ಇತರರೊಂದಿಗೆ) – ಜೈನ ಕಥಾ ಕೋಶ.
ಇತರೆ – ಒರೆಗಲ್ಲು

ಲಭಿಸಿರುವ ಪ್ರಶಸ್ತಿಗಳು:
೧. ೧೯೮೬ – ಸ್ನಾತಕೋತ್ತರ ಪದವಿಯಲ್ಲಿ ರ್‍ಯಾಂಕ್‌ಗೆ ಚಿನ್ನದ ಪದಕ.
೨. ೧೯೯೨ – ಪಿಹೆಚ್.ಡಿ. ಪದವಿಗೆ ಡಾ॥ ಅ. ನೇಉಪಾಧ್ಯ ಚಿನ್ನದ ಪದಪ.
೩. ೧೯೯೫ – 'ಅಪಭ್ರಂಶ ಭಾಷೆ ಮತ್ತು ಸಾಹಿತ್ಯ' ಕೃತಿಗಾಗಿ ಕ.ಸಾ.ಪ. ಶೇಷಮ್ಮ ಭಾಸ್ಕರ್‌ರಾವ್ ಪ್ರಶಸ್ತಿ.
೪. ೨೦೦೩ – ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠ ಪ್ರಶಸ್ತಿ.

ವ್ಯಕ್ತಿ ಪರಿಚಯ

ಸರಸ್ವತಿ

೧.	ಹೆಸರು	:	ಸರಸ್ವತಿ
೨.	ಕಾವ್ಯನಾಮ	:	ಸರಸ್ವತಿ ಶಂಕರ್
೩.	ಹುಟ್ಟಿದ ಸ್ಥಳ ದಿನಾಂಕ	:	ಕುಂಬಳೆ, ೧೬-೦೯-೧೯೪೯.
೪.	ಜಿಲ್ಲೆ - ರಾಜ್ಯ	:	ಕಾಸರಗೋಡು, ಕೇರಳ.
೫.	ವಿದ್ಯಾಭ್ಯಾಸ	:	ಎಂ.ಎಸ್‌ಸಿ.
೬.	ವೃತ್ತಿ	:	ಗಣಿತ ಪ್ರಾಧ್ಯಾಪಕಿ
೭.	ಕೌಟುಂಬಿಕ	:	ಪತಿ; ಪ್ರೊ. ಶಂಕರ ಭಟ್ ಸುಳ್ಯ. ಪುತ್ರರು; ಅರುಣ್ ಸುಳ್ಯ, ಕಿರಣ್ ಸುಳ್ಯ
೮.	ಸದ್ಯದ ವಿಳಾಸ	:	ಎಸ್-೨, ರಂಗಪ್ರಿಯ ರೆಸಿಡೆನ್ಸಿ, ೨ನೇ ಕ್ರಾಸ್, ಕೆ.ವಿ. ಲೇಔಟ್, ಜಯನಗರ ೪ನೇ ಬ್ಲಾಕ್, ಬೆಂಗಳೂರು - ೫೬೦೦೧೧
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೦-೨೬೫೪೬೫೬೮
೧೧.	ಹಸ್ತಾಕ್ಷರ (ಸಹಿ)	:	ಸರಸ್ವತಿ ಶಂಕರ್

ಸಾಹಿತ್ಯ ಪರಿಚಯ

ಇವರು ಕೇರಳ ರಾಜ್ಯದ ಕಾಸರಗೋಡಿನ ಜಿಲ್ಲೆ ಕುಂಬಳೆಯಲ್ಲಿ ಜನಿಸಿದರು. ಇವರು ಶೇಡಿಗುಮ್ಮೆ ಕೃಷ್ಣ ಭಟ್ ಮತ್ತು ಶ್ರೀಮತಿ ಪರಮೇಶ್ವರಿ ದಂಪತಿಗಳ ಪುತ್ರಿ. ಪ್ರೊ. ಶಂಕರ ಭಟ್ ಅವರನ್ನು ವಿವಾಹವಾಗಿದ್ದಾರೆ. ಇವರ ಪ್ರಾಥಮಿಕ ಶಿಕ್ಷಣ ಹುಟ್ಟೂರಲ್ಲೆ. ಪ್ರೌಢವೂ ಅಲ್ಲೇ. ಪದವಿಪೂರ್ವ ಮತ್ತು ಪದವಿಗಳಿಸಿದ್ದು ಕಾಸರಗೋಡಿನ ಸರ್ಕಾರಿ ಕಾಲೇಜಿನಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗಣಿತ ಶಾಸ್ತ್ರದಲ್ಲಿ ಇವರು ಸ್ನಾತಕೋತ್ತರ ಪದವಿಗಳಿಸಿದರು. ಇವರು ಎಸ್.ಎಸ್.ಎಲ್.ಸಿ. ಓದುವಾಗಲೇ ಗಣಿತ ಶಾಸ್ತ್ರದಲ್ಲಿ ಹೆಚ್ಚಿನ ಅಂಕ ಪಡೆದು ಪ್ರತಿಭಾ ವಿದ್ಯಾರ್ಥಿ ವೇತನ ಪಡೆಯುತ್ತಿದ್ದರು. ಬೆಂಗಳೂರಿನ ಜಯನಗರದ ಎನ್.ಎಮ್.ಕೆ.ಆರ್.ವಿ. ಪ.ಪೂ.ಕಾಲೇಜಿನ ಗಣಿತ ವಿಭಾಗದಲ್ಲಿ ಉಪನ್ಯಾಸಕಿಯಗಿ ವೃತ್ತಿ ಆರಂಭಿಸಿದರು. ನಂತರ ವಿಭಾಗದ ಮುಖ್ಯಸ್ಥೆಯಾಗಿ ೨೬ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಇದೀಗ ಮೂರುವರ್ಷಗಳಿಂದ ಸಿಟಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಶಾಲಾ ದಿನಗಳಲ್ಲಿಯೇ ಕನ್ನಡ ಕಥೆ ಕಾದಂಬರಿಗಳನ್ನೋದುತ್ತ ಸಾಹಿತ್ಯದತ್ತ ಆಸಕ್ತರಾದರು. ನತರ ಪುಟ್ಟ ಕಥೆ, ಲೇಖನಗಳನ್ನು ಬರೆಯುವ ಪ್ರವೃತ್ತಿ ಬೆಳೆಯತೊಡಗಿತು. ತ್ರಿವೇಣಿ, ಎಂ.ಕೆ. ಇಂದಿರಾ, ಅನುಪಮ್ ನಿರಂಜನ, , ವಾಣಿ, ಭೈರಪ್ಪ, ತ.ರಾ.ಸು. ನರಸಿಂಹಯ್ಯ ಮುಂತಾದವರ ಕಾದಂಬರಿಗಳನ್ನು ಓದುತ್ತ ಓದುತ್ತಾ ಓದುವ ಅಭಿರುಚಿಯನ್ನು ಬೆಳೆಸಿಕೊಂಡರು. ಸಾಹಿತ್ಯಾಸಕ್ತಿ ಬೆಳೆಯತೊಡಗಿತು. ೧೯೬೩ರಲ್ಲಿ ಹೈಸ್ಕೂಲಿನಲ್ಲಿ ಓದುತ್ತಿರುವಾಗ ಅಳಿಕೆಯಿಂದ ಪ್ರಕಟವಾಗುತ್ತಿದ್ದ 'ಸೇವಾಮೃತ' ಮಾಸ ಪತ್ರಿಕೆಯಲ್ಲಿ ಇವರ ಪ್ರಥಮ ಕವನ ಪ್ರಕಟವಾಯಿತು. ನವಭಾರತದಲ್ಲಿ ಕಥೆ ಪ್ರಕಟವಾಯಿತು. ಆನಂತರ ಇವರ ಬರೆಹಗಳು ಉದಯವಾಣಿ, ಪ್ರಜಾವಾಣಿ, ಜನ ಪ್ರಗತಿ, ತರಂಗ, ಸುಧಾ, ಪ್ರಜಾಮತ, ಕರ್ಮವೀರ, ಕಸ್ತೂರಿ ಮಯೂರ, ತುಷಾರ, ಮಲ್ಲಿಗೆ ಸಾಪ್ತಾಹಿಕ ಹಾಗೂ ವಿವೇಕ ಸಂಪದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇವರು ಅಮೇರಿಕ, ಇಂಗ್ಲೆಂಡ್, ಥೈಲ್ಯಾಂಡ್, ಸಿಂಗಾಪುರ ಮುಂತಾದ ವಿದೇಶಗಳ ಪ್ರವಾಸ ಮಾಡಿದ್ದಾರೆ. ಇವರು ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನ, ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ ಮುಂತಾದವಲ್ಲಿ ಭಾಗವಹಿಸಿದ್ದಾರೆ. ಇವರ ಹಲವಾರು ಕೃತಿಗಳಿಗೆ ಬಹುಮಾನಗಳು ಬಂದಿವೆ. ಹಲವು ಅನುವಾದಗೊಂಡಿವೆ. ದೂರದರ್ಶನದಲ್ಲಿ ಪ್ರಸಾರವಾಗಿದೆ.

ಪ್ರಕಟಿತ ಕೃತಿಗಳು:

ಕಥಾ. ಸಂ. – ತೆನೆಗಳು. **ಕಾದಂಬರಿ** – ಬಿರುಗಾಳಿ ಜ್ವಾಲೆ. **ಪ್ರವಾಸ ಕಥನ** – ಚಿನ್ನದ ನಾಡೀಂದ ಹೊನ್ನದ್ವಾರದತ್ತ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೩ – ಲೇಕನಕ್ಕೆ ಶಿವರಾಮ ಕಾರಂತ ಪ್ರವಾಸ ಕಥನ ಪ್ರಶಸ್ತಿ.

೨. ೨೦೦೬ – ಕಥೆಗೆ ಕೊಡಗಿನ ಗೌರಮ್ಮ ಪ್ರಶಸ್ತಿ.

೩. ೨೦೧೦ – ಕಾದಂಬರಿಗೆ ಕ.ಸಾ.ಪ. ದತ್ತಿನಿಧಿ 'ಗೌರಮ್ಮ ಹಾರ್ನಹಳ್ಳಿ ಕೆ. ಮಂಜಪ್ಪ' ಪ್ರಶಸ್ತಿ.

ವ್ಯಕ್ತಿ ಪರಿಚಯ

ಸ್ವಾಮಿ. ಸಿ.ಸಿ.

೧.	ಹೆಸರು	:	ಸಿ.ಸಿ. ಸ್ವಾಮಿ
೨.	ಕಾವ್ಯನಾಮ	:	ಚಿನ್ನೇನ ಹಳ್ಳಿ ಸ್ವಾಮಿ.
೩.	ಹುಟ್ಟಿದ ಸ್ಥಳ ದಿನಾಂಕ	:	ಚಿನ್ನೇನ ಹಳ್ಳಿ, ೧೯-೦೫-೧೯೭೭.
೪.	ಜಿಲ್ಲೆ – ರಾಜ್ಯ	:	ಹಾಸನ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಕಾಂ., ಡಿ.ಎಮ್.ಎಲ್.ಟಿ.
೬.	ವೃತ್ತಿ	:	ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞ.
೭.	ಕೌಟುಂಬಿಕ	:	ತಿಳಿಸಿಲ್ಲ
೮.	ಸದ್ಯದ ವಿಳಾಸ	:	ಚೇತನ, ನ್ಯೂರೋ ಸೆಂಟರ್, ಶಂಕರ ಮಠದ ರಸ್ತೆ, ಹಾಸನ.
೯.	ಖಾಯಂ ವಿಳಾಸ	:	ಚಿನ್ನೇನ ಹಳ್ಳಿ ಸ್ವಾಮಿ, ಚಿಕ್ಕಮೇದೂರು (ಅಂ), ಬೇಲೂರು (ತಾ), ಹಾಸನ.
೧೦.	ದೂರವಾಣಿ ಸಂಖ್ಯೆ	:	೯೪೪೮೯೦೦೧೮೧, ೯೭೪೩೬೨೨೮೨೧.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಹಾಸನ ಜಿಲ್ಲೆ ಬೇಲೂರು ತಾಲೂಕು ಚಿನ್ನೇನ ಹಳ್ಳಿಯಲ್ಲಿ ಜನಿಸಿದರು. ಇವರು ಶ್ರೀ ಸಿ.ಕೆ. ಚನ್ನೇಗೌಡ ಮತ್ತು ಶ್ರೀ ಮತಿ ಪುಟ್ಟಮ್ಮ ದಂಪತಿಗಳ ಪುತ್ರ. ಪ್ರಾಥಮಿಕ ಶಿಕ್ಷಣ ಹುಟ್ಟೂರಿನಲ್ಲೇ. ಬೇಲೂರಿನ ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ. ಬೇಲೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರೌಢ ಶಿಕ್ಷಣ. ಹಾಸನದ ಶ್ರೀ ವೆಂಕಟೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಡಿಪ್ಲೊಮಾ ಇನ್ ಮೆಡಿಕೆಲ್ ಲ್ಯಾಬೊರೇಟರಿ ಟೆಕ್ನಾಲಾಜಿ ತರಬೇತಿ ಪಡೆದಿದ್ದಾರೆ. ಹಾಸನದ ಸರ್ಕಾರಿ ಕಾಲೇಜಿನಲ್ಲಿ ಬಿ.ಕಾಂ. ಪದವಿ ಪಡೆದಿದ್ದಾರೆ. ಪ್ರಸ್ತುತ ಹಾಸನದ ಚೇತನ ನ್ಯೂರೋ ಸೆಂಟರ್‌ನಲ್ಲಿ ವದ್ಯಕೀಯ ಪ್ರಯೋಗಾಲಾಯ ನಡೆಸುವ ತಂತ್ರಜ್ಞರಾಗಿದ್ದಾರೆ. ಬಾಲ್ಯದಿಂದಲೇ ಸಾಹಿತ್ಯಾಸಕ್ತರಾಗಿದ್ದ ಇವರು ಸುಮಾರು ೧೯೯೫ರಿಂದಲೇ ಸಾಹಿತ್ಯ ರಚನೆಯಲ್ಲಿ ತೊಡಗಿದರು. ಹನಿಗವನ, ಕವಿತೆ, ಕಥೆ, ನಾಟಕ ರಚಿಸಿದ್ದಾರೆ. ಇವರ ಬರೆಹಗಳು ಪ್ರಜಾವಾಣಿ, ಉದಯವಾಣಿ, ಮಯೂರ, ತರಂಗ, ಸಂಕ್ರಮಣ, ಜನತಾ ಮಾಧ್ಯಮ, ಜನಮಿತ್ರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹಾಸನ ಆಕಾಶವಾಣಿಯಲ್ಲಿ ಇವರ ತಿಂಗಳ ಹಾಡು ಪ್ರಸರವಾಗಿದೆ. ಇತರ ಹತ್ತಾರು ಕಾರ್ಯಕ್ರಮಗಳು ಪ್ರಸಾರವಾಗಿವೆ. ೧೯೯೮ರಲ್ಲಿ ಚಿತ್ರದುರ್ಗದಲ್ಲಿ ನಡೆದ ಕಾವ್ಯ ಕಮ್ಮಟದಲ್ಲಿ ಭಾಗವಹಿಸಿದ್ದರು. ಇವರು ಹಲವಾರು ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಕವಿಗೋಷ್ಠಿಗಳಲ್ಲಿಯೂ ಭಾಗವಹಿಸಿ ಕಾವ್ಯವಾಚನ ಮಾಡಿದ್ದಾರೆ. ಹಾಸನದಲ್ಲಿ ಮನೆಮನೆಯಲ್ಲಿ ಕವಿಗೋಷ್ಠಿ ಪ್ರಾರಂಭವಾದಗಿನಿಂದಲೂ ಇವರು ಸಕ್ರಿಯ ಸದಸ್ಯರಾಗಿ ಮುನ್ನೆಡಿಸಿಕೊಂಡು ಬರುತ್ತಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ನೀಡುವ ಯುವ ಲೇಖಕರ ಪ್ರೋತ್ಸಾಹ ಧನಕ್ಕೆ ಇವರ ಪ್ರಥಮ ಕೃತಿ 'ನೀರು ತುಂಬಿದರೆ' ಆಯ್ಕೆಯಾಗಿದೆ.

ಪ್ರಕಟಿತ ಕೃತಿಗಳು:
ಕವನ ಸಂ. – ನೀರುತುಂಬಿದರೆ.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೭ – ಚಿತ್ರದುರ್ಗದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು ನಡೆಸಿದ ಚುಟುಕು ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.
೨. ೨೦೦೩ – ಸಂಕ್ರಮಣ ಪತ್ರಿಕೆಯ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ.
೩. ಮಂಗಳಾ ಕಲಾ ಸಾಹಿತ್ಯ ವೇದಿಕೆ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ.
೪. ೨೦೦೭ರಲ್ಲಿ ಬೇಲೂರಿನ ಯುವಕ ಸಂಘ ನಡೆಸಿದ ರಾಜ್ಯೋತ್ಸವ ಸಂದರ್ಭದಲ್ಲಿ ಸನ್ಮಾನ.
೫. ೨೦೦೮ರಲ್ಲಿ ಹುಟ್ಟೂರಿನಲ್ಲಿ ಸನ್ಮಾನ.

ವ್ಯಕ್ತಿ ಪರಿಚಯ

ಸೀತಾರಾಮ. ಹೆಚ್.ಜಿ.

೧.	ಹೆಸರು	:	ಹೆಚ್.ಜಿ. ಸೀತಾರಾಮ
೨.	ಕಾವ್ಯನಾಮ	:	ಇರುವುದಿಲ್ಲ.
೩.	ಹುಟ್ಟಿದ ಸ್ಥಳ ದಿನಾಂಕ	:	ಹಾರೇಕೊಪ್ಪ, ಕೆಳದಿ. ೦೬-೦೬-೧೯೪೨.
೪.	ಜಿಲ್ಲೆ - ರಾಜ್ಯ	:	ಶಿವಮೊಗ್ಗ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಸ್.ಎಸ್.ಎಲ್.ಸಿ.
೬.	ವೃತ್ತಿ	:	ನಿವೃತ್ತ ನೌಕರ.
೭.	ಕೌಟುಂಬಿಕ	:	ವಿವಾಹಿತ, ಇಬ್ಬರು ಪುತ್ರಿಯರು. ಒಬ್ಬ ಪುತ್ರ.
೮.	ಸದ್ಯದ ವಿಳಾಸ	:	ಹಾರೇಕೊಪ್ಪ ಕೆಳದಿ ಪೋ.-೫೭೭೪೦೧ ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೧೮೩-೨೬೦೦೦೫, ೨೯೬೧೯೮.
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಹಾರೇಕೊಪ್ಪದಲ್ಲಿ ಜನಿಸಿದರು. ಸ್ವಾತಂತ್ರ ಸಂಗ್ರಾಮ ಹೋರಾಟಗಾರರ ಹಿನ್ನೆಲೆಯ ಕುಟುಂಬ. ಬಡತನದ ಅವಿಭಕ್ತ ಕುಟುಂಬ. ಇವರ ಪ್ರಾಥಮಿಕ ಶಿಕ್ಷಣ ಕೆಳದಿ, ಮಾಧ್ಯಮಿಕ ಶಾಲೆ ಬೆಳೆಯೂರು. ಸಾಗರದ ಪ್ರೌಢಶಾಲೆ ೧೯೫೪ರಲ್ಲಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾದರು. ೧೯೬೫ರಲ್ಲಿ ಪ್ರೌಢಶಾಲೆಯಲ್ಲಿ ದ್ವಿ.ದ.ಸಹಯಾಕರಾಗಿ ವೃತ್ತಿಜೀವನ ಪ್ರಾರಂಭ. ಪ್ರವೃತ್ತಿಯಿಂದ ಸಾಹಿತಿ. ರಂಗಭೂಮಿ ಹವ್ಯಾಸಿ. ಮೊದಲು ರಚಿಸಿದ್ದು ಕಲ್ಪನಾ ನಾಟಕ, ನಂತರ ಬಯಲು ರಂಗಭೂಮಿ ಪರಿಕಲ್ಪನೆಯಲ್ಲಿ ಹತ್ತಾರು ನಾಟಕಗಳ ರಚನೆ. 'ಸಂಗ್ಯಾ ಬಾಳ್ಯ' ನೃತ್ಯ ರೂಪಕ ನಾಡಿನಾದ್ಯಂತ ಪ್ರದರ್ಶನ. ಸಂಗೀತಾಸಕ್ತರಾಗಿ ಹಾರ್ಮೋನಿಯಂ ಬುಲ್ ಬುಲ್ ತರಂಗಗಳ ಕಲಿಕೆ. ವಾದ ತರಂಗ ಸಿ.ಡಿ. ಬಿಡುಗಡೆ. ಕಾಗದ ಕೆತ್ತನೆಯ ಅಪರೂಪ ಚಿತ್ರ ಕಲಾವಿದ. ಮೈಸೂರು ಅರಮನೆ ಇತ್ಯಾದಿ ಕಡೆ ಪ್ರದರ್ಶನ. ಸಾಹಿತಿಗಳನ್ನು ಪ್ರೋತ್ಸಾಹಿಸಲು 'ತುಂತುರು' ಪತ್ರಿಕೆ ಆರಂಭ. ಸಾಗರದ 'ಮಣ್ಣಿನ ವಾಸನೆ' ವಾರಪತ್ರಿಕೆಯ ಅಂಕಣಕಾರ. ೫೦ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ೧೯೭೦ರಲ್ಲಿ ಪ್ರಥಮ ಕಥಾ ಸಂಕಲನ ಪ್ರಕಟ. ೫೦ಕ್ಕೂ ಮಿಕ್ಕಿ ಕವಿತೆ ರಚನೆ. ೨೦೦ರಲ್ಲಿ ನಿವೃತ್ತರಾದರು. 'ಏಕ ವ್ಯಕ್ತಿಯ ಹವ್ಯಾಸಗಳ ಪ್ರದರ್ಶನ'ದ ಕಾರ್ಯಕ್ರಮವನ್ನು ಕೊಡುತ್ತಾರೆ. 'ಸಮನ್ವಯ ಟ್ರಸ್ಟ್' ಸಂಸ್ಥಾಪಕರು. ಬಾಲ ಭಾರತಿ ಹಿರಿಯ ಪ್ರಾಥಮಿಕ ಶಾಲೆ ನಡೆಸುತ್ತಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಇವರು ಹದಿನೆಂಟಕ್ಕೂ ಹೆಚ್ಚು ನಾಟಕಗಳ ಕರ್ತೃ ಕೆಳದಿ ವಿದ್ಯಾಸಂಸ್ಥೆ ಮುಂತಾದ ಇನ್ನೂ ಹಲವಾರು ಸಂಸ್ಥೆಗಳ ಪದಾಧಿಕಾರಿಗಳು. ಇವರು ಹೊಂಬಾಳೆಯಲ್ಲೂ ಚಿತ್ತಾರ ಕೆತ್ತುತ್ತಾರೆ. ಮಂಟಪ, ಕಟ್ಟುತ್ತಾರೆ, ನಾಟಿ ವೈದ್ಯ, ಕೃಷಿಕ. ರವೀಂದ್ರನಾಥ ಠಾಗೂರರ ಮೂಲ ಕಥೆ ಆಧಾರಿತ 'ಕಾಬೂಲಿವಾಲ' ನಾಟಕ ರಚಿಸಿದ್ದಾರೆ. ಸ್ವತಃ ಪಾತ್ರಧಾರಿ. 'ಪುಟ್ಟನ ಪ್ರಪಂಚ' ಚಲನ ಚಿತ್ರದಲ್ಲಿ ಅಭಿನಯಿಸಿದ್ದಾರೆ. ೧೯೬೫ರಿಂದ ೧೯೭೨ ರವರಗೆ ಏಳು ವರ್ಷ ಇವರು 'ತುಂತುರು' ವಾರಪತ್ರಿಕೆಯನ್ನು ಪ್ರಕಟಿಸಿದರು. ಇವರು ಗಾಂಧೀ, ನೆಹರೂ, ಮೀರಾಬಾಯಿ, ರಾಧಕೃಷ್ಣ, ಅರಮನೆ, ಕೆಂಪುಕೋಟೆ ಇತ್ಯಾದಿ ಮುನ್ನೂರಕ್ಕೂ ಮಿಕ್ಕ ವಿವಿಧ ಮಾದರಿಗಳನ್ನು ಕಾಗದ ಕೆತ್ತನೆಯಲ್ಲಿ ರೂಪಿಸಿದ್ದಾರೆ.

ಪ್ರಕಟಿತ ಕೃತಿಗಳು:
ನಾಟಕ – ಕಾಬೂಲಿವಾಲ.
ಕಥಾ ಸಂ. – ಕನಸು ಮನಸು.

ಲಭಿಸಿರುವ ಪ್ರಶಸ್ತಿಗಳು:
೧. ಸ್ಥಳೀಯ ಆರು ಸಂಸ್ಥೆಗಳಿಂದ ಆರು ಸನ್ಮಾನ.
೨. ವಿಕಾಸರಂಗದ ಸನ್ಮಾನ.
೩. ಜಿಲ್ಲಾ ಸಂಗೀತ ಕಲಾ ಅಕಾಡೆಮಿಯ ಸನ್ಮಾನ.
೪. ಶಿವಮೊಗ್ಗಾದ ಜಿಲ್ಲಾ ರಕ್ತದಾನಿಗಳ ಸಂಘದ ಸನ್ಮಾನ.
೫. ಬೆಂಗಳೂರಿನ ಜನಮನ ಸಂಘಟನೆ ಆಶ್ರಯದಲ್ಲಿ ಸನ್ಮಾನ.
೬. ಬೆಂಗಳೂರಿನ ಹವ್ಯಕರಿಂದ ಪ್ರತಿಭಾ ಪುರಸ್ಕಾರ ಸನ್ಮಾನ ಇತ್ಯಾದಿ.

ವ್ಯಕ್ತಿ ಪರಿಚಯ

ಸುದರ್ಶನ ರಾಜ. ಎಂ.

೧. ಹೆಸರು : ಎಂ. ಸುದರ್ಶನ ರಾಜ

೨. ಕಾವ್ಯನಾಮ : ಇರುವುದಿಲ್ಲ

೩. ಹುಟ್ಟಿದ ಸ್ಥಳ ದಿನಾಂಕ : ಸಿಂಧನೂರು, ೦೫–೧೦–೧೯೪೭.

೪. ಜಿಲ್ಲೆ – ರಾಜ್ಯ : ರಾಯಚೂರು, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎಸ್‌ಸಿ., ಎಲ್.ಎಲ್.ಬಿ., ಡಿ.ಬಿಐ.ಎಮ್.

೬. ವೃತ್ತಿ : ವಕೀಲರು

೭. ಕೌಟುಂಬಿಕ : ಪತ್ನಿ ಇದ್ದಾಳೆ, ಮಕ್ಕಳಿಲ್ಲ

೮. ಸದ್ಯದ ವಿಳಾಸ : ನಂ. ೮, ಪ್ರಥಮ ಮಹಡಿ,
ರಚನಾ ಅಪಾರ್ಟ್‌ಮೆಂಟ್, ಟೋಲನಾಕಾ,
ಧಾರಾವಾಡ ೫೮೦೦೦೨

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೪೮೦೫೫೪೬೭೫

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಜನಿಸಿದರು. ಪ್ರಾಥಮಿಕದಿಂದ ಹೈಸ್ಕೂಲಿನವರಗಿನ ವಿದ್ಯಾಭ್ಯಾಸ ಸರ್ಕಾರಿ ಪ್ರೌಢಶಾಲೆ ಸಿಂಧನೂರಿನಲ್ಲಾಯಿತು. ಕಾಲೇಜು ಓದು ೧೯೬೫ ರಿಂದ ೬೯ ರಲ್ಲಿ ಎಲ್.ವಿ.ಡಿ. ಕಾಲೇಜು ರಾಯಚೂರು. ಎಲ್.ಎಲ್.ಬಿ. ಧಾರವಾಡದ ಕೆ.ಪಿ.ಇ.ಎಸ್. ಕಾಲೇಜಿನಲ್ಲಿ ೨೦೦೦ರಲ್ಲಾಯಿತು. ಇವರು ಸುಮಾರು ೨೮ ವರ್ಷಗಳು ವಿವಿಧ ಕಂಪನಿಗಳಲ್ಲಿ ಸೇಲ್ಸ್ ಮೆನ್‌ನಿಂದ ಸೇಲ್ಸ್ ಮ್ಯಾನೇಜರವರಗೆ ಕರ್ನಾಟಕ, ಆಂಧ್ರ ಹಾಗೂ ತಮಿಳುನಾಡುಗಳಲ್ಲಿ ನೌಕರಿ ಮಾಡಿದ್ದಾರೆ. ವಿ.ಆರ್.ಎಸ್. ಪಡೆದು ಲಾ ಮುಗಿಸಿ ನಂತರ ವಕೀಲಿ ವೃತ್ತಿ ಮಾಡುತ್ತಿದ್ದಾರೆ. ಹೈಸ್ಕೂಲಿನಲ್ಲಿರುವಾಗಲೇ ಕವಿತೆಯತ್ತ ಒಲವು ಆಗಾಗ ಬರೆದ ಕವಿತೆ, ಲೇಖನಗಳನ್ನು ಪತ್ರಿಕೆಗಳಿಗೆ ಕಳುಹಿಸಿ ಪ್ರಕಟಿಸುತ್ತಿದ್ದಾರೆ. ಜನಸಾಮಾನ್ಯರಿಗೆ ಕಾನೂನು ಅರಿವು ಮೂಡಿಸಲು ಕಾನೂನಿನ ಬಗ್ಗೆಯೂ ಬರೆಯುತ್ತಿರುತ್ತಾರೆ. ಸುಪ್ರೀಂ ಕೋರ್ಟ್, ಹೈ ಕೋರ್ಟ್, ಅಧೀನ ನ್ಯಾಯಲಯಗಳು, ವಕೀಲರು ಕಕ್ಷಿಗಾರರು, ದಾವೆ, ವಾದಿ-ಪ್ರತಿವಾದಿ, ನ್ಯಾಯಲಯದ ಪತ್ರಗಳು ಇತ್ಯಾದಿ ಕಾನೂನಿಗೆ ಸಂಬಂಧಿಸಿ ಘಟಿಸಿದ ಘಟನೆಗಳಳನ್ನೇ 'ಕಾವ್ಯ ವಸ್ತು'ವಾಗಿ ತೆಗೆದುಕೊಂಡು. ಕಾವ್ಯ ಶೈಲಿಯಲ್ಲಿ ಕವನ ರಚಿಸಿರುವ ಕವಿ ಇವರು. ಇವರು ಬಿ.ಎಸ್ಸಿ., ಎಲ್.ಎಲ್.ಬಿ. ಮತ್ತು ಪಿ.ಜಿ.ಡಿ.ಬಿ.ಐ.ಎಮ್. ಪದವೀಧರರು. ಇವರು ವೃತ್ತಿಯಿಂದ ವಕೀಲರಾಗಿ ಪ್ರವೃತ್ತಿಯಿಂದ ಸಾಹಿತಿಗಳಾಗಿದ್ದಾರೆ. ಸಮಾಜ ಸೇವ ಮತ್ತು ಜನಜಾಗೃತಿವುಂಟು ಮಾಡುವುದು ಇವರ ಹವ್ಯಾಸ. ಇವರು ವಿವಿಧ ಕಂಪನಿಗಳಲ್ಲಿ ಮ್ಯಾನೇಜರಾಗಿ ಕೆಲಸ ಮಾಡುತ್ತಿರುವಾಗ ಹೈದರಾಬಾದ್, ಬೆಳಗಾವಿಗಳಿಗೆಲ್ಲ ಹೋಗಿ ಬಂದಿದ್ದಾರೆ. ಇವರು ಅಂತರರಾಷ್ಟ್ರೀಯ ಜೇ.ಸಿ. ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ ದುಡಿದಿದ್ದಾರೆ. ಗೋಕಾಕ ಚಳುವಳಿಯಲ್ಲಿ ತಾಲೂಕು ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಸಕ್ರಿಯವಾಗಿ ಪಾತ್ರವಹಿಸಿದ್ದಾರೆ. ನೌಕರಿಯಿಂದ ಸ್ವಯಂ ನಿವೃತ್ತಿ ಪಡೆದು ಓದು ಮುಂದುವರೆಸಿದ್ದು ಓದಿನ ಬಗ್ಗೆ ಇರುವ ಕಾಳಜಿಯನ್ನು ಸೂಚಿಸುತ್ತದೆ. ಧಾರವಾಡದ ಕೆ.ಪಿ.ಇ.ಎಸ್. ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ 'ಸಂಘದ ಕಾರ್ಯದರ್ಶಿ'ಯಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲೇ ಗ್ರಾಹಕರ ವೇದಿಕೆಯ ಸಂಚಾಲಕರಾಗಿ 'ಅವನಿ' ಪತ್ರಿಕೆಯ ಸಂಪಾದಕ ಮಂಡಲಿಯ ಸದಸ್ಯರಾಗಿ ಅಂಕಣಕಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಸಾಧನಾ ಮತ್ತು ಜಿಲ್ಲಾ ಮಾನವ ಹಕ್ಕುಗಳ ಕೇಂದ್ರದ ಕಾನೂನು ಸಲಹೆಗಾರರಾಗಿದ್ದರು. 'ಎಂ.ಸುದರ್ಶನ ರಾಜ ಫೌಂಡೇಶನ್ ಬೆಂಗಳೂರು'ಇದರ ಸ್ಥಾಪಕ ಅಧ್ಯಕ್ಷರು.

ಪ್ರಕಟಿತ ಕೃತಿಗಳು:
ಕವನ ಸಂ. – ಅನುರಾಗ, ಕಾವ್ಯ ಕಾನೂನು.
ಇತರೆ – ಜನಸಾಮಾನ್ಯರಿಗೆ ಕಾನೂನು.

ವ್ಯಕ್ತಿ ಪರಿಚಯ

ಸುಬ್ಬಯ್ಯ

೧.	ಹೆಸರು	:	ಸುಬ್ಬಯ್ಯ
೨.	ಕಾವ್ಯನಾಮ	:	ಭಾಗವತ
೩.	ಹುಟ್ಟಿದ ಸ್ಥಳ ದಿನಾಂಕ	:	ಕರ್ಕಿ, ೨೧-೧೦-೧೯೪೨.
೪.	ಜಿಲ್ಲೆ - ರಾಜ್ಯ	:	ಉತ್ತರ ಕನ್ನಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಇ., ಎಂ.ಇ. (ಮೆಕ್ಯಾನಿಕಲ್).
೬.	ವೃತ್ತಿ	:	ಇಂಜಿನಿಯರ್ (ಆರ್ಮಿ), ಬ್ರಿಗೇಡಿಯರ್ ಆಗಿ ನಿವೃತ್ತಿ
೭.	ಕೌಟುಂಬಿಕ	:	ಪತ್ನಿ; ನಿಧನ. ಪುತ್ರರು; ಸಂದೀಪ್ ಮತ್ತು ಗಣೇಶ.
೮.	ಸದ್ಯದ ವಿಳಾಸ	:	೧೯೩, ೨ನೇ ಮುಖ್ಯರಸ್ತೆ, ೧ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ ೫೮೦೦೦೮
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೬ -೨೭೭೧೨೩೫
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಕರ್ಕಿಯಲ್ಲಿ ಜನಿಸಿದರು. ಇವರು ಶ್ರೀ ಗಣಪತಿ ಭಾಗವತರು ಮತ್ತು ಶ್ರೀಮತಿ ಕೃಷ್ಣವೇಣಿ ದಂಪತಿಗಳ ಪುತ್ರ. ತಾಯಿ ಗೋಕರ್ಣ ಕ್ಷೇತ್ರದ ಹೆಸರಾಂತ ಹೊಸಮನೆ ಶಾಸ್ತ್ರಿ ಕುಟುಂಬದಿಂದ ಬಂದವರು. ಇವರ ತಂದೆ ಅರಣ್ಯ ಇಲಾಖೆಯಲ್ಲಿ ನೌಕರರಾಗಿದ್ದರು. ನೌಕರಿಯಿಂದಾಗಿ ತಂದೆ ಕಾರವಾರ, ಬೆಳಗಾವಿ ಮತ್ತು ಧಾರಾವಾಡಗಳಲ್ಲಿ ಇರಬೇಕಾಯಿತು. ಹಾಗಾಗಿ ಇವರ ಶಿಕ್ಷಣವೂ ಒಂದೇ ಕಡೆ ಆಗಿರಲಿಲ್ಲ. ಪ್ರಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಕಾರವಾರ, ಬೆಳಗಾವಿಗಳಲ್ಲಾಯಿತು. ನಂತರ ದ.ಕ.ದ ಸುರತ್‌ಕಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜನಿಯರಿಂಗ್ ಶಿಕ್ಷಣ ಪಡೆದರು. ಭಾರತೀಯ ಸೈನ್ಯದಲ್ಲಿ ಅಧಿಕಾರಿಯಾಗಿ ವೃತ್ತಿ ಆರಂಭಿಸಿದರು. ಬ್ರಿಗೇಡಿಯರಾಗಿ ಬಡ್ತಿ ಪಡೆದರು. ೩೩ ವರ್ಷಗಳ ಸೇವೆ ಸಲ್ಲಿಸಿ ನಿವೃತ್ತಿ ಅವಧಿಗೆ ಮೊದಲೇ ಸ್ವಇಚ್ಛೆಯಿಂದ ನಿವೃತ್ತರಾದರು. ಸೇವಾ ಅವಧಿಯಲ್ಲಿ ದೇಶಕ್ಕೋಸ್ಕರ ಇವರು ಬಾಂಗ್ಲ ಯುದ್ಧದಲ್ಲಿ ಭಾಗವಹಿಸಿ ದೇಶಪ್ರೇಮವನ್ನು ಮೆರೆದಿದ್ದಾರೆ. ಸೈನ್ಯದ ಇಂಜಿನಿಯರಿಂಗ್ ಘಟಕದಲ್ಲಿ ಸೇವೆ ಸಲ್ಲಿಸುತ್ತಿದ್ದುದರಿಂದ ಅನೇಕ ಉತ್ಕೃಷ್ಟ ಯೋಜನೆಗಳನ್ನು ನಿಭಾಯಿಸುವ ಸದವಕಾಶ ದೊರೆತಿದೆ. ಸುಸಂಸ್ಕೃತ ಕುಟುಂಬದಿಂದ ಬಂದ ಇವರ ತಂದೆ ತಾಯಿಗಳಿಗೂ ಓದುವ ಬರೆಯುವ ಅಭ್ಯಾಸವಿದ್ದುದರಿಂದ ಇವರ ಒಲವೂ ಸಾಹಿತ್ಯದ ಕಡೆ ಹೊರಳಿತು. ಚಿಕ್ಕಂದಿನಿಂದಲೇ ಇವರು ಓದುವ ಬರೆಯುವ ಹವ್ಯಾಸ ಇಟ್ಟುಕೊಂಡಿದ್ದರು. ಆಟಪಾಟಗಳಲ್ಲಿಯೂ ಹಿಂದೆ ಬಿದ್ದರಲಿಲ್ಲ. ಹೈಸ್ಕೂಲ್ ಓದುತ್ತಿರುವಾಗಲೇ ಇವರು ಭಾಷಣವೂ ಮಾಡುತ್ತಿದ್ದರು. ಲೇಖನ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಪ್ರಶಸ್ತಿಗಳನ್ನು ಗಳಿಸುತ್ತಿದ್ದರು. ಶಾಲಾ ವಾರ್ಷಿಕ ಪತ್ರಿಕೆಯ ಸಂಪಾದಕರಾಗಿದ್ದರು. ಕೈ ಬರೆಹದ ಪುಸ್ತಕವನ್ನೂ ತರುತ್ತಿದ್ದರು. ಅದಕ್ಕಾಗಿ ಕಥೆ, ಕವನ ಬರೆಯುತ್ತಿದ್ದರು. ನಾಟಕಗಳಲ್ಲಿ ಪಾತ್ರವಹಿಸಿ ಪ್ರಶಸ್ತಿಗಳಿಸುತ್ತಿದ್ದರು. ಸೈನ್ಯದಲ್ಲಿದ್ದಾಗ ಇವರು ಲಡಾಕ್‌ನಂತಹ ದುರ್ಗಮ ಪ್ರದೇಶಗಳಲ್ಲಿ ನೀರು ಸರಬರಾಜು ಹಾಗೂ ವಿದ್ಯುತ್ ಉತ್ಪಾದನೆಗಾಗಿ ಹೊಸ ಘಟಕಗಳನ್ನು ಸ್ಥಾಪಿಸಿದ್ದಾರೆ. ರಾಜಾಸ್ಥಾನದ ಸುರತ್‌ಗಢದಲ್ಲಿ ಹೊಸ ವಿಮಾನ ನಿಲ್ದಾಣ ರಚನೆ ಮಾಡಿದ್ದಾರೆ. ಯುದ್ಧ ರಂಗದಲ್ಲಿ ಬಳಸಲಾಗುವ ಅನೇಕ ಹೊಸ ರೀತಿಯ ಮಾಇನ್ ಬ್ಲಾಸ್ಟ್ ಹಾಗೂ ಮಾಇನ್ ರಿಕವರಿ ವಿಭಾಗದಲ್ಲಿ ಹೊಸ ರೀತಿಯ ಯಂತ್ರ ತಂತ್ರ ಶೋಧನೆ ಮಾಡಿದ್ದಾರೆ. ಪೃಥ್ವಿ ಮಿಸಾಯಿಲ್ ಯೋಜನೆಯಲ್ಲಿ ಅಬ್ದುಲ್ ಕಲಾಮ್ ಅವರೊಂದಿಗೆ ಕೆಲಸ ಮಾಡಿದ್ದಾರೆ. ಇವರು ನಿವೃತ್ತಿಯ ನಂತರ ಕನ್ನಡ ಪತ್ರಿಕೆಗಳಿಗೆ ಬರೆಯ ತೊಡಗಿದ್ದಾರೆ. ಇವರು ಭಾಷಾಂತರ ಕೂಡ ಮಾಡುತ್ತಾರೆ.

ಪ್ರಕಟಿತ ಕೃತಿಗಳು:

ಇತರೆ – ಗನ್ನು ಹಿಡಿದ ಕೈಯಲ್ಲಿ ಪೆನ್ನು.

ವ್ಯಕ್ತಿ ಪರಿಚಯ

ಸುಮತಿ ಯಾದಪ್ಪನವರ

೧.	ಹೆಸರು	:	ಸುಮತಿ ಗಣಪತರಾವ ಯಾದಪ್ಪನವರ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಧಾರವಾಡ, ೨೨-೪-೧೯೪೦
೪.	ಜಿಲ್ಲೆ - ರಾಜ್ಯ	:	ಧಾರವಾಡ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಬಿ.ಎ., ಬಿ.ಇಡಿ., ಹಿಂದಿ ರಾ.ಭಾ. ವಿಶಾರದ
೬.	ವೃತ್ತಿ	:	ಅಧ್ಯಾಪಕರು (ನಿವೃತ್ತ ಪ್ರಾಚಾರ್ಯರು)
೭.	ಕೌಟುಂಬಿಕ	:	ಪತಿ; ಗಣಪತರಾವ. ಪುತ್ರರು; ಆನಂದ, ಅಚ್ಯುತ.
೮.	ಸದ್ಯದ ವಿಳಾಸ	:	ಕೌಸ್ತುಭ, ೧ನೇ ಅಡ್ಡರಸ್ತೆ, ವಿವೇಕಾನಂದ ಕಾಲನಿ, ಕೇಶ್ವಾಪುರ, ಹುಬ್ಬಳ್ಳಿ-೫೮೦೦೨೩.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೦೮೩೬-೨೨೫೧೧೯೭
೧೧.	ಹಸ್ತಾಕ್ಷರ (ಸಹಿ)	:	Suyadappanavar

ಸಾಹಿತ್ಯ ಪರಿಚಯ

ಇವರು ಧಾರವಾಡದಲ್ಲಿ ಜನಿಸಿದರು. ಪ್ರಾಥಮಿಕ, ಪ್ರೌಢ ಹಾಗೂ ಕಾಲೇಜು ಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ ಪಡೆದರು. ಧಾರವಾಡ ವಿಶ್ವವಿದ್ಯಾಲಯದ ಬಿ.ಎಡ್. ಪದವಿ ಗಳಿಸಿದ್ದಾರೆ. ತಾವು ಕಲಿತ ಶಾಲೆಯಲಿಯೇ ೧೯೬೦ ರಿಂದ ಗರ್ಲ್ಸ್ ಇಂಗ್ಲೀಷ್ ಸ್ಕೂಲಿನಲ್ಲಿ ಸಹ ಶಿಕ್ಷಕಿಯಾಗಿ ವೃತ್ತಿ ಜೀವನ ಆರಂಭಿಸಿದರು. ಆರು ವರ್ಷ ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ೧೯೯೮ರಲ್ಲಿ ನಿವೃತ್ತರಾಗಿ ಹುಬ್ಬಳ್ಳಿಯಲ್ಲಿ ನೆಲಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ವಿದ್ಯಾರ್ಥಿನಿ-ಯಾಗಿದ್ದಾಗಿನಿಂದಲೇ ಬರೆಯುವ ಅಭ್ಯಾಸ ಮಾಡತೊಡಗಿದರು. ಇವರ ಹಲವರು ರೂಪಕ, ನಾಟಕ ಹಾಗೂ ಪ್ರಹಸನ ಮುಂತಾದವುಗಳು ಆಕಾಶವಾಣಿಯಲ್ಲಿ ಪ್ರಸಾರವಾಗಿವೆ. ಕೆಲವು ಕಾರ್ಯಕ್ರಮಗಳಲ್ಲಿ ಇವರು ಸ್ವತಃ ಭಾಗವಹಿಸುತ್ತಾರೆ. ಮಕ್ಕಳಿಗಾಗಿ ನಾಟಕ, ರೂಪಕಗಳನ್ನು ರಚಿಸಿರುವರಲ್ಲದೆ ಆಕಾಶವಾಣಿಯಲ್ಲಿ ಮಕ್ಕಳ ಕಾರ್ಯಕ್ರಮಗಳನ್ನೂ, ಮಕ್ಕಳಿಗಾಗಿ ಪಾಠದ ಕಾರ್ಯಕ್ರಮಗಳನ್ನೂ ನಡೆಸಿಕೊಡುತ್ತಾರೆ. ಇವರು ಕಥೆ, ಕವನ, ಲೇಖನ, ಹಾಸ್ಯಗಳನ್ನಲ್ಲದೆ ನೀತಿ ಕಥೆ, ಭಕ್ತಿ ಗೀತೆಗಳನ್ನೂ ಬರೆಯುತ್ತಾರೆ. ಅನುವಾದ ಕೂಡ ಮಾಡುತ್ತಾರೆ. ಇವರ ಬರೆಹಗಳು ಕಸ್ತೂರಿ, ಕರ್ಮವೀರ, ಸಂಯುಕ್ತ ಕರ್ನಾಟಕ, ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಅನುವಾದಕರಾದ ಇವರು ಹಿಂದಿ ಭಾಷೆಯ ಪ್ರಸಿದ್ಧ ಲೇಖಕರಾದ ಪ್ರೇಮಚಂದ್, ಸಿಯಾರಾಮ ಶರಣಗುಪ್ತ, ಕೆ.ಎ. ಅಬ್ಬಾಸ್, ಮಹಾದೇವಿ ವರ್ಮರ, ಭೀಷ್ಮ ಸಹಾನಿ ಮುಂತಾದವರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರು ಅನುವಾದಿಸಿದ ಪ್ರೇಮಚಂದರ ಕಥೆಗಳ ಸಂಕಲನ ಪ್ರಕಟವಾಗಿವೆ. ವಿವೇಕಾನಂದ ಕಾಲನಿಯ ವನಿತಾ ಮಂಡಳದ ಅಧ್ಯಕ್ಷರಾಗಿ ಮೂರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಬಹುಮುಖ ಪ್ರತಿಭೆಯನ್ನು ಗುರುತಿಸಿದ ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿವೆ. ಇವರು ಉತ್ತಮ ವಾಗ್ಮಿಗಳು, ಸಮಾಜ ಸೇವಕಿ ಹಾಗೂ ಸಂಘಟಕರೂ ಆಗಿದ್ದಾರೆ. ಇನ್ಫೋಸಿಸ್ ಫೌಂಡೇಶನ್ ಧರ್ಮದರ್ಶಿಯರಾದ ಡಾ, ಸುಧಾಮೂರ್ತಿ ಇವರ ಶಿಷ್ಯೆಯಾಗಿದ್ದರು.

ಪ್ರಕಟಿತ ಕೃತಿಗಳು:

ಕಥಾ ಸಂ. – ಪ್ರೇಮ ಚಂದ್ ರ ಆರು ಕಥೆಗಳು.

ಲಭಿಸಿರುವ ಪ್ರಶಸ್ತಿಗಳು:

೧. ೧೯೯೬ – ಹುಬ್ಬಳ್ಳಿಯ ರೋಟರಿ ಸಂಸ್ಥೆಯ ಉತ್ತಮ ಶಿಕ್ಷಕಿ ಪ್ರಶಸ್ತಿ.

೨. ೨೦೧೦ – ಉತ್ತಮ ಶಿಕ್ಷಕಿ ಪ್ರಶಸ್ತಿ.

೩. ೨೦೧೦ – ಹಳೇ ಹುಬ್ಬಳ್ಳಿ ಲೋಕಮಾನ್ಯ ವನಿತಾ ಮಂಡಳಿ ಪ್ರಶಸ್ತಿ.

೪. ೨೦೧೦ – ಸಾರ್ವಜನಿಕ ಘಟಕ ಸ್ಥಾಪನಾ ದಸರಾ ಮಹೋತ್ಸವ ಸಮಿತಿ ಗಣ್ಯ ಮಹಿಳಾ ಲೇಖಕಿ ಪ್ರಶಸ್ತಿ.

೫. ಹುಬ್ಬಳ್ಳಿ ಫ್ರೋಬಸ್ ಕ್ಲಬ್ ಹಾಗೂ ಶಿಕ್ಷಣ ಸಂಸ್ಥೆಯವರಿಂದ ಸನ್ಮಾನ.

ವ್ಯಕ್ತಿ ಪರಿಚಯ

ಸುರೇಶ್. ಹೆಚ್.ಎಸ್.

೧. ಹೆಸರು : ಹೆಚ್.ಎಸ್. ಸುರೇಶ್

೨. ಕಾವ್ಯನಾಮ : ಸೂರ್ಯ ಕೆಂಗೆನ್ನೆ

೩. ಹುಟ್ಟಿದ ಸ್ಥಳ ದಿನಾಂಕ : ಹೊಗರೇಖಾನ್ ಗಿರಿ (ಮಠ), ೨೭-೭-೭೨.

೪. ಜಿಲ್ಲೆ - ರಾಜ್ಯ : ಚಿಕ್ಕಮಗಳೂರು, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ. (ಕ), ಎಂ.ಎ. (ರಾ.ಶಾ.),
ಪತ್ರಿಕೋದ್ಯಮ ಡಿಪ್ಲೊಮಾ

೬. ವೃತ್ತಿ : ನ್ಯಾಯಾಂಗ ಇಲಾಖೆ ನೌಕರ.

೭. ಕೌಟುಂಬಿಕ : ಪತ್ನಿ; ಬಿ.ಎನ್. ರಮ್ಯ. ಪುತ್ರರು;
ಹೆಚ್.ಎಸ್. ಆಯುಷ್, ಹೆಚ್.ಎಸ್. ಅನಿಷ್

೮. ಸದ್ಯದ ವಿಳಾಸ : 'ವಿಶ್ವಭಾರತಿ' ಡಾ|| ಅಪ್ಪಣ್ಣ ರಸ್ತೆ,
ತರೀಕೆರೆ-೫೭೭೨೨೮

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೯೪೪೯೪೦೨೬೧೬

೧೧. ಹಸ್ತಾಕ್ಷರ (ಸಹಿ) : 

ಸಾಹಿತ್ಯ ಪರಿಚಯ

ಇವರು ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು ಹೊಗರೇಖಾನ್ ಮಠದಲ್ಲಿ ಜನಿಸಿದರು. ಇವರು ಶ್ರೀ ಬಿ.ಜಿ ಸಿದ್ದಯ್ಯ ಮತ್ತು ಶ್ರೀಮತಿ ವಸಂತ ದಂಪತಿಗಳ ಪುತ್ರ. ಇವರು ಪ್ರಾಥಮಿಕ ಶಾಲೆಯನ್ನು ಕಡೂರಿನಲ್ಲಿ ಓದಿದರು. ತರಿಕೆರಿಯಲ್ಲಿ ಪೂರ್ಣಗೊಳಿಸಿದರು. ಪ್ರೌಢಶಾಲೆ ತರಿಕೆರಿಯಲ್ಲಿ ಪಿ.ಯು.ಸಿ.ಯೂ ಅಲ್ಲೇ. ಪದವಿ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಪಡೆದರು. ಎಂ.ಎ. ರಾಜ್ಯಶಾಸ್ತ್ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು. ಎಂ.ಎ. ಕನ್ನಡ ಕುವೆಂಪು ವಿಶ್ವವಿದ್ಯಾಲಯ ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲೇ ಪತ್ರಿಕೋದ್ಯಮ ಡಿಪ್ಲೊಮಾ ಮಾಡಿದ್ದಾರೆ. ಮೊಟ್ಟಮೊದಲು ಇವರ ಮೇಲೆ ಪ್ರಭಾವ ಬೀರಿದ ಸಾಹಿತಿಗಳು ಕುವೆಂಪು. ಇವರು ವಿದ್ಯಾರ್ಥಿ ದೆಸೆಯಿಂದಲೇ ಕಥೆ, ಕವನ ರಚನೆಗೆ ತೊಡಗಿದರು. ಹಾಡುವುದು, ನಾಟಕ ಮಾಡುವುದು ಹವ್ಯಾಸ. ಬೆಟ್ಟ ಗುಡ್ಡಗಳ ತಿರುಗಾಟ ಇವರ ಹವ್ಯಾಸ. ಇವರು ಜಿಲ್ಲಾ ಮಟ್ಟದ ಪತ್ರಿಕೆಗಳಲ್ಲಿ ವೈವಿಧ್ಯಮಯ ಅಂಕಣಗಳ ಬರವಣಿಗೆಗೆ ತೊಡಗಿದರು. ಇವರ ಮೊದಲ ಕಥೆ ೨೦೦೩ರಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ, ನಂತರ ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿಯೂ ಪ್ರಕಟವಾಯಿತು. ಆಕಾಶವಾಣಿಯಲ್ಲಿ ಇವರ ಚಿಂತನೆಗಳು ಪ್ರಸಾರವಾಗುತ್ತವೆ. ೨೦೦೭ರಲ್ಲಿ ಇವರದೊಂದು 'ದೈವ ಗಾನ ಲಹರಿ' ಎಂಬ ಸಿ.ಡಿ. ಸಂಗೀತ ಸಾಹಿತ್ಯ ಬಿಡುಗಡೆಯಾಗಿದೆ. ಇವರು ಕಥೆ, ಕವನ, ಕಾದಂಬರಿ ಹಾಗೂ ಚಿಂತನ ಇತ್ಯಾದಿ ಸಾಹಿತ್ಯದ ನಾನಾ ಪ್ರಕಾರದ ಸಾಹಿತ್ಯ ರಚಿಸಿದ್ದಾರೆ. ೧೯೯೭ರಲ್ಲಿ ಇವರದೊಂದು ಧ್ವನಿ ಸುರುಳಿಯೂ ಬಿಡುಗಡೆಯಾಗಿದೆ. ಇದರ ಸಂಗೀತ, ಸಾಹಿತ್ಯ, ಗಾಯನ ಎಲ್ಲಾ ಇವರದೇ. ಇವರು ಸುದ್ದಿ, ಅಕ್ಷಯ, ಸ್ನೇಹ ವಾರ್ತೆ, ನುಡಿ ಗೆಜ್ಜೆ, ಸಹ್ಯಾದ್ರಿ, ಸಂಪದ, ನ್ಯಾಯಧಾರಾ, ಶೃಂಗ ಮುಖ ಕೊನರು, ಜಿಲ್ಲಾ ಸಾಹಿತ್ಯ ಸ್ಮರಣ ಸಂಚಿಕೆ, ಜೀವ ರೇಷ್ಮೆ ಹುಳ ಹಾಗೂ ಜಿಲ್ಲಾ ಕಥಾ ಸಂಗಮ ಮುಂತಾದ ಗ್ರಂಥಗಳಲ್ಲಿ ಇವರ ಬರೆಹಗಳು ಸೇರ್ಪಡೆಯಾಗಿದೆ. ಇವರು ಖಾಸಗಿ ಶಿಕ್ಷಕರಾಗಿದ್ದರೂ ಪ್ರಸ್ತುತ ನ್ಯಾಯಾಂಗ ಇಲಾಖೆಯ ನೌಕರರಾಗಿದ್ದಾರೆ. ಪತ್ರಕರ್ತರಾಗಿ, ಪತ್ರಿಕಾ ಸಂಪಾದಕರಾಗಿ, ನಾಟಕಕಾರ ಹಾಗೂ ನಿರ್ದೇಶಕರಾಗಿಯೂ ಅನುಭವವಿದೆ.

ಪ್ರಕಟಿತ ಕೃತಿಗಳು:

ಕವನ ಸಂ. –ಹಸಿರಂಚು ಬಿಸಿ ಮಿಂಚು, ಮತ್ತೇನ ಹುಡಕಲಿ, ಸಪ್ತಸ್ವರ.

ಕಥಾ ಸಂ. – ಅಸ್ತಂಗತ.

ಕಾದಂಬರಿ – ಸುಳಿಯಾಚೆ.

ಚಿಂತನ ಸಂಕಲನ – ಹೆಚ್.ಎಸ್.ಎಸ್. ಅಂಕಣ.

ಲಭಿಸಿರುವ ಪ್ರಶಸ್ತಿಗಳು:

೧. ೨೦೦೪ – ತರೀಕೆರೆ ತಾಲೂಕು ಕ.ಸಾ.ಪ ಸನ್ಮಾನ.

೨. ೨೦೦೫ – ರಾಜ್ಯ ಮಟ್ಟದ ಕಥಾ ಸ್ಪರ್ಧೆ – ಸಂಬಂಧ ಪತ್ರಿಕೆ ಬಹುಮಾನ.

೩. ೨೦೦೮ – ತರೀಕೆರೆ ರೋಟರಿ ಸಂಸ್ಥೆ ಸನ್ಮಾನ.

೪. ೨೦೧೦ – ಸಂಯುಕ್ತ ಕರ್ನಾಟಕ ಕಥಾ ಸ್ಪರ್ಧೆ ಪ್ರಥಮ ಬಹುಮಾನ.

ವ್ಯಕ್ತಿ ಪರಿಚಯ

ಡಾ॥ ಹಂದೂರ. ಬಾ. ರಾ.

೧.	ಹೆಸರು	:	ಡಾ॥ ಬಾಹುಬಲಿ ರಾಯಪ್ಪ ಹಂದೂರ
೨.	ಕಾವ್ಯನಾಮ	:	ಇರುವುದಿಲ್ಲ
೩.	ಹುಟ್ಟಿದ ಸ್ಥಳ ದಿನಾಂಕ	:	ಇಟಗಿ, ಖಾನಾಪುರ. ೧೮–೦೫–೧೯೬೬
೪.	ಜಿಲ್ಲೆ – ರಾಜ್ಯ	:	ಬೆಳಗಾವಿ, ಕರ್ನಾಟಕ.
೫.	ವಿದ್ಯಾಭ್ಯಾಸ	:	ಎಂ.ಎ., ಎಂ.ಎಡ್., ಪಿ.ಹೆಚ್.ಡಿ
೬.	ವೃತ್ತಿ	:	ಪ್ರಾಥಮಿಕ ಶಾಲಾ ಶಿಕ್ಷಕರು
೭.	ಕೌಟುಂಬಿಕ	:	ಪತ್ನಿ; ಮಂಜುಳ. ತಿ. ಆಡಿಕೆ
೮.	ಸದ್ಯದ ವಿಳಾಸ	:	ಡಾ॥ ಬಿ.ಆರ್. ಹಂದೂರ, ಮ.ನಂ–೧೬. ಮಹಾವೀರ ಕಾಲನಿ, ಹುಕ್ಕೇರಿ–೫೯೧೩೦೯ ಬೆಳಗಾವಿ.
೯.	ಖಾಯಂ ವಿಳಾಸ	:	ಮೇಲಿನಂತೆ
೧೦.	ದೂರವಾಣಿ ಸಂಖ್ಯೆ	:	೯೪೮೧೫೫೭೭೫೯
೧೧.	ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಬೆಳಗಾವಿ ಜಿಲ್ಲೆ ಖಾನಪುರ ತಾಲೂಕು ಇಟಗಿಯಲ್ಲಿ ಜನಿಸಿದರು. ಪ್ರಾಥಮಿಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇಟಗಿ. ಪ್ರೌಢ ಶಿಕ್ಷಣವೂ ಅಲ್ಲೇ. ಪದವಿ ಪೂರ್ವ, ಪದವಿ, ಬಿ.ಎಡ್. ಬೆಳಗಾವಿಯಲ್ಲೇ. ಸ್ನಾತಕೋತ್ತರ ಪದವಿಯೂ ಕರ್ನಾಟಕ ವಿಶ್ವವಿದ್ಯಾಲಯ ಬೆಳಗಾವಿ, ಎಂ.ಎಡ್. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ ವಿಷಯದ ಮಹಾ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಪಿ.ಹೆಚ್.ಡಿ ಪದವಿ ನೀಡಿದೆ. ೧೯೯೫ರಿಂದ ಸಾರಾಪುರ ಶಾಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿಜೀವನ ಪ್ರಾರಂಭ. ಶಾಲಾ ದಿನಗಳಲ್ಲಿಯೇ ಓದುವ ಆಸಕ್ತಿಯಿಂದಾಗಿ ಪ್ರವೃತ್ತಿಯಿಂದ ಸಾಹಿತಿಗಳು. ಡಾ।। ಎಂ.ಬಿ. ನೇಗಿಹಾಳ, ಡಾ, ಶಿರೂರ, ಡಾ।। ಹಂಪನ. ಮುಂತಾದ ಸಾಹಿತಿಗಳ ಪ್ರಭಾವ. ಶಾಸನ ಅಧ್ಯಯನ ಸಂಶೋಧನೆಯಲ್ಲಿಯೂ ವಿಶೇಷ ಆಸಕ್ತಿ. ಇವರ ಬರೆಹಗಳು ಪ್ರಜಾವಾಣಿ ವಿಜಯ ಕರ್ನಾಟಕ, ಅರವಂತಿಗೆ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು ಜೈನ ಅಧ್ಯಯನ ಸಂಸ್ಥೆ ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷರು.

ಪ್ರಕಟಿತ ಕೃತಿಗಳು:
ಭಕ್ತಿ – ಜಿನ ಭಕ್ತಿ ಸಮುಚ್ಚಯ.
ಶಾಸನ – ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು.

ಲಭಿಸಿರುವ ಪ್ರಶಸ್ತಿಗಳು:
೧. ೨೦೦೭ – ಆದರ್ಶ ಶಿಕ್ಷಕ ಪ್ರಶಸ್ತಿ.
೨. ೨೦೦೯ – ಗೋಮಟೇಶ್ವರ ವಿದ್ಯಾ ಪೀಠ ಪುರಸ್ಕಾರ.
೩. ೨೦೦೯ – ಬಾಹುಬಲಿ ಪುರಸ್ಕಾರ.

ವ್ಯಕ್ತಿ ಪರಿಚಯ

ಹರತಿ ಜಿ. ಪ್ರಹ್ಲಾದ

೧. ಹೆಸರು	:	ಹರತಿ ಜಿ. ಪ್ರಹ್ಲಾದ
೨. ಕಾವ್ಯನಾಮ	:	ಜಾಂಬುವತಿ ಪ್ರಿಯ ವಿಠಲ
೩. ಹುಟ್ಟಿದ ಸ್ಥಳ ದಿನಾಂಕ	:	ಅಗರ, ೧೮-೫-೧೯೫೧
೪. ಜಿಲ್ಲೆ – ರಾಜ್ಯ	:	ಚಾಮರಾಜನಗರ, ಕರ್ನಾಟಕ.
೫. ವಿದ್ಯಾಭ್ಯಾಸ	:	ಬಿ.ಕಾಂ., ಎಂ.ಎ. (ಸಂಗೀತ), ಎಂ.ಎ. (ಕನ್ನಡ)
೬. ವೃತ್ತಿ	:	ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿವೃತ್ತ ನೌಕರರು.
೭. ಕೌಟುಂಬಿಕ	:	ಪತ್ನಿ; ಕುಸುಮಾ
೮. ಸದ್ಯದ ವಿಳಾಸ	:	ನಂ. ೧೫, ಶ್ರೀ ಗೋವಿಂದ ನಿವಾಸ, ಪಾರ್ವತಿ ನಗರ, ಲಗ್ಗೆರೆ ಮುಖ್ಯರಸ್ತೆ, ಪೀಣ್ಯ ಅಂಚೆ, ಬೆಂಗಳೂರು–೫೬೦೦೫೮
೯. ಖಾಯಂ ವಿಳಾಸ	:	ಮೇಲಿನಂತೆ
೧೦. ದೂರವಾಣಿ ಸಂಖ್ಯೆ	:	೯೦೦೧೪೨೦೦೭೪
೧೧. ಹಸ್ತಾಕ್ಷರ (ಸಹಿ)	:	

ಸಾಹಿತ್ಯ ಪರಿಚಯ

ಇವರು ಚಾಮರಾಜನಗರ ಜಿಲ್ಲಿ ಯಳಂದೂರು ತಾಲೂಕು ಅಗರದಲ್ಲಿ ಜನಿಸಿದರು. ಪ್ರಾರಂಭಿಕ ಶಿಕ್ಷಣ ಅಗರದ ಸರ್ಕಾರಿ ಶಾಲೆ. ನಂತರದ ಓದು ಬೆಂಗಳೂರು. ಪಿ.ಯು.ಸಿ ಮಹದೇಶ್ವರ ಕಾಲೇಜು ಕೊಳ್ಳೇಗಾಲ. ೧೯೭೬ರಲ್ಲಿ ಬಿ.ಕಾಂ. ಪದವಿ ಬೆಂಗಳೂರು. ೧೯೮೨ರಲ್ಲಿ ಸಂಗೀತದಲ್ಲಿ ಪದವಿ ಪಡೆದರು. ನಂತರ ಸಂಗೀತದಲ್ಲಿ ಸ್ನಾತಕೋತ್ತರ ಪದವೀಧರರಾದರು. ಬಾಹ್ಯವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ಪದವಿ ಪಡೆದರು. ೧೯೭೨ ರಿಂದ ಸರ್ಕಾರೀ ವೃತ್ತಿ ಜೀವನ ಆರಂಭ. ೨೦೦೨ರಲ್ಲಿ ಸ್ವಯಂ ನಿವೃತ್ತಿ ಪಡೆದರು. ಪ್ರವೃತ್ತಿಯಿಂದ ಸಾಹಿತಿಗಳು. ಹರಿದಾಸ ಸಾಹಿತ್ಯದಲ್ಲಿ ವಿಶೇಷ ಒಲವು. ೧೯೮೮ರಲ್ಲಿ ಅಖಿಲ ಕರ್ನಾಟಕ ಹರಿದಾಸ ತತ್ವಜ್ಞಾನ ಪ್ರತಿಷ್ಠಾನವನ್ನು ಅಸ್ತಿತ್ವಕ್ಕೆ ತಂದರು. ೧೯೯೬ರಲ್ಲಿ ಹರಿದಾಸ ಸಾಹಿತ್ಯ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ತರಗತಿಗಳನ್ನು ನಡೆಸಿದರು. ಇವರು ೧೯೭೫-೭೬ರಲ್ಲೇ ಮೈಸೂರಿನ ಕೀರ್ತಿ ಶೇಷ ಗುರುಗೋವಿಂದ ವಿಠಲದಾಸರ ಸಮಾಗಮ, ಮಾರ್ಗದರ್ಶನ, ಗುರೋಪದೇಶ ಸ್ವೀಕಾರ. ಹರಿದಾಸ ಸಾಹಿತ್ಯ ಮಹಾವಿದ್ಯಾಲಯವು ಹರಿದಾಸ ಸಾಹಿತ್ಯ ಅಭ್ಯಾಸದೊಂದಿಗೆ ಗಾನಕಲಾನಿಧಿ, ಮಧ್ವಶ್ರೀ, ಹಾಗೂ ದೇವರನಾಮ ಭೂಷಣ, ಹರಿಕಥಾಮೃತಸಾರ, ಗಮಕ, ಗಾಯನ, ಹರಿಕಥೆ ಹಾಗೂ ಕನ್ನಡ ಸಾಹಿತ್ಯ ಮುಂತಾದ ಪ್ರಕಾರಗಳಲ್ಲೂ ಪರೀಕ್ಷೆ ನಡೆಸಿ ಆಸಕ್ತರನ್ನು ಉತ್ತೇಜಿಸುತ್ತಿದೆ. ಶ್ರೀ ಮದ್ವಾದಿರಾಜರ, ಶ್ರೀ ವ್ಯಾಸರಾಜರ ಹಾಗೂ ಹರಿದಾಸ ತತ್ವಜ್ಞಾನ ಸಮ್ಮೇಳನಗಳನ್ನು ನಡೆಸುತ್ತಾ ಬಂದಿದ್ದಾರೆ. ಹರಿದಾಸ ಸಾಹಿತ್ಯ ಓದುಗರನ್ನು ಉತ್ತೇಜಿಸಲು ಸಾಹಿತ್ಯ ಭೂಷಣ, ಹರಿದಾಸ ಸಾಹಿತ್ಯರತ್ನ, ಹರಿದಾಸ ಸಾಹಿತ್ಯ ವಿಶಾರದ ಹಾಗೂ ಗೌ. ಡಾಕ್ಟರೇಟ್ ಪದವಿಗಳನ್ನು ನೀಡಲಾಗುತ್ತಿದೆ. ಮಹಾವಿದ್ಯಾಲಯದ ಮುಖಾಂತರ ಪ್ರಾರಂಭವಾದ ಹರಿದಾಸ ಸಾಹಿತ್ಯ ಪರೀಕ್ಷೆಗಳನ್ನು ವರ್ಷಕ್ಕೆ ಎರಡು ಬಾರಿ ಜೂನ್ ಮತ್ತು ಡಿಸೆಂಬರ್‌ನಲ್ಲಿ ನಡೆಸಲಾಗುತ್ತದೆ. ಈ ಪರೀಕ್ಷೆಯನ್ನು ಬೆಂಗಳೂರಿನಲ್ಲಷ್ಟೇ ಅಲ್ಲದೆ, ಮೈಸೂರು, ಶಿವಮೊಗ್ಗ, ಧಾರವಾಡ ಗಳಲ್ಲೂ ನಡೆಸಲಾಗುತ್ತಿದೆ. ಐದು ವರ್ಷ ಅಧ್ಯಯನ ಮಾಡಿದವರು ಹರಿದಾಸ ಸಾಹಿತ್ಯ ಭೂಷಣ, ಹತ್ತು ವರ್ಷ ಅಧ್ಯಯನ ಮಾಡಿದವರು ಹರಿದಾಸ ಸಾಹಿತ್ಯ ರತ್ನ ಇತ್ಯಾದಿ ಪದವಿಗಳನ್ನು ಪಡೆಯಬಹುದಾಗಿದೆ. ಹರಿದಾಸ ಸಾಹಿತ್ಯ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಓದಲು ಅನುಕೂಲ-ವಾಗುವಂತಹ ಸುಮಾರು ಐಂಕ್ಕೂ ಹೆಚ್ಚು ಕಿರು ಹೊತ್ತಿಗೆಗಳನ್ನು ಪ್ರಕಟಿಸಿದ್ದಾರೆ. ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ಲೇಖನಗಳನ್ನೂ ಬರೆದಿದ್ದಾರೆ. ರಾಜ್ಯದ ಒಳಗೆ ಹೊರಗೆ ನೂರಾರು ಉಪನ್ಯಾಸಗಳನ್ನು ಮಾಡಿದ್ದಾರೆ. ಈವರೆವಿಗೂ ೨೧ ಸ್ಮರಣ ಸಂಚಿಕೆಗಳ ಸಂಪಾದಕರಾಗಿದ್ದಾರೆ. ಇವರು ಸೇವೆ ಸಲ್ಲಿಸುತ್ತಿದ್ದ ಫ್ಯಾಕ್ಟರಿಯಿಂದ ಕರ್ನಾಟಕ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳ ಜೊತೆಗೆ ಕೀರ್ತಿಯನ್ನೂ ತಂದುಕೊಟ್ಟಿದ್ದಾರೆ.

ಪ್ರಕಟಿತ ಕೃತಿಗಳು:

ದಾಸ ಸಾಹಿತ್ಯ – ಬೆಲೆ ಇಲ್ಲದ ಚಿನ್ನ, ದಾಸ ಚತುಷ್ಠರು. **ಯಕ್ಷಗಾನ** – ಯಕ್ಷಗಾನ.

ಸಂಪಾದಕರು – ೨೧ ಸ್ಮರಣ ಸಂಚಿಕೆಗಳು.

ಲಭಿಸಿರುವ ಪ್ರಶಸ್ತಿಗಳು:

೧. ಕಾಸರಗೋಡು ಕರಾವಳಿ ಸಂಸ್ಥೆ – ಸನ್ಮಾನ.

೨. ತಂಬಿಹಳ್ಳಿಮಠ ಶ್ರೀ ಮಾಧವ ತೀರ್ಥ ಸ್ವಾಮಿಗಳಿಂದ ಸನ್ಮಾನ.

ವ್ಯಕ್ತಿ ಪರಿಚಯ

ಹೆಗಡೆ ಕಡೇಕೋಡಿ. ಜಿ.ಜಿ.

೧. ಹೆಸರು : ಜಿ.ಜಿ. ಹೆಗಡೆ ಕಡೇಕೋಡಿ.

೨. ಕಾವ್ಯನಾಮ : ಇರುವುದಿಲ್ಲ.

೩. ಹುಟ್ಟಿದ ಸ್ಥಳ ದಿನಾಂಕ : ಕಡೇಕೋಡಿ, ಕುಮಟಾ ತಾ. ೪-೬-೧೯೪೬

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಎಂ.ಎ., ಎಲ್.ಎಲ್.ಬಿ.

೬. ವೃತ್ತಿ : ವ್ಯಾಪಾರ

೭. ಕೌಟುಂಬಿಕ : ತಿಳಿಸಿಲ್ಲ

೮. ಸದ್ಯದ ವಿಳಾಸ : ಕಡೇಕೋಡಿ ಬಿಲ್ಡಿಂಗ್, ಚೌಕಿಮಠ ರಸ್ತೆ.
ಶಿರಸಿ - ೫೮೧೪೦೧.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೩೮೪-೨೨೬೯೪೮೮, (ಕಚೇರಿ) ೨೨೬೩೪೯.
೯೪೪೮೦೨೩೮೪೯

೧೧. ಹಸ್ತಾಕ್ಷರ (ಸಹಿ) :



ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕು ಕಡೇಕೋಡಿಯಲ್ಲಿ ಜನಿಸಿದರು. ಎಂ.ಎ., ಎಲ್.ಎಲ್.ಬಿ. ಮಾಡಿದ್ದಾರೆ. ೧೯೬೯ ರಿಂದ ೧೯೭೫ರವರಗೆ ಉಪನ್ಯಾಸಕರಾಗಿ ಸೇವೆಸಲ್ಲಿಸಿದರು. ನಂತರ ನೌಕರಿ ಬಿಟ್ಟರು. ವ್ಯಾಪರದಲ್ಲಿ ತೊಡಗಿದರು. ಪ್ರವೃತ್ತಿಯಿಂದ ಸಾಹಿತಿಗಳು. ಸಮಾಜ ಸೇವೆ ಹವ್ಯಾಸ. ಇವರು ಹಿಂದಿಯನ್ನೂ ಬಲ್ಲರು. ಅನುವಾದ ಮಾಡುತ್ತಾರೆ. ಐವತ್ತಕ್ಕಿಂತ ಹೆಚ್ಚು ಸ್ವತಂತ್ರ ಹಾಗೂ ಅನುವಾದ ಲೇಖನಗಳು ಕಸ್ತೂರಿ, ಮಯೂರ, ತುಷಾರ, ಸುಧಾ, ಮಂಗಳ, ತರಂಗ, ಪ್ರಜಾಮತ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಕನ್ನಡದಿಂದ ಹಿಂದಿಗೆ ಅನುವಾದ ಮಾಡಿದ ಲೇಖನಗಳು ನವದೆಹಲಿಯ ಸಾಪ್ತಾಹಿಕ ಹಿಂದೂಸ್ಥಾನ್ ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ. ಗ್ರಾಹಕರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಇವರ ವಿಶೇಷ ಆಸಕ್ತಿ. ಇವರು ರಾಜ್ಯ ಹಾಗೂ ರಾಷ್ಟ್ರಮಟ್ಟದ ವಿಚಾರ ಸಂಕೀರ್ಣಗಳಲ್ಲಿ ಭಾಗವಹಿಸಿ ಗ್ರಾಹಕರ ವಿಷಯಗಳಿಗೆ ಸಂಬಂಧಿಸಿದ ಹತ್ತಕ್ಕೂ ಹೆಚ್ಚು ಉಪನ್ಯಾಸಗಳನ್ನು ಮಾಡಿದ್ದಾರೆ. ಉತ್ತರ ಕನ್ನಡ ವಾರ್ತಾ ಸಂಚಿಕೆಯಲ್ಲಿ ಪ್ರಚಲಿತ ಸಮಸ್ಯೆಗಳ ಅಂಕಣಕಾರರು. ಕದಂಬವಾಣಿ ಹಾಗೂ ಉದ್ಯಮದರ್ಶಿ ಮಾಸಿಕಗಳಲ್ಲಿ ಗ್ರಾಹಕರ ಚಿಂತೆನೆಯಡಿಯಲ್ಲಿ ಗ್ರಾಹಕರ ಸಮಸ್ಯೆಗಳ ಕುರಿತ ಲೇಖನಗಳನ್ನು ಬರೆಯುತ್ತಾರೆ. ಇವರು ಶಿರಸಿಯ ಬಳಕೆದಾರರ ಹಿತರಕ್ಷಣ ಸಂಘದ ಅಧ್ಯಕ್ಷರು. ವ್ಯಾಪಾರಿಗಳ ಸಂಘದ ಅಧ್ಯಕ್ಷರು. ಶಿರಸಿಯ ಆಧುನಿಕ ಶಿಕ್ಷಣ ಸಂಸ್ಥೆಯ ಸಕ್ರಿಯ ಸದಸ್ಯರು. ಚೇತನ ಕೋ ಆಪರೇಟಿವ್ ಬ್ಯಾಂಕಿನ ಮಾಜಿ ನಿರ್ದೇಶಕರು. ಉ.ಕ. ಜಿಲ್ಲೆ ಹಿಂದಿ ಪ್ರಚಾರ ಸಮಿತಿಯ ಮಾಜಿ ಕಾರ್ಯದರ್ಶಿ. ಇವರು ಪಿಲಿಫೈನ್ಸ್‌ನ ಮನಿಲಾ ಹಾಗೂ ಶ್ರೀಲಂಕಾಗೆ ಪ್ರತಿನಿಧಿಯಾಗಿ ಭೇಟಿ ನೀಡಿದ್ದಾರೆ. ಇವರು ಶಿರಸಿಯ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಮಾಹಿತಿ ಹಕ್ಕು ಅಧಿನಿಯಮ ಅಸ್ತಿತ್ವಕ್ಕೆ ಬಂದ ನಂತರದಲ್ಲಿ ಇದರ ಬಗ್ಗೆ ಮಾಹಿತಿ ನೀಡುವ ಹಾಗೂ ಕಾನೂನಿನ ಬಗ್ಗೆ ಜಾಗೃತಿ ನೀಡುವ ಕಾರ್ಯವನ್ನೂ ಮಾಡುತ್ತಾರೆ. ಕರ್ನಾಟಕದ ಪ್ರಮುಖ ನಗರಗಳಲ್ಲಿ ಹಾಗೂ ಗ್ರಾಮಂತರ ಪ್ರದೇಶಗಳಲ್ಲಿ ನಡೆದ ಕಾರ್ಯಾಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

ಪ್ರಕಟಿತ ಕೃತಿಗಳು:
ಹಿಂದಿಯಿಂದ ಕನ್ನಡಕ್ಕೆ – ಸಾವಿನ ವ್ಯಾಪರ ಮಾಡುವ ಬಹು ರಾಷ್ಟ್ರೀಯ ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳ ಜೇಡರ ಬಲೆಗೆ.

ಲಭಿಸಿರುವ ಪ್ರಶಸ್ತಿಗಳು:
೧. ೨೦೦೨ – ಬೆಂಗಳೂರಿನಲ್ಲಿ ಆಜಾದಿ ಬಚಾವೋ ಅಂದೋಲನದ ರಾಷ್ಟ್ರೀಯ ಸಮ್ಮೇಳನದಲ್ಲಿ ಸನ್ಮಾನ.
೨. ೨೦೦೬ – ರಾಜೀವ್ ಗಾಂಧಿ ಎಕ್ಸಲೆನ್ಸಿ ಎವಾರ್ಡ್.
೩. ೨೦೦೮ – ಉದ್ಯಮ ದರ್ಶಿ ಪತ್ರಿಕೆಯ ಪ್ರಕಾಶಕರಿಂದ ಸನ್ಮಾನ.

ವ್ಯಕ್ತಿ ಪರಿಚಯ

ಹೆಗಡೆ. ಡಿ.ವಿ.

೧. ಹೆಸರು : ಡಿ.ವಿ. ಹೆಗಡೆ.

೨. ಕಾವ್ಯನಾಮ : ಇರುವುದಿಲ್ಲ.

೩. ಹುಟ್ಟಿದ ಸ್ಥಳ ದಿನಾಕ : ಬಾಳಗಾರು, ೨೫-೦೨-೧೯೪೭

೪. ಜಿಲ್ಲೆ - ರಾಜ್ಯ : ಉತ್ತರ ಕನ್ನಡ, ಕರ್ನಾಟಕ.

೫. ವಿದ್ಯಾಭ್ಯಾಸ : ಬಿ.ಎಸ್.ಸಿ., ಎಂ.ಎ. ಕನ್ನಡ, ಎಂ.ಎ.ಇತಿಹಾಸ.

೬. ವೃತ್ತಿ : ನಿವೃತ್ತ (ಭಾರತೀಯ ವಾರ್ತಾ ಸೇವೆ).

೭. ಕೌಟುಂಬಿಕ : ಪತ್ನಿ; ಪದ್ಮಾ ಹೆಗಡೆ. ಪುತ್ರರು; ಸುಮಂತ್. ಶರತ್

೮. ಸದ್ಯದ ವಿಳಾಸ : ೨೪೯೬, ೧೪ನೇ ಮೈನ್, ೨ನೇ ಹಂತ,
ಕುಮಾರಸ್ವಾಮಿ ಲೇ ಔಟ್,
ಬೆಂಗಳೂರು - ೫೬೦೦೭೮.

೯. ಖಾಯಂ ವಿಳಾಸ : ಮೇಲಿನಂತೆ

೧೦. ದೂರವಾಣಿ ಸಂಖ್ಯೆ : ೦೮೦-೨೬೬೬೨೪೨೪, ೯೪೪೪೮೧೬೩೪೩೪.

೧೧. ಹಸ್ತಾಕ್ಷರ (ಸಹಿ) :

ಸಾಹಿತ್ಯ ಪರಿಚಯ

ಇವರು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕು ಬಾಳಾಗಾರುವಿನಲ್ಲಿ ಜನಿಸಿದರು. ಮಲೆನಾಡಿನ ಮಂಚೀಕೇರಿಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಪಡೆದರು. ಇವರು ವಿದ್ಯಾರ್ಥಿಯಾಗಿದ್ದಾಗಲೇ ಸಾಹಿತ್ಯದಲ್ಲಿ ಆಸಕ್ತರಾಗಿ ಸಾಹಿತ್ಯ, ನಾಟಕ ಮುಂತಾದ ಚಟುವಟಿಕೆಗಳಲ್ಲಿ ಭಾಗಿಗಳಾದರು. ಇವರು ರಚಿಸಿದ ಸಣ್ಣ ಕಥೆಗಳು ಶಿರಸಿ ಸಮಚಾರ ಪತ್ರಿಕೆಯಲ್ಲಿ ಪ್ರಕಟವಾಗುತಿದ್ದವು. ಶಿರಿಸಿ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು. ನೀರನಹಳ್ಳಿ ಮಾಧ್ಯಮಿಕ ಶಾಲೆಯಲ್ಲಿ ಸುಮಾರು ಏಳು ವರ್ಷಗಳು ಅಧ್ಯಾಪಕ ವೃತ್ತಿ ಮಾಡಿ ವಿಜ್ಞಾನ, ಗಣಿತ ಶಿಕ್ಷರಾಗಿದ್ದರು. ೧೯೭೬ರಲ್ಲಿ ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಸಹಾಯ ಸಂಪಾದಕ ಹಾಗೂ ವಿಜ್ಞಾನ ವರದಿಗಾರರಾಗಿ ನೇಮಕಗೊಂಡರು. ಪ್ರಜಾವಾಣಿ, ಸುಧಾ, ಉದಯವಾಣಿ, ಜನಪ್ರಿಯ ವಿಜ್ಞಾನ, ವಿಜ್ಞಾನ ಯೋಜನ, ಮಲ್ಲಿಗೆ ಮುಂತಾದ ಪತ್ರಿಕೆಗಳಲ್ಲಿ ಇವರ ವಿಜ್ಞಾನ, ತಂತ್ರಜ್ಞಾನ ಕುರಿತ ಲೇಖನಗಳು ಮತ್ತು ಕೆಲವು ಕಥೆಗಳು ಪ್ರಕಟವಾದವು. ವಿಜ್ಞಾನ ಕುರಿತ ಕಾರ್ಯಕ್ರಮಗಳ ಪ್ರಕಾರ ೧೯೮೨ರಲ್ಲಿ ಕೇಂದ್ರ ಲೋಕಸೇವಾ ಆಯೋಗ (ಯು.ಪಿ.ಎಸ್.ಸಿ.)ರಿಂದ ಭಾರತೀಯ ಸಮಾಚಾರ ಸೇವೆಗೆ ಆಯ್ಕೆಯಾದರು. ದೆಹಲಿಯಲ್ಲಿ ಈ ಬಗ್ಗೆ ವಿಶೇಷ ತರಬೇತಿ ಪಡೆದರು. ಏಷ್ಯಾಡ್–೮೨ ಕ್ರೀಡಾ ಪ್ರಸಾರದಲ್ಲಿ ಭಾಗಿಯಾದರು. ನಂತರ ಕೇಂದ್ರ ಕ್ಷೇತ್ರ ಪ್ರಚಾರ ಇಲಾಖೆ, ಯೋಜನಾ ಜಾಹಿರಾತು ಮತ್ತು ದೃಶ್ಯ ಪ್ರಚಾರ ನಿರ್ದೇಶನಾಲಯ (ಡಿ.ಎ.ವಿ.ಪಿ) ಕೇಂದ್ರೀಯ ವಿದ್ಯುತ್ ಸಂಶೋಧಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದರು. ದೂರದರ್ಶನ ಮತ್ತು ಆಕಾಶವಾಣಿ ವಾರ್ತಾ ವಿಭಗದಲ್ಲಿ ಸಹಯಾಕ ಸುದ್ದಿ ಸಂಪಾದಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಪ್ರವೃತ್ತಿಯಿಂದ ಸಾಹಿತಿ ಬರವಣಿಗೆ ಓದುವುದು ಅಭ್ಯಾಸ. ಕ್ರಿಕೆಟ್ ಹವ್ಯಾಸ. ವಿಜ್ಞಾನ ವಿಷಯವಾಗಿ ಭಾಷಣ, ಸಂದರ್ಶನ ರೂಪಕ ಮುಂತಾದವುಗಳನ್ನು ಪ್ರಸಾರ ಮಾಡುವ ಹವ್ಯಾಸ. ಪ್ರಸ್ತುತ ನಿವೃತ್ತಿಯ ನಂತರ ಸುದ್ದಿ ಸಂಪಾದನೆ ಕೆಲಸದಲ್ಲಿ ದೂರದರ್ಶನ ಪ್ರಸ್ತುತ ಹೆಚ್ಚಾಗಿ ಆಕಾಶವಾಣಿಯಲ್ಲಿ ನಿರತರಾಗಿರುತ್ತಾರೆ. ವಾರ್ತೆ, ಪ್ರದೇಶ ಸಮಾಚಾರ, ಎಫ್.ಎಮ್. ಸುದ್ದಿ ಇತ್ಯಾದಿ.

ಪ್ರಕಟಿತ ಕೃತಿಗಳು:

ವಿಜ್ಞಾನ –ಯಂತ್ರ ಮಾನವ, ವಿಜ್ಞಾನದ ಕೌತುಕಗಳು.

ಕಾದಂಬರಿ (ಅನು) – ನಂಬಿಕೆಯ ನೆರಳು, ಬೆಂಗಾಡು.



ಸಾಹಿತಿಮಾಹಿತಿ ಕೋಶದ ರಚನೆ ತಾವು ಕೈಗೆತ್ತಿಕೊಂಡಿರುವ ಒಂದು ಅಸಾಧಾರಣ ಸಾಹಸವೇ ಆಗಿದೆ. ನಾಡು-ನುಡಿಯ ಸೇವೆ, ಅತಿ ವಿಶಿಷ್ಟ ರೀತಿಯಲ್ಲಿ, ತಮ್ಮಿಂದ ಈ ಕೃತಿ ಮಾಲೆಯ ಮೂಲಕ ನಡೆಯುತ್ತಿರುವುದು ಗಮನಾರ್ಹವಾಗಿದೆ.

– ಪ್ರೊ. ಹರಿನಾರಾಯಣ ಮಾಡಾವು, ಕೂರ್ನಡ್ಕ-ಕೆಮ್ಮಿಂಜೆ

ಈ ದುಬಾರಿ ಕಾಲದಲ್ಲೂ ತಾವು ಕೇವಲ ಸಣ್ಣ ಮೊತ್ತಕ್ಕೆ(ಅರ್ಧಬೆಲೆಗೆ) ಸಾಹಿತಿಮಾಹಿತಿ ಕೋಶ ಕಳಿಸಿದ್ದು ಶ್ಲಾಘನೀಯ. ಸಾಹಿತಿಗಳ ಮಾಹಿತಿ ಕಲೆಹಾಕುವ ಕುರಿತು ತಾವು ವಹಿಸಿರುವ ಕಾಳಜಿಗೆ ಅನಂತ ಧನ್ಯವಾದಗಳು. ತಮ್ಮ ಈ ಕೈಂಕರ್ಯ ನಿರಂತರಸಾಗಲಿ, ಇನ್ನೂ ಹೆಚ್ಚಿನ ಪ್ರತಿಫಲ ನೀಡಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

– ನಾಗರಾಜನಾಯ್ಕರ್, ಸಾಗರ

ತಾವು ಬಹುಶ್ರಮವಹಿಸಿ ಈ ಕಾರ್ಯವನ್ನು ನೆರವೇರಿಸಿದ್ದೀರಿ. ಇದೊಂದು Thanks less Job. ಆದರೂ ಮುಂದೆ ಸಾಹಿತ್ಯ ಚರಿತೆ, ಕವಿಚರಿತೆ ರಚಿಸುವವರು ತಮ್ಮ ಈ ಪ್ರಯತ್ನದಿಂದ ಉಪಕೃತರಾಗುತ್ತಾರೆ.

– ಡಾ. ರಾಮಚಂದ್ರಾಚಾರ್ ಬೆಂಗಳೂರು

ತಾವು ಕನ್ನಡಪರ ಕೈಗೊಂಡಿರುವ ಸಾಹಿತ್ಯ ಚಟುವಟಿಕೆ ಮತ್ತು ಕಾಳಜಿ ಹರ್ಷ ತಂದಿದೆ. ನೀವು ಕೈಗೊಂಡಿರುವ ಈ ಕಾರ್ಯ ಯಶಸ್ವಿಯತ್ತ ದಾಪುಗಾಲು ಇಡಲಿ. ಕನ್ನಡದ ಕಂಪು ಎಲ್ಲೆಲ್ಲೂ ಹರಡಲಿ ಎಂದು ಹಾರೈಸುತ್ತೇನೆ.

– ಜಿ.ಬಿ. ಬಸವರಾಜ ಕಾಕನೂರು

ತಾವು ಶ್ರಮವಹಿಸಿ ಶ್ರದ್ಧೆಯಿಂದ ಸಾಹಿತಿ ಮಾಹಿತಿಕೋಶವನ್ನು ಬರೆಯುತ್ತಿದ್ದೀರಿ. ನಿಮ್ಮ ಪ್ರಯತ್ನಕ್ಕೆ ನನ್ನ ಅನಂತಾನಂತ ಧನ್ಯವಾದಗಳು ಮತ್ತು ನಮಸ್ಕಾರಗಳು.

– ಗಶಿ ಭಟ್ಟ, ಕವಲಕ್ಕಿ

ಕನ್ನಡ ಸಾಹಿತ್ಯಕ್ಷೇತ್ರದ ಇಂದನ್ನು ನಾಳೆಗೂ ಪರಿಚಯಿಸುವ ದಿಶೆಯಲ್ಲಿ ಸಾಹಿತಿಮಾಹಿತಿ ಕೋಶವು ಒಂದು ಪ್ರಮಾಣಿಕ ಆಕರವೆನಿಸಲಿದೆ. ಇದೊಂದು ಒಳ್ಳೆಯ ಕ್ಷೇತ್ರಕಾರ್ಯ.

– ಯಲ್ಲಾಪುರ ಕೃಷ್ಣ ಶರ್ಮ,ಬೆಂಗಳೂರು

ತಾವು ಕೈಗೊಂಡ ಸಾಹಿತಿಮಾಹಿತಿ ಕೋಶ ಒಂದು ದಾಖಲೆಯಾಗುವುದರಿಂದ ತಮ್ಮ ಪ್ರಯತ್ನ ಸ್ತುತಿಸುವಂತದ್ದಾಗಿದೆ. ತಮಗೆ ವಂದನೆಗಳು.

– ಪ್ರೊ. ಎಲ್.ವಿ. ಪಾಟೀಲ, ಸಂಕೇಶ್ವರ

ತಮ್ಮ ಪ್ರಾಮಾಣಿಕ ಪ್ರಯತ್ನಕ್ಕೆ ಸರ್ವ ರೀತಿಯಲ್ಲೂ ಯಶಸ್ಸು ಕೋರುತ್ತೇನೆ.

– ಹೆಚ್.ಜಿ. ಸೀತಾರಾಮ, ಹಾರೋಕೊಪ್ಪ, ಕೆಳದಿ

ಸಾಹಿತಿ ಮಾಹಿತಿ ಪ್ರಸ್ತುತ – 6ನೇ ಭಾಗ ಸ್ವಲ್ಪ ಸ್ವಲ್ಪ – ಅಲ್ಲಿ ಇಲ್ಲಿ ನೋಡಿದ್ದೇನೆ. ನಿಮ್ಮದು ಸ್ತುತ್ಯಾರ್ಹ ಕೆಲಸವಾಗಿದೆ. ಕನ್ನಡ ಸಾಹಿತ್ಯ ಲೋಕದ ಪ್ರತಿಬಿಂಬ ಅದಾಗಿದೆ. ಒಂದೇ ಕಡೆಯಲ್ಲಿ ಸಾಹಿತಿಗಳ ಬಗ್ಗೆ ಸಾಕಷ್ಟು ವಿವರಗಳು ದೊರೆಯುತ್ತವೆ. ಆ ಬಗ್ಗೆ ನಾನು ಸಾಹಿತಿಗಳ ವತಿಯಿಂದ ನಿಮಗೆ ಆಭಾರ ಸಲ್ಲಿಸುತ್ತಿದ್ದೇನೆ.

– ನಾರಾಯಣಭಟ್ಟ ಮತ್ತು ಡಾ. ಯಶೋದಾ ಭಟ್ಟ, ಆವನಿರಸಿಕರಂಗ ಪ್ರಕಾಶನ, ಧಾರವಾಡ